ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಅಧ್ಯಯನಕಾರ
ಉಪ್ಪಾರ ಗೋಪಿನಾಯ್ಕ
ನೊಂ. ಸಂ. ಕೆ.ಯು.ಕೆ.ಎಸ್/೦೦೫೮೦೭

ಮಾರ್ಗದರ್ಶಕರು
ಡಾ. ಬಿ. ಎಂ. ಪುಟ್ಟಯ್ಯ
ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ -೫೮೩ ೨೭೬
೨೦೧೨-೧೩

1026

ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಸಂಶೋಧಕ

ಉಮ್ಲರ ಗೋಪಿನಾಯ್ಕ

ಮಾರ್ಗದರ್ಶಕರು

ಡಾ. ಬಿ. ಎಂ. ಪುಟ್ಟಯ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

"ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿ" ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಉಮ್ಲರ ಗೋಪಿನಾಯ್ಕ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 30-7-2013
ಸ್ಥಳ: ವಿದ್ಯಾರಣ್ಯ

ಡಾ. ಬಿ.ಎಂ.ಪುಟ್ಟಯ್ಯ
ಸಹಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಮುಖ್ಯಸ್ಥರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

"ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿ" ಎಂಬ ಸಂಪ್ರಬಂಧವನ್ನು ಡಾ. ಬಿ.ಎಂ. ಪುಟ್ಟಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಎಂ.ಫಿಲ್. ಪದವಿಗಾಗಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: 30-7-2013
ಸ್ಥಳ: ವಿದ್ಯಾರಣ್ಯ

ಸಂಶೋಧನ ವಿದ್ಯಾರ್ಥಿ
ಉಮ್ಲರ ಗೋಪಿನಾಯ್ಕ

ಪರಿವಿಡಿ

ಅಧ್ಯಾಯ–೧..೧–೫

ಮಂಗನ ಜ್ಯಾಟೆ : ವಸ್ತು ಮತ್ತು ಅಭಿವ್ಯಕ್ತಿ

- ಪೀಠಿಕೆ
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ಉದ್ದೇಶ
- ಅಧ್ಯಯನದ ಮಹತ್ವ
- ಅಧ್ಯಯನದ ವಿಧಿವಿಧಾನಗಳು

ಅಧ್ಯಾಯ–೨..೬–೩೭

ಬ್ಯಾಟೆಯನ್ನು ಕುರಿತ ಪ್ರಾದೇಶಿಕ ಭಿನ್ನತೆಗಳು

- ಮಲೆನಾಡ ಪರಿಸರದ ಬ್ಯಾಟೆಗಳು
- ಬಯಲುಸೀಮೆ ಪರಿಸರದ ಬ್ಯಾಟೆಗಳು

ಅಧ್ಯಾಯ–೩..೩೮–೬೦

ಸಿದ್ಧನ ಸಾಹಸಲೀಲೆಗಳು

ಅಧ್ಯಾಯ–೪..೬೧–೭೮

ಪ್ರಾಣಿ ಜಗತ್ತಿನೊಂದಿಗೆ ಮಾನವನ ಸಂಬಂಧ

- ಪ್ರಾಣಿ ಮತ್ತು ಮನುಷ್ಯನ ನಡುವಿನ ಸಂಬಂಧ
- ಪ್ರಾಣಿ ಮತ್ತು ಪ್ರಾಣಿಗಳ ನಡುವಿನ ಸಂಬಂಧ

ಅಧ್ಯಾಯ–೫..೭೯–೧೦೦

ಬ್ಯಾಟೆ ಕುರಿತ ತಂತ್ರಗಾರಿಕೆ

ಅಧ್ಯಾಯ–೬..೧೦೧–೧೦೪

ಸಮಾರೋಪ

ಅಧ್ಯಾಯ–೭..೧೦೫–೧೧೨

ಅನುಬಂಧಗಳು

- ಸಾಂಸ್ಕೃತಿಕ ಪದಕೋಶ. ಪರಾಮರ್ಶನ ಗ್ರಂಥಗಳು. ಲೇಖನಗಳು

ಅಧ್ಯಾಯ-೧

ಮಂಗನ ಬ್ಯಾಟೆ : ವಸ್ತು ಮತ್ತು ಅಭಿವ್ಯಕ್ತಿ

- ಪೀಠಿಕೆ
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ಉದ್ದೇಶ
- ಅಧ್ಯಯನದ ಮಹತ್ವ
- ಅಧ್ಯಯನದ ವಿಧಿವಿಧಾನಗಳು

ಪೀಠಿಕೆ:

ಇದು ವಿಠಲ ಹೆಗ್ಗಡೆ ಅವರು ಬರೆದಿರುವ 'ಮಂಗನ ಬ್ಯಾಟೆ' ಎಂಬ ಕಥನವನ್ನು ಕುರಿತ ವಿಶ್ಲೇಷಣೆಯಾಗಿದೆ. ಮಂಗನ ಬ್ಯಾಟೆ ಕೃತಿಯು ಮಲೆನಾಡು ಭಾಗದ ಕೃಷಿ ಸಂಸ್ಕೃತಿ, ಭಾಷಿಕ ಸಂಸ್ಕೃತಿ ಮತ್ತು ಸಾಮಾನ್ಯ ಜನಜೀವನವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ ಅಭಿವ್ಯಕ್ತಿಸಿರುವ ಮುಖ್ಯ ಕಥನವಾಗಿದೆ.

ಆಧುನಿಕ ಸಂದರ್ಭದಲ್ಲಿ ರೂಪುಗೊಂಡಿರುವ ಮಲೆನಾಡಿನ ಪರಿಸರ ಕಥನವಾದ 'ಮಂಗನ ಬ್ಯಾಟೆ : ವಸ್ತು ಮತ್ತು ಅಭಿವ್ಯಕ್ತಿ'ಯನ್ನು ಅವಲೋಕಿಸಿದಾಗ ಕಥನದ ಮೂಲ ವಸ್ತುವಾದ ಸಿದ್ಧನು ಪ್ರಾಣಿಗಳನ್ನು ಬೇಟೆಯಾಡುತ್ತ ತನ್ನ ಸಾಹಸದ ಲೀಲೆಗಳನ್ನು ಅಭಿವ್ಯಕ್ತ ಪಡಿಸುತ್ತ; ಜನರ ಮೆಚ್ಚುಗೆಗೆ ಪಾತ್ರನಾಗಿದ್ದನು. ಈ ಕಥನದಲ್ಲಿ ಸಿದ್ಧನ ಬೇಟೆಯ ಪ್ರಸಂಗಗಳ ಮುಖೇನ ಮಲೆನಾಡಿನ ಪರಿಸರದಲ್ಲಿ ಬದುಕುತ್ತಿರುವ ಜನರ ಸಾಮಾಜಿಕ ಕಳಕಳಿಯನ್ನು ಚಿತ್ರಿಸಲಾಗಿದೆ. ರೈತರ ಸಮಸ್ಯೆಗಳನ್ನು ಉನ್ನತೀಕರಿಸುವದನ್ನು ಗಮನಕ್ಕೆ ತಂದುಕೊಂಡಾಗ ಕಥನದಲ್ಲಿ ನಡೆಯುತ್ತಿರುವ ಸಮಸ್ಯೆಗಳಲ್ಲಿ ಮಧ್ಯಮ ವರ್ಗದ ಜನರ ಸಮಸ್ಯೆಗಳೆಂದು ತಿಳಿಯಬಹುದಾಗಿದೆ. ಈ ಕಥನದಲ್ಲಿ ಜಾತಿ ಯತೆಯನ್ನು ಎತ್ತಿತೋರಿಸಿದ್ದರೂ ಅವುಗಳ ನಿರ್ಮೂಲನೆ ಆಗದಿದ್ದರು ಸಹ ಅವು ತಮ್ಮದೇ ಆದ ಸಹಕಾರದೊಂದಿಗೆ ಮರೆಮಾಚಿ ಹೋಗಿರುವ ದೃಶ್ಯಗಳನ್ನು ಈ ಕಥನದಲ್ಲಿ ಕಾಣಬಹುದಾಗಿದೆ.

ಇಲ್ಲಿ ಮಂಗಗಳ ಬದುಕು ಚಲನಾ ರೂಪವನ್ನು ಹೊಂದಿದ್ದರು ಕೊನೆಗೆ ಗೆಲುವು ಪಡೆಯುವುದು ಮಂಗಗಳೇ ಹೊರತು ಸಾಮಾನ್ಯ ಜನರ ಸಮಸ್ಯೆಗಳಲ್ಲ. ಬ್ರಿಟೀಶ್ ಒಡೆತನದಲ್ಲಿದ್ದ ಕೆಲವು ಕಾನೂನುಗಳು ೧೯೪೭ ಸ್ವಾತಂತ್ರ್ಯ ನಂತರ ನಿಷೇಧಕ್ಕೆ ಗುರಿಯಾಗಿ ಮಲೆನಾಡ ಜನರ ಬವಣೆಯ ಬದುಕನ್ನು ಚಿತ್ರಿಸಲಾಗಿದೆ. ಈ ಕಥನದಲ್ಲಿನ ಮಂಗಗಳ ತುಂಟತನದ ಚಿತ್ರಣಗಳನ್ನು ನೋಡುತ್ತಿದ್ದಂತೆ ಅವು ನಮ್ಮ ಕಣ್ಣಮುಂದೆ ನಡೆಯುತ್ತಿರುವ ನೈಜ ಘಟನೆಗಳಂತೆ ಭಾಸವಾಗುತ್ತ ಹೋಗುತ್ತವೆ.

ಅಧ್ಯಯನದ ವ್ಯಾಪ್ತಿ

ಮಂಗನ ಬ್ಯಾಟೆ : ವಸ್ತು ಮತ್ತು ಅಭಿವ್ಯಕ್ತಿಯನ್ನು ಅವಲೋಕಿಸಿದಾಗ "ಮಲೆನಾಡಿನ ಪ್ರಥಮ ಶತ್ರು ಮಂಗ. ಆದರೆ ಅದೇ ಮಂಗವು ಬಯಲು ಸೀಮೆಯ ಜನರಿಗೆ ದೇವರಾಗಿದ್ದಾನೆ" ಇದೇರೀತಿ ಮತ್ತೊಂದು ಉದಾಹರಣೆಯನ್ನು ಗಮನಿಸಿದರೆ "ನಾಗರಹಾವು ಮಲೆನಾಡಿನ ಜನರಿಗೆ ದೇವರಾದರೆ ಬಯಲು ಸೀಮೆಯ ಜನರಿಗೆ ಶತ್ರುವಾಗಿದೆ" ಮಂಗನ ಬ್ಯಾಟೆ ಕಥನದ ವ್ಯಾಪ್ತಿಯು ಮಲೆನಾಡ ಪರಿಸರ ವಸ್ತು ಮತ್ತು ಅಭಿವ್ಯಕ್ತಿಯನ್ನು ರಚಿಸಲು ಮಂಗನ ಬ್ಯಾಟೆ ಕಥನವನ್ನು

ಮೂಲಾ ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಕಥನ ಸಾಹಿತ್ಯವು ವಿಶಾಲವಾದ ಕ್ಷೇತ್ರವಾಗಿದ್ದು, ಗ್ರಾಮೀಣ ಮತ್ತು ನಗರ ಪ್ರದೇಶದ ಸಂಸ್ಕೃತಿಯನ್ನು ಒಳಗೊಂಡಿದೆ. ಕೃಷಿಯ ಬೆನ್ನೆಲುಬಾದ ರೈತರ ಸಮಸ್ಯೆ; ಬುಡಕಟ್ಟು ಜನಾಂಗ ಮತ್ತು ಪರಿಸರದಲ್ಲಿ ಸಂಭವಿಸುತ್ತಿರುವ ಘಟನೆಗಳನ್ನು ಸಂಬಂಧವಿಲ್ಲದ ಅಂಶಗಳನ್ನು ನೋಡುವ ಕ್ರಮವನ್ನು ಒಳಗೊಂಡಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ನೈತಿಕ, ಸಮಸ್ಯೆಗಳನ್ನು ವ್ಯಗ್ರತೆ, ಆಕ್ರೋಶ ಮತ್ತು ವಿಶಾಲ ಧಾಟಿಯಲ್ಲಿ ಕಂಡುಬಂದಿದೆ.

ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯನ್ನು ರಚಿಸಲು ನೆರವಾದ ಕೆಲವು ಆಕಾರ ಗ್ರಂಥಗಳು ಮಂಗನ ಬ್ಯಾಟೆ (ಕಲ್ಕುಳಿ ವಿಠಲ್ ಹೆಗ್ಗಡೆ), ಬೇಟೆ ಮತ್ತು ಬೇಡರು (ವಿರೂಪಾಕ್ಷಿ ಪೂಜಾರಹಳ್ಳಿ), ಬೇಟೆ (ಕುಂ.ವೀರಭದ್ರಪ್ಪ), ವೈದ್ಯರ ಶಿಕಾರಿ (ಡಾ.ಟಿ.ಎಸ್. ರಮಾನಂದ್), ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು (ಕುವೆಂಪು), ಬೇಟೆಯ ನೆನಪು (ಕಾಕೆಮಾನಿ), ಮಲೆನಾಡಿನ ಶಿಕಾರಿ ನೆನಪುಗಳು (ಸ.ಚಿ.ರಮೇಶ್), ಮಲೆನಾಡಿನ ಶಿಕಾರಿಲೋಕ (ಉಮೇಶ ಹೊಸಹಳ್ಳಿ), ಬೇಟೆ (ನರೇಂದ್ರ ರೈ ದೇರ್ಲ), ಗ್ರಾಮೀಣ ಬೇಟೆಗಳು (ಡಾ. ದೇವೇಂದ್ರ ಕುಮಾರ ಹಕಾರಿ ಮತ್ತು ಡಾ.ಕೆ.ಆರ್. ಸಂಧ್ಯಾರೆಡ್ಡಿ), ಬೇಟೆಯ ಸೂಕ್ಷ್ಮತೆಗಳು (ಕೆದಂಬಾಡಿ ಜತ್ತಪ್ಪರೈ), ಶಿಕಾರಿ (ಯಶವಂತ ಚಿತ್ತಾಲ), ವಲಸೆ (ಬೆನಕನಳ್ಳಿ ಜಿ. ನಾಯಕ), ಹೀಗೆ ಅನೇಕ ಅನೇಕ ಗ್ರಂಥಗಳನ್ನು ಆಕಾರವನ್ನಾಗಿ ತೆಗೆದುಕೊಂಡಿರುವುದರಿಂದ ಇದರ ವ್ಯಾಪ್ತಿಯ ಮೇಲ್ಕಾಣಿಸಿದ ಗ್ರಂಥಗಳಲ್ಲಿ ಹರಡಿಕೊಂಡಿದೆ.

ಅಧ್ಯಯನದ ಉದ್ದೇಶ

ಕಲ್ಕುಳಿ ವಿಠಲ್ ಹೆಗ್ಗಡೆ ಅವರ ಮಂಗನ ಬ್ಯಾಟೆ ಕಥನದಲ್ಲಿ ಮಲೆನಾಡಿನ ಚಿತ್ರಣ ಹಾಗೂ ಸಿದ್ಧನ ಸಾಹಸ ಲೀಲೆಗಳು ಪ್ರಚಲಿತವಾಗಿರುವುದನ್ನು ಕಾಣಬಹುದಾಗಿದೆ. ಆದರೆ ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಮಲೆನಾಡ ಪರಿಸರದ ಬ್ಯಾಟೆಗಳನ್ನು ಬಯಲುಸೀಮೆ ಪರಿಸರದಲ್ಲಿನ ಬ್ಯಾಟೆಗಳನ್ನು ತೌಲನಿಕವಾಗಿ ರಚಿಸಿರುವ ಪ್ರಯತ್ನವನ್ನು ಮಾಡಲಾಗಿದೆ. ಮಲೆನಾಡಾಗಲಿ ಬಯಲು ಸೀಮೆಯಾಗಲಿ ಅಲ್ಲಿನ ಜನರಲ್ಲಿ ಕಂಡುಬರುವ ಪ್ರಾದೇಶಿಕ ಭಿನ್ನತೆಗಳನ್ನು ರಚಿಸುವ ಪ್ರಯತ್ನವನ್ನು ಮಾಡಲಾಗಿದೆ. ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಶ್ರೀಮಂತ ವರ್ಗ ಮತ್ತು ಕೂಲಿಕಾರ್ಮಿಕ ವರ್ಗದವರ "ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಐತಿಹಾಸಿಕ, ನೈತಿಕ, ಔದ್ಯೋಗಿಕ" ಸಮಸ್ಯೆಗಳನ್ನು ಅಲ್ಲಗಳೆದಿರುವದನ್ನು ಇಲ್ಲಿ ರೂಪಿಸಲಾಗಿದೆ. ಒಟ್ಟಾರೆಯಾಗಿ ಇಲ್ಲಿ ಶಿವಕೋಟ್ಯಾಚಾರ್ಯರ ವಡ್ಡರಾಧನೆ ಕತೆಯು ಮೊದಲು ಬಿಡಿ, ಬಿಡಿಯಂತ್ತಿದ್ದ ಮಂಗನ ಬ್ಯಾಟೆಯನ್ನು

ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಆರು ಅಧ್ಯಾಯನವನ್ನಾಗಿ ವಿಭಜಿಸಿ ಒಂದು ಇಡೀಯಾದ ಕಥನವನ್ನಾಗಿ ರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ಮಹತ್ವ

ಪ್ರಸ್ತುತ ಕೃತಿ 'ಮಂಗನ ಬ್ಯಾಟೆ : ವಸ್ತು ಮತ್ತು ಅಭಿವ್ಯಕ್ತಿಯಲ್ಲಿ' ನಮ್ಮ ಪ್ರಾಚೀನ ಗ್ರಾಮೀಣ ಸಂಸ್ಕೃತಿಯ ರೋಚಕ ಪುಟಗಳನ್ನು ಹಿಡಿದಿದೆ, ಮಂಗನ ತುಂಟತನದಿಂದ ಮಲೆನಾಡಿಗರು ಅನುಭವಿಸುವ ಸಾಮಾಜಿಕ ಕಳಕಳಿಯನ್ನು ಚಿತ್ರಿಸಲಾಗಿದೆ. ಬೇಟೆ ಮಾಡುವ ಸಂಪ್ರದಾಯವು ಆರಂಭದಲ್ಲಿ ಜೀವನದ ಅನಿವಾರ್ಯ ವೃತ್ತಿಯಾಗಿ, ಅನಂತರ ಪ್ರವೃತ್ತಿಯಾಗಿ, ತದನಂತರದಲ್ಲಿ ಮನೋವೃತ್ತಿಯಾಗಿ, ಕೊನೆಗೆ ಮನುಷ್ಯನ ಆಸೆ ಬದುಕಿನ ಲಾಭಕೋರತನದ ದೃಷ್ಟಿ ಸಂಕೇತವಾಗಿ, ಬೆಳೆದು ಬಂದಿದೆ. ಅದಿಮ ಜನಾಂಗದ ಹಸಿವನ್ನು ತುಂಬಿಸುವ ಅನಿವಾರ್ಯ ಪ್ರಾಣಿ ಹಿಂಸೆಯ ಮಾಧ್ಯಮವಾದ ಬೇಟೆ ಕೆಲವು ಸಂಧರ್ಭದಲ್ಲಿ ಮನುಷ್ಯನ ಪ್ರವೃತ್ತಿ ನೈಪುಣ್ಯದ ಕಲಾಪ್ರತಿಯಾಗಿಯೂ ಕಂಡುಬಂದಿದೆ. ಕರ್ನಾಟಕದ ಮಲೆನಾಡು ಪ್ರದೇಶದಲ್ಲಂತೂ ಬೇಟೆಯ ವೈವಿಧ್ಯತೆಯ ಸಂದರ್ಭದಲ್ಲಿ ಬಳಸಲಾದ ಪದಗಳ ವೈಶಿಷ್ಟ್ಯ ತುಂಬಾ ವಿಶೇಷ ಸ್ವರೂಪ ಪಡೆದುಕೊಂಡಿದೆ. ಬೇಟೆ ಜನಪದ ಜೀವನಕ್ಕೆ ಹೊಂದಿಕೊಂಡು ಬಂದಿರುವ ಕ್ರಿಯೆ. ಇಂತಹ ಕ್ರಿಯೆಗಳು ಎಲ್ಲಾ ಜಲಚರ, ಕ್ರಿಮಿಕೀಟ, ಪ್ರಾಣಿ, ಪಕ್ಷಿ, ಗಳಲ್ಲೂ ಬೆಳೆದು ಬಂದಿರುವುದಾಗಿದೆ. ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಮಲೆನಾಡಿನ ಸಂಪದ್ಭರಿತವಾದ ದಟ್ಟ ಅರಣ್ಯದಿಂದ ಕೂಡಿರುವುದನ್ನು ರಚಿಸಲಾಗಿದೆ. ಅಧ್ಯಾಯ ಎರಡರಲ್ಲಿ ಬ್ಯಾಟೆಯನ್ನು ಕೈಗೊಳ್ಳುವಾಗ ಕಂಡುಬರುವಂತಹ ಪ್ರಾದೇಶಿಕ ಭಿನ್ನತೆಗಳನ್ನು ತೋರಿಸಲಾಗಿದೆ. ಅಧ್ಯಾಯ ಮೂರರಲ್ಲಿ ಕಥನದ ನಾಯಕ ಕೂಲಿ ಕಾರ್ಮಿಕ ಸಿದ್ಧನ ಸಾಹಸ ಲೀಲೆಗಳನ್ನು ಚಿತ್ರಿಸಿ ತೋರಿಸಲಾಗಿದೆ. ಹಾಗೂ ಅಧ್ಯಾಯ ನಾಲ್ಕರಲ್ಲಿ ಮನುಷ್ಯ–ಮನುಷ್ಯ, ಮನುಷ್ಯ–ಪ್ರಾಣಿ, ಪ್ರಾಣಿ–ಪ್ರಾಣಿಗಳ ನಡುವಿನ ಸಂಬಂಧಗಳನ್ನು ಸೃಷ್ಟಿಸಲಾಗಿದೆ. ಅಧ್ಯಾಯ ಐದರಲ್ಲಿ ಮಾನವ ಕೈಗೊಳ್ಳುವ ಬೇಟೆಗಾಗಿ ರಚಿಸಿರುವ ತಂತ್ರಗಾರಿಕೆಯನ್ನು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ.

ಅಧ್ಯಯನದ ವಿಧಿವಿಧಾನಗಳು

೧. ವಿಷಯ ಅಧ್ಯಯನ ವಿಧಾನ

ವಿಷಯ ಅಧ್ಯಯನ ವಿಧಾನವು ಪ್ರಾಥಮಿಕ ಆಧಾರಗಳನ್ನು ಒಳ ಗೊಂಡಿರುತ್ತವೆ. ಅಲ್ಲದೇ ಇವು ಮೂಲರೂಪದಲ್ಲಿ ಕಂಡು ಬರುತ್ತವೆ. ಈ ವಿಧಾನದಲ್ಲಿ ದೊರಕುವ ವಿಷಯಗಳೆಲ್ಲ ಸತ್ಯ ಸಂಗತಿಯ ವಿಷಯವಾಗಿ ಹೊರಹೊಮ್ಮಿರುತ್ತವೆ. ಈ ವಿಧಾನದಿಂದ ಅನುಷಂಗಿಕ ಆಧಾರಗಳೆಲ್ಲ ಟೀಕೆ–ಟಿಪ್ಪಣಿಗಳಿಗೆ ಗುರಿ ಆಗಿರುತ್ತವೆ.

೨. ಐತಿಹಾಸಿಕ ವಿಧಾನ

ಐತಿಹಾಸಿಕ ವಿಧಾನವು ಮೂಲ ಅಧ್ಯಯನ ವಿಷಯದಲ್ಲಿ ಧೊರೆತಿರುವ ಆಧಾರ ಗ್ರಂಥಗಳು, ಮಾಹಿತಿಗಳು, ಪತ್ರಿಕೆ ವರದಿಗಳನ್ನು ಫಲಕ ರೂಪದಲ್ಲಿ ಕಣ್ಣಿಗೆ ಗೋಚರವಾಗುವ ರೀತಿಯಲ್ಲಿ ಹೊರತಂದಿರುತ್ತವೆ, ಐತಿಹಾಸಿಕ ವಿಧಾನದಿಂದ ಕಾಲ ಗಣನೆ, ಆಳ್ವಿಕೆ, ಒಡೆತನ, ಸಾಮ್ರಾಜ್ಯದ ವಸ್ತು ಚಿತ್ರಣವನ್ನು ಐತಿಹಾಸಿಕ ರೂಪದಲ್ಲಿ ಬೆಳಕನ್ನು ಬೀರಿರುತ್ತವೆ.

೩. ತೌಲನಿಕ ವಿಧಾನ

ತೌಲನಿಕ ವಿಧಾನದಿಂದ ಆಯಾ ಸಮುದಾಯಗಳ ತುಲನೆಯನ್ನು ಅರಿಯಬಹುದು. ಜೊತೆಗೆ ಒಂದು ವಸ್ತು ಅಥವಾ ವ್ಯಕ್ತಿಯನ್ನು ಮತ್ತೊಂದು ವಸ್ತು ಅಥವಾ ವ್ಯಕ್ತಿಯೊಂದಿಗೆ ತೌಲನಿಕವಾಗಿ ಹೋಲಿಕೆ ಮಾಡಿ ಅವನಲ್ಲಿ ಅಥವಾ ಅದರಲ್ಲಿ ಕಂಡುಬರುವ ಗುಣಾವ ಗುಣಗಳನ್ನು ತಿಳಿದುಕೊಳ್ಳಬಹುದಾಗಿದೆ. ತೌಲನಿಕ ವಿಧಾನದಿಂದ ವಸ್ತು ಅಥವಾ ವ್ಯಕ್ತಿಯ ಮೌಲ್ಯವನ್ನು ಅಳಿಯಬಹುದಾಗಿದೆ. ಈ ವಿಧಾನದಲ್ಲಿ ಕರ್ತೃ ಮತ್ತು ಕೃತಿ ಅಥವಾ ಕೃತಿ ಮತ್ತು ಕರ್ತೃವನ್ನು ಹೋಲಿಕೆ ಮಾಡಿ ತೌಲನಿಕರೀಸಬಹುದಾಗಿದೆ.

೪. ಪ್ರಶ್ನಾವಳಿ ವಿಧಾನ

ಪ್ರಶ್ನಾವಳಿ ವಿಧಾನದಲ್ಲಿ ನಿರ್ದಿಷ್ಟ ಮಾಹಿತಿಗಳ ಸಂಗ್ರಹಣೆಗೆ ಸಹಕಾರಿ ಆಗಿರುತ್ತವೆ, ಈ ವಿಧಾನದಿಂದ ನಾವೂ ಆಯ್ಕೆ ಮಾಡಿಕೊಂಡಿರುವ ವಿಷಯದ ಆಸಕ್ತಿ, ಅಭಿರುಚಿ, ಪೂರಾತನ ಸಂಪ್ರದಾಯಗಳು, ಈ ಹಿಂದೆ ಆಗಿಹೋಗಿರುವ ಘಟನೆಗಳನ್ನು ಜೊತೆಗೆ ಮುಂದೆ ಸಂಬಂವಿಸುವ ಘಟನೆಗಳನ್ನು ಕಲೆಹಾಕುವುದರ ಮೇಲೆ ಪ್ರಶ್ನಾವಳಿಗಳನ್ನು ಹುಟ್ಟುಹಾಕಿ ಇದರಿಂದ ಅಧ್ಯಯನ ವಿಧಾನದ ಸುಧಾರಣೆಗೆ ಇಂತಹ ಪ್ರಶ್ನಾವಳಿಗಳು ಸಹಕಾರಿ ಆಗಿರುತ್ತವೆ.

ಅಧ್ಯಾಯ-೨

ಬ್ಯಾಟೆಯನ್ನು ಕುರಿತ ಪ್ರಾದೇಶಿಕ ಭಿನ್ನತೆಗಳು

- ಮಲೆನಾಡ ಪರಿಸರದ ಬ್ಯಾಟೆಗಳು
- ಬಯಲು ಸೀಮೆ ಪರಿಸರದ ಬ್ಯಾಟೆಗಳ

ಬ್ಯಾಟೆ "ಯಾವುದೇ ಪ್ರಾಣಿ ತನ್ನ ಹಸಿವನ್ನು ನೀಗಿಸಿಕೊಳ್ಳುವುದಕ್ಕಾಗಿ ಇತರೆ ಜೀವಂತ ಪ್ರಾಣಿ-ಪಕ್ಷಿಗಳನ್ನು ಹಿಡಿದು ಕೊಲ್ಲುವುದನ್ನು ಬ್ಯಾಟೆ ಎಂದೂ ಕರೆಯುತ್ತಾರೆ"

ಬೇಟೆಯ ಅರ್ಥ:–ಬೇಟೆಯು ಶಿಷ್ಟ ಸಾಹಿತ್ಯದಲ್ಲಿ ಈ ವಿಧಾನಕ್ಕೆ ಮೃಗಾಯೆ, ಅಚ್ಚೋಧನ, ಮೃಗವ್ಯ, ಅಚ್ಚೊಟಕ, ಆಖೇಟಕ, ಪಾಪರ್ಧಿ, ಶಿಕಾರಿ, ಎಂಬ ಹೆಸರುಗಳಿವೆ.

ಬೇಟೆಯ ನಿಷ್ಪತ್ತಿ:–ಬೇಟೆ ಪದವನ್ನು ಪಂಚ ದ್ರಾವಿಡ ಭಾಷೆಗೆ ಅಳವಡಿಸಿದಾಗ ಆದಿಯಲ್ಲಿ 'ವ' ಕಾರವುಳ್ಳ 'ವೇಟ್ಟೈ ಅಥವಾ ವೇಟೈ' ಎಂಬ ರೂಪಗಳು ಕಂಡು ಬರುತ್ತವೆ. ಬೇಟೆ ಪದದಲ್ಲಿ ಪೂರ್ವಾರ್ಧ ಪ್ರಕೃತಿ ಅಥವಾ ಧಾತು ಉತ್ತರಾರ್ಧ ಪ್ರತ್ಯಾಯ ಅಂದರೇ ಬೇಳ್+ಟೆ ಆಗಿದೆ. ಬೇಳ್‌ನೆ ಕಿಟ್ಟೆಲರು "To ofter into fire are with fire as ghee animals ete" ಎಂಬ ಅರ್ಥ ನೀಡಿದ್ದಾರೆ (ಕಿಟ್ಟೆಲ್ ಅರ್ಥಕೋಶ ಸಂಪುಟ–೪ ಪು. ೧೨೨೩, ೧೯೭೫)

ವೇಟ್ಟೈ–ವೇಟೆ

ವೇಟೆ–ಬೇಂಟೆ ಆಗಿದೆ.

ಹಸಿವು ಬಾಯಾರಿಕೆಗಳನ್ನು ಸ್ವಾಭಾವಿಕ ಬಯಕೆಯನ್ನು ತೀರಿಸಿಕೊಳ್ಳುವ ಸಲುವಾಗಿ ಕಾಡು ಮೇಡುಗಳಲ್ಲಿ ಅಲೆದಾಡಿದ ಫಲವಾಗಿ ಸಸ್ಯ ಹಾಗೂ ಮಾಂಸಹಾರಿ ಪ್ರಾಣಿಗಳನ್ನು ಕೊಂದು ತನ್ನ ಆಹಾರಕ್ಕಾಗಿ ಬಳಸಿಕೊಳ್ಳಲು ಪ್ರಾರಂಬಿಸಿದ ಅಂದಿನ (ಪ್ರಾಚೀನ)ಕಾಲದಲ್ಲಿ ಇದು ಒಂದು ಉದ್ಯೋಗ ಅಥವಾ ಆಹಾರದ ವ್ಯಾಪಾರಕ್ಕಾಗಿ ಬಳಸಲ್ಪಟ್ಟಿತು[೧]. ಅದರಲ್ಲೂ ಗ್ರಾಮೀಣರು ಹಬ್ಬ ಹರಿ ದಿನಗಳಲ್ಲಿ ಕುರಿ, ಮೇಕೆ, ದನ, ಕೋಣಗಳನ್ನು ಕಡಿದು ಹರಕೆ ತೀರಿಸುವ ಪರಿಯನ್ನು ತಾತ್ವಿಕವಾಗಿ ಗಮನಿಸಬಹುದು. ಸಂಸ್ಕೃತದ 'ಮೃಗಯಾ' ಪದವು ಕನ್ನಡದ ಬೇಟೆಗೆ ಮೂಲವಾಗಿರಬಹುದೆಂದು ಭಾವಿಸಲ್ಪಟ್ಟಿದ್ದೇವೆ.[೨] ಗ್ರಾಮೀಣ ಜನರು ದೇವರಲ್ಲಿ ಭಕ್ತಿ ಪ್ರೀತಿಕಮ್ಮಿಯಿದ್ದರು ಮೂಢನಂಬಿಕೆಯನ್ನು ನಂಬಿಕೊಂಡು ಬಂದಿರುವಂತ ನಿಜಸಂಗತಿಯಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಇದುವರೆಗೂ ನೋಡಿರುವಂತೆ ಶಿವನಿಗೂ ಬೇಟೆಗೂ ಅವಿನಾಭಾವ ಸಂಬಂಧವಿರಬಹುದಾಗಿದೆ. ಮಾನವ ಬೇಟೆಗಾಗಿ ಬಳಸಿದ ಆಯುಧ ಈಟಿ, ಭರ್ಜಿ, ತ್ರಿಶೂಲಗಳು ಶಿವನ ಆಯುಧಗಳಾಗಿವೆ. ಶಿವನ ಕೊರಳ ಹಾವು ಮತ್ತು ವಾಹನವಾದ ಎತ್ತುಗಳನ್ನು ಗಮನಿಸಿದಾಗ ಮನುಷ್ಯ–ಪ್ರಾಣಿಗಳಿಗಿರುವ ಸಂಬಂಧವು ಅನಾದಿ ಕಾಲದಿಂದಲೂ ಹರಿದು ಬಂದದ್ದಾಗಿದೆ. ಬೇಟೆಯು ಬೌದ್ಧಿಕ ವಿಕಾಸದ್ದಾದರೆ; ಬೇಟೆಯ ಜೀವನ ಸಾಮಾಜಿಕ ವಿಕಾಸದ್ದಾಗಿದೆ. ದಿನದಿಂದ ದಿನಕ್ಕೆ ಬೇಟೆಯ ವಿಕಾಸದ ಲಕ್ಷಣಗಳಿಂದ ಪಶುಪಾಲನೆ ಮತ್ತು ಕೃಷಿಯ ಬೆಳವಣಿಗೆಯಲ್ಲಿ ಮುಂದುವರೆಯಿತು.

ಮಲೆನಾಡು ಭತ್ತದ ಕೃಷಿಗೆ ಪ್ರಧಾನವಾದದ್ದು ಕಾಲದಲ್ಲಿ ತೆಂಗಿನ ಮರಗಳು, ಗದ್ದೆಯ ಬದುವಿನಲ್ಲಿ ಮಾತ್ರ ಕಾಣಸಿಗುತ್ತಿದ್ದವು. ಅಡಿಕೆ ತೋಟಗಳು ಅತಿ ವಿರಳ; ಇದ್ದರು ಕಾಡಿನ ಮಧ್ಯೆ ನೂರು,

ನೂರಐವತ್ತು ಮರಗಳಿಂದ ದೊಡ್ಡ ತೋಟಗಳೆ ಇರಲಿಲ್ಲ. ಭತ್ತ ಕೃಷಿ ಮಾಡುವವನು ಹತ್ತು ಮುಡಿ ಸಾಗುವಳಿ ಮಾಡುವವರಿದ್ದಾರೆ; ಇಪ್ಪತ್ತು ಮುಡಿ ಬೀಜದ ನೇಜಿ ಹಾಕಿದರೂ ಅದು ಸಾಕಾಗುತ್ತಿರಲಿಲ್ಲ, ಬಿತ್ತಿದ ಬೀಜವು ಮೊಳಕೆ ಬರುವ ತನಕ ಹಿಂಡು-ಹಿಂಡು ಪಾರಿವಾಳ, ಗುಬ್ಬಚ್ಚಿ, ಕಾಡುಕೋಳಿ, ಕೆಂಕಣ, ಮುಳ್ಳುಹಂದಿಗಳು, ಹೆಕ್ಕಿ ತಿಂದರೆ, ಮೊಳಕೆ ಮೇಲೆದ್ದೊಡನೆ ಮೊಲ, ಅಳಿಲು, ಹಿಂದುಳಿದ ಹುಳ ಮೇದವನ ತಲೆಯಂತೆ ಅಲ್ಲಲ್ಲಿ ತೂರುವ ಎಳೆ ಸಸಿಗಳನ್ನು ಕಾಡುಮೇಕೆ, ಜಿಂಕೆ, ಕಡವೆಗಳು, ತಿಂದ ಬಳಿಕ, ಉಳಿದುದನ್ನು ಕಿತ್ತು ನಟ್ಟು ತೆಂಡೆ ಹೊಡೆಯುವಾಗ ಕಾಡುಕೋಣಗಳ ಹಿಂಡು, ಕಡಲೆ ಜಿಂಕೆ, ಹಂದಿಗಳ ದಂಡು ಬಂದು ಮೆಟ್ಟಿಧ್ವಂಸಪಡಿಸಿದ ಮೇಲೆ ಬೇಸಾಯಗಾರರಿಗೆ ಉಳಿಯುವದು ಕಾಡಿನ ನಾರುಗೆಣಸು ಇಯರು, ಪುಂಡಿಕೆನೆ, ಬೋಳ್ಗಂಡ, ಸೋಣೆ ಸೊಪ್ಪುಗಳಲ್ಲದೆ ಬೇರೇನು ಮಲೆನಾಡಿನವರು ತಮ್ಮ ಗದ್ದೆಯ ಬದುವಿನಲ್ಲಿ ಕಟ್ಟಿದ್ದ ಜೋಪಡಿಯಲ್ಲಿ ಅಗ್ಗಿಷ್ಟಿಕೆ ಬೆಂಕಿಯನ್ನು ರಾತ್ರಿಯೆಲ್ಲ ಉರಿಸಿ, ಬೊಬ್ಬೆ ಹೊಡೆದರು ಸಹಿಸಲು ಸಾಧ್ಯವಾಗದೆ ಕಡಿಸಿಕೊಂಡು, ಮಳೆ ಮಂಜಿನ ಪೆಟ್ಟನ್ನು ಸಹಿಸಿಕೊಂಡು ಪಡೆಯುವ ಪ್ರತಿಫಲವು ವರ್ಷಾಂತ್ಯಕ್ಕೆ ಮಲೇರಿಯಾ, ಸ್ವರಗಡ್ಡೆಯ ಪ್ರಸಾದ ಅಂಥವರನ್ನು ಕಂಡ ಗುತ್ತುಬೀಡಿನವರು, ಪೇಟೆಯವರು, ಗಂಡಸು ಹೆರಲು ಇನ್ನು ಒಂದೆರಡೇ ತಿಂಗಳು ಎನ್ನುವ ಗೇಲಿ ಮಾತಿದೆ.

ಮಲೆನಾಡ ಪರಿಸರದ ಬ್ಯಾಟೆಗಳು:

ಬೇಟೆ ಮತ್ತು ಶಿಕಾರಿ ಸಮಾನಾರ್ಥಕ ಶಬ್ದಗಳಾಗಿವೆ. ಬೇಟೆಯಲ್ಲಿ ಒಬ್ಬರು ಭಾಗವಹಿಸಿದರೆ ಶಿಕಾರಿಯಲ್ಲಿ ಗುಂಪಾಗಿ ಭಾಗವಹಿಸುತ್ತಾರೆ. ಆದಿಮಾನವ ಭೂವಿಗೆ ಬಂದನಂತರ ಮಾಡಿದ ಮೊದಲ ಕಾರ್ಯ ಬೇಟೆಯಾಡುವದು, ಏಕೆಂದರೆ ಬದುಕುಳಿಯಲುಬೇಕಾದ ಆಹಾರ ಸಂಗ್ರಹಣೆಯನ್ನು ಬೇಟೆಯ ಮೂಲದಿಂದಲೇ ಪಡೆಯಬೇಕಾದ ಅನಿವಾರ್ಯತೆಯಿತ್ತು. ಜೊತೆಗೆ ನಿಸರ್ಗದ ಮಡಿಲಲ್ಲಿಯೇ ವಾಸಿಸುತ್ತಿದ್ದುದ್ದರಿಂದ ದುಷ್ಟ ಪ್ರಾಣಿಗಳಿಂದತನ್ನನ್ನು ರಕ್ಷಿಸಿಕೊಳ್ಳಲುಕೂಡ ಬೇಟೆಯ ಅವಶ್ಯಕತೆಯಿತ್ತೆಂಬುದನ್ನು ಮರೆಯುವಂತಿಲ್ಲ. ಬೇಟೆಯ ಮುಖೇನ ಮಾನವ ಓಡುವುದನ್ನು, ಗುರಿ ಇಡುವದನ್ನು, ಹಾರುವುದನ್ನು ಎಳೆಯುವುದನ್ನು, ಸುತ್ತುವುದನ್ನು, ಕೊಲ್ಲುವುದನ್ನು ಕಲಿತ. ಬದುಕಿಗೆ ಅನಿವಾರ್ಯವಾಗಿದ್ದ ಬೇಟೆ ಕ್ರಮೇಣ “ಖಯಾಲಿಯಾಗಿ, ಕ್ರೀಡೆಯಾಗಿ, ಯುದ್ಧಕಲೆಯಾಗಿ, ಮನೋರಂಜನೆಯಾಗಿ, ಜೀವನಧಾರವಾಗಿ, ಮೃಗಯಾವಿನೋಧವಾಗಿ, ಸಾಹಿತ್ಯದ ಅಷ್ಟದಶ ವರ್ಣನೆಗಳಲ್ಲಿ ಒಂದಾಗುತ್ತಾ ವಿವಿಧ ಆಯಾಮ ಪಡೆಯುತ್ತಸಾಗಿತ್ತು. ಬೇಟೆಯ ಉಲ್ಲೇಖಗಳು ಪ್ರಾಚೀನ ಕಾಲದ ವರ್ಣಚಿತ್ರಗಳಲ್ಲಿ, ಸಿಂಧೂ ಸಂಸ್ಕೃತಿಯಲ್ಲಿ, ವೇದಗಳ ಕಾಲದಲ್ಲಿ, ಕಾವ್ಯಗಳಲ್ಲಿ ಪ್ರಚಲಿತವಿದ್ದುದ್ದನ್ನು ಕಾಣಬಹುದಾಗಿದೆ.

ಬೇಟೆ ಮಾಡುವ ಸಮುದಾಯಗಳು:

೧. ಬೇಡರು

೨. ಹಕ್ಕಿಪಿಕ್ಕಿಗಳು

೩. ಗ್ರಾಮೀಣ ಪ್ರದೇಶದ ಮಾಂಸಹಾರಿಗಳು

೪. ಮಲೆನಾಡಿನ ಒಕ್ಕಲಿಗರು

ಬೇಟೆಮಾಡುವ ವಿಧಾನಗಳು:

ಕಲ್ಕುಳಿಯವರ ಮಂಗನ ಬ್ಯಾಟೆ ಮಲೆನಾಡಿನ ಪರಿಸರವನ್ನು ಅವಲೋಕಿಸುತ್ತ ಹೋದಂತೆಲ್ಲ ಬೇಟೆಯ ಮೂಲವಸ್ತು ಸಿದ್ಧನ ನೆನಪುಗಳು ಕುಂ.ವೀರಭದ್ರಪ್ಪ ಅವರ ಬೇಟೆ ಕತೆಯಲ್ಲಿನ ಸಂದರ್ಭವನ್ನು ಮರುಕಳಿಸುತ್ತವೆ. ಕುವೆಂಪು ಅವರ ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು, ಯಶವಂತ ಚಿತ್ತಾಲರ ಶಿಕಾರಿ ಕಾದಂಬರಿ, ಉಮೇಶ್ ಹೊನ್ನಾಳಿಯ ಮಲೆನಾಡಿನ ಶಿಕಾರಿಲೋಕ ವಿರೂಪಾಕ್ಷಿ ಪೂಜಾರಹಳ್ಳಿ ಅವರ ಬೇಟೆ ಮತ್ತು ಬೇಡರು, ದೇವೇಂದ್ರಕುಮಾರ ಹಕಾರಿ ಅವರ ಮತ್ತು ಕೆ.ಆರ್. ಸಂಧ್ಯಾರೆಡ್ಡಿ ಅವರ ಗ್ರಾಮೀಣ ಬೇಟೆಗಳಲ್ಲಿ ಸಹ ಕಂಡುಬರುತ್ತದೆ. ಮಾನವ ಬೇಟೆಯಾಡುವುದನ್ನು ಪ್ರಾಣಿಗಳಿಂದ ಕಲಿತ, ಹಾಗೆ ಬೇಟೆಯ ವಿಧಾನಗಳನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಅವುಗಳನ್ನೆ ಅನುಕರಿಸಿದಂತೆ ತೋರುತ್ತದೆ.

ಜೇಡದಿಂದ ಬಲೆಹಾಕುವುದು, ಹಲ್ಲಿನಿಂದ ಹೊಂಚುಹಾಕುವುದು, ಹುಲಿ, ಚಿರತೆಗಳು ಮೊರುಸು ಬೇಟೆಯಾಡುವುದು, ಗಿಡುಗ ಮಿಂಚುಳ್ಳಿಯಿಂದ ಗಾಳ ಹಾಕಲ್ಪಡುವದು, ಇತ್ಯಾದಿ ಉದಾರಣೆಗಳನ್ನು ಬೇಟೆಮಾಡುವಾಗ ಎಲ್ಲಾ ಪ್ರಾಣಿಗಳಿಗೂ ಒಂದೇ ತಂತ್ರ ಬಳಸುವುದಿಲ್ಲ. ಬೇರೆ ಬೇರೆ ತಂತ್ರ ಉಪಯೋಗಿಸಿ ಬೇಟೆಯಾಡುತ್ತಾರೆ.

- **ಮೊರಸು ಬೇಟೆ:–**

ಬೇಸಿಗೆ ಮತ್ತು ಚಳಿಯಲ್ಲಿ ಮಾಡುವ ಬೇಟೆಯಾಗಿದೆ. ಇಂತಹ ಬೇಟೆಗಳನ್ನು ಮರೆಯಲ್ಲಿ ಕುಳಿತು ಪ್ರಾಣಿಗಳನ್ನು ಹೊಡೆಯುವುದರಿಂದ ಇದಕ್ಕೆ ಮೊಸರು ಬೇಟೆ ಎಂದು ಕರೆಯುತ್ತಾರೆ. ಮೊರಸು ಬೇಟೆಯು ಮರೆಯಲ್ಲಿ (ಗಿಡದಪೊದರೆ)ಯಲ್ಲಿ ಕುಳಿತು ಕೋವಿಯಿಂದ, ಕಲ್ಲುಗಳಿಂದ, ದೊಣ್ಣೆಯಿಂದ ಹೊಡೆದು ಬೇಟೆಯಾಡುತ್ತಾರೆ. ಹೀಗೆ ಬೇಟೆಯ ಕ್ಷಣಮಾತ್ರದಲ್ಲಿ ನಡೆಯುವ ಕ್ರಿಯೆಯಾಗಿದೆ.

- **ಲೈಟು ಬೇಟೆ:–**

ಇದಕ್ಕೆ ಕಾರಿದಿಂಗಳ ಬೇಟೆ ಎಂತಲು ಕರೆಯುತ್ತಾರೆ. ಇಂತಹ ಬೇಟೆಗಳು ಸಹಜವಾಗಿ ಸಹಬಾಗಿ ಬೇಟೆಯಾಗಿವೆ. ಒಂದು ವೇಳೆ ಏಕಾಂಗಿ ಬೇಟೆಗೆ ಹೋದರೆ ಟಾರ್ಚ್‌ಲೈಟನ್ನು ತಲೆಗೆ ಕಟ್ಟಿಕೊಂಡು

ಕೈಯಲ್ಲಿನ ಕೋಲಿನಿಂದ ಮೊಲ, ಬೆಕ್ಕು, ಕಬ್ಬೆಕ್ಕು, ಕಾಡುಹಂದಿ, ಕಾಡುಕುರಿಗಳನ್ನು ಬೇಟೆಯಾಡುತ್ತಾನೆ,

- **ಇಳಸಲು ಬೇಟೆ:–**

ಮರದ ಹಲಗೆಯನ್ನು ಬಳಕೆಯಾಗಿಸಿ ಕಾಡು ಅಳಿಲು, ಕಾಡುಬೆಕ್ಕು, ಇಲಿ, ಹೆಗ್ಗಣ, ಕಾಡುಕೋಳಿಗಳನ್ನು ಬೇಟೆಯಾಡುತ್ತಾರೆ. ಭಾರವಾದ ಹಲಗೆಯನ್ನು ಗುಟಕ್ಕೆ ಹೊದಿಸಿ ಅದರ ಕೆಳಗಡೆ ಕಾಳುಗಳನ್ನು ಚೆಲ್ಲುತ್ತಾರೆ. ತಿನ್ನಲು ಬರುವ ಪ್ರಾಣಿಗಳಿಗೆ ಗೊತ್ತಾಗದಂತೆ ಹಲಗೆಯ ಕೆಳಗಿರುವ ಗುಟಗಳನ್ನು ಹಗ್ಗದ ಸಹಾಯದಿಂದ ಎಳೆದು ಬೇಟೆಯಾಡುತ್ತಾರೆ.

- **ಸಿಡಿಮದ್ದು ಬೇಟೆ:–**

ಕಾಡುಹಂದಿ, ಜಿಂಕೆ, ಸಾರಂಗ, ಕಾಡುಮೃಗಗಳನ್ನು ಹಿಡಿಯಲು ಅನೇಕ ವಿಧಾನಗಳಿದ್ದು ಅವುಗಳಲ್ಲಿ ಸಿಡಿಮದ್ದು ವಿಧಾನವೂ ಒಂದಾಗಿದೆ. ಪ್ರಾಣಿಗಳ ಮನಸೆಳೆಯಲು ಸತ್ತಮೀನು, ಕೊಳೆತ ಹಲಸಿನ ಹಣ್ಣಿನ ತೊಳೆಗಳನ್ನು ಮದ್ದಿನ ಪೊಟ್ಟಣದ ಸಮೀಪದಲ್ಲಿ ಹಾಕುತ್ತಾರೆ. ಆಹಾರದ ಆಸೆಯಿಂದ ಬಂದ ಪ್ರಾಣಿಗಳನ್ನು ಕಾಲ್ತುಳಿತಕ್ಕೆ ಮದ್ದುಸಿಡಿದು ಪ್ರಾಣಿಗಳು ಸಾಯುತ್ತವೆ. ತೀರ್ವವಾಗಿ ಗಾಯವಾಗದ ಪ್ರಾಣಿಗಳನ್ನು ಕೋವಿಯಿಂದ ಅಥವಾ ಬಡಿಗೆಯ ಸಹಾಯದಿಂದ ಹೊಡೆದು ಸಾಯಿಸುತ್ತಾರೆ.

- **ಹೊಂಚು ಬೇಟೆ:–**

ಹಗಲು–ರಾತ್ರಿಯ ಬೇಟೆಯಾಗಿದ್ದು ಇಂತಹ ಬೇಟೆಗಳನ್ನು ಮೊರಸು ಬ್ಯಾಟೆಗಳಿಗೆ ಹೋಲಿಸಬಹುದಾಗಿದೆ. ಪ್ರಾಣಿಗಳು ಸಂಚರಿಸುವ ವೇಳೆ ಮತ್ತು ಅವು ನೆಲೆಸಿರುವ ಸ್ಥಳವನ್ನು ಅರಿತು ಬೇಟೆಗಾರ ಮರಹತ್ತಿ ಕುಳಿತುಕೊಳ್ಳುವುದು ಆತನು ಯಾವುದೇ ಪ್ರಾಣಿಯನ್ನು ಕಂಡೊಡನೆ ಗುಂಡು ಹಾರಿಸಿ ಹೊಡೆಯುವುದು.

- **ಉರುಳು ಬೇಟೆ:–**

ಪ್ರಾಣಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದಾಟುವ ಜಾಗವನ್ನು ಕಂಡುಹಿಡಿದು ಹಗ್ಗದಿಂದ ಉರುಳುಗಳನ್ನು ಮಾಡಿಟ್ಟು, ಪ್ರಾಣಿಗಳು ದಾಟುವ ಗಂಡಿಗಳಲ್ಲಿ ಮತ್ತು ಬೇಲಿಗಳಲ್ಲಿ ಉರುಳನ್ನು ಕಟ್ಟುವುದು. ಈ ತಂತ್ರ ಅರಿಯದೇ ಪ್ರಾಣಿಗಳು ದಾಟಲು ಬಂದು ಹಾರುಳಿಗೆ ಸಿಕ್ಕಿಕೊಂಡು ಸಾಯುತ್ತವೆ.

➢ **ಹೊಡಬೇಟೆ:–**

ಈ ಬೇಟೆಯನ್ನು ಸೋಮವಾರದ ದಿನದಂದು ಮಾಡಲ್ಪಡುತ್ತದೆ. ಇದರಲ್ಲಿ ೮–೧೦ ಮಂದಿ ಭಾಗವಹಿಸುತ್ತಾರೆ. ಕೋವಿ, ದೊಣ್ಣೆ, ಕತ್ತಿ, ನಾಯಿಗಳನ್ನು ಕರೆದೊಯ್ಯುತ್ತಾರೆ. ಹಂದಿ, ಜಿಂಕೆ, ಮುಳ್ಳುಹಂದಿ, ಕಾಡು ಅಳಿಲುಗಳನ್ನು ಕಾದುಕುಳಿತು ನೀರಿಕ್ಷೆಯಲ್ಲಿದ್ದಾಗ ಆ ಪ್ರಾಣಿಗಳು ನಾಯಿಯ ಬೊಗಳುವಿಕೆಗೆ ಹೆದರಿ ಹೊರಬರುವಾಗ ಬೇಟೆಗಾರ ಅವುಗಳನ್ನು ಹೊಡೆದು ಸಾಯಿಸುತ್ತಾನೆ.

➢ **ಸಾರಿಕೆ ಬೇಟೆ:–**

ಸಾರಿಕೆ ಬೇಟೆಗಳಲ್ಲಿ ಬೇಟೆಗೆ ಯಾವ ಪ್ರಾಣಿಯಾದರೂ ನಿರೀಕ್ಷಿಸದೆ ಗುಂಡನ್ನು ಹಾರಿಸುತ್ತಾನೆ, ಆದ್ದರಿಂದ ಇದು ಪ್ರಾಣಿ ಅಥವಾ ಪಕ್ಷಿಯ ಬೇಟೆ ಸಹ ಆಗಬಹುದಾಗಿದೆ.

➢ **ಕರೆದು ಹೊಡೆಯುವ ಬೇಟೆ:–**

ಕೋಳಿ, ಕಾಡುಅಳಿಲು, ಕಾಡುಕೋಳಿ, ಹುಂಜ, ಇತ್ಯಾದಿ ಅನೇಕ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಬೇಟೆಗಾರ ಕೋಳಿಯಂತೆ ಕೂಗಿ ಕಾಡುಕೋಳಿಯನ್ನು ಬೇಟೆ ಮಾಡುವುದು, ಕಾಡುಹಿಂಟೆ ಹೊರಡಿಸಲು ಹುಂಜನಂತೆ ಕೂಗುವುದು, ಹುಂಜವನ್ನು ಬೇಟೆಮಾಡಲು ಹೆಂಟೆಯಂತೆ ಕೂಗುವುದು, ಅಳಿಲಿನಂತೆ ಕೂಗಿಯೂ ಅಳಿಲನ್ನು ಬೇಟೆ ಮಾಡುವುದು, ಇಂತಹ ಉಪಾಯದ ಬೇಟೆಗಳು ಮಲೆನಾಡ ಪರಿಸರ ಕಥನವಾದ ಮಂಗನ ಬ್ಯಾಟೆಯಲ್ಲಿ ಕಂಡುಬರುತ್ತವೆ. ಕಥನದ ಮೂಲವಸ್ತು ಸಿದ್ಧ ಹಕ್ಕಿಯಂತೆ ಕೂಗಿ ಕೂಗಿ ಪ್ರಾಣಿಗಳನ್ನು ಮತ್ತು ಹಕ್ಕಿಗಳನ್ನು ಬೇಟೆಯಾಡುವುದನ್ನು ಮಂಗನ ಬ್ಯಾಟೆ ಕಥನದಲ್ಲಿ ಕಾಣಬಹುದಾಗಿದೆ.

➢ **ಬಲೆಹಾಕುವುದು:–**

ಮೊಲ, ಕುರಿ, ಹಂದಿಯನ್ನು ಬಲೆಯಲ್ಲಿ ಹಿಡಿಯುತ್ತಾರೆ. ಮೊಲದ ಬೇಟೆಗಂತು ಬಲೆ ಜನಪ್ರಿಯ ವಿಧಾನ ಇವುಗಳನ್ನು ಬೆಳದಿಂಗಳಿನಲ್ಲಿ ಹಿಡಿಯುತ್ತಾರೆ. ಬೇಟೆಗಾರ ಬಲೆ ಒಡ್ಡಿ ನಾಯಿಗಳನ್ನು 'ಛೂ' ಬಿಡುತ್ತಾನೆ; ಆಗ ಪ್ರಾಣಿಗಳು ಗಾಬರಿಗೊಂಡು ಓಡುವಾಗ ಬಲೆಗೆ ಸಿಕ್ಕಿಬಿಳುತ್ತವೆ.

➢ **ಕೋವಿ ಕಟ್ಟುವುದು:–**

ಇಂತಹ ಬ್ಯಾಟೆಗಳು ಅಪಾಯಕಾರಿಯಾದವುಗಳು. ಆದ್ದರಿಂದ ಜನರು ಸಂಚಾರ ಇಲ್ಲದ ಕಡೆ ನಡೆಸಬೇಕು, ಕಾಡುಹಂದಿ ಬಂದಿರುವ ಜಾಗ ತಿಳಿದು ಅವು ದಾಟವ ಜಾಗದಲ್ಲಿ ಕೋವಿ ಕಟ್ಟಬೇಕು ಆಗ ಪ್ರಾಣಿಗಳು ತಿಳಿಯದೇ ಅದರ ಮೇಲೆ ಕಾಲಿಟ್ಟು ಕೋವಿಸಿಡಿದು ಸಾಯುತ್ತವೆ.

➢ **ಕತ್ತರಿ ಓಡ್ಡುವದು:–**

ಹುಲಿ, ಇಲಿ, ಮಂಗಗಳನ್ನು ಬೋನಿನಲ್ಲಿ ತಿನಿಸನ್ನು ಇಟ್ಟು ಹಿಡಿಯುವ ವಿಧಾನವಾಗಿದೆ. ಇದರಂತೆ ಹುಲಿಯ ಬೋನು ದೊಡ್ಡದಾಗಿದ್ದು ಗೂಡಿನಂತಿರುವ ಕಡೆ ದೀಪ ಹಚ್ಚಿಟ್ಟು ಬೋನಿನ ದ್ವಾರಕ್ಕೆ ನಾಯಿಗಳನ್ನು ಕಟ್ಟಿಡುತ್ತಾರೆ. ದೀಪ ಆರಿದ ಬಳಿಕ ಹುಲಿ ನಾಯಿಯನ್ನು ಬೇಟೆಯಾಡಲು ಬಂದು ಬೋನಿನಲ್ಲಿ ಕಾಲಿಟ್ಟಾಗ ಅದರ ಬಾಗಿಲು ಮುಚ್ಚಿಕೊಳ್ಳುತ್ತದೆ.

➢ **ಬೆಂಕಿ ಹಾಕುವುದು:–**

ಮುಳ್ಳುಹಂದಿ ಮತ್ತು ಚಿಪ್ಪುಹಂದಿ ಹಿಡಿಯುವದರಲ್ಲಿ ಈ ವಿಧಾನ ಸೂಕ್ತವಾಗಿದೆ. ಗುದ್ದಿನಲ್ಲಿ ಹಂದಿ ಇರುವದನ್ನು ಖಚಿತ ಮಾಡಿಕೊಂಡು ಗುದ್ದಿಗೆ ಬೆಂಕಿ ಹಾಕುತ್ತಾರೆ. ಅದರಿಂದ ಬೆಂಕಿಯ ಝಳ ಮತ್ತು ಹೊಗೆ ತಡೆಯಲಾರದೇ ಹಂದಿಗಳು ಉಸಿರುಕಟ್ಟಿ ಸತ್ತು ಹೋಗುತ್ತವೆ.

➢ **ಹುಲಿಬೇಟೆ:–**

ಹುಲಿ ಬೇಟೆಯನ್ನು ಬಂದೂಕಿನಿಂದ ಹೊಡೆಯುವುದು, ಬೋನು ಒಡ್ಡುವದು, ಅಟ್ಟಿಗೆ ಮೇಲೆ ಕಾದು ಕುಳಿತು ಹೊಡೆಯುವದು, ವಿಷ ಹಾಕುವದು, ದೇಹ ಒಡ್ಡುವುದು (ಯಾವುದಾದರು ಪ್ರಾಣಿಯನ್ನು ಹುಲಿ ಓಡಾಡುವ ಜಾಗದಲ್ಲಿ; ಕಟ್ಟಿ, ಹುಲಿ ಅದನ್ನು ತಿನ್ನಲು ಬಂದು ಎಲಬು ಕಡಿಯುವಾಗ ಕೋವಿಯಿಂದ ಹೊಡೆಯುವುದಾಗಿದೆ). ಹುಲಿ ಬೇಟೆಯ ಉಪಾಯವನ್ನು ಮಂಗನ ಬ್ಯಾಟೆಯಲ್ಲಿ ಗೋವಿಂದನು ಕೋವಿಯಿಂದ 'ಢಂ' ಅಂತ ಹೊಡೆಯುವುದನ್ನು ಕಾಣಬಹುದು. ಅದರಂತೆ ಶಿವರಾಂ ಕಾರಂತರ ಬೆಟ್ಟದ ಜೀವ ಕಾದಂಬರಿಯಲ್ಲಿ ಹುಲಿಯ ಬೇಟೆಯನ್ನು ನಾಯಿಕಟ್ಟಿ ಬೇಟೆಯಾಡುವದನ್ನು ಗಮನಿಸಬಹುದಾಗಿದೆ. ಇದೇ ರೀತಿಯಲ್ಲಿ ಕುಂ.ವೀರಭದ್ರಪ್ಪರ ಬೇಟೆ ಕತೆಯಲ್ಲಿ ಚಂದ್ರ ಚಿರತೆಯನ್ನು ಬೇಟೆಯಾಡುವ ಪ್ರಸಂಗಗಳು ಮೂಡಿಬಂದಿವೆ.

ಮರಿಕೊಂದ ಕಾಡುಗಳ್ಳರ ಮೇಲೆ ಸೇಡು:–

ಮೂರು ದಿನ ಮರದಲ್ಲೇ ಕೂರಿಸಿದ ಹುಲಿ ಹಿಂಡು!

ಮನುಷ್ಯ ಮತ್ತು ಪ್ರಾಣಿ ನಡುವೆ ಎಷ್ಟೇ ವ್ಯತ್ಯಾಸಗಳಿದ್ದರೂ ಪ್ರತೀಕಾರದ ವಿಷಯದಲ್ಲಿ ಮಾತ್ರ ಇಬ್ಬರಲ್ಲೂ ಎಲ್ಲೋ ಒಂದು ರೀತಿಯ ಸಾಮ್ಯತೆ ಇರಬಹುದೇನೊ. ಹೌದು, ಈ ಮಾತನ್ನು ನಿರೂಪಿಸುವಂತಹ ಘಟನೆಯೊಂದು ಇಂಡೊನೇಷ್ಯಾದಲ್ಲಿ ನಡೆದಿದೆ. ಇಲ್ಲಿನ ದಟ್ಟ ಅರಣ್ಯದಲ್ಲಿ ಆರು ಜನರ ತಂಡವೊಂದು ಹುಲಿ ಮರಿಯನ್ನು ಕೊಂದಿದ್ದಕ್ಕೆ ಪ್ರತೀಕಾರವಾಗಿ ಹುಲಿ ಹಿಂಡೊಂದು, ತಂಡದ ಒಬ್ಬನನ್ನು ಕೊಂದು, ಉಳಿದ ಐವರನ್ನು ಮೂರು ದಿನ ಮರದ ಮೇಲೆ ಕಳೆಯುವಂತೆಮಾಡಿದೆ.

ಸುಮಾತ್ರ ದ್ವೀಪದ ಎಕಿಹ ಪ್ರಾಂತ್ಯದ ಸಿಂಪಾಂಗ್ ಕಿರಿಗೆ ಸೇರಿದ ಆರು ಜನರ ತಂಡವೊಂದು, ಇಲ್ಲಿನ ಗನ್ನುಂಗ್ ಲಿಯೊಸರ್ ರಾಷ್ಟ್ರೀಯ ಉದ್ಯಾನದಲ್ಲಿ ಸುಗಂಧ ದ್ರವ್ಯದ ಕಟ್ಟಿಗೆ ಸಂಗ್ರಹಿಸಲು

ಗುರುವಾರ ಕಾಡಿಗೆ ತೆರಳಿತ್ತು. ಈ ವೇಳೆ ಆಕಸ್ಮಿಕವಾಗಿ ಎದುರಾದ ಹಿಲಿಯ ಮರಿಯೊಂದನ್ನು ತಂಡದ ಸದಸ್ಯರು ಕೊಂದುಹಾಕಿದರು. ಮನುಷ್ಯರ ಈ ಕೃತ್ಯ ನೋಡಿದ ಪಕ್ಕದಲ್ಲೆ ಇದ್ದ ಹುಲಿಗಳ ಹಿಂಡು ಕೂಡಲೇ ಈ ಜನರ ಮೇಲೆ ದಾಳಿ ನಡೆಸಿದೆ. ಘಟನೆಯಲ್ಲಿ ಒಬ್ಬ ವ್ಯಕ್ತಿ ಹುಲಿಗಳ ಬಾಯಿಗೆ ಸಿಲುಕಿಕೊಂಡು ಅಸುನೀಗಿದರೆ, ಉಳಿದ ಐವರು ಬದುಕಿದೆಯಾ ಬಡ ಜೀವವೇ ಎನ್ನುತ್ತಾ ಸಮೀಪದಲ್ಲೇ ಇದ್ದ ಮರ ಏರಿ ಬಚಾವಾದರು. ಆದರೂ ಹುಲಿಗಳ ಕೋಪ ತಣ್ಣಗಾಗಲಿಲ್ಲ. ತಮ್ಮ ಮರಿ ಕೊಂದವರ ಮೇಲೆ ಸೇಡು ತೀರಿಸಿಕೊಳ್ಳಲು ಅವು ಆ ಜಾಗ ಬಿಟ್ಟು ಕದಲಲಿಲ್ಲ. ಸತತ ಮೂರು ದಿನದವರೆಗು ಮನುಷ್ಯರಿದ್ದ ಮರದ ಕೆಳಗೆ ಕಾದು ಕುಳಿತ್ತಿದ್ದವು.

ನಂತರ ಈ ಸುದ್ದಿ ತಿಳಿದುಕೊಂಡ ಅರಣ್ಯ ಇಲಾಖೆ ಅಧಿಕಾರಿಗಳು ೩೦ ಕಾರ್ಯಕರ್ತರ ಸಹಾಯದಿಂದ ಕೊನೆಗೂ ಹುಲಿಗಳನ್ನು ಮರದ ಬಳಿಯಿಂದ ಓಡಿಸಿ, ಮೂರು ದಿನ ಮರದ ಮೇಲೆ ಕಾಲ ಕಳೆದವರನ್ನು ರಕ್ಷಿಸಿದರು. ಸುಮಾತ್ರ ದ್ವೀಪದ ವಲಯದಲ್ಲಿ ಇತ್ತೀಚೆಗೆ ಮನುಷ್ಯರ ಮೇಲೆ ಹುಲಿದಾಳಿ ಪ್ರಕರಣಗಳು ಹೆಚ್ಚಾಗಿದ್ದು ಅರಣ್ಯ ಪ್ರವೇಶ ನಾಶವಾಗುತ್ತಿರುವುದು ಹಾಗೂ ಅವುಗಳಿಗೆ ತೀವ್ರ ಆಹಾರದ ಕೊರತೆಯಾಗಿರುವುದು ಕಾರಣ ಎನ್ನಲಾಗಿದೆ. ಒಂದು ಅಂದಾಜಿನ ಪ್ರಕಾರ ಇಲ್ಲಿನ 'ಗನ್ನುಂಗ್ ಲಿಯೊಸರ್' ರಾಷ್ಟ್ರೀಯ ಉದ್ಯಾನದಲ್ಲಿ ೧೦೦ಕ್ಕೂ ಹೆಚ್ಚು ಹುಲಿಗಳು ಇವೆ ಎಂದು ಸ್ಥಳೀಯ ಪೊಲೀಸ್ ಮುಖ್ಯಸ್ಥರೊಬ್ಬರು ತಿಳಿಸಿದ್ದಾರೆ. (ಪ್ರಜಾವಾಣಿ. ಜೂನ್.೨೦೧೩)

- **ಕೆಣಿ ಬೋಟೆ:-**

ಕೆಣಿಬೋಟೆಯು ಕೊಡಗಿನಲ್ಲಿ ಬೇಟೆಮಾಡುವ ವಿಧಾನವಾಗಿದೆ. ಪ್ರಾಣಿಗಳು ಬರುವ, ಹೋಗುವ, ಜಾಗದಲ್ಲಿ ಸಣ್ಣ ಗುಂಡಿಗಳನ್ನು ತೋಡಿ ಅವುಗಳ ಮೇಲೆ ಕಡ್ಡಿಸೊಪ್ಪುಗಳನ್ನು ಹರಡಿ (ಚೆಲ್ಲಿ) ಮುಚ್ಚಿರುತ್ತಾರೆ. ಪ್ರಾಣಿಗಳು ಈ ಗುಂಡಿಗೆ ತಿಳಿಯದೆ ಬಿದ್ದಾಗ ಬಲೆಬೀಸಿ ಹಿಡಿಯುತ್ತಾರೆ.

- **ಕೂಡ್ ಬೋಟೆ:-**

ಇದು ಒಂದು ರೀತಿಯ ಗುಂಪುಗಾರಿಕೆಯ ಬೇಟೆ ವಿಧಾನವಾಗಿದ್ದು ತಮ್ಮದೇಯಾದ ಸಂಜ್ಞೆ, ಧ್ವನಿ, ಕೂಗುಗಳು, ಅನುಕರಿಸುತ್ತ ಬೇಟೆ ಮಾಡುವ ವಿಧಾನವಾಗಿದೆ.

- **ಇರ್‌ಬೋಟೆ:-**

ಇದು ಕತ್ತಲ ರಾತ್ರಿಯಲ್ಲಿ ಮಾಡುವ ವಿಧಾನ ಹಣೆಗೆ ಟಾರ್ಚ್‌ಲೈಟ್ ಕಟ್ಟಿಕೊಂಡು ಪ್ರಾಣಿಗಳ ಹೊಳೆಯುವ ಕಣ್ಣುಗಳನ್ನು ಗುರಿ ಇಟ್ಟುಕೊಂಡು ಕೋವಿಯಿಂದ ಹೊಡೆಯುವ ವಿಧಾನವಾಗಿದೆ. ಮಂಗನ ಬ್ಯಾಟೆ ಕಥನದಲ್ಲಿ ಗೋವಿಂದನು ಹುಲಿಯನ್ನು ಇದೇ ರೀತಿಯಲ್ಲಿ ಬೇಟೆಯಾಡುತ್ತಾನೆ.

- **ಸಾರಾಕಿ ಬೇಟೆ:–**

ಇಂತಹ ಬೇಟೆಗಳನ್ನು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಡುತ್ತಾರೆ. ಏಕಾಂಗಿ ವ್ಯಕ್ತಿ ಪ್ರಾಣಿಗಳು ಅಡ್ಡಾಡುವ ಕಿಂಡಿಗಳನ್ನು ಪತ್ತೆಹಚ್ಚಿ ನೀರು ಕುಡಿಯಲು ಪೈರು ತಿನ್ನಲು, ಬರುವ ದಾರಿಯನ್ನು ಅರಿತು, ನಿಗಾ ಇರಿಸಿ ಅವು ಬಂದಾಗ ಗುರಿಯಿಟ್ಟು ಹೊಡೆಯುವದು.[೩]

ಬಯಲು ಸೀಮೆ ಪರಿಸರದ ಬ್ಯಾಟೆಗಳು

ಮಲೆನಾಡಿನ ಪರಿಸರ ಬ್ಯಾಟೆಗೂ ಬಯಲು ಸೀಮೆ ಪರಿಸರದ ಬ್ಯಾಟೆಗೂ ಹೋಲಿಸಿ ನೋಡಿದಾಗ ವ್ಯತ್ಯಾಸಗಳು ಕಂಡುಬಂದಿರುವದು ಸಹಜ ಕ್ರಿಯೆಯಾಗಿದೆ. ಮಲೆನಾಡಿನ ಬ್ಯಾಟೆಗಳಲ್ಲಿ ತುಂಬಾ ಅಪಾಯಕಾರಿ ಸನ್ನಿವೇಶಗಳನ್ನು ಕಾಣಬಹುದಾಗಿದೆ. ಆದರೆ ಬಯಲುಸೀಮೆಯ ಬ್ಯಾಟೆಗಳು ಹಾಗಲ್ಲ, ಅವು ೨ ತರಹದಲ್ಲಿ ಕಂಡುಬರುತ್ತವೆ. ಕಾಡುಗಳಿಲ್ಲದ ಬಯಲು ಪರಿಸರದ ಬ್ಯಾಟೆ ದೊಡ್ಡಚಿಕ್ಕ ಹಕ್ಕಿಗಳೆನ್ನದೇ ಕಂಡ, ಕೈಗೆಸಿಕ್ಕ ಎಲ್ಲಾ ಪ್ರಾಣಿ–ಪಕ್ಷಿಗಳನ್ನು ಬೇಟೆ ಯಾಡುತ್ತಾರೆ. ಇಲ್ಲಿ ಪ್ರಾಣಿ ಬೇಟೆಗೆ ಬೇಕಾದಂತಹ ಬರ್ಜಿ, ಈಟಿ, ಕೊಡಲಿಗಳು ಹಕ್ಕಿ ಬೇಟೆಗೆ ಅವಶ್ಯಕ ಸಾಮಗ್ರಿಗಳಲ್ಲ ಅಪಾಯಗಳು ಕಡಿಮೆ ಆದ್ದರಿಂದ ನಿರ್ಭಯವಾಗಿ ಬೇಟೆಯಾಡುತ್ತಾರೆ.

- **ಕಾಡು ಕೋಳಿಯ ಬೇಟೆ:–**

ಇಂತಹ ಬೇಟೆಗಳು ಬಯಲು ಸೀಮೆಯಲ್ಲಿ ನಡೆಯುವದು ಸಹಜಕ್ರಿಯೆ ಇಂತಹ ಪಕ್ಷಿಗೆ ಕೊಕ್ಕಿನ ಮೇಲೆ ಕಿರಿಯದಂತೆ ಕೆಂಪು ಬಣ್ಣದ ಬಾಸಿಂಗವಿರುತ್ತದೆ. ಕಾಡುಕೋಳಿಗಳು ಹಾರುವುದು ಕಡಿಮೆ ಶತ್ರುಗಳು ಕಂಡಾಗ ಮಾತ್ರ ಹಾರಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮರವೇರುತ್ತವೆ; ಅಥವಾ ಪೊದೆಯಲ್ಲಿ ಮಾಯವಾಗುತ್ತವೆ. ಆದ್ದರಿಂದ ಇವುಗಳನ್ನು ಬಲೆಬೀಸಿ ಉರುಳುಉಳ್ಳ ಒಡ್ಡಿ ಬೇಟೆಯಾಡುತ್ತಾರೆ.

- **ಕೆಂಬೂತ:–**

ಈ ಕೆಂಬೂತಗಳು ಕೋಗಿಲೆ, ಕಾಗೆಯ ತರಹ ಇರುತ್ತವೆ. ಇದು ಕಾಗೆಯಂತೆ ಕಪ್ಪು ಪುಕ್ಕ ಹೊಂದಿದ್ದರೂ ಪುಕ್ಕಮಾಸದಲು ಕೆಂಪು ಬಣ್ಣದ್ದಾಗಿರುತ್ತದೆ. ಕೆಂಬೂತಗಳನ್ನು ಬಿಳಿಗಿರಿರಂಗನ ಬೆಟ್ಟದಲ್ಲಿ ಕಾಣಬಹುದಾಗಿದೆ. ಇವು ಕುರುಚಲ ಗಿಡಗಳ ನಡುವೆ ಹುಳ, ಹುಪ್ಪಟೆ, ಮಿಡತೆ, ಒತಿಕ್ಯಾಟ, ಇಲಿಗಳನ್ನು ಹಿಡಿದು ತಿನ್ನುತ್ತವೆ. ಕೊಡಲಿಯ ಕಾವೆ ಮರಕ್ಕೆ ಮೃತ್ಯುವೆಂಬ ಗಾದೆಯಂತೆ ಇವು ಹಕ್ಕಿಯ ಮೊಟ್ಟೆ ಮರಿಗಳನ್ನು ತಿಂದು ಹಕ್ಕಿಯ ಕುಲವನ್ನು ಹಾಳುಮಾಡುವ ಅನಿಷ್ಠ ಕೂಲಕಾರಿಗಳಾಗಿವೆ.

➢ **ಕೋಗಿಲೆ:–**

ಚೈತ್ರಮಾಸದಲ್ಲಿ ಹಾಡುವದು ಸಹಜ ಕ್ರಿಯೆಯಾಗಿದೆ ಇದು ಕಾಗೆ ಬಳಗಕ್ಕೆ ಸೇರಿದ್ದು ಕುಕ್ಕು ಜಾತಿಯ ದ್ವಿತೀಯ ಹಕ್ಕಿ ಕಾಗೆಯಂತೆ ಕಪ್ಪಾಗಿದ್ದರು ಕಂದು ಬಣ್ಣದ ಹೊಳಪುಳ್ಳ ಪುಕ್ಕಗಳಿರುತ್ತವೆ. ಈ ಜೀವ ಪರತಂತ್ರ ಜೀವಿಯಾಗಿದೆ. ಕೋಗಿಲೆ ಕಾಗೆ ಗೂಡಿನಲ್ಲಿ ಮೊಟ್ಟೆ ಇಡುತ್ತವೆ. ಆದರೆ ಏನು ಅರಿಯದ ಕಾಗೆ ಆ ಮೊಟ್ಟೆಗಳಿಗೆ ಕಾವು ಕೊಡುತ್ತದೆ. ತನ್ನ ಮೊಟ್ಟೆ ಎಷ್ಟಿವೆ ಎಂದು ಕಾಗೆ ಅರಿಯಲಾರದು ಒಂದುವೇಳೆ ಕೋಗಿಲೆ ಕಾಗೆಯ ಮೊಟ್ಟೆಯನ್ನು ಹಾಳುಮಾಡಿ ತನ್ನ ಮೊಟ್ಟೆಯನ್ನು ಮಾತ್ರ ಗೂಡಿನಲ್ಲಿರಿಸುತ್ತದೆ.

➢ **ಕಾಗೆ:–**

ಕಾಗೆಗಳು ಹೆಚ್ಚಾಗಿ ಊರು ಕೇರಿಗಳಲ್ಲಿ ವಾಸವಾಗಿರುತ್ತವೆ ಬಯಲು ಸೀಮೆಯ ಕಡಲೆ ಗಿಡಕ್ಕೆ ಹೆಚ್ಚು ಹಾವಳಿ ಮಾಡುತ್ತದೆ. ತನ್ನ ಬಳಗ ಕಾಗೆ ಒಂದಗುಳವನ್ನು ಕಂಡರು ಸಹ ಕೂಗಿ ಕರೆಯದೇ ತನ್ನ ಬಳಗ ಎಂಬಂತೆ ಕರೆಯುತ್ತದೆ. ಕಾಗೆಯ ಶನಿಮಹಾತ್ಮನ ವಾಗ್ದಾನವಾಗಿದೆ. ಕಾಗೆಯ ಕುರಿತು ಜನಪದರ ನಂಬಿಕೆ ಕಾಗೆ ಮನೆಹೊಕ್ಕರೆ ಕೇಡಾಗುತ್ತದೆ. ಉತ್ತರ ಬಾಗಿಲಿನಿಂದ ಕಾಗೆ ತಲೆಸವರಿ ಹೋದರೆ ಸ್ನಾನಮಾಡಿ ದೇವರಿಗೆ ಪೂಜೆ ಪುರಸ್ಕಾರ ಮಾಡುತ್ತಾರೆ. ಮನೆ ಅಂಗಳದ ಮುಂಭಾಗದಲ್ಲಿ ಕುಳಿತು ಕೂಗಿದರೆ ಮನೆಗೆ ನೆಂಟರು(ಬಿಗರು)ಬರುತ್ತಾರೆ. ಒಳ್ಳೆ ಕೆಲಸಕ್ಕೆ ಹೊರಟಾಗ ಕಾಗೆ ಅಡ್ಡಬಂದು ಬಿಟ್ಟರೆ ಒಳ್ಳೆದಲ್ಲ ಎಂಬ ಮೂಡ–ನಂಬಿಕೆಗಳನ್ನು ಜನಪದರು ಇನ್ನು ನಂಬಿಕೊಂಡಿದ್ದಾರೆ.

➢ **ಗವುಜಗನ ಹಕ್ಕಿ (ಗೌಜಗ್ಲಕ್ಕಿ):–**

ಗವುಜಗನ ಹಕ್ಕಿಗಳನ್ನು ಬಯಲು ಸೀಮೆಯ ಹೊಲ ಎಂದು ಕರೆಯುತ್ತಾರೆ. ಗುಡ್ಡ–ಬೆಟ್ಟಗಳಲ್ಲಿ ಇರುತ್ತವೆ. ಗಿಡದಲ್ಲಿ ಗೂಡು ಕಟ್ಟಿರುತ್ತವೆ ಬೂದು ಬಣ್ಣ ಹೊಟ್ಟೆ ಬಿಳುಪು ಇವು ರೈತರಿಗೆ ಉಪಕಾರಿ. ಅವರೆ, ತೊಗರಿ, ಉದ್ದು, ಹೆಸರು, ಹಲಸಂದೆ ಕಾಯಿಗಳನ್ನು ಕೊರೆದು ಹಾಳುಮಾಡುವ ಹಲವಾರು ಹುಳುಗಳನ್ನು ಈ ಹಕ್ಕಿಗಳು ತಿಂದು ಕಾಯಿಗಳನ್ನು ಉಳಿಸಲು ಸಹಕಾರಿಯಾಗಿವೆ.

➢ **ಬಾವಲಿ:–**

ಬಾವಲಿಗಳು ಈರೇ ಹಕ್ಕಿ, ತೊಲಗನಹಕ್ಕಿ ಎಂತಲು ಕರೆಯುತ್ತಾರೆ. ಇದಕ್ಕೆ ಪುಕ್ಕವಿರುವುದಿಲ್ಲ ಮೊಟ್ಟೆ ಇಟ್ಟು ಮರಿಮಾಡಲ್ಲ ಇದು ಸಸ್ತನಿ ಪ್ರಾಣಿಗಳಂತೆ ಮರಿಹಾಕುತ್ತೆ. ಧಾರ್ಮಿಕ ನಂಬಿಕೆಗೆ

ಒಳಗಾಗಿರುವುದರಿಂದಾಗಿ ಗುಡಿಗೋಪುರಕ್ಕೆ ಹೊಂದಿಕೊಂಡು ಮರದಲ್ಲಿರುತ್ತವೆ. ಕೆಲವು ಹಕ್ಕಿಪಿಕ್ಕಿಗಳು ಇವನ್ನು ತಿನ್ನುತ್ತಾರೆ, ಬಲೆಯ ಮುಖೇನ ಬಾವಲಿಗಳನ್ನು ಬೇಟೆಯಾಡುತ್ತಾರೆ.

- **ಪಾರಿವಾಳ ಬೇಟೆ:–**

ಪಾರಿವಾಳವನ್ನು ಮಾಂಸ ಜೂಜಿಗಾಗಿ ಬೇಟೆಯಾಡುತ್ತಾರೆ, ಲಕ್ವದಕ್ಕೆ ಪಾರಿವಾಳ ಔಷಧಿಗಾಗಿ ಬಳಸುತ್ತಾರೆ, ಇವು ಕಟ್ಟಡದ ಸಂದು ಹಳೆಮನೆ, ಗೋಪುರ, ಪಾಳುಬಿದ್ದ ಮನೆ, ಕಲ್ಲುಗಳ ಇರುಕಿನಲ್ಲಿ ವಾಸಿಸುತ್ತವೆ. ಇದನ್ನು ಹಿಂದೆ ಅಂಚೆ ತಲುಪಿಸಲು ಪಳಗಿಸುತ್ತಿದ್ದರು; ಮುಸ್ಲಿಂ ಜನಾಂಗದವರು ಹೆಚ್ಚು ಇಂತಹ ಪಕ್ಷಿಗಳನ್ನು ಸಾಕುತ್ತಾರೆ.

- **ಹೂವಿನ ಹಕ್ಕಿ:–**

ದುಂಬಿಯ ಕೆಲಸವನ್ನು ಮಾಡುತ್ತದೆ, ಹೂವಿನಿಂದ ಹೂವಿಗೆ ಹಾರುತ್ತಾ ಮಧುಪಾನಮಾಡಿ ಪರಾಗಸ್ಪರ್ಶಕ್ಕೆ ಸಹಕಾರಿಯಾಗಿದೆ. ಇದು ಹೂವಿನ ಸಿಹಿಯನ್ನು ಹೀರುತ್ತದೆ. ಬಣ್ಣ ಬಣ್ಣದಿಂದ ಕೂಡಿದ್ದು ರೆಕ್ಕೆಗಳ ಮೇಲೆ ವಿಚಿತ್ರಕಾರವಾದ ಗೆರೆಹೊಂದಿದ್ದು ಮನಸ್ಸನ್ನು ಆಕರ್ಷಿಸುವಂತೆ ಇರುತ್ತವೆ.

- **ಕಪ್ಪೆ:–**

ಕಪ್ಪೆ ವಟಗುಟ್ಟುವ ಜೀವಿ ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇವು ನದಿ, ಸಮುದ್ರ, ಕೆರೆ, ಹಳ್ಳ, ಕೊಳ್ಳಗಳ ತುದಿಯಲ್ಲಿ ವಾಸಿಸುತ್ತವೆ. ಕಪ್ಪೆಗಳು ಗ್ರಾಮೀಣ ಜನರ ಸ್ನಾನದ ಗೃಹ ಬಂಡೆಕಲ್ಲಿನ ಕೆಳಗಡೆ ವಾಸಿಸುತ್ತವೆ.

- **ಮರಕುಟುಕ:–**

ಮರವನ್ನು ತಮಟೆ ಬಡಿದಂತೆ "ಟಕು, ಟಕು" ಕುಟುಕುತ್ತಾ ಮರದ ಪೊಟರೆ ಕೊರೆದು ವಾಸಿಸುತ್ತವೆ. ಕಪ್ಪು ಬಿಳುಪಿನ ರೆಕ್ಕೆ ಪುಕ್ಕವಿದ್ದ ಮರ ಹಿಡಿಯಲು ಸಹಕಾರಿಯಾದ ಗಟ್ಟಿ ಬೆರಳುಗಳಿರುತ್ತವೆ. ಹುಳ, ಹುಪ್ಪೆ, ಕಾಳುಗಳು ಇದರ ಆಹಾರವಾಗಿದೆ.

- **ಆನೆ ಬೇಟೆ:–**

ಇದನ್ನು ರಕ್ಷಣೆಗಾಗಿ ಅದರಲ್ಲೂ ಬೆಳೆಯ ರಕ್ಷಣೆಗಾಗಿ, ಮನರಂಜನೆಗಾಗಿ ಮತ್ತು ದಂತ ಮಾರಟಕ್ಕಾಗಿ ಆನೆಯನ್ನು ಬೇಟೆ ಮಾಡುತ್ತಾರೆ. ಆನೆಗಳನ್ನು ಖೆಡ್ಡಾ ಅಥವಾ ಕೋವಿಯಿಂದ ಬೇಟೆಯಾಡುವುದೇ ಹೆಚ್ಚು. ಆನೆಗಳ ಬೇಟೆ ಕಾನೂನು ಬಾಹಿರವಾದದು ದಂತಕ್ಕಾಗಿ ಬೇಟೆಗೆ ಬಲಿಯಾಗುತ್ತವೆ; ಆನೆಗಳು ಕೋವಿ/ಗುಂಡಿಗೆ ಬಹಳ ಸುಲಭವಾಗಿ ತುತ್ತಾಗುವ ಪ್ರಾಣಿಯಾಗಿದೆ.

➢ **ಉಡದ ಬೇಟೆ:–**

ಇದರ ಬೇಟೆ ಸಿಗುವುದು ವಿರಳ ಇದು ಗಟ್ಟಿ ಚರ್ಮದ ಅತೀ ಹಿಡಿತವುಳ್ಳ ಪಂಜವಿರುವಂತದು ಪಟ್ಟು ಎಂದರೆ ಉಡದ ಪಟ್ಟು ಎಂಬ ಗಾದೆಯಂತೆ ಉಡದ ಹಿಡಿದ ಜಾಸ್ತಿ ಇದರ ಹಿಡಿತ ಎಷ್ಟು ಗಟ್ಟಿ ಎಂಬುದಕ್ಕೆ ಸಾವನದುರ್ಗದ ಮೇಲೆರಲು ಸೈನಿಕರು ಉಡಗಳನ್ನು ಬಳಸುತ್ತಿದ್ದರಂತೆ. ಉಡದ ನಡುವಿಗೆ ಹಗ್ಗಕಟ್ಟಿ, ಬೆಟ್ಟದ ಮೇಲೆ ಮತ್ತೊಂದು ತುದಿಯನ್ನು ಸೈನಿಕರು ಹಿಡಿದು ಗುಪ್ತಾಂಗಕ್ಕೆ ಕಡ್ಡಿಯಿಂದ ಚುಚ್ಚಿದರೆ ಸೈನಿಕರನ್ನು ಎಳೆದುಕೊಂಡು ಮೇಲೇರುತ್ತಿತ್ತಂತೆ. ಜೀವಿಯ ಸಾಹಸ ಎಂತದು ಎಂಬುದನ್ನು ಗಮನಿಸಬಹುದಾಗಿದೆ.

➢ **ಅಳಿಲುಬೇಟೆ:–**

ಹಕ್ಕಿಪಿಕ್ಕಿ, ಅಲೆಮಾರಿಗಳು, ಬೋವಿಗಳು, ಮುಂತಾದ ಜನಾಂಗದವರು ಅಳಿಲನ್ನು ಬೇಟೆಯಾಡುತ್ತಾರೆ. ಬಹುಸುಲಭವಾಗಿ ಹೆಚ್ಚು ಸಮಯವಿಲ್ಲದೆ ಬೇಟೆಗೆ ಈಡಾಗುವ ಪ್ರಾಣಿ ಇದೆಂದು ಗೊತ್ತಾಗುತ್ತದೆ. ಪ್ರತಿರೊಧವಿಲ್ಲ, ಪ್ರತಿಭಟನೆಯಿಲ್ಲ, ತಪ್ಪಿಸಿಕೊಳ್ಳಲು ಓಡುವದು ಬಿಟ್ಟರೆ ಬೇರೆ ಯಾವ ಉಪಾಯ ಮಾಡುವುದಿಲ್ಲ. ಮರದ ಪೊಟರೆಯಲ್ಲಿ ವಾಸಿಸುತ್ತ ಹಣ್ಣು, ಹಂಪಲು, ಕಾಳುಗಳನ್ನು ಆಹಾರ ವಿಧಾನದಿಂದ ಹಿಡಿಯುತ್ತಾರೆ.[೪] ಹೀಗೆ ಬಯಲು ಸೀಮೆಯ ಜನರು ಕಾಡುಹಂದಿ, ಊರಹಂದಿ, ಕೋತಿಬೇಟೆ, ನರಿಬೇಟೆಯನ್ನು ಮಾಡುತ್ತಿರುತ್ತಾರೆ.

ಬೇಟೆಯನ್ನು ಬೇಡರು ಇಂದಿಗೂ ಕೈಬಿಟ್ಟಿಲ್ಲಾ ಇವರು ಪ್ರತಿವರ್ಷ ಯುಗಾದಿಯಲ್ಲಿ ಹಂದಿಬೇಟೆ, ಶಿವರಾತ್ರಿಯಲ್ಲಿ ಮೊಲದ ಬೇಟೆ ಮತ್ತು ಮಳೆಬಾರದಿದ್ದಾಗ ಹೊಲಮೇರಿ ಬೇಟೆಯಂಥ ಆಚರಣೆಗಳನ್ನು ಜೀವಂತವಾಗಿ ಬಳಸಿಕೊಂಡು ಬಂದಿದ್ದಾರೆ. ಮನುಷ್ಯ ಮನುಷ್ಯನನ್ನು ಬೇಟೆಯಾಡುವದು ಅಂಡಮಾನ್ ನಿಕೋಬಾರದಲ್ಲಿ ಕಾಣಬಹುದಾಗಿದೆ. ಮನುಷ್ಯ ಮನುಷ್ಯರ ಮಧ್ಯೆ ನಡೆದಿರುವ ಬೇಟೆಗಳನ್ನು ಯಶಂವತ ಚಿತ್ತಾಲರ ಶಿಕಾರಿ ಕಾದಂಬರಿಯಲ್ಲಿ ಕಂಡುಬರುತ್ತದೆ. ಕಾದಂಬರಿಯ ನಾಯಕ ನಾಗಪ್ಪ ಧೈರ್ಯದಿಂದ ಎದುರಿಸಿದ ಇತಿಹಾಸ ತನ್ನ ಏಕಾಂಗಿತನ ತನ್ನನ್ನು ಶಿಕಾರಿ ಮಾಡುವ ಫಿರೋಜನ ತಂಡದಲ್ಲಿ ಲೀನವಾಗಿರುವ ದೃಶ್ಯವನ್ನು ಕಾಣುತ್ತಾನೆ. ಮನುಷ್ಯ ಮನುಷ್ಯರ ಮಧ್ಯೆ ನಡೆಯುತ್ತಿರುವ ಇಂತಹ ಭಿನ್ನಾಭಿಪ್ರಾಯದ ಬೇಟೆಯಂತಹ ಸಂದರ್ಭಗಳನ್ನು ತಿಳಿಯುತ್ತಾಹೊದಂತೆಲ್ಲ, ಮನುಷ್ಯನಲ್ಲಿ ಅಡಗಿರುವಂತಹ ಕುರೂಪಿ ಭಾವನೆಗಳನ್ನು ಅರಿತುಕೊಳ್ಳಬಹುದಾಗಿದೆ. ಪ್ರಾಣಿಗಳು ತನ್ನ ಆಹಾರಕ್ಕಾಗಿ ಮರಿಪ್ರಾಣಿಯಾಗಲಿ ಅಥವಾ ಮತ್ತೊಂದು ಪ್ರಾಣಿಯನ್ನು ಬೇಟೆಯಾಡಿ ತಿನ್ನುವುದನ್ನು ಅಭಯಾರಣ್ಯಗಳಲ್ಲಾಗಲಿ, ಕಾಡುಗಳಲ್ಲಾಗಲಿ, ದೃಶ್ಯಮಾಧ್ಯಮಗಳಲ್ಲಾಗಲಿ ಉದಾರಣೆಯಾಗಿ "ನ್ಯಾಷನಲ್ ಜಿಯೋಗ್ರಾಫಿ ಚಾನಲ್, ಎನಿಮಲ್ ಪ್ಲಾಂಟ್ ಚಾನಲ್‌ಗಳಲ್ಲಿ ದಿನಾಲು

ವಿಕ್ಷಿಸುತ್ತಿರುವುದು ನಮ್ಮ ಕಣ್‌ಮುಂದಿರುವ ಸತ್ಯ ಸಂಗತಿಗಳಾಗಿವೆ. ಇದೇ ರೀತಿಯಲ್ಲಿ ಮನುಷ್ಯನು ಸಹ ತನ್ನ ದೈನಂದಿನ ಬದುಕನ್ನು ಆರ್ಥಿಕತೆಯತ್ತ ಸುಧಾರಿಸಿಕೊಳ್ಳುವದಕ್ಕಾಗಿ ತನ್ನ ಅವಶ್ಯಕತೆಯನ್ನು ನೀಗಿಸಿಕೊಳ್ಳುವದಕ್ಕಾಗಿ ತನ್ನ ಬೇಡಿಕೆಯನ್ನು, ಪೂರೈಸಿಕೊಳ್ಳುವದಕ್ಕಾಗಿ, ತನ್ನ ಆಸೆಯ ಸಂತೃಪ್ತಿಗಾಗಿ, ತನ್ನ ಆಕಾಂಕ್ಷೆಯ ಪೂರೈಕೆಗಾಗಿ, ಮತ್ತೊಬ್ಬ ಮನುಷ್ಯನನ್ನು ಬೇಟೆಮಾಡುತ್ತಿರುವದು ಸಹ ಆಗಿನ (ಪ್ರಾಚೀನ) ಯುಗದಲ್ಲದೇ ಆಧುನಿಕ ಯುಗದಲ್ಲಿ ಕಂಡುಕೇಳಿರುವಂತದನ್ನು ಗಮನಿಸಬಹುದಾದ ಸಂಗತಿಗಳಾಗಿವೆ. ಇಂತಹ ಬೇಟೆಯ ಪ್ರಾಸಂಗಗಳನ್ನು ದೃಶ್ಯ ಮಾಧ್ಯಮಗಳಲ್ಲಿ ದೃಷ್ಟ ಸಮಾಜದಲ್ಲಿ ಕಾಣಬಹುದಾಗಿದೆ, ಅದರಲ್ಲು ಇತ್ತೀಚೆಗೆ ಇಂತಹ ಸಂಗತಿಗಳಂತು ಪ್ರೇಮಿಗಳಲ್ಲಿ ಅತೀ ಹೆಚ್ಚಿನ ಸಂಖೆಯಲ್ಲಿ ಕಂಡು ಬರುತ್ತಿವೆ.

ಶಿಕಾರಿ ಕಾದಂಬರಿಯಲ್ಲಿ ಕೂಡಾ ಇಂಥಹ ಸಂದರ್ಭಗಳು ಓದುಗರ ಮನ ಕರಗುವಂತೆ ಬಾಸವಾಗಿವೆ, ಕಾದಂಬರಿಯ ನಾಯಕ ನಾಗಪ್ಪ "ಮೇರಿ, ಡಯಾನ, ಥ್ರೀಟಿ, ಜಾನಕಿ" ಎಂಬ ತರುಣಿಯರಿಗೆ ಮನಸೋತು ಪ್ರೀತಿಸುತ್ತಾ ಸಾಗುತ್ತಾನೆ. ಈ ಸಂಗತಿಗಳನ್ನು ಗಮನಿಸುತ್ತಾ ಹೊದಂತೆಲ್ಲಾ ಆಧುನಿಕ ಸಂದರ್ಭದಲ್ಲೂ ಇಂತಹ ಸಂಗತಿಗಳು ನಡೆಯುತ್ತ ಸಾಗುತ್ತಿದೆ. ಪ್ರೇಮಿ ತನ್ನ ಪ್ರೇಯಸಿಯ ಬಲೆಗೆಬಿದ್ದು ಬೇಟೆಗೆ ಒಳಗಾಗುವ ಸಂದರ್ಭಗಳು ಪ್ರೇಯಸಿಯರ ಜೊತೆ ನಲಿದಾಡಿದ ಪೂರ್ವ (ಹಿಂದಿನ) ಸವಿನೆನಪುಗಳನ್ನು ಮರುಹಾಕುತ್ತಾ ಸಾಗುತ್ತಾನೆ. ಇಂತಹ ಸಂದರ್ಭಗಳನ್ನು ಓದುತ್ತಾಹೊದಂತೆಲ್ಲಾ ಕಲ್ಕುಳಿ ವಿಠಲ್ ಹೆಗ್ಗಡೆರ ಮಂಗನ ಬ್ಯಾಟೆ ಕಥನದಲ್ಲಿ ಕಂಡುಬಂದಿರುವ ಸಂಗತಿಗಳನ್ನು ತಿಳಿದುಕೊಳ್ಳಬಹುದಾಗಿದೆ. ಶಿಕಾರಿಯ ನಾಯಕ ನಾಗಪ್ಪನಂತೆ ಮಂಗನ ಬ್ಯಾಟೆಯ ನಾಯಕ ಸಿದ್ಧನು ಸಹ "ಸೀತು, ಕೆಳಪ್ಯಾಟೆ" ಎಂಬಾಕೆಯರ ಬಲೆಗೆಬಿದ್ದು ತನ್ನ ಬ್ಯಾಟೆ ನಡೆದು ಹೋಗಿದೆ. ಎಂದು ತನ್ನಲ್ಲೆ ಮಮ್ಮಲ ಮರಗುತ್ತಿರುತ್ತಾನೆ. ಸಿದ್ದ ಬಚ್ಚನ ಮಗಳು ಸೀತುನು ಮದುವೆ ಮಾಡಿಕೊಂಡು ಸ್ವಲ್ಪದಿನ ಸಂಸಾರ ಮಾಡಿ ಕಾಲಕಳೆಯುತ್ತಾನೆ. ತನ್ನ ಜೀವನ ಸುಧಾರಣೆಗಾಗಿ ಸಿದ್ಧ ಉದ್ಯೋಗಕ್ಕಾಗಿ ಕಾಡಿನಿಂದ ನಾಡಿಗೆ ತೆರಳಿ ಉದ್ಯೋಗ ಗಿಟ್ಟಿಸಿಕೊಂಡು ಬದುಕುತ್ತಾನೆ. ನಾಡಿನ ಹೆಂಗಸು ಕೆಳಪ್ಯಾಟೆಯ ಜೊತೆ ಸಂಬಂಧವಿಟ್ಟುಕೊಂಡು ಹಕ್ಕಿಪಿಕ್ಕಿಯಾಗುತ್ತಾನೆ. ಈ ರೀತಿಯಲ್ಲಿ ಸಿದ್ಧನ ಬಾಳಿಗೂ ಅತ್ತ ಶಿಕಾರಿ ನಾಯಕ ನಾಗಪ್ಪನ ಬಾಳಿಗೂ ತೌಲನಿಕವಾಗಿ ನೋಡಿದಾಗ ಇಬ್ಬರ ಗುರಿ ಇಡೇರಿಕೆಯಂತು ಒಂದೇ ಆಗಿರುವಂತಹ ಸಂದರ್ಭಗಳು ಕಂಡುಬರುತ್ತವೆ.

ನಾಗಪ್ಪ ತಾನು ಪ್ರೀತಿಸಿದ್ದ ಮೇರಿ ತನ್ನ ಮನೆಗೆ ಬಂದು ಪಾರ್ಟಿಗೆ ಕರೆದರೂ ಹೋಗಲು ನಿರಾಕರಿಸುತ್ತಾನೆ, ನಿನಗೆ ಪ್ರಮೋಷನ್ ಕೊಟ್ಟಿದ್ದಾರೆ. ಎಂ.ಡಿ. ಯವರು ಅದಂದಕ್ಕೆ ನಾಗಪ್ಪ ಮೇರಿಗೆ ಗುಟ್ಟು ವಿಷಯಗಳನ್ನು ಅವಳ ಹತ್ತಿರ ತೋಡಿಕೊಳ್ಳುತ್ತಾನೆ. ಅವಳು ಎಷ್ಟೆ ಬೇಡಿಕೊಂಡರು

ಒಪ್ಪಿಕೊಳ್ಳದೆ ನಿರಾಕರಿಸಿ ತನ್ನ ಪೂರ್ವ ಇತಿಹಾಸ ತಿರುವಿಹಾಕಿ ತನ್ನ ಮಟ್ಟಿಗೆ; ಇನ್ನು ಕಂಡಿರದ ಅಣ್ಣನನ್ನು ಕಾಣೆಯಾದ ತಂಗಿಯನ್ನು ಹುಡುಕುವುದೇ ಮುಂದಿನ ಆಯುಷ್ಯದ ಗುರಿ ಎಂದು ನೆಲಕ್ಕೆ ಹತ್ತಿರವಾಗುತ್ತಾನೆ.[೫] ಸಿದ್ಧನು ಸಹ ಬೇಟೆಯನ್ನು ಮಾಡುತ್ತಾ ಜೀವನ ಸಾಗಿಸುತ್ತಿರುತ್ತಾನೆ. ಆದರೇ ಸರ್ಕಾರಿ ಕಾನೂನಿನಂತೆ ಸಿದ್ದ ಬೇಟೆ ನಿಷೇಧದಿಂದ ಪ್ಯಾಟೆಗೆ ತೆರಳಿ ಜೀವನ ಸಾಗಿಸುತ್ತಿರುತ್ತಾನೆ. ಇತ್ತ ಮಂಗಗಳ ಹಾವಳಿಯನ್ನು ತಾಳಲಾರದ ಮಲೆನಾಡ ಜನರು ಸರ್ಕಾರಕ್ಕೆ ದೂರುನೀಡುತ್ತಾರೆ; ಆದರೆ ಸರ್ಕಾರದವರು ಮತ್ತೆ ಸಿದ್ದನ ಸಹಾಯಪಡೆದು ಮಂಗಗಳನ್ನು ಹಿಡಿದು ಬೋನಿಗೆ ತುಂಬಲು ಈಡೀ ಸರಕಾರವೇ ಸಿದ್ಧನಲ್ಲಿ ಬಂದು ಬೇಡಿಕೊಳ್ಳುವುದರಿಂದ ಸಿದ್ಧನಿಗೆ ರಾಜಮರ್ಯಾದೆ ದೊರೆತು ಸಿದ್ಧ ಮತ್ತೆ ತನ್ನ ಕೈಕಸುಬಿಗೆ ಕೈಹಾಕಿ ತನ್ನ ಜೀವನ ನಡೆಸುತ್ತಾ ಮಲೆನಾಡಿನ ಜನರಿಗೆ ಬೇಕಾಗಿದ್ದವನಾಗಿದ್ದನು.[೬]

ಶಿಲಾಯುಗದ ಬೇಟೆಗಾರರಿಗೆ 'ಕಿರಾತಕ' ಎಂಬ ಹೆಸರಿದೆ ಶಿಲಾಯುಗದ ಮಾನವ ಅಲೆದಾಡುತ್ತಿದ್ದ ದುಷ್ಟ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಮರ, ಗಿಡದ ಪೊದರು, ಕಲ್ಲು, ಬಂಡೆ, ಗುಹೆ, ಪೊಟರೆಡಗಳ ಆಶ್ರಯ ಪಡೆದುದಲ್ಲದೆ ಅವನು ಕಲ್ಲಿನಿಂದ ಚೂಪಾದ ಹಾಗೂ ಹರಿತವಾದ ಆಯುಧಗಳನ್ನು ಬಿದಿರು ಬಳ್ಳಿಗಳಿಂದ ಬಿಲ್ಲು ಬಾಣಗಳನ್ನು ಮಾಡುವ ವಿಧಾನವನ್ನು ಕಲಿತು ಅವುಗಳನ್ನು ಬೇಟೆ, ಯುದ್ಧ, ಮಾಂಸ, ಕತ್ತರಿಸುವುದು ಇತ್ಯಾದಿ ಕೆಲಸಗಳಲ್ಲಿ ಉಪಯೋಗಿಸುತ್ತಿದನು. ಇದೇ ರೀತಿಯಲ್ಲಿ ಮಾನವ ಗೆಡ್ಡೆ-ಗೆಣಸು, ಗಿಡ-ಬಳ್ಳಿಗಳ, ಹಣ್ಣು-ಹಂಪಲು ತಿನ್ನುತ್ತಾ ಕಾಡು ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಹಸಿ ಮಾಂಸವನ್ನು ತಿನ್ನುತ್ತಿದ್ದ. ಏಕೆಂದರೆ ಬೆಂಕಿಯ ಉಪಯೋಗ ತಿಳಿಯುತ್ತಿರಲಿಲ್ಲ ಕಾಡಿನಲ್ಲಿ ಪ್ರಾಣಿಗಳು ಓಡಾಡುವ ಸ್ಥಳಗಳಲ್ಲಿ ಕಾವಲು ಮನೆ ಕಟ್ಟಿಕೊಂಡು ಜೀವಿಸುತ್ತಿದ್ದನು. ಬೇಟೆಯ ಸಂದರ್ಭಗಳನ್ನು ಚಿತ್ರಕಲೆ, ವಾಸ್ತು, ಶಿಲ್ಪ. ಶಾಸನ, ನಾಣ್ಯ, ವೀರಗಲ್ಲು ಇತರ ಪುರಾತತ್ವ ಆಧಾರಗಳಲ್ಲಿ ತಿಳಿದಿರುವ ವಿಧಾನವೇ ಬೇರೆ, ಕಾವ್ಯದಲ್ಲಿ ಬರುವ ಬೇಟೆಯ ಸ್ವರೂಪವೇ ಬೇರೆ. ಪುರಾತತ್ವ ಆಧಾರಗಳಲ್ಲಿ ಬೇಟೆ ಚಿತ್ರಣ ಸರ್ವರಿಗೂ ಆಧಾರ ಮಾಧ್ಯಮವಾಗಿವೆ. ಇಲ್ಲಿ ರಾಜ ಪ್ರಜೆಗಳಿಗೆ ವ್ಯತ್ಯಾಸವೇ ಇಲ್ಲ ಕಾವ್ಯಗಳಲ್ಲಿ ಬೇಟೆಗಾರನಾಗುವ ರಾಜನು ಕಾವ್ಯದ ನಾಯಕನು ಆಗಬಹುದು ಇಲ್ಲಿ ರಾಜನನ್ನು ಬೇಟೆಗಾರರು ಬೇಟೆಗೆ ಕರೆತರುತ್ತಾರೆ. ಇಂತಹ ಬೇಟೆ ಪ್ರಜೆಗಳ ರಕ್ಷಣೆಗಾಗಿ, ಆಹಾರಕ್ಕಾಗಿ, ಸ್ವಯಂ ರಕ್ಷಣೆಗಾಗಿ, ಮನೋರಂಜನೆಗಾಗಿ ಸೀಮಿತವಾದಂತಿದೆ; ಇಂತಹದನ್ನು ಲೌಕಿಕ ಬೇಟೆ ಎನ್ನಬಹುದು. ಏಕೆಂದರೆ ರಕ್ಷಣೆಗಾಗಿ ದುಷ್ಟ ಪ್ರಾಣಿಗಳನ್ನು ಕೊಲ್ಲುವ ಇತರ ಸಂಗತಿಗಳು ಗಮನಾರ್ಹವಾಗಿವೆ. ವಸಂತಕಾಲ ಮುಗಿದಾಗ ಗ್ರೀಷ್ಮ ಋತುವಿನಲ್ಲಿ ಬೇಟೆಗೆ ಉತ್ತಮ ಕಾಲವೆಂದು ಬೇಟೆಗಾರರ ನಂಬಿಕೆಯಾಗಿತ್ತು. ಅರಣ್ಯ ನಾಶವಾದರೆ

ಕಾಡು ಪ್ರಾಣಿಗಳು ಬೆಸಾಯದ ನೆಲೆಗೆ ದಾಳಿ ಇಡುತ್ತವೆ ಎಂದು ನಂಬಿದ್ದರು ಇಂತಹವು ನಂಬಿಕೆ, ರೂಢಿಪದ್ಧತಿ, ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ.[೭]

ಕಾಡಲ್ಲಿ ಬೆಂಕಿ ಹಾಕಿದವರು ಅದನ್ನು ಪೂರ್ತಿಯಾಗಿ ನಂದಿಸಿಯೆ ಹೋಗಬೇಕೆಂಬುದು ನಂಬಿಕೊಂಡು ಬಂದ ನಿಯಮ ಕಾಡಲ್ಲಿ ಬೆಂಕಿ ಹಾಕಿ ನಂದಿಸದೇ ಬಂದರೆ ಕಾನ್‌ದೇವಿ ಶಾಪಕೊಡ್ತಾಳಂತೆ ಆಮೇಲೆ ಶಿಕಾರಿ ಮನೆ ಹಾಳಾಗಿ ಕುಲವೇ ನಾಶವಾಗ್ತದಂತೆ ಎಂಬ ನಂಬಿಕೆಯಿದೆ. ಕಾಡಿಗೆ ಬೆಂಕಿ ಬಿದ್ದರೆ ಕುಡಿಯೊ ನೀರುಕೂಡ ಆರ್ತದೆ ಅಂತ ನಂಬಿಕೆಬೇರೆ ಇದೆ ಕಥನದ ಪ್ರಧಾನವಸ್ತು ಮಂಗವಾಗಿದೆ. ರೈತರು ತಮ್ಮ ಬೆಳೆಯನ್ನು ತಿಂದು ಹಾಳುಮಾಡುತ್ತಿರುವ ಮಂಗಗಳನ್ನು ಬೇಟೆ ಮಾಡಲು ಪ್ರಯತ್ನ ಪಟ್ಟು ಸೋತು ಹೋಗಿರುವುದೇ ಕಥನದ ವಸ್ತುವಾಗಿ ಪರಿಣಮಿಸಿದೆ.[೮]

ಮಲೆನಾಡಿನಲ್ಲಿ ಕಾಲು ಹೊರೆಸೊದು ಅಂದರೆ ಮಳೆ ಗಾಲದಲ್ಲಿ ಮಳೆ ಹೆಚ್ಚಾದಂತೆಲ್ಲಾ ಕೊಳೆಯುವ ರೋಗ ಜನ ಜಾನುವಾರುಗಳಿಗೆಲ್ಲಾ ಬರುತ್ತದೆ. ಗದ್ದೆ, ತೋಟಕ್ಕೆಲ್ಲ ಕೊಳೆಯುವ ರೋಗ ಶುರುವಾಗುತ್ತದೆ. ಅಡಿಕೆ ಕೊನೆಗಳಿಗೆ ಕೊನೆರೋಗ ಬಂದು ಮರ ನಾಶವಾಗ್ತದೆ. ನೆಟ್ಟಗದ್ದೆಯಲ್ಲಿ ನಟ್ಟಿ ಕೊಳೆತು ಕರಗಿ ಅಂಚು ಸೇರ್ತದೆ. ಜಾನುವಾರುಗಳ ಮೂಗಿಗೆ ನೀರು ನುಗ್ಗಿ ಥಂಡಿ ಕಾಯಿಲೆ ಬಂದು ವಯಸ್ಸಾಗ್ತದೆ. ಹಕ್ಕಿ, ಪಕ್ಷಿ, ಮಂಗ, ಮುಸಿಯಾ ವಯಸ್ಸಾದವೆಲ್ಲಾ ಕೂತಲ್ಲೆ ಕುಗೆರಿ ಜೀವಾಬಿಡ್ತವೆ. ಭೂಮಿಯ ಮೇಲೆ ಗಾಳಿಗಿಂತ ನೀರೇ ಹೆಚ್ಚಾಗುತ್ತದೆ. ಮನುಷ್ಯರೆಲ್ಲ ಕಪ್ಪೆಗಳತರ ಅರ್ಧನೀರು ಅರ್ಧಗಾಳಿನೇ ಉಸಿರಾಡ್ತಾರೆ. ಕೆಲಸಕ್ಕೆ ಹೋಗೊರಿಗೆ ಕೆಲಸ ಮಣ್ಣು ಆಗ್ತದೆ ಹಾಗೂ ಮನುಷ್ಯನ ಪಾದಗಳೆಲ್ಲ ಸಾರಣಿ ಕಲ್ಲುತರ ಆಗುತ್ತವೆ ಒಂದು ವೇಳೆ ಬೆಂಕಿ ಯೇನಾದ್ರು ಇರಲಿಲ್ಲ ಅಂದ್ರೆ ಮನುಷ್ಯನ ಕಥೆನು ಇಷ್ಟೇ, ಮಲೆಡನಾಡಿನ ವಿಶೇಷ ಅಣಬೆ, ಹಿಗ್ಗಾಲ್‌ಅಣಬೆ ಇದೊಂದು ಮಲಡನಾಡಿನ ವಿಸ್ಮಯವಾಗಿದೆ, ಇದರ ಬೇರಿನ ಬುಡವನ್ನು ಕಂಡವರಿಲ್ಲ ಹೆಗ್ಗಲಣಬೆ ಹುಟ್ಟಿದ್ದಲ್ಲಿ ನಿಧಿಸಿಗುತ್ತದೆ ಎಂಬ ನಂಬಿಕೆ ಇದೆ. ಹುಸಿಗುಡುಗು ಬಂದ್ರೆ ಹೆಗ್ಗಾಲ್‌ಅಣಬೆ ಯೇಳ್ತವೆ ಮತ್ತು ಸಿದ್ಧನ ನಂಬಿಕೆ ಮಳೆಹುಳು ಎಲ್ಲೆಲ್ಲಿ ಬೇಸಿಗೇಲಿ ಎದ್ದಿರ್ತಾವೋ ಅಲ್ಲೆಲ್ಲಾ ಅಣಬೆ ಏಳೋದು ಗ್ಯಾರೆಂಟಿ ಅಂತ ನಸರಿ ಮೇಣದಿಂದ ಶಂಕಕ್ಕೆ ಕಳಸ ಕಟ್ಟಿಸ್ತಿದ್ದರು ತಿರುಪತಿ ತಿಮ್ಮಪ್ಪನ ದಾಸರು ಮತ್ತು ಸಿದ್ಧನಂತೋರು ಕೋಳಲಿಗೆ ಸ್ವರ ಬರಸೋಕೆ ನಸರಿ ಮೇಣಕ್ಕೆ ಬರ ಬಂತು ಆದ್ದರಿಂದ ದಾಸರು ತಿರುಪತಿ ತಿಮ್ಮಪ್ಪನ ಕುಂಕುಮ ಬಿಳಿನಾಮ ಕೊಟ್ಟು ಮಲೆನಾಡಿನ ಅಡಿಕೆ ದಾಸರಾದರು; ಹೀಗೆ ಮಲೆನಾಡಿನ ಅಡಿಕೆ ಆಂದ್ರಕ್ಕೆ ಹೋಗಿ ವ್ಯಾಪಾರವಾಗಿ ಮಾರ್ಪಟ್ಟಿತು.

ಮಲೆನಾಡಿನಲ್ಲಿ ಬೇಟೆ ಮಾಡಿಕೊಂಡು ಬಂದನಂತರ ಮಾಂಸವನ್ನು ಪಾಲಿನರೂಪದಲ್ಲಿ ಹಂಚಲಾಗುತ್ತದೆ. ಕೋವಿಪಾಲು, ನಾಯಿ ಪಾಲು, ಹಳುವಿನವರ ಪಾಲು, ಸೊಂಟ್‌ಮುರ್ಕ್ ಪಾಲು,

ತೋರ್ಡಡಿ ಪಾಲು, ನೆಲದ ಪಾಲು ಅಂತ ಹಂಚಲ್ಪಡುತ್ತದೆ. ಹಂದಿ ಮಲೆನಾಡಿನಂತೆ ಕೊಡಗಿನಲ್ಲೂ ವಿಶೇಷ ಆಹಾರ. ಕೆಲವು ಸಂಪ್ರದಾಯಗಳು ಪರಿಸರದ ಕಾರಣಕ್ಕೋ ಏನೋ ಮಲೆನಾಡಿನಲ್ಲೂ ಕೊಡಗಿನಲ್ಲೂ ಒಂದೇ ರೀತಿ ಇವೆ. ಮಲೆನಾಡಿನವರಿಗೆ ಕೊಡಗಿನವರಂತೆ ಹಂದಿಗಿಂತ ಶ್ರೇಷ್ಠ ಮಾಂಸವಿಲ್ಲ. ಮಲೆನಾಡಿನವರೂ ಸ್ವಲ್ಪ ಹುಳಿ ಹೆಚ್ಚು ಬಳಸುತ್ತಿರಬಹುದು ಅಷ್ಟೇ, ಮಲೆನಾಡಿನವರಂತೆ ಕೊಡಗಿನವರು ಮನೆಯಲ್ಲಿ ಹಂದಿ ಸಾಕುತ್ತಾರೆ. ಮಲೆನಾಡಿಗರಿಗೆ ಮನೆಗೊಂದು ಹಂದಿಬೇಕು ಮನೆದೇವರುಗಳಿಗೆಲ್ಲ ಹಂದಿ ಹರಕೆಯೇ ಆಗಬೇಕು, ಮಲೆನಾಡಿನ ಜನರಂತೆ ದೇವರು ಕೂಡಾ ಹಂದಿಯದೇ ಬಲಿಬೇಕು, ಅಂತವಂತೆ.[೯] ಬೈನೆ ಕಟ್ಟುವದು ಅಂದರೇ ಬೈನೆ ಮರ (ಈಚಲ ಮರ) ತುದಿಯಲ್ಲಿ ಮಡಕೆ ಕಟ್ಟಿ ಅದರಲ್ಲಿ ಬೈನೆಕಳ್ಳು ಅಥವಾ ಸೇಂದಿ ರಸವನ್ನು ತೆಗೆಯುವದು. ಇದು ಮೊದಲ ಸಿಹಿಯಾಗಿರುತ್ತದೆ ಬಿಸಿಲು ಬಿದ್ದನಂತರ ಅಮಲೇರಿಸುತ್ತದೆ. ಬೈನೆ ಕಟ್ಟಲಿಕ್ಕೆ ಸೂಕ್ಷ್ಮಾತಿ ಸೂಕ್ಷ್ಮ ಜಾಗಬೇಕು ಜೋತೆಗೆ ಅದೃಷ್ಟವು ಬೇಕಾಗುತ್ತದೆ. ಘಟ್ಟದಲ್ಲಿ ಗಿರಿಜನರು, ದಲಿತರು, ಬೈನೆ ಕಟ್ಟುತ್ತಾರೆ, ಆದರೇ ಕರಾವಳಿ ಭಾಗದಲ್ಲಿ ಪೂಜಾರಿಗಳು ಬೈನೆ ಕಟ್ಟುತ್ತಾರೆ; ಬೈನೆ ಕಳ್ಳು ಕೀಳಲು ಸೂಕ್ಷ್ಮವಾದ ಜಾಗ ಮತ್ತು ಮರವನ್ನು ಆಯ್ಕೆ ಮಾಡಿಕೊಂಡು ಕಟ್ಟ ಬೇಕಾಗುತ್ತದೆ. ಏಕೆಂದರೆ ಎಲ್ಲಾ ಮರದಲ್ಲು ಕಳ್ಳು ಸಿಗುವುದಿಲ್ಲ ಐತಪ್ಪ ಪೂಜಾರಿಯು ಬೈನೆ ಕಟ್ಟೋದ್ರಲ್ಲಿ ನಿಸ್ಸಿಮ. ಈತನು ಸಿದ್ಧನ ಬೈನೆ ಗುರುವಾಗಿದ್ದ ಐತಪ್ಪ ಪೂಜಾರಿ ತನ್ನ ಹೆಂಡತಿ ಅಕ್ಕಣಿಯಮ್ಮನನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದ, ಒಂದು ದಿನ ಬೈನೆ ಕೀಳಲು ಹೋಗಿ ಹೆಬ್ಬಾವಿನ ಬಾಯಿಗೆ ತುತ್ತಾಗಿ ಸತ್ತು ಬದುಕಿದಂತಾಗಿದ್ದ. ಅಕ್ಕಣಿಯಮ್ಮನನ್ನು (ಹೆಂಡತಿ)ನಿನೇ ತಾಯಿ.. ಕೂರಲು ಏಳಲು ಹೆಂಡತಿನೇ ಸಹಾಯಕಳಾಗಿದ್ದಳು. ಅತ್ತ ಸಿದ್ಧ ಈತನಿಗೆ ಕಳ್ಳು ಕೊಡುತ್ತಿದ್ದ ಸಿದ್ಧನ ಬೈನೆಯ ವ್ಯಾಪಾರ ದಿನದಿಂದ ದಿನಕ್ಕೆ ಊರಿಂದ ಊರಿಗೆ ಪ್ರಚಾರವಾಗಿ ಸಿದ್ಧನ ಹಿಂದೆ ಸಾಲು ಸಾಲು ಜನರ ದಿಂಡು ಇರುತಿತ್ತು, ಏಕೆಂದರೆ ಸಿದ್ದನ ಬೈನೆ ಮರದಲ್ಲಿ ಬೆಳಿಗ್ಗೆ ೩೦ ಸಂಜೆ ೨೦ ಸೇರು ಕಳ್ಳು ಸಿಗುತಿತ್ತು. ಆದ್ದರಿಂದ ಜನ ಅದಕ್ಕೆ (ಸಿದ್ಧನ ವ್ಯಾಪಾರಕ್ಕೆ) ತೆಂಗಿನಕಾಯಿ ಗಿರ್‌ಮಿಟ್ ಅಂತ ಹೆಸರಿಟ್ಟಿದ್ರು ಸಿದ್ದನ ವ್ಯಾಪಾರ ಕಂಡು ಜನರು "ಅವ ಭೂಮಿ ಮ್ಯಾಲೆ ಕಾಣುವಷ್ಟೇ ಭೂಮಿ ಒಳಗೂ ಕೆಳಗೂ ಇದಾನೆ. ಅಂತ ಹೆಳ್ತಿದ್ರು, ಅವನ ಮಾಯದ ತೆಂಗಿನಕಾಯಿಯಿಂದ ಅವನ ಜೀವನ ಆ ನಾಟಕದಲ್ಲಿ ಸಿದ್ದನೇ ಸೂತ್ರದಾರನಾಗಿದ್ದ ಸಿದ್ದನ ಬೈನೆ ವ್ಯಾಪಾರಕ್ಕೆ ಮಂಗಗಳ ಕಾಟವಿತ್ತು ಆದ್ದರಿಂದ ಸಿದ್ಧ ಒಂದಿನ ಬಂಗಿಗಿಡದ ಸೊಪ್ಪನ್ನು ಬೈನೆಗೆ ಕಲಿಸಿ ಮರದಲ್ಲಿಟ್ಟ ಮಂಗಗಳು ಕುಡಿದು ಅರಚಾಡುತ್ತ ಗಲಾಟೆ ಆರಂಬಿಸಿದ್ದವು ಆದ್ದರಿಂದ ಸಿದ್ಧ ಮರ ಹತ್ತಿ ಹೋರಿ ಮಂಗನ ಹೊಡೆದೊಡಿಸಿದ್ದರಿಂದ ಮಂಗಗಳ ಕಾಟತಪ್ಪಿತು'.[೧೦]

ಮಲೆನಾಡಿನ ಗಿರಿಜನರಲ್ಲಿ ಪ್ರತಿ ಮನೆಯವರೂ ಬೈನೆ ಮರದಿಂದ ಕಳ್ಳು ಇಳಿಸ್ತಾರೆ. ಅದು ಅವರ ಕೃಷಿ ಕಸುಬಿನೊಂದಿಗೆ ಬಂದ ಹವ್ಯಾಸ. ಅವರು ಕಳ್ಳನ್ನು ಅಮಲಿನ ಪದಾರ್ಥವೆಂದೂ ತಿಳಿಯುವುದಿಲ್ಲ. ಅದು ಅವರ ಆಹಾರದ ಭಾಗ, ಕಳ್ಳಿನ ಬಗ್ಗೆ ಅವರಿಗೆ ಅದು ಅಮೃತ ಅನ್ನುವಷ್ಟು ಗೌರವ ಪೂಜ್ಯ ಭಾವನೆ ಇದೆ. ಗಿರಿ ಜನರ ಪ್ರತಿಯೊಂದು ಮನೆಯವರೂ ಪ್ರತ್ಯಕವಾಗಿ ಕಳ್ಳು ಮಾಡಿಕೊಂಡಿರುತ್ತಾರೆ, ಮತ್ತು ಅವರು ಸ್ವಲ್ಪ ಮಟ್ಟಿಗೆ ವ್ಯಾವಸಾಯ ಮಾಡಿಕೊಂಡಿರುತ್ತಾರೆ. ಜಾನುವಾರು ಸಾಕುತ್ತಾರೆ ಇದೇ ರೀತಿಯಲ್ಲಿ ಮಲೆನಾಡಿನ ಜನರು ಕಳ್ಳನ್ನು ಎಂದೂ ದುಷ್ಟಚಟವೆಂದು ಬಗೆಯುವದಿಲ್ಲ ಅದು ಅವರಿಗೆ ಅಮೃತದ ವಸ್ತುವಾಗಿದೆ. ಮಲೆನಾಡಿನ ಮುಖ್ಯ ಪೇಯ ಅಕ್ಕಿ ಹೆಂಡ ಇದನ್ನು ತಯಾರಿಸಲು ಭತ್ತ ಬೇಕಾಗುತ್ತದೆ. ಭತ್ತವನ್ನು ಮೊಳಕೆ ಬರಿಸಿ ಅದಕ್ಕೆ ಗಿಡಮೂಲಿಕೆಗಳಾದ ಮಂಗನ ಬಳ್ಳಿ (ಅಮೃತಬಳ್ಳಿ) ಒಳ್ಳೆಕುಡಿ, ಸುಗಂಧಿಬೇರು, ಬೆತ್ತದಬೇರು ಬಳಸುತ್ತ ತಯಾರಿಸುತ್ತಿದ್ದರು, ಮಲೆನಾಡಿನ ಅಡಂಗದೂರಿನಲ್ಲಿ ತನಿಯಾ ಪೂಜಾರಿ ಸರ್ಕಾರಿ ಸಾರಾಯಿ ಅಂಗಡಿಯನ್ನು ತೆರೆಯುತ್ತಾನೆ, ಆದರೆ ಆ ಊರಿನಲ್ಲಿ ಕಳ್ಳು (ಬೈನೆ) ಮಾಡುತ್ತಿದ್ದರಿಂದ, ತನ್ನ ಅಂಗಡಿಗೆ ಯಾರು ಸಾರಾಯಿ ಕುಡಿಯಲಿಕ್ಕೆ ಜನರು ಬರಲಿಲ್ಲ ಈ ದೂರನ್ನು ತನಿಯಾ ಪೂಜಾರಿ ಸರ್ಕಾರದ ಗಮನಕ್ಕೆ ತಂದು ಸರ್ಕಾರಿ ಅಧಿಕಾರಿಗಳನ್ನು ಅಡಂಗದೂರಿಗೆ ಕರೆತರುತ್ತಾನೆ. ಅವರಲ್ಲಿ ಎಸ್.ಐ.ರುದ್ರೇಶ (ಪೋಲಿಸ್) ಮಾರ್ಕರ್ ಇಸ್ಸ್‌ಪೆಕ್ಟ್ರ ಮ್ಯಾನೇಜರ್ ದೇಜುಶೆಟ್ಟಿ ಮತ್ತು ಶ್ರೀಕಂಠಯ್ಯ ಈ ಸರ್ಕಾರಿ ಅಧಿಕಾರಿಗಳು ರಾತ್ರೊರಾತ್ರಿ ಊರಿಗೆ ದಾಳಿಮಾಡಿ ಜನರಿಂದ ಪೆಟ್ಟನ್ನು ತಿನ್ನುತ್ತಾರೆ. ಅಲ್ಲದೆ ಊರಿನವರು ಈ ಸರ್ಕಾರಿ ಅಧಿಕಾರಿಗಳ ಮೇಲೆನೆ ಕಂಪ್ಲೆಂಟು ಕೊಡುತ್ತಾರೆ ಕೊನೆಗೊಂದು ನಿರ್ದಾರಕ್ಕೆ ಬಂದು ಪುಟ್ಟೆಗೌಡ್ರು ಕಂಪ್ಲೆಂಟನ್ನು ವಾಪಸ್ಸು ಪಡೆದು ಸ್ಟೇಷನಿನಲ್ಲೆ ಪಂಚಾಯಿತಿ ಮಾಡಿ ಸಾವಿತ್ರಿಯ ಮೈ ಮುಟ್ಟಿದ್ದು ಆ ಅಧಿಕಾರಿಗಳ ತಪ್ಪು ಅದಕ್ಕೆ ತಪ್ಪು ಹೇಳಿಕೆ ಬರೆದು ಕೊಡಬೇಕು ದಾಳಿಗೆ ಬಂದ ಸರ್ಕಾರಿ ಅಧಿಕಾರಿಗಳ ವಸ್ತುಗಳನ್ನು ವಾಪಸ್ಸು ಕೊಡಬೇಕು ಆದರೆ ಕಳ್ಳು ಹೆಂಡವನ್ನು ಸ್ವಂತಕ್ಕೆ ಬಳಸಿಕೊಳ್ಳಬೇಕು ತನಿಯಾ ಪೂಜಾರಿಯನ್ನು ಊರು ಬಿಡಿಸಬೇಕು, ಎಂಬ ತಿರ್ಮಾನದೊಂದಿಗೆ ಅಡಂಗದೂರಿನಲ್ಲಿ ಹೆಂಡ ಕಳ್ಳು ನಿಷೇದಮಾಡಲಾಯಿತು.[೧೧]

ಕಿಂದರಿ ಸಿದ್ಧಂಗೆ ಬಹಳ ಬೇಡಿಕೆ ಬಂದದ್ದು ಅವನ ಸ್ವರ್ಗಕ್ಕೆ ಸೇರಿಸೊ ಹಾಡಿನಿಂದ ಸತ್ತ ೧೧ ದಿನದ ಸೂತಕ ದಿನ ಅಕ್ಕಿ, ಎಲೆ, ಅಡಿಕೆ, ದಾರಿಕರ್ಚಿಗಂತ ಹಣ ಸಿಗ್ತಿತ್ತು. ೧೨ನೇ ದಿನವನ್ನು ಒಳ ಕರೆಯೋಶಾಸ್ತ್ರ (ಒಕ್ಕಣೆ ಕೂಡಿಸುವದು) ಅನ್ನುತ್ತಾರೆ. ಇವುಗಳ ಹಾಡನ್ನು ಹೊಗಳಿ ಹಾಡಲು ಸಿದ್ಧನೆ ವಾರಸುದಾರನಾಗಿದ್ದ ಅವನು ಇಂತ ಕೆಲಸಕ್ಕೆ ಹೋಗುವಾಗ ಅವನ ಜೋತೆ ಶ್ರುತಿ ಹಿಡಿಯಾಂಕತ ದುಗ್ಗನ್ನು ಕರೆದುಕೊಂಡು ಹೋಗಿ ಬರುತ್ತಿದ್ದನು.[೧೨]

ಊರಿನ ಅಂಚಿನಲ್ಲಿರುವ ಮಠದಲ್ಲಿ ಮಂಗಗಳ ಹಾವಳಿಯನ್ನು ಬೈರ ನಿವಾರಿಸುತ್ತಿದ್ದ, ಅದರಲ್ಲೂ ಮಠದಲ್ಲಿ ಗುರುಗಳನ್ನು ಬಿಟ್ಟರೇ ಮಠದಲ್ಲಿ ಘನಪಾಠಿಗಳೇ ಮುಖ್ಯ ಆಡಳಿತಾದಿಕಾರಿಗಳು ಆ ಘನಪಾಟಿಗಳು ಮಠದ ಲೆಕ್ಕಚಾರ ನೋಡೋ ಸಲುವಾಗಿ ಬೆಳಿಗ್ಗೆಯೇ ಉಗ್ರಣಕ್ಕೆ ಬಂದು ಕಿಟಕಿಯ ಮರೆಯಿಂದ ಭಕ್ತಾದಿಗಳ ಮೈ ನೋಟ ನೋಡಿ ಜೊಲ್ಲು ಸುರಿಸುತ್ತಿದ್ದ. ಅದರಲ್ಲೂ ಮಠದಲ್ಲಿ ಹೆಣ್ಣು ಮಕ್ಕಳು ಬಟ್ಟೆಬದಲಾಯಿಸಲು ಕಷ್ಟವಾಗುತಿತ್ತು. ಆಗತಾನೇ ಬಂದಿದ್ದ ಲಾಜಿಸ್ಟಿಕ್ ಒಳ ಊಡುಪುಗಳು ಮೈಗೆ ಅಂಟಿಕೊಂಡಿರುತ್ತಿದ್ದವು. ಒಂದು ದಿನ ಪ್ರವಾಸಿ ಮಹಿಳೆಯೊಬ್ಬಳು ಬಟ್ಟೆ ಬದಲಾಯಿಸಲು ಗುಟ್ಟಿನ ಜಾಗಕ್ಕಾಗಿ ಅರಳಿ ಮರದ ಮರೆಯಲ್ಲಿ ಬಂದಾಗ ಅವಳಿಗೆ ಘನಪಾಟಿಯ ಅಂಗರಕ್ಷಕರು ಬಟ್ಟೆ ಬದಲಾಯಿಸಲು ಉಗ್ರಣ ಒಳ್ಳೆಜಾಗ ಅಲ್ಲಿ ಯಾರ ಕಾಟನುಯಿಲ್ಲ ಎಂದು ಹೇಳಿ ಉಗ್ರಣಕ್ಕೆ ಹೋದ ಮಹಿಳೆಯ ಬಾಯಿಗೆ ಬಟ್ಟೆ ತುರುಕಿ ಅವಳ ಮೇಲೆ ಬಲತ್ಕಾರ ಮಾಡಿ ಅವಳ ಕೈ ಕಾಲು ಬಿಗಿದು ಉಗ್ರಣಕ್ಕೆ ಬೀಗಹಾಕಿ ಹೊರಟು ಹೊದರು, ತದನಂತರ ಒಬ್ಬರ ನಂತರ ಒಬ್ಬರಂತೆ ಮಠದ ಅಮಾಲ್ದಾರರು ತಮ್ಮ ತಿಟೆ ತೀರಿಸಿಕೊಳ್ಳಲು ಆ ಮಹಿಳೆಯ ಮೇಲೆ ಬಲತ್ಕಾರ ಮಾಡಿದರೂ ಒಂದುರಾತ್ರಿ ಅವಳ ಹೆಣವನ್ನು ಮಠದಿಂದ ಸಾಗಿಸಲು ಬೈರನ ಜೋತೆಗೆ ಕಿಲ್ಲೆದಾರನಿಗೆ ಒಪ್ಪಿಸಲಾಯಿತು. ಇವರಿಬ್ಬರು ರಾತ್ರೋರಾತ್ರಿ ಆ ಹೆಣವನ್ನು ಬಾವಿಯ ಕೊಡಪಾನದ ಹಗ್ಗಕ್ಕೆ ಕಟ್ಟಿ ಬಾವಿಗೆ ಬಿಸಾಕಿದರು. ಬೆಳಿಗ್ಗೆ ಆ ಘಟನೆ ಬೆಳಕಿಗೆ ಬಂದರೂ ಅದನ್ನು ಅಲ್ಲೇ ಮುಚ್ಚಿ ಹಾಕಲಾಯಿತು. ಅವತ್ತಿನಿಂದ ಮಠದಲ್ಲಿನ ರಾತ್ರಿಸೀಮೆ ತೇರು ಶುದ್ರರ ಸುಗ್ಗಿ ಹಬ್ಬದ ತೇರು, ವಜಮಾಡಿ ಬ್ರಾಹ್ಮಣರು ಬೆಳಿಗ್ಗೆಯೇ ತೇರನ್ನು ಎಳೆಯಲು ಪ್ರಾರಂಬಿಸಿದರು. ಅಂತು ಆ ಮಠದಿಂದ ಒಂದು ಪರಿವರ್ತನೆಯಂತು ಆಯಿತು.[೧೩]

ಇಂದು ಬೇಟೆಯನ್ನು ಕಡ್ಡಾಯವಾಗಿ ನಿಷೇದಿಸಿದ್ದರೂ, ಕದ್ದುಮುಚ್ಚಿ ಬೇಟೆ ಮಾಡುವುದು ಮುಂದುವರೆದಿದೆ. ಸ್ವಾತಂತ್ರ್ಯ ಬಂದ ತರುವಾಯ ಭಾರತ ಸರಕಾರವು ಬೇಟೆ ಹಿಂಸೆಯಪ್ರತೀಕ ಎಂದು ಕಡಿವಾಣ ಹಾಕಿರುವುದು ಸ್ಮರಣೀಯ, ಹವ್ಯಾಸಕ್ಕಾಗಿ ಕೃಷ್ಣ ಮೃಗಗಳನ್ನು ಬೇಟೆ ಮಾಡುವುದು ಕಂಡು ಬರುತ್ತದೆ. ಭಾರತದ ಎಲ್ಲಾ ರಾಜ್ಯಗಳಿಗೂ ಒಂದೇ ನಿಯಮವಾದರೇ ಕಾಶ್ಮೀರಕ್ಕೆ ಮಾತ್ರ ಪ್ರತ್ಯೇಕ ನಿಯಮಗಳಿವೆ. ಅಲ್ಲಿ ಬೇಟೆ ಮಾಡುವುದು ಅಪರಾಧವಲ್ಲ ರಾತ್ರಿ ಕ್ರೀಡೆಯಾಗಿದ್ದ ಬೇಟೆ ಮಹಾರಾಜರಿಗು ಕಣ್ಮರೆಯಾದರೂ ಅಲ್ಲಿ ಕಾನೂನು ಬದ್ದವಾಗಿದೆ. ಬೇಟೆ ಮಾಡುವ ಪ್ರಾಣಿಗೆ ಪರವನಿಗೆ ಪಡೆಯಲು ೧೦೦/- ರೂಪಾಯಿ ಪಾವತಿಮಾಡಿ ಆ ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕು. ರಾಷ್ಟ್ರೀಯ ಅಂತರಾಷ್ಟ್ರೀಯ ಕಾನೂನಿನಲ್ಲೂ ಸಹ ೫ ಪ್ರಾಣಿಗಳನ್ನು ಕೊಲ್ಲಲ್ಲು ಇಲ್ಲಿ ಅವಕಾಶವಿದೆ. ಈ ರಾಜ್ಯದಲ್ಲಿ ನಿಖರ ವನ್ಯ ಮೃಗಕಾಯಿದೆಗಳು ಇಲ್ಲ. ಹಿಮಾಲಯ ಕರಡಿ, ಮೊದಲಾದ ಪ್ರಾಣಿಗಳನ್ನು ಬೇಟೆ ಮಾಡಲು ಶುಲ್ಕ ಕೊಡಬೇಕು ಇಂಥ ವ್ಯವಸ್ಥೆ

ಕರ್ನಾಟಕದಲ್ಲಿಲ್ಲ.[೧೪] ಕರ್ನಾಟಕದಲ್ಲಿ ಕಾನೂನಿನಂತೆ ನಡೆಯಬೇಕಾಗುತ್ತದೆ. ಪ್ರಾಣಿ ಹಿಂಸೆಯನ್ನು ಮಾಡುವಂತಿಲ್ಲ ಬದಲಾಗಿ ಪ್ರಾಣಿಗಳನ್ನು ಸಾಕಬೇಕಾಗುತ್ತದೆ.

ಮಾನವ ಆಧಿಯಲ್ಲಿ ಕಂಡುಹಿಡಿದ ಜೀವನ ನಿರ್ವಹಣೆಗೆ ಬೇಟೆ ವಿಧಾನಗಳಲ್ಲಿ ಗೆಡ್ಡೆ-ಗೆಣಸುಗಳ ತರುವಾಯ ಬೇಟೆಗೆ ಅವಲಂಬಿಸಿದ ಈ ಶೋಧನೆಯಿಂದ ಆಹಾರ ಸಂಗ್ರಹಣೆ ವಿಕಾಸವಾಗಿ ಮಾನವನ ಸಾಮಾಜಿಕ ವಿಕಾಸಕ್ಕೂ ಕಾರಣವಾಯಿತು, ಬೇಟೆ ಬೌತಿಕ ವಿಕಾಸವಾದರೆ ಬೇಟೆಯ ಜೀವನ ಸಾಮಾಜಿಕ ವಿಕಾಸವಾಗಿರುತ್ತದೆ. ಇಲ್ಲಿ ಜನರು ಸಾಮಾಜಿಕ ವಿಕಾಸವಾಗಿರುತ್ತಾರೆ. ಜನರ ಸಾಮಾಜಿಕ ರಚನೆ ಸಾಮಾನ್ಯವಾಗಿ ಅಗತ್ಯಕ್ಕೆ ತಕ್ಕಂತೆ ಇತ್ತು ಬೇಟೆಗಾರರು ಆಹಾರ ಸಂಗ್ರಹಕಾರರಾಗಿದ್ದು ನಿಷ್ಟೇಯಿಂದ ಪೂರ್ವಗ್ರಹವಿಲ್ಲದೆ ಹಗೆತನ ಇಲ್ಲದೆ ಜೀವಿಸುತ್ತಿದ್ದರು.[೧೫]

ಜಗತ್ತಿನಲ್ಲಿ ಬೇಟೆಯ ಆರಂಭದ ಮೂಲವನ್ನು ಗ್ರೀಕ್ ದೇಶದಿಂದ ಗುರುತಿಸುತ್ತಾರೆ. ಇಲ್ಲಿ ಜಿನೊಪೊನ್ ಕಿನೆಗೆಟಿಕಾಸ್ ಎಂಬ ರಾಜನ ಅವಧಿಯಲ್ಲಿ(ಕ್ರಿ.ಪೂ. ೪ ನೇ ಶತಮಾನ) ಮೊಲದ ಬೇಟೆ, ಗಂಡುಹಂದಿ, ಗಂಡು ಸಾರಂಗಗಳ ಬೇಟೆಗೆ ಮಹತ್ವಕೊಟ್ಟಿದ್ದರು ಇವರು ಸಿಂಹ, ಚಿರತೆ, ಯೇದು, ಕರಡಿ ಇತರೇ ಪ್ರಾಣಿಗಳನ್ನು ಬೇಟೆ ಮಾಡಿ ಸೇವಿಸುತ್ತಿದ್ದನು. ರಾಜ ಮಹಾರಾಜರ ಕಾಲದಿಂದಲು ಬೇಟೆಗಳು ನಡೆಯುತ್ತಾ ಬಂದಿರುವ ಇತಿಹಾಸವಿದೆ.

ಮಲೆನಾಡಿನ ಕೊರವ ಜನಾಂಗವೊಂದು ಹೊರತಾಗಿ ಬೇರಾವ ಜನಾಂಗವು ಬೇಟೆಯನ್ನು ಪ್ರಧಾನ ವೃತ್ತಿಯಾಗಿ ಅವಲಂಬಿಸಿಲ್ಲ ವ್ಯವಸಾಯವನ್ನೆ ಪ್ರಮುಖ ಕಸುಬನ್ನಾಗಿ ಮಾಡಿಕೊಂಡಿರುವ ಒಕ್ಕಲಿ ಮತ್ತು ಈಡಿಗ ಜನಾಂಗದವರು ತಮ್ಮ ಬಿಡುವಿನ ಕೆಲಸ ಕಾರ್ಯಗಳ ನಡುವೆ ಸಮಯ ಮಾಡಿಕೊಂಡಿದ್ದಾರೆ. ಈಡು ಎಂಬುದಕ್ಕೆ ಬೇಟೆಯ ಸಂದರ್ಭದಲ್ಲಿ ಗುರಿ ಎಂಬ ಅರ್ಥವಿದ್ದರೆ; ಇನ್ನೊಂದೆಡೆ ಸತ್ತವನನ್ನು ಸುಡಲು ಮಾಡಿದ ಕಟ್ಟಿಗೆಯ ರಾಶಿ ಎಂಬ ಅರ್ಥವಿದೆ.[೧೬] ಬೇಟೆಯ ಅರ್ಥ ಗುರಿ ಬದಲಾಗಿ ಸತ್ತಹೆಣ ಸುಡಲು ಮಾಡಿದ ಕಟ್ಟಿಗೆ ಎಂಬುದನ್ನು ಗಮನಿಸಿದಾಗ ಬೇಟೆ ಯಾವ ಪ್ರಾಣಿಗೂ ಬಿಟ್ಟಿದ್ದಲ್ಲ ಮನುಷ್ಯನು ಸಹ ಒಂದಾನೊಂದುದಿನ ಬೇಟೆಯಾಡಿಯೆ ಮಣ್ಣು ಸೇರುವುದನ್ನು ತಿಳಿಯಬಹುದಾಗಿದೆ. ಬೇಟೆ ಕಸುಬಾಗಿದ್ದರು ಯಾವುದೇ ಪ್ರಾಣಿ ಪಕ್ಷಿ ಜೀವಜಂತುಗಳನ್ನು ಬಿಡದೇ ಇರುವ ತಂತ್ರವಾಗಿ ಪರಿಣಮಿಸಿದೆ.

ಕುವೆಂಪು ಕೃತಿಗಳಲ್ಲಿ ಚಿತ್ರಿತವಾಗಿರುವ ಅಂದಿನ ಮಲೆನಾಡಿನ ಸಸ್ಯ ಮತ್ತು ಪ್ರಾಣಿ ಪರಿಸರ ಇಂದು ಆಧುನಿಕ ಕೃಷಿಯಿಂದಾಗಿ ಸ್ಥಿತ್ಯಂತರಗೊಂಡಿರುವ ಮಲೆನಾಡಿನ ಪರಿಸರ, ಇವುಗಳನ್ನು ಹೊಲಿಸಿ ಇಂದಿನ ಕೃಷಿ ಪದ್ದತಿಯಲ್ಲಿರುವ ನೇತ್ಯಾತ್ಮಕ ಅಂಶಗಳನ್ನು ಗುರುತಿಸಿ ಅವುಗಳಿಗೆ ಕಾರಣಗಳನ್ನು ಅನ್ವೇಷಿಸಿ ಸುಧಾರಣೆಯತ್ತ ದಾಪುಗಾಲಿಡಲು ಹವಣಿಸಲಾಗಿದೆ.

ಮಲೆನಾಡಿನ ಪ್ರಕೃತಿಕ ಸೌಂದರ್ಯಕ್ಕೆ ಮೆರಗು ನೀಡುವ ಇಲ್ಲಿನ ಸುಂದರ ಚಿಕ್ಕ-ಪುಟ್ಟ ಹಕ್ಕಿ-ಪಕ್ಷಿಗಳ ಪರಿಚಯ ನೀಡುವ ಕುವೆಂಪು, ಆ ಹಕ್ಕಿ-ಪಕ್ಷಿಗಳ ಇಂಚರದ ಸದ್ದುಗಳಿಂದ ಹಿಡಿದು ಅವು ಸಾಮಾನ್ಯವಾಗಿ ಕಂಡು ಬರುವ ಅಥವಾ ಗೂಡು ಕಟ್ಟುವ ಮರಗಳ ಮಾಹಿತಿ ನೀಡುತ್ತಾರೆ. ನೂರಾರು ವರ್ಷಗಳಿಂದ ಮಾನವನ ಸಾಕು ಪಕ್ಷಿ ಆಗಿರುವ ಕೋಳಿಗಳು, ಮುಂಜಾನೆ ಕೂಗುವುದರಿಂದ ಹಿಡಿದು ತೋಟದ ಬೇಲಿ, ಸಾಲುಗಳಲ್ಲಿ ಸಿಳ್ಳುಗಳನ್ನು ಹಾಕುವ ಹೆಂಡ ಹಕ್ಕಿಗಳ ಪ್ರಾಣ ಸಂಭಾಷಣೆಯ ಬಗ್ಗೆಯೂ ಓದುಗರನ್ನು ಸೆಳೆಯುವ ಕುವೆಂಪು ಹೊರಸಲು ಹಕ್ಕಿ ಮಾಡುವ ಗುಬ್ಬಳಕೆಯ ಸಿದ್ಧನು ಸಹ ಕಾದಂಬರಿಯಲ್ಲಿ ಬಳಸಿರುವ ಪ್ರಕೃತಿಯ ಇಂಚರಕ್ಕೆ ಮಲೆನಾಡ ಪರಿಸರ ಸೋತು ಹೋಗಿರುವುದನ್ನು ಕಾಣಬಹುದಾಗಿದೆ.[೧೭] ಮಲೆನಾಡಿನ ಹಚ್ಚ ಹಸಿರು, ತಂಪು ವಾತಾವರಣ, ಹಸಿರನ್ನು ಹೊದ್ದು ನಿಂತಿರುವ ನೂರಾರು ಮರಗಿಡದ ಬಳ್ಳಿಗಳು, ಮಲೆನಾಡಿನ ಕಾಡುಗಳಲ್ಲಿನ ಪಕ್ಷಿಗಳ ಇಂಚರ, ಮೈ ತುಂಬಿಕೊಂಡು ಬಳುಕುತ್ತಿರುವ ನದಿ, ಹಳ್ಳ, ಕೊಳ್ಳಗಳ ಜುಳು ಜುಳು ನಾದದ ಸಪ್ಪಳ, ಬಾಗಿ ಬಳಕುತ್ತಿರುವ ಹಸಿರು ಪೈರಿನ ಗದ್ದೆಗಳು, ಬೆಟ್ಟ ಗುಡ್ಡದ ಮೇಲೆ ಬಳಕುವ ಕಾಫಿತೋಟದ ಸಾಲುಗಳ ಸರದಿಗಳು, ಸ್ವರಗಳನ್ನೆ ಸಪ್ತಸ್ವರವಾಗಿಸುವ ಮಲೆನಾಡ ಜನರ ಮಾತಿನ ಮೋಡಿಗಳನ್ನು ನೆನೆಯುತ್ತ ಹೊದಂತೆಲ್ಲ ಮಲೆನಾಡು ಮನ ಕರಗಿಸುವ ನಾಡಾಗಿ ಹೊರಹೊಮ್ಮಿದೆ. ಪ್ರವಾಸಿಗರ ಪ್ರಯಾಣವನ್ನು ಕೂಗಿ ಕರೆಯುತ್ತಿರುವ ಮಲೆನಾಡಿನ ಪ್ರಕೃತಿಯ ಸೊಬಗನ್ನು ಬಣ್ಣಿಸಲು ಸಾಲದ ಪದಗಳ ಮಧ್ಯೆ ನಿಂತ 'ಯತಿ'ಯಂತೆ ಕಂಗೊಳಿಸುತ್ತದೆ.

ಹಸಿರು ಹೊನ್ನುವಿನ ಮಲೆನಾಡಿನಲ್ಲಿ ಹುಣಸೆಯನ್ನೆ ಹುಣಸೆಯ ಬದಲಾಗಿ ಬಳಸಲ್ಪಡುವ ಹುಳಿಯಲ್ಲಿ ಹುಣಸೆಯನ್ನೆ ಬಹುವಾಗಿ ಹೋಲುವ ಜೀರ್ಕ ಅಥವಾ ಕಾರಂಜಿ ಜೀರ್ಕದ ಮರದ ಪರಿಚಯವನ್ನು ಮಾಡಿಕೊಡುತ್ತಾರೆ. ಗಾರ್ಸಿನೀಯ ಎಂಬ ಪ್ರಧಾನ ಜಾತಿಗೆ ಸೇರಿದ್ದು ೩೦-೩೫ ಅಡಿ ಎತ್ತರ ಬೆಳೆಯುವ ಮರಗಳು ಹೊಳೆ-ಹೊಳೆಯುವ ಹಸಿರು ಎಲೆಗಳನ್ನು ತಳೆದು ನಡುನಡುವೆ ಹಣ್ಣು ಕಾಯಿಗಳನ್ನು ಬಿಟ್ಟಿದ್ದವು, ಈಗಲೂ ಸಹ ಮಲೆನಾಡಿನ ಜನ ಅವುಗಳ ಸಂಗ್ರಹಣೆಯಲ್ಲಿ ತೊಡಗುತ್ತಾರೆ.[೧೮]

ಭಾರತದ ಸಾಂಸ್ಕೃತಿಕ ಚರಿತ್ರೆಯು ಸಾಮ್ರಾಜ್ಯಗಳ ರಾಜರುಗಳ ವಿವರಗಳಲ್ಲದೇ ಜನರ ಜೀವನ ಲಕ್ಷಣಗಳನ್ನು ಒಳಗೊಂಡಿದೆ, ಆಚಾರ, ವಿಚಾರ, ರೂಡಿ, ಸಂಪ್ರದಾಯ, ಉಡುಗೆ, ತೊಡುಗೆ, ಕಲೆ ಸಾಹಿತ್ಯವನ್ನು ಸಂಸ್ಕೃತಿ ಚೌಕಟ್ಟಿನಲ್ಲಿ ನೋಡಬಹುದು, ಬೌತಿಕವಾಗಿಯೂ ಬೌದ್ಧಿಕವಾಗಿಯೂ ಮಾನವನ ಜೀವನದ ಒಟ್ಟು ಚಿತ್ರಣ ಕೊಡುವುದೇ ಸಂಸ್ಕೃತಿಯಾಗಿದೆ. ಭಾರತದಲ್ಲಿ ನದಿ, ಬೆಟ್ಟ ಗುಡ್ಡ, ನಗರ ಪಟ್ಟಣ, ಗ್ರಾಮ, ಮತ್ತು ಮರುಭೂಮಿಗಳು ಕಂಡು ಬರುತ್ತವೆ. ಗಂಗಾ, ಯಮುನಾ, ನದಿ ಮುಖಜ ಭೂಮಿ, ಪಶ್ಚಿಮ ಪೂರ್ವ ಘಟ್ಟಗಳು, ದಖನ್ ಪ್ರಸ್ಥ ಭೂಮಿ, ಕೃಷ್ಣ ತುಂಗಾಭದ್ರದ

ದೊಆಬ್ ಪ್ರದೇಶ ಕಾವೇರಿ ನದಿ ಅಲ್ಲದೇ ಭಾರತಕ್ಕೆ ೩ ಕಡೆ ಸಮುದ್ರ ತೀರಗಳಿವೆ. ವಿವಿಧ ರೀತಿಯ ಜನಾಂಗಗಳಿದ್ದು ಪ್ರಾಣಿ-ಪಕ್ಷಿಗಳು ಇತರೇ ಜೀವಿಗಳು ವಾಸಿಸುವ ಭೌಗೋಳಿಕ ಪ್ರದೇಶದ ಇತಿಹಾಸವು ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ.

ಹಿಂದಿನ ಕಾಲದಲ್ಲಿ ಕಾಡಿಗೆ ಹೋಗುವುದು ಸಾಮಾನ್ಯವಾಡಿಕೆಯಾಗಿತ್ತು, ಕಾಡಿಗೆ ಹೊಗುವುದು ಎಂದರೇ ಮನೆ, ಮಠ, ಹೆಂಡತಿ, ಮಕ್ಕಳನ್ನು ತ್ಯಜಿಸಿ ಸನ್ಯಾಸ ಸ್ವೀಕರಿಸಿ ಕಾಡಿಗೆ ಹೋಗುವುದಿಲ್ಲ ಇಡೀ ವರ್ಷ ಊರಿನಲ್ಲಿ ಕೃಷಿ ಕೆಲಸ ಮಾಡಿ ಬೆಸುತ್ತಿದ್ದ ಜನರು ತಮ್ಮ ಬೆಳೆಗಳಿಗೆ ದಾಳಿಮಾಡುತ್ತಿದ್ದ ಪ್ರಾಣಿಗಳನ್ನು ಬೇಟೆ ಯಾಡುತ್ತಿದ್ದರು. ರಾಜ ಮಹಾರಾಜರು ಸಂತೋಷಕ್ಕಾಗಿ, ಪ್ರತಿಷ್ಠೆಗಾಗಿ, ಬೇಟೆ ಯಾಡುವುದನ್ನು ಹವ್ಯಾಸ ಮಾಡಿಕೊಂಡಿದ್ದರು. ಹಾಗೆ ಆಡುವ ಬೇಟೆಗಳಲ್ಲಿ ಬೇರೆ ಬೇರೆ ವಿಧಾನಗಳು ಕಂಡು ಬರುತ್ತದೆ.[೧೯]

ಅದಿಮ ಹಂತದಲ್ಲಿ ಮಾನವನಿಗೆ ಬದುಕುಳಿಯಲು ಬೇಕಾದ ಆಹಾರವನ್ನು ಬೇಟೆಯ ಮೂಲದಿಂದಲೆ ಪಡೆಯಬೇಕಾದ ಅನಿವಾರ್ಯತೆ ಇತ್ತು ಜೊತೆಗೆ ಅದೇ ಹಂತದಲ್ಲಿ ನಿಸರ್ಗದ ಒಳಗಡೆಯೇ ಬದುಕುತ್ತಿದ್ದ ಮನುಷ್ಯನಿಗೆ ಸ್ವಯಂ ರಕ್ಷಣೆಗಾಗಿಯೂ ದುಷ್ಟ ಮೃಗಗಳೊಂದಿಗೆ ಹೋರಾಡುವ ಅನಿವಾರ್ಯತೆ ಇತ್ತು. ಹೀಗೆ ಮಾನವನ ಸಾಂಸ್ಕೃತಿಕ ಇತಿಹಾಸದ ಮೊದಲ ಗಟ್ಟಿಹೆಜ್ಜೆ ಬೇಟೆ ಎಂಬುದು ನಿಶ್ಚಿತ, ಬೇಟೆಯ ಮೂಲಕವೇ ಆತ ನಿಸರ್ಗದ ಮೇಲೆ ಓಡುವುದನ್ನು, ಗುರಿ ಇಡುವುದನ್ನು, ಹಾರುವುದನ್ನು, ಎಸೆಯುವುದನ್ನು, ಕೊಲ್ಲುವುದನ್ನು, ಕಲಿತಿರಬಹುದು. ಹೀಗೆ ಮೊದಮೊದಲು ಬದುಕಿಗೆ ಅನಿವಾರ್ಯವಾಗಿದ್ದ ಬೇಟೆ ಕ್ರಮೇಣ ಒಂದು ಖಯಾಲಿಯಾಗಿ, ಕ್ರೀಡೆಯಾಗಿ, ಯುದ್ಧ ಕಲೆಯಾಗಿ ವಿನೋಧವಾಗಿ ವಿವಿಧ ಆಯಾಮವನ್ನು ಪಡೆಯಿತು.[೨೦]

"ಮಂಗನಿಂದ ಮಾನವನಾದ" ಎಂಬಂತೆ ಮನುಷ್ಯ ಕಾಲಕಳೆದಂತೆ ದಿನದಿಂದ-ದಿನಕ್ಕೆ ಸುಧಾರಣೆಯ ದಾರಿಯನ್ನು ತುಳಿಯುತ್ತಲೇ ಸಾಗುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ನರ ಮನುಷ್ಯ ಅಮೂರ್ತತೆಯಿಂದ ಮೂರ್ತತೆಯೆಡೆಗೆ ದಾಪುಗಾಲನ್ನು ಇಡುತ್ತಾ ಬಂದಿರುವದನ್ನು ಗಮನಿಸಬಹುದು.

ಪ್ರಾಣಿ, ಪಕ್ಷಿ, ಜಲಚರಗಳನ್ನು ವಿವಿಧ ಪರಿಕರ, ಸೂಕ್ಷ್ಮ ಉಪಾಯ ತಂತ್ರಗಳಿಂದ ಹೊಡೆದು ಕೊಲ್ಲುವುದೇ ಬೇಟೆ. ಶಿಷ್ಟ ಸಾಹಿತ್ಯದಲ್ಲಿ ಈ ವಿಧಾನಕ್ಕೆ ಮೃಗಯೆ, ಆಚ್ಛೋಧನ, ಮೃಗವ್ಯ, ಆಚ್ಛೋಟಕ. ಆಖೇಟಕ, ಪಾಪರ್ಧ, ಶಿಕಾರಿ ಎಂಬ ಹೆಸರಿನಿಂದ ಪರಿಚಯವಾಗುತ್ತ ಸಾಗಿ ಬಂದಿದೆ. ಬೇಟೆಯ ತಿರುವುಗಳು ಮಾನವನ ಪರಿವರ್ತನೇಯ ತಂತ್ರದಂತೆ ಬದಲಾಗುತ್ತಾಸಾಗಿ ಬಂದಿರುವುದನ್ನು ಕಾಣಬಹುದಾಗಿ.

ಹೊಟ್ಟೆಪಾಡಿಗಾಗಿ ಕಾಡು ಬಿಟ್ಟು ನಾಡು ಸೇರಿದ ಹಕ್ಕಿಪಿಕ್ಕಿ ಜನಾಂಗದವರು ಅದೆಂತಹದ್ದೊ ಸಾಮಗ್ರಿಗಳನ್ನು ತಯಾರಿಸಿ, ಅವುಗಳೊಂದಿಗೆ ರೋಚಕ ಕತೆಗಳನ್ನು ಹೆಣೆದು, ತಮ್ಮ ಈ ವಸ್ತುಗಳು ಅಮೋಘ, ಅದ್ಭುತ ಎಂದೆಲ್ಲಾ ಹೇಳಿ ದುರಾಸೆಯ ಪ್ಯಾಟೆಯ ಬುದ್ಧಿವಂತರಿಗೆ ಮಾರುವುದರಲ್ಲಿ ಎತ್ತಿದ ಕೈ ಒಂದು ಕಾಲದಲ್ಲಿ ಕಾಡಿನೊಂದಿಗೆ ಗೌರವ ಮತ್ತು ಸ್ವಾವಲಂಬಿ ಬದುಕು ಸಾಗಿಸುತ್ತಿದ್ದ ಜನ ಅತಂತ್ರರಾಗಿ ಸಿಗುತ್ತದೆ ಎಂದು ನಂಬಿಕೊಂಡಿದ್ದಾರೆ.

ಮಲೆನಾಡಿನ ವಿಶೇಷ ಹಬ್ಬಗಳಾದ ದೀಪಾವಳಿ,ಗೌರಿಹಬ್ಬ, ಇಂಥ ಸಂದರ್ಭಗಳಲ್ಲಿ ಊರೊರೆಲ್ಲಾ ಸಾಮೂಹಿಕವಾಗಿ ಒಟ್ಟಿಗೆ ಸೇರಿ ಮಂಗನ ಬ್ಯಾಟೆ ಮಾಡುವುದು ಮಾಮೂಲಿ, ಈ ಮಂಗನ ಬ್ಯಾಟೆ ಮಾಡದೆ ಇದ್ರೆ ಉಳಿಗಾಲ ಇಲ್ಲ ಬ್ಯಾಟೆ ಮಾಡಾಕೆ ಸಿದ್ದನ್ ತರ ಮರಹತ್ತೋ ನಿಸ್ಸೀಮರು ಇರ್ಲೇಬೇಕು, ಸಿದ್ದ ಶುಂಠಢಿ ಕುಂಬ್ರಿಯಿಂದ ಶಿಡ್ಲಗುಡ್ಡೆಗೆ ಬಂದು ಸಾರ್ಥಿಯಾದ ಮೇಲೆ ಇಲ್ಲೂ ಮಂಗನ ಬ್ಯಾಟೆ ಸಿದ್ದನ ನೆತೃತ್ವದಲ್ಲಿ ನಡೆಯುತ್ತಿತ್ತು ಅದೇ ಪ್ರಕಾರ ದೀಪಾವಳಿಗೆ ಮಂಗನ ಬ್ಯಾಟೆ ಮಾಡುತ್ತಾರೆ. ಅಂತ ತಿಳಿದುಕೊಂಡಿದ್ದ ಗಾರ್ಡು ಪಾರಿಸ್ಟ್ ಇಲಾಖೆಗೆ ತಿಳಿಸಿದ, ಹಬ್ಬದ ದಿನ ಪಾರೆಸ್ಟರ್ ಬಂದು ಬ್ಯಾಟೆ ಮಾಡಬಾರದು ಎಂದು ಕಾನೂನಿನ ಪ್ರಕಾರ ತನ್ನ ಭಾಷೆಯಲ್ಲಿ ತಿಳಿಸಿ ಹೇಳಿದನು.[೨೧] ಬ್ಯಾಟೆ ಮಾಡುವುದರಿಂದ ಜೀವ ಸಂತತಿಗಳು ನಾಶವಾಗಿ ಹೋಗುತ್ತವೆ. ಕೊನೆಗೆ ಆ ಜೀವ ಸಂತತಿಯನ್ನು ಕೇವಲ ಪೋಸ್ಟರ್‌ಗಳಲ್ಲಿ ಕಾಣುವ ಪರಿಸ್ಥಿತಿ ಬಂದೊದಗುತ್ತದೆ. ಆದ್ದರಿಂದ ಅರಣ್ಯ ರಕ್ಷಣೆಯ ಜೊತೆ ಜೊತೆಗೆ ಪ್ರಾಣಿಗಳ ರಕ್ಷಣೆಯ ಕಾನೂನನ್ನು ಜಾರಿಗೆ ತಂದು ರಾಷ್ಟ್ರೀಯ, ಅಂತರಾಷ್ಟ್ರೀಯ, ಉದ್ಯಾನ ವನಗಳನ್ನಾಗಿ ಸರ್ಕಾರದವರು ಸ್ಥಾಪಿಸಿದ್ದಾರೆ.

ಮನುಷ್ಯನ ಎಲ್ಲಾ ಕ್ರಿಯೆ ಕೆಲಸಗಳ ಹಿಂದೆ ದೈವೀಶಕ್ತಿಯ ಪಾತ್ರ ಕೈವಾಡ ಇರುತ್ತದೆ. ಎಂಬ ನಂಬಿಕೆ ಪರಂಪರಾಗತವಾಗಿದೆ. ಬೇಟೆಯಲ್ಲಿ ಮನುಷ್ಯನ ಪಾತ್ರ ಎಷ್ಟೊ ಪ್ರಮೂಕವೋ ಅಷ್ಟೇ ದೈವಶಕ್ತಿಯ ಪಾತ್ರವೂ ಇರುತ್ತದೆ. ಆದಿವಾಸಿಗಳಲ್ಲಿ ಪ್ರಾಣಿಗಳನ್ನು ಆಕರ್ಷಿಸುವ ಬಲ, ಬೇಟೆಗಾರರಲ್ಲಿ ಇರುವ ಶಕ್ತಿಗೆ ವಶೀಕರಣ ಶಕ್ತಿ ಎನ್ನುತ್ತಾರೆ. ಒಂದು ವೇಳೆ ಈ ಶಕ್ತಿ ಇಲ್ಲದಿದ್ದರೆ ಬೇಟೆಗಾರ ವಿಫಲವಾಗುವುದರ ಜೊತೆಗೆ ಅವನೇ ಅಪಾಯದಲ್ಲಿ ಸಿಕ್ಕಿ ಹಾಕಿಕೊಳ್ಳಬಹುದು ಮತ್ತು ಗಾಯಗೊಳ್ಳ ಬಹುದೆಂಬ ನಂಬಿಕೆ ಇದೆ. ಬೇಟೆಗಾರರಿಗೆ ಇರುವ ವಿಶೀಷ್ಠ ಶಕ್ತಿಯಂತೆ ಪ್ರಾಣಿಗಳಿಗೂ ಒಂದು ಬಗೆಯ ಶಕ್ತಿಯಿದೆ. ಅದೇ ಅವುಗಳನ್ನು ಅಪಾಯದಿಂದ ಪಾರು ಮಾಡುತ್ತದೆ.[೨೨] ಈ ರೀತಿಯಲ್ಲಿ ಮನುಷ್ಯ ಪ್ರಾಣಿಗಳು ಅಪಾಯದಿಂದ ಪಾರಾಗುವ ಉಪಾಯಗಳು ಕಂಡುಬರುತ್ತವೆ. (ಬೇಟೆ: ಮನಶಾಸ್ತ್ರೀಯ ಹಿನ್ನೆಲೆ: ಅಪ್ರಕಟಿತ ಪ್ರಬಂಧ)

ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಚಿಕ್ಕಮಗಳೂರು ಮುಂತಾದ ಕಡೆ ಕಾಡಿನ ಹೊರಭಾಗದಲ್ಲಿ ಬೇಟೆಯ ನಿಮಿತ್ತ ಪೂಜಿಸಲೆಂದೆ ನಿರ್ಮಿಸಿ ಹಾಕಿದ ಬೇಟೆ ರಂಗನ ಮೂತಿಗಳಿವೆ ಇಂತಹ

ಮೂರ್ತಿಗಳು ಹಂದಿಯಾಕಾರವನ್ನು ಹೊಂದಿವೆ ಬೇಟೆಗಾರರು ಈ ಮೂರ್ತಿಯ ಮುಂದೆ ನಿಂತು ನನ್ನ ಹಾಗೆ ನಿನ್ನ ಮಕ್ಕಳು, ಮೊಮ್ಮಕ್ಕಳು ನಮಗೆ ಸಿಕ್ಕುತ್ತಿರಲಿ ಎಂದು ಬೇಡಿಕೊಂಡು, ಕಾಡಿಗೆ ಹೋಗುತ್ತಾರೆ. ಬೇಟೆ ಯಾಡುವಾಗ ಹಂದಿಯೇ ಸಿಕ್ಕರೆ ಅದರ ತಲೆಯನ್ನು ಕತ್ತರಿಸಿ ಬೇಟೆ ರಂಗನ ಮುಂದಿಟ್ಟು ಅದರ ಮುಸುಡಿಗೆ ಹತ್ತಿಯ ಬತ್ತಿ ಇಟ್ಟು ಹಂದಿಯ ಕೊಬ್ಬಿನಿಂದಲೇ ದೀಪ ಹಚ್ಚುವ ಸಂಪ್ರದಾಯವಿದೆ.

ಕಾಡು ಹಂದಿ ಬೇಟೆಯನ್ನು ನಾಯಕ ಜನಾಂಗದವರು ಸಂಪ್ರದಾಯ ಬದ್ಧವಾಗಿ ನಡೆಸುವುದು ಕಂಡು ಬರುತ್ತದೆ. ಬೇಟೆಗೆ ಹೊರಡುವ ಮುನ್ನ ಪಟ್ಟಲಮ್ಮ, ಗೌಡಗೆರಮ್ಮ ದೇವರುಗಳಿಗೆ ಅವರು ಪೂಜೆ ಸಲ್ಲಿಸಿ ಹೊರಡುತ್ತಾರೆ. ಈ ದೇವರ ಹೆಸರಲ್ಲಿ ಒಂದು ಕೋಡುಗಲ್ಲನ್ನು ಇಟ್ಟು ಅರಿಶಿನ, ಕುಂಕುಮ, ಹೂವುಗಳಿಂದ ಪೂಜಿಸಿ, ಹೂವು ಕೇಳಿ ಹೂವು ಕೊಟ್ಟ ಆನಂತರ ಯಾವ ಅಪಾಯವೂ ಇಲ್ಲದಂತೆ ಸುಲಭವಾಗಿ ಬೇಟೆ ಸಿಗುವಂತೆ ಪ್ರಾರ್ಥಿಸಿ, ಜಯಕಾರ ಹಾಕಿ ಬೇಟೆಗೆ ಹೊರಡುತ್ತಾರೆ. ಗ್ರಾಮದಲ್ಲಿ ಬೇಟೆ ಯಾಡುವ ಜನರು ಸಹ ಇಂತಹ ಮೂಡ ನಂಬಿಕೆಯಂತೆ ಊರ ದೇವರನ್ನು ಪುಜಿಸಿಯೇ ಬೇಟೆಗೆ ಹೊರಡುತ್ತಾರೆ.[೨೩]

ಬೇಟೆ ಮಾಡಿದ ಕಾಡು ಹಂದಿಯನ್ನು ಅದು ದೊರೆತ ಕಡೆಯೇ ಅರ್ಧಂಬರ್ಧ ಸುಡುತ್ತಾರೆ. ಎರಡು ಬೊಂಬುಗಳಿಗೆ ಅಡ್ಡಲಾಗಿ ಗಳಗಳನ್ನು ಅಥವಾ ಗಿಡದ ರೆಂಬೆಗಳನ್ನು ಹಾಕಿ ಕಟ್ಟಿ ಅದರ ಮೇಲೆ ಸೊಪ್ಪು ಹರಡಿ ಸುಟ್ಟ ಕಾಡು ಹಂದಿಯನ್ನು ಇಡುತ್ತಾರೆ. ನಾಲ್ಕು ಕಾಲು ಚಾಚಿರುತ್ತದೆ. ತಲೆ ಎತ್ತಿರುವಂತೆ ಕೂಡಿಸಿರುತ್ತಾರೆ. ಅದಕ್ಕು ಕುಂಕುಮ ಹೂಗಳಿಂದ ಅಲಂಕರಿಸಿ, ಜಯಕಾರ ಹಾಕಿ, ಕೇಕೆ ಹಾಕುತ್ತಾ ಕೋಡುಗಲ್ಲು ದೇವರ ಹತ್ತಿರ ಬರುತ್ತಾರೆ. ಅರ್ಥಾತ್ ಪಟ್ಟಲದಮ್ಮ, ಗೌಡಗೆರಮ್ಮನ ಗುಡಿಗೆ ಬತುತ್ತಾರೆ ದೇವರಿಗೆ ಎಡೆಯಿಟ್ಟು ಅನಂತರ ಹಂದಿಯನ್ನು ಪಾಲು ಮಾಡುತ್ತಾರೆ.[೨೩] ಬೇಟೆಗೆ ಹೋಗಿ ಬಂದವರು ಆ ಪ್ರಾಣಿಯನ್ನಾಗಲಿ ಅಥವಾ ಪ್ರಾಣಿಯನ್ನು ಕೊಯ್ದು ನಂತರ ಅದರ ಮಾಂಸವನ್ನಾಗಲಿ ವಿಭಾಗ ಮಾಡಿಕೊಂಡು ಹಂಚಿಕೊಂಡು ಹೋಗುವ ಪರಿಪಾಠವಿದೆ.

ಬೇಟೆಗೆ ಸಂಬಂಧಿಸಿದ ನಂಬಿಕೆಗಳು ಧಾರ್ಮಿಕ ಆಚಾರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಹಾಗೆಯೇ ಬೇಟೆಯನ್ನೇ ವೃತ್ತಿಯನ್ನಾಗಿಸಿ ಕೊಂಡವರಲ್ಲಿ ಮತ್ತು ಹವ್ಯಾಸಿ ಶಿಕಾರಿದಾರರಲ್ಲೂ ವ್ಯತ್ಯಾಸವಿದೆ. ಬೆಂಗಳೂರು ಚಿತ್ರದುರ್ಗ ಮುಂತಾದ ಕಡೆ ವಾಸಿಸುವ ಬಯಲು ಸೀಮೆಯ ಬೇಟೆ ಜನಾಂಗದವರ ನಂಬಿಕೆಗಳಿಗೂ ಪಶ್ಚಿಮ ಘಟ್ಟದ ಹಸಿರು ನೆಲೆಯಲ್ಲಿ ವಾಸಿಸುವ ಬೇಟೆ ಪ್ರಿಯರಲ್ಲಿರುವ ನಂಬಿಕೆಗಳಿಗೂ ಅಂತರ ಇದೆ. ಪಶ್ಚಿಮ ಘಟ್ಟದ ಸಕಲೇಶಪುರ ಪ್ರದೇಶದಲ್ಲಿ ಬೇಟೆಗೆಂದು ಅರಣ್ಯ ಪ್ರವೇಶಿಸುವ ಮುನ್ನ ಪಂಜರವೂ ದೈವಗಳನ್ನು ಸ್ಮರಿಸಿಕೊಂಡು ಬೇಟೆಯಲ್ಲಿ

ತಾವು ಬಳಸುವ ಪರಿಕರಗಳನ್ನೆಲ್ಲ ಒಂದೆಡೆ ರಾಶಿ ಇರಿಸಿ ಪೂಜಿಸಿ ಒಳ್ಳೆಯ ಬೇಟೆ ಸಿಗಲಿ ಎಂದು ಪ್ರಾರ್ಥಿಸಿಕೊಳ್ಳುವ ಸಂಪ್ರದಾಯವಿದೆ.

ಪರಿಸರದ ಕಥೆಯಲ್ಲಿ ತೇಜಸ್ವಿ ಅವರು ತಮ್ಮ ಲೇಖನಗಳ ಮುಖೇನ ಪ್ರಕೃತಿ ಮತ್ತು ಮನುಷ್ಯನ ಸಂಬಂಧಗಳ ಕೆಲವು ಸೂಕ್ಷ್ಮತೆಗಳನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಬೇಟೆಯ ವಿವರಗಳಿಂದ ಪರಿಸರದ ಕಥೆಗಳು ಕಿವಿಯೊಡನೆ ಒಂದು ದಿನ, ಮಾಸ್ತಿ ಮತ್ತು ಬೈರ ಕಥಾ ಪ್ರಸಂಗಗಳು ದಾಖಲಾಗಿವೆ. ಇವರು ಯಾರ ಹಂಗು, ಭಯ, ಬೈಯ್ಗುಳಗಳ ಕಾಟ ಇಲ್ಲದೆ ಕಾಡು-ಮೇಡು ಅಲೆದಲೆದುಕೊಂಡು ಕೋವಿ ಹೆಗಲಿಗೇರಿಸಿಕೊಂಡು ಹಿಂದಿರುಗುವ ದೃಶ್ಯಗಳು ಪ್ರಕಟವಾಗಿವೆ. (ಪರಿಸರದ ಕತೆಗಳು, ಪು. ೭)

ತೇಜಸ್ವಿಯವರಿಗೆ ಬೇಟೆ ಒಂದು ರಂಜನೆ, ಸಾಹಸ ಎಂಬುದಕ್ಕಿಂತ ಅದು ಕಾಡಿನ ಬಗ್ಗೆ ಮಾಹಿತಿ ಒದಗಿಸುವ ಒಂದು ಅವಕಾಶ. ಅದಕ್ಕಾಗಿ ಕಾಡು ಪ್ರವೇಶ ಮಾಡಲು ಬೇಟೆ ಒಂದು ಕಾರಣವಾಗಿ ಬೇಟೆ ಇವರಿಗೆ ಇಷ್ಟವಾಯಿತು. ಎಷ್ಟೇ ಸುಸ್ತಾಗಿರಲಿ, ಕೋವಿ ಹಿಡಿದವರಿಗೆ ಶಿಕಾರಿ ಕಣ್ಣಿಗೆ ಕಂಡಾಗಲೂ ಸುಮ್ಮನಿರಲು ಸಾಧ್ಯವೇ! ನನ್ನ ನಿರಾಸಕ್ತಿ ಇದ್ದಕ್ಕಿದ್ದಂತೆ ಮಾಯಾವಾಗಿ ಕೋವಿ ಸಿದ್ಧಮಾಡಿಕೊಂಡು ಒಂದೇ ಉಸುರಿಗೆ ಪೆದೆಯನ್ನು ಬಳಸಿ ಆಚೆ ಮಗ್ಗುಲಿಗೆ ಓಡಿದೆ. ಕಿವಿ ಯಾವುದೋ ಹಂದಿಯನ್ನು ಬೆನ್ನಟ್ಟಿ ಬೊಗಳುತ್ತಾ ಕಾಡಿನ ಒಳಗೆ ಗಲಾಟೆ ಮಾಡುತ್ತಿತ್ತು. ಕೊಂಚಹೊತ್ತು ಪೊದೆಯ ಆಚೆ ಮಗ್ಗಲಲ್ಲಿ ಕಾದೆ, ಆದರೆ ಯಾವ ಹಂದಿಯೂ ನಾನು ನಿಂತ ಕಡೆಗೆ ಬರಲಿಲ್ಲ, ಕಿವಿ ಬೊಗಳುವುದು ಮಾತ್ರ ಕೇಳುತ್ತಿತ್ತು. ಈಗಲ್ಲದಿದ್ದರೇ ಇನ್ನೊಂದು ನಿಮಿಷಕ್ಕೆ ಹಂದಿ ನುಗ್ಗಿಯೇ ನುಗುತ್ತದೆಂದು ಊಹಿಸಿ ನಿಂತಿದ್ದೆ. (ಪರಿಸರದ ಕತೆಗಳು,ಪು-೨೩)

ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಚಿಕ್ಕಮಗಳೂರು ಕಡೆಗಳಲ್ಲಿ ಬೇಟೆ ದೇವರೆಂದು ಬೇಟೆ ರಂಗನನ್ನು ಪೂಜಿಸುವರು. ಬೇಟೆಗೆಂದು ಕಾಡಿಗೆ ನುಗ್ಗುವ ಮುಂದೆ ಕಾಡಿನ ದ್ವಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ಹಂದಿ ಆಕಾರದ ಶಾಸ್ವತ ಶಿಲಾ ಬೇಟೆ ರಂಗ ದೇವರನ್ನು ಪೂಜಿಸುವ ಸಂಪ್ರದಾಯವಿದೆ. ಇಂದಿಗೂ ಕೆಲವೊಂದು ದೇವಾಲಯ ಜಾತ್ರೆಗಳಲ್ಲಿ, ಬೇಟೆಯು ಒಂದು ವಿಧವಾಗಿ ಆಚರಿಸಲ್ಪಡುತ್ತದೆ. ದೈವ, ದೇವಾಲಯ ಆಗಮಿಕ ಸಂಸ್ಕೃತಿಗೆ ಸೇರಿದ್ದರೂ ಬೇಟೆ ಮಾಡುವ ಆ ಅಣುಕು ಆಚರಣೆಯಲ್ಲಿ ಪ್ರಜಾ ರಕ್ಷಣೆಯ ಉದ್ದೇಶವಿದೆ. ಜೊತೆಗೆ ಬೇಟೆಯನ್ನು ಹಾಗೆ ಆರಾಧಿಸಿ, ಅಭಿನಯಿಸಿ, ಅನುಸರಿಸಿ, ತೋರಿಸುವುದರಿಂದ ಅದೊಂದು ಪಳೆಯುಳಿಕೆ ಆಗಿಯೂ ಕಳೆದುಹೋದ ಕಾಲದ ಜೀವನ ಕ್ರಮವನ್ನು ಸಾಧಾರ ಪಡಿಸುತ್ತದೆ. ಆರಾಧನೆ ಅಷ್ಟೇ ಅಲ್ಲ ಕೆಲವೊಂದು ಸಮಾಜ, ಬುಡಕಟ್ಟು ಜನರಲ್ಲಿ ನಡೆಯುವ ಮದುವೆ ಸಂಸ್ಕಾರದಲ್ಲೂ ಬೇಟೆಯ

ಅಣುಕು ಪ್ರದರ್ಶನಗಳು ನಡೆಯುತ್ತವೆ. ಇಂತ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.[೨೪]

ಜೀವಿಗಳಲ್ಲಿ ಪರಸ್ಪರ ಉಳಿಯುಕೆಗಾಗಿ ನಡೆಯುವ ಹೊರಾಟದಲ್ಲಿ ಸಮರ್ಥ ಜೀವಿಗಳು ಉಳಿಯುವುದು ಸಹಜ, ಇಂದು ಮನುಷ್ಯ ಆಹಾರ ಮತ್ತು ಸ್ವಯಂ ರಕ್ಷಣೆಯ ದೃಷ್ಟಿಯಲ್ಲಿ ಸ್ವಾವಲಂಬಿ ಆದುದ್ದರಿಂದ ಮನುಷ್ಯ ಅಸಹಾಯಕ ಪ್ರಾಣಿಗಳನ್ನು ಮಾಂಸದ ಆಸೆಗೆ, ವಿನೋದಕ್ಕೆ, ಬೇಟೆಯಾಡುತ್ತಿದ್ದಾನೆ. ಅನೇಕ ವಿಧದ ಬೇಟೆಯನ್ನು ಮಾಡುತ್ತ ತನ್ನ ದೈನಂದಿನ ಜೀವನವನ್ನು ಆರ್ಥಿಕವಾಗಿ ಸುಧಾರಣೆಯತ್ತ ತರುತ್ತಿದ್ದಾನೆ. ಕಳ್ಳಬೇಟೆ, ವಿಷಪ್ರಾಶನ, ಬಲೆ, ಉರುಳು, ಮುಂದುವರಿದಿದೆ. ಇದನ್ನೆಲ್ಲ ತಡೆಗಟ್ಟಲು ಮನುಷ್ಯನನ್ನು ನಿಯಂತ್ರಿಸಲು ಸರಕಾರ ಕಾಯಿದೆಗಳನ್ನು ತಂದಿದೆ. ಪ್ರಾಣಿ ಹಿಂಸೆಯನ್ನು ಮಾಡಿದವರಿಗೆ ಶಿಕ್ಷೆಯನ್ನು ಗೊತ್ತುಪಡಿಸಿ ಜನರಲ್ಲಿರುವ ಮೂಢ ನಂಬಿಕೆಗಳನ್ನು ತೊಡೆದುಹಾಕಲು ಹವಣಿಸಲಾಗುತ್ತಿದೆ. ಸರಕಾರದ ಷರತ್ತಿನಂತೆ ಕಾಡಿನಲ್ಲಿ ಒಪ್ಪಿಗೆ ಇಲ್ಲದೆ ಬೇಟೆಗಾಗಿ ಪ್ರಯಾಣ ಕೈಗೊಳ್ಳುವುದು ಕಾನೂನು ಅಪರಾಧ ಆಗಿದೆ.

ಪ್ರಾಣಿಗಳು ಮನುಷ್ಯ ನೆಲೆಯಲ್ಲೆ ಸಮೃದ್ಧವಾಗಿದ್ದರಿಂದ ಅವುಗಳನ್ನು ಆಯ್ಕೆಮಾಡಿಕೊಂಡು ತಿನ್ನುವುದು ಅವನಿಗೆ ಸುಲಭವಾಗಿತ್ತು, ಆದರೇ ಕ್ರಮೇಣ ಅವುಗಳ ಸಂಖ್ಯೆ ಕುಗ್ಗಲಾರಂಬಿಸಿದಾಗ ಅವುಗಳ ಬೇಟೆ ಒಂದು ತಂತ್ರವಾಗಿ ಬಳಕೆಯಾಯಿತು. ಕಾಡಿನ ಪ್ರಾಣಿಗಳು ಮನುಷ್ಯನ ಕಣ್ಣಿಗೆ ಬಿಳದಂತೆ ಓಡಿಹೊಗಲು ಪ್ರಾರಂಬಿಸಿದವು, ಆಗ ಮನುಷ್ಯರು ಪ್ರಾಣಿಗಳನ್ನು ವ್ಮರೆಯಲ್ಲಿ ಕುಳಿತು ಕೊಲ್ಲಲು ಪ್ರಾಂಬಿಸಿದರು. ಅದೇ ಮರೆಸು ಬೇಟೆಯಾಯಿತು.

ಯಾರ ಹಂಗು, ಭಯ, ಬೈಯ್ಯುಗಳಗಳ ಕಾಟವಿಲ್ಲದೇ ಕಾಡು–ಮೇಡು ಅಲೆದುಕೊಂಡು ಇರಬಹುದು ಎಂಬುದೇ ಮುಖ್ಯ ಕಾರಣ, ಸುಮ್ಮನೆ ಕೋವಿ ಹೆಗಲಿಗೇರಿಸಿಕೊಂಡು ಕಿವಿ ಜೊತೆ ಕಾಡೊಳಗೆ ಅಲೆಯುತ್ತಾ ಸಾಯಂಕಾಲಕ್ಕೆ ಮೈ ಕೈ ಪರಚಿಕೊಂಡು ಮುಳ್ಳು ಚುಚ್ಚಿಸಿಕೊಂಡು ಸುಸ್ತಾಗಿ ಹಿಂದಿರುಗುವುದು ಯಾವ ತರದ ಸಂತೋಷವೋ ಇಂದಿಗೂ ನನಗೆ ಅರ್ಥವಾಗುತ್ತಿಲ್ಲ. ಈ ಶಿಕಾರಿಯ ಪಾಪ ಪುಣ್ಯಗಳೇನೆ ಇರಲಿ, ಇದು ನನಗೆ ಕಾಡಿನ ಬಗ್ಗೆ ಕಾಡು ಪ್ರಾಣಿಗಳ ಬಗ್ಗೆ ನಿಧಾನವಾಗಿ ಆತ್ಮೀಯತೆಯನ್ನು ಬೆಳೆಸಲು ಸಹಾಯವಾಯಿತೆಂದು ಹೇಳಬಹುದು.

ಮಲೆನಾಡಿನ ಸಮಸ್ಯೆಗಳು;–

- ಅಕ್ರಮ ಸಾಗುವಳಿ.
- ಒತ್ತುವರಿ ತೆರವು.
- ಕುಟುಂಬಗಳ ವಿಭಜನೆ.
- ಸಣ್ಣ–ಸಣ್ಣ ಹಿಡುವಳಿ.

- ಸ್ವಾತಂತ್ರ್ಯ ನಂತರದಲ್ಲಿ ವ್ಯವಸಾಯ ಭೂಮಿಗೆ ಮಂಜೂರು ಮಾಡದಿರುವದು.
- ಸಾಮ್ರಜ್ಯ ಶಾಹಿಗಳ ಆಕ್ರಮಣ.
- ಪರಿಸರ ಸಂರಕ್ಷಣೆ ಹೆಸರಲ್ಲಿ ಜಾರಿಯಾಗುತ್ತಿರುವ ರಾಷ್ಟ್ರೀಯ ಅಂತರಾಷ್ಟ್ರೀಯ ಉದ್ಯಾನ ವನಗಳು.
- ಪರಿಸರ ಸಂರಕ್ಷಣೆ ಹೆಸರಿನಲ್ಲಿ ಜಾರಿಯಾಗುತ್ತಿರುವ ಯುನೆಸ್ಕೋ ಮಾನ್ಯತೆಗಳು.
- ಕೂಲಿ ಕಾರ್ಮಿಕರ ಸಮಸ್ಯೆಗಳು.
- ಪ್ರಾಣಿ–ಪಕ್ಷಿಗಳಿಂದ ರೈತರ ಬೆಳೆಗಳ ಹಾವಳಿಗಳು.
- ಸದಾಕಾಲ ಸುರಿಯುವ ಮಳೆಯ ಪ್ರಭಾವ.
- ಋತುವಿಗೆ ತಕ್ಕಂತೆ ಸಿಗದ ರಸಗೊಬ್ಬರಗಳು.
- ಸರ್ಕರ ಹೊರಡಿಸುವ ನೂತನ ಯೋಜನೆಗಳು.
- ರೈತರ ಬೆಳೆಗಳಿಗೆ ಸರಿಯಾಗಿ ಬೆಲೆ ಸಿಗದಿರುವುದು.
- ಅಡಿಕೆ ಸಂಶೋಧನಾ ಕೆಂದ್ರದ ಮಂದಗತಿಯ ಕಾರ್ಯನಿರ್ವಹಣೆ.

ಮಲೆನಾಡಿನ ನೂರಾರು ಸಮಸ್ಯೆಗಳ ಬೀಡು ಎಂಬ ಲೇಖನ ಸಂವಾದ ವಿಶೇಷಾಂಕ–೨೦೧೩ ಕುರಿತು **ಕಲ್ಕುಳಿ ವಿಠಲ್ ಹೆಗ್ಗಡೆ ಅವರು** ಮಲೆನಾಡ ಪ್ರಕೃತಿಯ ಸೊಬಗಿನಲ್ಲಿ ಮುಡುತ್ತಿರುವ (ಚಿಗುರುತ್ತಿರುವ) ಸಮಸ್ಯೆಗಳನ್ನು ಉನ್ನತೀಕರಿಸುವುದನ್ನು ಕಾಣಬಹುದಾಗಿದೆ. ಅದರಲ್ಲೂ ಕಾಡನ್ನು ಭೂಮಿಯ ಶ್ವಾಸಕೋಶಕ್ಕೂ ಮತ್ತು ಮಳೆಕಾಡನ್ನು ಭೂ ವಾತಾವರಣದ ಕಲ್ಮಷವನ್ನು ಸಂರಕ್ಷಿಸುವ ಕಿಡ್ನಿಗೂ ಹೋಲಿಸಿರುವದನ್ನು ಅವಲೋಕಿಸಿದಾಗ ಕಾಡಿನ ನಡುವೆ ನೆಲೆಸಿರುವ ಮಾನವನ ಕಾರ್ಯಾಂಗಗಳು ಕಾರ್ಯ ನಿರ್ವಹಿಸುತ್ತಿರುವುದು ಕಾಡಿನಿಂದ ಹಾಗೂ ಕಾಡಿನಲ್ಲಿ ದೊರೆಯುವ ಪದಾರ್ಥಗಳಿಂದ ಮತ್ತು ಭೂಮಿತಾಯಿ ಒಡಲಿನಿಂದ ಎಂಬುದನ್ನು ತಿಳಿಯಬಹುದಾಗಿದೆ. ಕಾಡಿನ ನಾಶದಿಂದ ಮನುಷ್ಯ ಸಂತತಿ ಹಾಳಾಗುತ್ತದೆ. ಹೇಗೆಂದರೆ ಕಾಡಿನ ನಾಶದಿಂದ ಋತುಮಾನಗಳಿಗೆ ಅನುಸಾರವಾಗಿ ಮಳೆಬೆಳೆಗಳು ಬೀಳದಿರುವುದರ ಜೊತೆಗೆ ಮನುಷ್ಯನಿಗೆ ಬೇಕಾದ ಅವಶ್ಯಕ ಪದಾರ್ಥಗಳು ದೊರೆಯುವುದಿಲ್ಲ ಆದ್ದರಿಂದ ಮನುಷ್ಯ ಉದ್ಯೋಗವಿಲ್ಲದೆ ಅರೇ ಹೊಟ್ಟೆ ಇಟ್ಟುಕೊಂಡು ತನ್ನ ಸಾವನ್ನು ತಾನೇ ತಂದುಕೊಳ್ಳುವ ಪರಿಸ್ಥಿತಿ ಬಂದೊದಗುತ್ತದೆ.

- ಸಾಮ್ರಜ್ಯಶಾಹಿಗಳು ಮಲೆನಾಡಿನ ಪದಾರ್ಥಗಳಾದ ಏಲಕ್ಕಿ, ಲವಂಗ, ಚಕ್ಕೆ, ಪತ್ರೆ ಜಾಯಿಕಾಯಿ, ಕರಿಮೆಣಸುಗಳಂತ ಸಾಂಬಾರ ಪದಾರ್ಥಗಳನ್ನು ಬೆಳೆಯುತ್ತಿದ್ದ ಕಾಡನ್ನೆಲ್ಲ ಕಾಫಿ. ಟೀಎಸ್ಟೇಟುಮಾಡಿ, ರೈಲು, ಹಡಗು ಎರುವಲಿನ ಇದ್ದಲಿಗಾಗಿ, ರೈಲ್ವೆ ಸ್ಲೀಪರ್ಸಿಗಾಗಿ ಬೆಂಕಿಕಡ್ಡಿ, ಕಾಗದ

ತಯಾರಿಕೆಗಾಗಿ ಕಾಡನ್ನು ನಾಶಮಾಡಿತು. ಇಲ್ಲಿ ಕಾಯ್ದೆ ಕಾನೂನುಗಳೆಲ್ಲ ಸಾಮ್ರಾಜ್ಯಶಾಹಿಗಳ ಕೈಯಲ್ಲಿದ್ದವು. ಅವರು ನಮ್ಮ ಕಾಡನ್ನು ನಮ್ಮಿಂದಲೆ ನಾಶ ಮಾಡಿಸಿ ತಮಗೆ ಬೇಕಾದ ಅವಶ್ಯಕ ಸಾಮಗ್ರಿಗಳನ್ನು ತಯಾರಿಸಿಕೊಳ್ಳುತ್ತಿದ್ದರು.

➢ ಸಾಮ್ರಾಜ್ಯಶಾಹಿಗಳು ಕಾಡನ್ನು ಮೀಸಲು ಅರಣ್ಯವನ್ನಾಗಿಸಿ ಜನರಹಿತ ಕಾಡನ್ನಾಗಿಮಾಡಲು ಎಲ್ಲ ರೀತಿಯಲ್ಲಿ ಪ್ರಯತ್ನಿಸಿ ಅದಕ್ಕಾಗಿ ಒತ್ತಡ, ಪರಿಹಾರ, ಆಮಿಷ, ಮುಂತಾದ ಎಲ್ಲಾ ಅಸ್ತ್ರಗಳನ್ನು ಉಪಯೊಗಿಸಿ ಕೊಂಡಿರುವುದನ್ನು ಕಾಣಬಹುದು. ಮೀಸಲು ಅರಣ್ಯ ಮಾಡುವುದರಿಂದ ಆ ಅರಣ್ಯ ತಮ್ಮ ಒಡೆತನದಲ್ಲಿದ್ದು ಅದರಿಂದ ತಮಗೆ ಬೇಕಾದದ್ದನ್ನು ದೋಚಲಿಕ್ಕೆ ಸುಲಭ ದಾರಿಯನ್ನು ಕಂಡುಕೊಂಡಿದ್ದರು. ಅದರಂತೆ ಆ ಅರಣ್ಯದಲ್ಲಿ ದೊರಕುವ ಮೂಲಭೂತ ಅವಶ್ಯಕ ವಸ್ತು ಸಾಮಗ್ರಿಗಳನ್ನು ತಮ್ಮ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳುತ್ತ ಬೇರೊಂದು ದೇಶಕ್ಕೆ ರಫ್ತುಮಾಡಿ ಬಂದ ಆದಾಯದಿಂದ ಸಾಮ್ರಜ್ಯಶಾಹಿಗಳು ನಮ್ಮ ಮೇಲಿನ ದಬ್ಬಾಳಿಕೆಗೆ ಇಳಿಯುತ್ತಿರುವದನ್ನು ತಿಳಿದುಕೊಳ್ಳಬಹುದು.

➢ ಮಲೆನಾಡಿನಲ್ಲಿ ಕಾಡುತ್ತಿರುವ ಸಮಸ್ಯೆಗಳೆಂದರೆ ಅಕ್ರಮ ಸಾಗುವಳಿ, ಒತ್ತುವರಿ ತೆರವು, ಕುಟುಂಬಗಳ ವಿಭಜನೆ, ಸಣ್ಣ-ಸಣ್ಣ ಹಿಡುವಳಿ, ಕಾಫಿಯಂತ ಬೆಳೆ, ಸ್ವಾತಂತ್ರ್ಯ ನಂತರ ಭೂಮಿಯನ್ನು ಮಂಜುರಾತಿ ಮಾಡದಿರುವದು ಮಲೆನಾಡಿಗರ ಮೂಲಭೂತ ಸಮಸ್ಯೆಗಳಾಗಿವೆ.

➢ **ಒತ್ತುವರಿ ತೆರವು:-** ೧೯೭೮ ಸೆಪ್ಟೆಂಬರ್ ೫ರ ಮುಂಚಿನ ಅಧಿಕೃತ ಮಂಜೂರಾತಿ ಪತ್ರವಿಲ್ಲದ ಜಮೀನನ್ನು ಒತ್ತುವರಿ ತೆಗೆದುಕೊಂಡದ್ದು. ಸುಪ್ರಿಂ ಕೋರ್ಟಿನ ಆದೇಶದಂತೆ ಅರಣ್ಯ ಇಲಾಖೆಯವರು ಜನರನ್ನು ಒಕ್ಕಲೆಬ್ಬಿಸಿ ನೋಟಿಸ್ ಜಾರಿಮಾಡಿ ಮಲೆನಾಡಿನಲ್ಲಿ ಭಯದ ವಾತಾವರಣ ಸೃಷ್ಟಿ ಮಾಡುತ್ತಿರುವುದು.

➢ **ಕುದುರೆಮುಖ ಉದ್ಯಾನವನದ ಸಮಸ್ಯೆ:-**"ಹುಲಿ ಬಂತು ಹುಲಿ" ನೂತನ ಕಾಯ್ಕೆಯಂತೆ- ೨೦೦೯ ರಲ್ಲಿ ಈ ಉದ್ಯಾನ ವನದಲ್ಲಿ ಕೇವಲ ೪ ಹುಲಿಗಳಿವೆ. ಈ ಹುಲಿಗಳಿಗಾಗಿ ೧೦-೧೨ ಸಾವಿರ ಜನ ಒಕ್ಕಲೇಳುವುದು ಎಷ್ಟೋಂದು ಸತ್ಯ ಅದರಲ್ಲೂ ಈ ಅರಣ್ಯದಲ್ಲಿ ೨೦೦೦ ರಿಂದ ೨೦೦೭ರ ವರೆಗೆ ಹುಲಿ ಸಂರಕ್ಷಣಾ ಯೋಜನೆ ಪ್ರಾರಂಭವಾಗಿತ್ತು ಅದನ್ನೆ ಮಲೆನಾಡಿನ ಕುದುರೆಮುಖ ಉದ್ಯಾನವನದಲ್ಲಿ ಹುಲಿ ಬಿಟ್ಟು ಜನರ ಒಕ್ಕಲೇಳಲು ಪ್ರಯತ್ನಿಸುತ್ತಿರುವುದು.

➢ ಅಡಿಕೆಗೆ ಹಳದಿರೋಗ ಬಂದು ಅಡಿಕೆಗಳು ಹಾಳಾಗಿದ್ದರು ಕೇಂದ್ರ ಸರಕಾರ ದಕ್ಷಿಣ ಕನ್ನಡದಲ್ಲಿ ಸ್ಥಾಪಿಸಿರುವ ಅಡಿಕೆ ಸಂಶೋಧನಾ ಕೇಂದ್ರವಂತು ರೈತರತ್ತ ಗಮನ ಸೆಳೆಯದೇ ತನ್ನ

ಕಾರ್ಯವನ್ನು ಮಂದಗತಿಯಲ್ಲಿ ಸಾಗಿಸುತ್ತ ರೈತರ ನಿರ್ಲಕ್ಷತೆಗೆ ಹ್ರೇಣೆಯಾಗಿರುವುದು ಮೂಲಕಾರಣವಾಗಿದೆ.

➢ ಮಲೆನಾಡಿನಲ್ಲಿ ರೆಸಾರ್ಟ್ ಹೋಮ್‌ಸ್ಟೇಗಳು ಹುಟ್ಟಿಕೊಳ್ಳುತ್ತಿದ್ದು, ಅರಣ್ಯನಾಶಕ್ಕೆ ಮೂಲ ಕಾರಣವಾದದ್ದಲ್ಲದೇ ರೈತರ ಜಮೀನನ್ನು ಕಬಳಿಸುತ್ತಿವೆ. ಇದೇ ಗತಿಯಲ್ಲಿ ಮುಂದುವರೆದರೆ ಮಲೆನಾಡು ಥೈಲ್ಯಾಂಡ್ ಆಗುವುದರಲ್ಲಿ ಸಂಶಯವಿಲ್ಲ, ಥೈಲ್ಯಾಂಡ್ ಚಿಕ್ಕ ರಾಷ್ಟ್ರವಾದರೂ ಅತಿ ಹೆಚ್ಚು ರಾಷ್ಟ್ರೀಯ ಉದ್ಯಾನವನಗಳನ್ನು ಹೊಂದಿರುವ ರಾಷ್ಟ್ರವಾಗಿ ಹೊರಹೊಮ್ಮಿದೆ.

➢ **"ಮಲೆನಾಡು ಕೂಲಿ ಕಾರ್ಮಿಕರ ಸ್ಥಿತಿಗತಿಗಳು"** ಎಂಬ ಸಂವಾದ ವಿಶೇಷಾಂಕ ೨೦೧೩ ಕುರಿತು ಲೇಖನವನ್ನು **ಡಾ. ಬಿ. ಎಂ. ಪುಟ್ಟಯ್ಯ** ಅವರು ಮಲೆನಾಡಿನ ಕಾರ್ಮಿಕರ ಸ್ಥಿತಿಗತಿ ಕುರಿತು ಲೇಖನ ಬರೆದಿದ್ದಾರೆ.

➢ ಮಲೆನಾಡಿನವರ ನಿಜವಾದ ಚಿತ್ರಣ ಬಯಲಾಗುವುದು ಪೊಲೀಸ್ ಸ್ಟೇಶನಿನಲ್ಲಿ. ಹೇಗೆಂದರೆ ಇವರು ಕೂಲಿ ಕಾರ್ಮಿಕರ ಮೇಲೆ ಎರಗಿರುವ ಕೃತ್ಯ ಒಂದೋ ಎರಡೋ. ಕೂಲಿ ಕಾರ್ಮಿಕರ ಮೇಲೆ ಕೊಲೆಮಾಡಿ, ಅವರ ಮೇಲೆ ಹಲ್ಲೆ, ಅತ್ಯಾಚಾರಗಳನ್ನು ನಡೆಸಿ, ಲಂಚಕೊಟ್ಟು ಮುಚ್ಚುಹಾಕಿರುವ ಪ್ರಕರಣಗಳನ್ನು ಗಮನಿಸಬೇಕು. ಇದೇ ರೀತಿಯಲ್ಲಿ ಮೇಲುವರ್ಗದ ಶ್ರೀಮಂತರು ಕೆಳವರ್ಗದ ಕೂಲಿ ಕಾರ್ಮಿಕರ ಮೇಲೆ ಎಸಗಿರುವ ದೃಶ್ಯಗಳನ್ನು ಮೆಲುಕುಹಾಕುತ್ತ ಹೋದಂತೆ ಮಲೆನಾಡಿನ ಶ್ರೀಮಂತ ವರ್ಗದವರ ನಿಜ ಮುಖಗಳು ಬಯಲಾಗುವುದರಲ್ಲಿ ಸಂಶಯವೇ ಇಲ್ಲ.

➢ ಕೂಲಿ ಕಾರ್ಮಿಕರ ಪರಿಸ್ಥಿತಿ ಏನು? ಎಂಬುದು ಭಾರೀ ಭೂಮಾಲಿಕರ ದಬ್ಬಾಳಿಕೆ ಹಾಗೂ ಯಜಮಾನಿಕೆಯನ್ನು ಅವಲಂಬಿಸಿದರೆ, ಮತ್ತೊಂದೆಡೆ ಭಾರೀ ಭೂಮಾಲಿಕರ ದಬ್ಬಾಳಿಕೆಯ ಸ್ವರೂಪ ಏನು? ಎಂಬುದನ್ನು ಕೂಲಿ ಕಾರ್ಮಿಕರ ದಯನೀಯ ಪರಿಸ್ಥಿತಿಯನ್ನು ಅವಲಂಬಿಸಿದೆ.

➢ ಕೂಲಿಕಾರ್ಮಿಕರು ತಮ್ಮ ದೈನಂದಿನ ಜೀವನಕ್ಕಾಗಿ, ಮದುವೆ ಸಮಾರಂಭಗಳಿಗಾಗಿ, ಮನೋರಂಜನೆಗಾಗಿ, ದುಷ್ಟ ಚಟಕ್ಕಾಗಿ, ಹಬ್ಬಹರಿದಿನಗಳಿಗಾಗಿ ಮಾಡುತ್ತಿದ್ದ ಸಾಲ ತಮ್ಮ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಮದುವೆಗೆ ಬಂದರು ತೀರುತ್ತಿರಲಿಲ್ಲ. ಸಾಲ ಎಷ್ಟು ಪಡೆದಿದ್ದೇವೆ ಎಂಬದು ಮಾತ್ರ ಗೊತ್ತೆ ಹೊರತು ಎಷ್ಟು ಸಾಲ ತೀರಿದೆ ಎಂಬುದು ಕೂಲಿಕಾರ್ಮಿಕರಿಗೆ ಗೊತ್ತಾಗುತ್ತಿರಲಿಲ್ಲ. ಒಡೆಯನಲ್ಲಿ ಜೀತದಾಳಾಗಿಯೆ ಜೀವನಪೂರ್ತಿ ದುಡಿಯುತ್ತಿದ್ದರು.

➢ ಯಾವ ಸರ್ಕಾರಿ ಕಾನೂನುಗಳು ಬಂದರೇನಂತೆ ಯಾವ ರಾಜಕೀಯದವರೂ ಬಂದರೆನಂತೆ ಕೂಲಿಕಾರ್ಮಿಕರು ತಮ್ಮ ಬದುಕನ್ನು ಬದಲಾಯಿಸಿಕೊಳ್ಳಲು ಸ್ವಯಂಶಕ್ತಿ ಬಳಸಿಕೊಂಡು ಬದುಕು ಸಾಗಿಸುತ್ತ ದೈನಂದಿನ ಜೀವನಕ್ಕೆ ಬೇಕಾದ ಅಗತ್ಯತೆಗಳನ್ನು

ಪೂರೈಸಿಕೊಳ್ಳುತ್ತ ಬದುಕುತ್ತಿರುವುದರ ಮಧ್ಯ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಸರಕಾರಿ ಯೋಜನೆಗಳು ಕೂಲಿಕಾರ್ಮಿಕರಿಗೆ ನೇಣುಗಂಬವಾಗಿ ನಿಲ್ಲುತ್ತಿರುವುದನ್ನು ಕಾಣಬಹುದಾಗಿದೆ.

➢ ಇಂತಹ ಸಮಸ್ಯೆಗಳ ಮಧ್ಯ ಬವಣೆಯ ಬದುಕನ್ನು ಕಳೆಯುತ್ತಿರುವ ಕೂಲಿಕಾರ್ಮಿಕರಿಗೆ ಮುಂದಾದರು ಅವರಿಗಾಗಿ ಕೆಲವು ಕಾಯ್ದೆ ಕಾನೂನುಗಳನ್ನು ಮೀಸಲಿಡಲಿ ಹಾಗೂ ಅವರ ಬದುಕು ಹಸನಾಗುತ್ತ ಅವರಲ್ಲಿರುವ ಸಾಮಾಜಿಕ, ಧಾರ್ಮಿಕ, ಆರ್ಥಿಕ ಔದ್ಯೋಗಿಕ ಸಮಸ್ಯೆಗಳು ದೂರವಾದರೆ ಕೂಲಿಕಾರ್ಮಿಕರು ತಮ್ಮ ದೈನಂದಿನ ಬದುಕಿನ ಸುಧಾರಣೆಯತ್ತ ದಾಪುಗಾಲಿಡುವಂತಾಗುತ್ತದೆ.

➢ ಮಲೆನಾಡಿನ ಕೂಲಿಕಾರ್ಮಿಕರ ಬದುಕು ಶಿವರಾಮ ಕಾರಂತ ಚೋಮನ ದುಡಿ ಕಾದಂಬರಿಯಲ್ಲಿ ಚೋಮನ ಮಕ್ಕಳಾದ ಚೆನಿಯ, ಗುರುವ ಮತ್ತು ಬೆಳ್ಳಿ ಚಿತ್ರ ಹಿಂಸೆಗೆ ಗುರಿಯಾಗುವುದನ್ನು ಚಿತ್ರಿಸಿರುವದನ್ನು ಕಾಣಬಹುದಾಗಿದೆ. ಅದಲ್ಲದೇ ಈ ಕಾದಂಬರಿಯಲ್ಲಿ ಕೆಳವರ್ಗದ ಜನರು ಮೇಲುವರ್ಗಕ್ಕೆ ಹೋಗಲು ಎಷ್ಟೇ ಪ್ರಯತ್ನ ಪಟ್ಟಿದ್ದರೂ ಆಗದೆ ಸೋತು ಹೋಗಿರುವದನ್ನು ಚಿತ್ರಿಸಿ ತೋರಿಸಿದ್ದಾರೆ.

➢ ಈ ಮಲೆನಾಡಿನಲ್ಲಿ ಕೂಲಿಕಾರ್ಮಿಕರ ಬದುಕು ಬೆನಕನಹಳ್ಳಿ ಜಿ. ನಾಯಕರ ವಲಸೆ ಕಾದಂಬರಿಯಂತೆ ಚಿತ್ರಿತವಾಗಿದೆ. ಈ ಕಾದಂಬರಿಯಲ್ಲಿನ ಸಾಹುಕಾರ ಶಮಂತನು ಲಂಬಾಣಿ ತಾಂಡದ ಜನರನ್ನು ಕೂಲಿಯಾಳಾಗಿ ಮುಂಗಡ ಹಣನೀಡಿ ಕರೆದುಕೊಂಡು ಹೋಗುತ್ತಾನೆ. ಆ ಜನರನ್ನು ಪ್ರಾಣಿಗಳ ಮಾಂಸದ ಕಂಪನಿ (ಪ್ಯಾಕ್ಟ್ರಿಯಲ್ಲಿ) ದುಡಿಯಲು ಬಿಡುತ್ತಾನಲ್ಲದೆ ತಾಂಡ್ಯದ ತರುಣಿಯರಾದ ಲಚುಮಿಯ ಮಗಳು ಪಾರು ಹಾಗೂ ಕಾಳ್ಯನ ಮಗಳು ಸಾಂತಿ ಮೇಲೆ ಅತ್ಯಾಚಾರವನ್ನು ಮಾಡಿ ಗೊತ್ತಿಲ್ಲದೆ ತಮ್ಮ ಶ್ರೀಮಂತಿಕೆಯ ದಬ್ಬಾಳಿದೆಯಿಂದ ಮುಚ್ಚಾಕುತ್ತಾರೆ. ಅದರಲ್ಲು ರೂಪ್ಲಿ ಮತ್ತು ಪಾರೂನ ಚಿತ್ರಹಿಂಸೆಯ ಮುಖೇನ ಮೇಲುವರ್ಗದ ದಬ್ಬಾಳಿಕೆಯಿಂದ ಅವರ ಮೇಲೆ ಅತ್ಯಾಚಾರ ಮಾಡಿ ಆ ಕೇಸನ್ನು ಸಹ ಮುಚ್ಚಿ ಹಾಕಿರುವುದನ್ನು ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

➢ ಎಸ್. ಎಲ್. ಬೈರಪ್ಪರ ದಾಟು ಕಾದಂಬರಿಯಲ್ಲು ಸಹ ಮೇಲುವರ್ಗದ ವೆಂಕಟರಮಣಯ್ಯ ಕೆಳವರ್ಗದ ಹೊಲತಿ ಮಾತಂಗಿಯೊಂದಿಗೆ ತನ್ನ ಕಾಮುಕವನ್ನೆಲ್ಲ ಹಂಚಿಕೊಂಡು ಅವಳಲ್ಲಿ ಹೊನ್ನೇಶನ ಎಂಬ ಮಗುವಿಗೆ ಜನ್ಮವಿತ್ತನು. ತಂದೆಯಾದರೂ ಶ್ರೀಮಂತಿಕೆಯ ದರ್ಪದಿಂದ, ಹಣದ ಚೆಲ್ಲಾಟದಿಂದ, ಹಾಗೂ ಜ್ಯಾತ್ಯತೀತ ಭಾವನೆಯಿಂದ, ಆ ಸಂಗತಿಯನ್ನು ಮುಚ್ಚಾಕುವುದನ್ನು ಕಾಣಬಹುದಾಗಿದೆ. ಇಲ್ಲಿಯ ಸಮಸ್ಯೆಯ ಮಲೆನಾಡಿನಲ್ಲಿನ ಕೂಲಿಕಾರ್ಮಿಕರ ಸಮಸ್ಯೆಯಂತೆ ಪರಿಣಾಮ ಬೀರಿದೆ.

- ಮಲೆನಾಡಿಗರ ಕೂಲಿಕಾರ್ಮಿಕರ ಬದುಕಂತೆ ಬೈರಪ್ಪರ ದಾಟು ಕಾದಂಬರಿ ನಾಯಕ ಶ್ರೀನಿವಾಸ ಹೊಲತಿ ಮೀರಾಳಮೇಲೆ ತಂತ್ರವನ್ನು ಉಪಯೋಗಿಸಿ ತನ್ನ ಬುಟ್ಟಿಗೆ ಹಾಕಿಕೊಂಡು ಪ್ರೀತಿಸಿ ಅವಳಿಗೆ ಚಿತ್ರಹಿಂಸೆ ನೀಡಿದ್ದರಿಂದ ಮಧ್ಯೆ ಜಾತಿಯತೆ ಬಂದು ಮೀರಳು ತನ್ನ ಸಾವನ್ನು ತಾನೆ ಕಂಡುಕೊಳ್ಳುವುದನ್ನು ಚಿತ್ರಿಸಿದ್ದನ್ನು ನೋಡಿದರೆ ಮಲೆನಡಿನ ಕೂಲಿಕಾರ್ಮಿಕರ ಪಾಡು ಕೂಡಾ ಇದೇ ರೀತಿಯಲ್ಲಿ ಮುಂದೆ ನಡೆಯುವುದರಲ್ಲಿ ಸಂಶಯವೆ ಇಲ್ಲವಾಗುತ್ತದೆ.
- ಯು. ಆರ್. ಅನಂತಮೂರ್ತಿ ಭಾರತಿಪುರ ಕಾದಂಬರಿಯಲ್ಲಿ, ಕಾದಂಬರಿ ನಾಯಕ ಜಗನ್ನಾಥನು ಶ್ರೀಮಂತ ವರ್ಗದಲ್ಲಿದ್ದರಿಂದ ಕೆಳ ವರ್ಗದವರನ್ನು ಚಿತ್ರ ಹಿಂಸೆಗೆ ಗುರಿಪಡಿಸುತ್ತಿದ್ದನ್ನು ಅದರಲ್ಲೂ ಕೆಳವರ್ಗದವರನ್ನು ಮೇಲು ವರ್ಗದತ್ತ ತರಲು ಪ್ರಯತ್ನ ಪಟ್ಟವನು. ಈತನು ಹರಿಜನರ ಯುವ ಪ್ರತಿಬೆ ಪಿಳ್ಳಾನನ್ನು ಹುರಿದುಂಬಿಸಿ ಬ್ರಾಹ್ಮಣರ ಗುಡಿ ಪ್ರವೇಶಕ್ಕಾಗಿ ತಯಾರಿ ಮಾಡಿದನು. ತನ್ನ ಕಾರ್ಯ ಯೆಶಸ್ವಿ ಯಾಗದೆ ನೆಲಮುಕುವುದನ್ನು ಕಾಣಬಹುದು. ಇಲ್ಲಿ ಕೂಲಿಕಾರ್ಮಿಕರ ತುಳಿತವು Indiracte (ಗೊತ್ತಾಗದಂತೆ) ಗೋಚರಿಸಿರುವುದು ಕಂಡುಬರುತ್ತದೆ.

ಟಿಪ್ಪಣಿಗಳು

೧. ವಿರೂಪಾಕ್ಷಿ ಪೂಜಾರಹಳ್ಳಿ. ಬೇಟೆ ಮತ್ತು ಬೇಡರು–೨೦೦೭.ಪು. ೧

೨. ತ್ಯಾವಂದೂರು ಪುಟ್ಟಣ್ಣ ನಾ ಕಂಡ ಮಲೆನಾಡು–೧೯೯೭. ಪು. ೨೧

೩. ಗ್ರಾಮೀಣ ಬೇಟೆಗಳು–೨೦೦೦. ೨೯೩೪

೪. ಅದೇ, ಪಟ. ೭೫–೭೯

೫. ಯಂಶವಂತ ಚಿತ್ತಾಲ ಶಿಕಾರಿ ಕಾಂದಬರಿ

೬. ಕಲ್ಕುಳ್ಳಿ ವಿಠಲ ಹೆಗ್ಗಡೆ ಮಂಗನ ಬ್ಯಾಟೆ–೨೦೧೨. ೧೦

೭. ವಿರೂಪಾಕ್ಷಿ ಪೂಜಾರಹಳ್ಳಿ. ಬೇಟೆ ಮತ್ತು ಬೇಡರು–೨೦೦೭. ಪು.೪೧–೪೨

೮. ಕಲ್ಕುಳ್ಳಿ ವಿಠಲ ಹೆಗ್ಗಡೆ ಮಂಗನ ಬ್ಯಾಟೆ–೨೦೧೨. ಪು೨೯

೯. ಅದೇ, ಪುಟ. ೧೧೬–೧೧೭

೧೦. ಅದೇ, ಪುಟ. ೧೨೬

೧೧. ಅದೇ, ಪುಟ. ೧೫೮–೧೬೫

೧೨. ಅದೇ, ಪುಟ. ೧೮೧

೧೩. ಅದೇ, ಪುಟ. ೨೩೮

೧೪. ವಿರೂಪಾಕ್ಷಿ ಪೂಜಾರಹಳ್ಳಿ. ಬೇಟೆ ಮತ್ತು ಬೇಡರು–೨೦೦೭.ಪು. ೨೯, ೨೫೨

೧೫. ಸ.ಚಿ.ರಮೇಶ ಬೇಟೆಯ ಸಾಂಸ್ಕೃತಿಕ ಪದಕೋಶ–೧೯೯೪. ಪು. ೫

೧೬. ಕುವೆಂಪು ಕಾದಂಬರಿಗಳಲ್ಲಿ ಮಲೆನಾಡ ಪರಿಸರ ಮತ್ತು ಇಂದಿನ ಮಲೆನಾಡ ಪರಿಸರ–೨

೧೭. ಅದೇ, ಪುಟ. ೨೪

೧೮. ಉಮೇಶ್ ಹೊಸಹಳ್ಳಿ ಮಲೆನಾಡಿನ ಶಿಕಾರಿಲೋಕ–೨೦೦೬. ಪು. ೧

೧೯. ನರೇಂದ್ರ ದೇರ್ಲ ಬೇಟೆ(ಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ)೨೦೦೭. ಪು.೧

೨೦. ವಿರೂಪಾಕ್ಷಿ ಪೂಜಾರಹಳ್ಳಿ. ಬೇಟೆ ಮತ್ತು ಬೇಡರು–೨೦೦೭.ಪು.೨೪

೨೧. ನರೇಂದ್ರ ದೇರ್ಲ ಬೇಟೆ'(ಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ) ೨೦೦೭. ಪು.೨

೨೨. ಗ್ರಾಮೀಣ ಬೇಟೆಗಳು–೨೦೦೦. ಪು. ೭೫–೯೦

೨೩. ನರೇಂದ್ರ ದೇರ್ಲ ಬೇಟೆ (ಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ) ೨೦೦೭.ಪು. ೧೯

೨೪. ಅದೇ ಪುಟ. ೨೨೭

೨೫. ಕಿಟ್ಟೆಲ್ ಅರ್ಥಕೋಶ ಸಂಪುಟ–೩. ಪು. ೧೨೧೯

೨೬. ಕೆಟ್ಟೆಲ್ ಅರ್ಥಕೋಶ ಸಂಪುಟ-೩. ಪು. ೧೯೭೫

೨೭. ಎಸ್.ಸಿ.ರಾಯ್‌ಚೌಧರಿ ಸೋಷಿಯಲ್ ಕಲ್ಚರಲ್ ಅಂಡ್ ಎಕನಾಮಿಕ್ ಹಿಸ್ಟರಿ ಆಪ್ ಇಂಡಿಯಾ ೧೯೯೫, ೭

ಅಧ್ಯಾಯ-೩

ಸಿದ್ಧನ ಸಾಹಸಲೀಲೆಗಳು

ಸಿದ್ಧನ ಸಾಹಸಲೀಲೆಗಳನ್ನು ಗಮನಿಸಿದರೆ ಮಲೆನಾಡಿನಲ್ಲಿ ಸೃಷ್ಟಿಯಾಗುತ್ತಿರುವ ಸಮಸ್ಯೆಗಳು ನಾಶವಾಗುತ್ತವೆ; ಎಂಬುದು ತಿಳಿಯಬಹುದು. ಲೌಕಿಕ ಪ್ರಪಂಚದಲ್ಲಿ ಮೂಡಿಬಂದಿರುವ ಮಲೆನಾಡಿನ ಸಮಸ್ಯೆಗಳಂತು ರೈತಾಪಿ ಜನರ ಬೆನ್ನೆಲುಬಾಗಿ ಹಿಂಬಾಲಿಸುತ್ತ ಇರುವುದ ಜೊತೆಗೆ ಕೂಲಿ ಕಾರ್ಮಿಕರನ್ನು ಸಮಸ್ಯೆಗೆ ಸಿಲುಕಿರುವುದನ್ನು ಚಿತ್ರಿಸುತ್ತ ಹೋಗಿರುತ್ತದೆ, ಮಲೆನಾಡು ಮಳೆನಾಡಾಗಿದ್ದರೂ ಅಲ್ಲಿನ ಜನರ ಬವಣೆಯ ಬದುಕನ್ನು ಚಿತ್ರಿಸುತ್ತಿರುವುದು ತಾತ್ವಿಕವಾಗಿ ಅವಲೋಕಿಸಬಹುದಾಗಿದೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ, ಔದ್ಯೋಗಿಕ, ಸಮಸ್ಯೆಗಳ ಮಧ್ಯೆ ಬದುಕುತ್ತಿರುವುದು ಮಲೆನಾಡಿಗರ ಸಮಸ್ಯೆಗಳಾಗಿವೆ.

ಬೇಟೆಗಾರನಿಗೆ ಬೇಟೆ ಒದಗುವುದು ಬೇಟೆಯ ಪ್ರಮುಖ ಪ್ರತಿಫಲ. ಇದರೊಂದಿಗೆ ಕಂಟಕ ಪ್ರಾಯವಾಗಿದ್ದ ಜೀವ ಜಂತುಗಳನ್ನು ಬೇಟೆಯಾಡಿದನೆಂಬ ಹೊಗಳಿಕೆ ಲಭಿಸುತ್ತಿತ್ತು. ರಾಜ ಮಾರ್ಯದೆಗೆ ಪಾತ್ರವಾಗುತ್ತಿದ್ದ ಸಾಮಾಜಿಕ ಪ್ರತಿಫಲವು ಮತ್ತೊಂದು ಅಂಶ ಬೇಟೆಯ ಸಂದರ್ಭದ ನನೆಪು ಹಾಗೂ ವೀರ ಬೇಟೆಗಾರನ ಸಾಹಸದ ಕೀರ್ತಿ ಚಿರಸ್ಥಾಯಿಯಾಗಲೆಂದು ಶಾಸನ ವೀರಗಲ್ಲುಗಳನ್ನು ನಡೆಸುತ್ತಿದ್ದರು. ಬೇಟೆಯ ಕಾರಣಕ್ಕಾಗಿ ದುರಂತ ಸಾವನ್ನಪ್ಪಿದ ಬೇಟೆಗಾರ ಹಾಗೂ ಆತನ ಸಾಕು ನಾಯಿಗಳ ಬೇಟೆಯ ಪರ ವೈಖರಿಯೂ ಶಾಸನ ವೀರಗಲ್ಲುಗಳಲ್ಲಿ ಚಿತ್ರಣಗೊಂಡು ವೀರತ್ವವನ್ನೂ ದಾಖಲಿಸಿದೆ. ಇದು ಯುದ್ಧವೀರರಿಗೆ ಸರಿಸಮಾನವಾದದು. ವೀರಗಲ್ಲು ಶಾಸನಗಳಲ್ಲಿ ಬೇಟೆಗೆ ಸಹಕರಿಸಿ ಬೇಟೆ ನಾಯಿಗಳ ಉಲ್ಲೇಖವಿರುವಷ್ಟು ಯುದ್ಧಕ್ಕೆ ಸಹಕರಿಸಿದ ಆನೆ ಕುದುರೆಯಂತ ಪ್ರಸ್ತಾಪಗಳು ಹೇರಳವಾಗಿ ಕಾಣದಿರುವುದು ಆಶ್ಚರ್ಯ ಮತ್ತು ಕೂತೂಹಲದ ಸಂಗತಿಯಾಗಿದೆ.

ಸಿದ್ಧನು ಮಲೆನಾಡಿನ ಜನರಿಗೆಲ್ಲಾ ಬೇಕಾಗಿದ್ದವನಾಗಿದ್ದನು. ಸಿದ್ದನ ಸಾಹಸಲೀಲೆಗಳನ್ನು ಕಂಡು ಜನರು ಸಿದ್ದನಿಗೆ ಮರುಳಾಗಿದ್ದರು ಮಳೆಗಾಲದಲ್ಲಿ ಸಿದ್ದ ಅಣಬೆ, ಕಳಲೆ, ಮರಗೆಣಸು, ಮಡಹಾಗಲಕಾಯಿ, ಕಾರೇಡಿ, ಹತ್‌ಮೀನುಗಳನ್ನು ತಂದು ಜನರಿಗೆ ಕೊಡ್ತಿದ್ದ ಜೊತೆಗೆ ಕಾಯಿಲೆಗಳಿಗೆ ಔಷದಿ ಮತ್ತು ಬೈನೆಕಟ್ಟಿ ಕಳ್ಳುಮಾಡಿ ಹಂಚುತ್ತಿದ್ದನು. ಇದಲ್ದೆ ಮಳೆಗಾಲ ಶುರುವಾದರೇ ಸಿದ್ದ ಅಣಬೆ, ಉತ್ತಕ್ಕೆ ಶುರುಮಾಡುತ್ತಿದ್ದನು ಹೈಗಿನಣಬೆ, ಬೋಗಿಅಣಬೆ, ಚಿಲ್‌ಅಣಬೆ, ಜೋತೆಗೆ ಗುರ್ತಾಲ್, ಅಕ್ಕಿ, ಕೋಳಿ, ಕಲ್ಲಾಗಳೆಂಬ ಅಣಬೆ ತರುತಿದ್ದನು. ಅದರಲ್ಲು ಹೆಗ್ಗಾಲ್ ಅಣಬೆ ಮಲೆನಾಡಿನ ವಿಶಿಷ್ಟ ಅಣಬೆಯಾಗಿದೆ.[7] ಮಲೆನಾಡು ಸಂಪದ್ಭರಿತವಾದ ತಾಣವಾಗಿದ್ದು ಅಲ್ಲಿನ ಜನರಿಗೆ ಅವಶ್ಯಕವಾದ ಎಲ್ಲಾ ವಸ್ತುಗಳು ದೊರೆಯುತ್ತವೆ ಕಾಡಿನ ಸಂಪತ್ತಿನಿಂದ ಮಲೆನಾಡಿಗರು ಬದುಕುತ್ತಿರುವುದನ್ನು ಕಾಣಬಹುದಾಗಿದೆ.

ಸಿದ್ಧನ್ ಏಡಿ ಹಿಡಿತ "ಎಲ್ಲರೂ ಏಡಿ ಕಂಡು ಹೆದರಿದರೇ ಸಿದ್ದನಿಗೆ ಏಡಿನೇ ಕಂಡು ಹೆದರುತಿದ್ದವು ಈ ಮುಂಡೇಮಗ ಅದ್ಯಾವ್ ಮಾಯಾ ಮೊಡಿಯನ್ನು ಕಲ್‌ತ್ಕೊಂಡಿದ್ದಾನೋಗೊತ್ತಿಲ್ಲ ಅದೇಷ್ಟೆ ದೊಡ್ಡ ಏಡೀ ಇದ್ರು ಅದನ್ ಹಿಡಿದು ಕೊಂಬುಮುರಿತಾನೆ".[೨]

ಜೇನು ಬೇಟೆ:-

ನಮ್ಮ ಭೂಮಂಡಲದ ಮೇಲೆ ಸಾವಿರಾರು ಕ್ರಿಮಿಕೀಟಗಳಿದ್ದು ಅವು ಸಮಾಜ ಜೀವನವನ್ನು ನಡೆಸಿಕೊಂಡು ಹೂವಿನ ಮಕರಂದವನ್ನು ಶೇಖರಿಸುವ ವರ್ಷಗಳು ಕಂಡುಬರುತ್ತವೆ. ಇದೇ ರೀತಿಯಲ್ಲಿ ಶೇಖರಿಸಿಟ್ಟ ಮನುಷ್ಯನಿಗೆ ಉಪಕಾರ ಮಾಡತಕ್ಕ ಕೀಟಗಳಲ್ಲಿ ಜೇನು ನೊಣವು ಒಂದಾಗಿದೆ.

ಜೇನು ನೊಣಕ್ಕೆ ಒಟ್ಟು ೬ ಕಾಲುಗಳಿರುತ್ತವೆ. ೪ ಕಾಲುಗಳು ಮುಖ್ಯವಾಗಿ ಮಕರಂದ ಶೇಖರಣೆ ಹಿಂಬದಿಯಲ್ಲಿ ಒಂದು ಬಾಣ (ಮುಳ್ಳು) ಇರುತ್ತದೆ. ಇದು ಕುಟುಂಬದ ರಕ್ಷಣೆಗೆ ಮುಳ್ಳಿನಿಂದ ಚುಚ್ಚಿದ ಕೂಡಲೆ ಅದರ ಕರುಳು ಕಿತ್ತುಬಂದು ನೊಣ ಸತ್ತು ಹೋಗುತ್ತದೆ. ವಿಚಿತ್ರ ಸೃಷ್ಟಿ ಕುಟುಂಬದ ರಕ್ಷಣೆಗೆ ತಾನು ಬಲಿ ಆಗುತ್ತದೆ.

ಭಾರತದಲ್ಲಿ ಜೇನು ಸಾಕಾಣಿಕೆ ಪ್ರಾರಂಭವಾದದ್ದು ೧೮೮೨ ರಲ್ಲಿ ಬಂಗಾಳದಲ್ಲಿ ಯಶಸ್ವಿಯಾಗಿ ನಂತರ ಪಂಜಾಬಿನಲ್ಲಿ ಜೇನು ಸಾಕಾಣಿಕ ಕಾರ್ಯವು ೧೮೮೩ ರಲ್ಲಿ ಪ್ರಾರಂಭವಾಯಿತು. ಎಂದು ತಿಳಿದು ಬರುತ್ತದೆ. ಮಾನವ ತನ್ನ ಸುಃಖ ಜೀವನಕ್ಕೆ ಅನೇಕ ತರಹದ ಪ್ರಾಣಿಗಳನ್ನು ಬಳಸಿಕೊಂಡಿದ್ದಾನೆ. ಪುರಾಣ ಕಾಲದಿಂದಲೂ ಮಾನವ ಸಿಹಿಯಾದ ಜೇನನ್ನು ಹೊಂದಲು ಜೇನುನೊಣದ ಪರಿಚಯವನ್ನು ಮಾಡಿಕೊಂಡಿದ್ದಾನೆ. ಆದಿಕಾಲದಲ್ಲಿ ಜೇನು ಸಾಕಾಣಿಕೆಗೆ ಯಾವುದೇ ನಿಯಮ ನಿರ್ಭಂದಗಳಿರಲಿಲ್ಲ, ಆದರೇ ೧೦ನೇ ಶತಮಾನದ ಮಧ್ಯ ಭಾಗದಿಂದ ಈಚೆ, ಜೇನು ಸಾಕಣಿಕೆಯಲ್ಲಿ ಸುಧಾರಣೆಗಳು ಕಂಡು ಬರುವದನ್ನು ಕಾಣಬಹುದಾಗಿದೆ.

ಸಾಂಘಿಕ ಜೀವನ, ಪರಿಕ್ರಮ, ಉಳಿತಾಯ, ಸಹಬಾಳ್ವೆಗಳನ್ನು ಜೇನು ಸಾಕಾಣಿಕೆಯಲ್ಲಿ ಕಾಣಬಹುದು, ಜೇನು ಗೂಡಿನಿಂದ ಜೇನನ್ನು ಬೇರ್ಪಡಿಸಲು ಅನುಭವಸ್ಥರೇ ಬೇಕಾಗುತ್ತದೆ. ಒಂದು ರೀತಿಯಲ್ಲಿ ಇದನ್ನು ಬೇಟೆಯೆಂದೆ ಹೇಳಬಹುದಾಗಿದೆ. ಈ ಜೇನು ಕುರುಬರು ದಕ್ಷಿಣ ಕೊಡಗಿನಲ್ಲಿ ಮತ್ತು ನಾಗರಹೊಳೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ ಜೊತೆಗೆ ಮೈಸೂರು ಪ್ರಾಂತ್ಯಕ್ಕೆ ಸೇರಿದವರು ಇರುತ್ತಾರೆ. ಇನ್ನು ಮಲೆಕುಡಿಯರು ಉತ್ತರ ಕೊಡಗಿನಲ್ಲಿ ಕಂಡುಬರುತ್ತಾರೆ, ಜೇನು ಬೇಟೆ ನಿರ್ದಿಷ್ಟ ಜನಾಂಗದವರಿಗೆ ಮೀಸಲಿಲ್ಲ ಯಾರು ಬೇಕಾದರು ಜೇನನ್ನು ಕೀಳಬಹುದಾಗಿದೆ. ಇದನ್ನು ಗಂಡು ಮಕ್ಕಳು ಹೆಚ್ಚಾಗಿ ಕೀಳುತ್ತಾರೆ ಜೊತೆಗೆ ಇದರಲ್ಲಿ ತೊಡಗಿರುತ್ತಾರೆ.

ಜೇನು ಬೇಟೆಗಳಿಗೆ ಸೂಕ್ತವಾದ ಕಾಲಮಾನಗಳು:-

ವಸಂತ ಋತುವಿನ ಆಗಮನ ಆಯಿತೆಂದರೆ ಜೇನು ಕೀಟಕ್ಕೆ ಎಲ್ಲಿಲ್ಲದ ಸಂತೋಷ ಸಂಭ್ರಮ. ಅದರಲ್ಲೂ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಜೇನು ಸಂಗ್ರಹಿಸಲು ಸೂಕ್ತವಾದ ಕಾಲಮಾನ ಉತ್ತರ ಕನ್ನಡದ ಜಿಲ್ಲೆಗಳಲ್ಲಿ ಅಂಟವಾಳದ ಮಾವು, ಸೀಗಡಿ, ನುಗ್ಗೆ ಗಿಡಗಳು ಬಿಡುವ ಹೂಗಳು ಮತ್ತು ವಿವಿಧ ಪುಷ್ಪಗಳು ಜೇನು ಕೀಟಕ್ಕೆ ಮಕರಂದ ಪೂರೈಸುವ ವನಸ್ಪತಿಗಳಾಗಿವೆ. ಜೇನು ಬೇಟೆಗೆ ಸೂಕ್ತವಾದ ಸಮಯವೆಂದರೆ ರಾತ್ರಿ ಹಾಗೂ ಫೆಬ್ರವರಿ, ಮಾರ್ಚ, ಮೇ ತಿಂಗಳುಗಳಲ್ಲಿ ಮಳೆ ಬಂದು ಹೂಗಳು ಅರಳಿ ಮಕರಂದ ಹೆಚ್ಚಾಗಿ ದೊರೆತು; ಚಟುವಟಿಕೆ ಹೆಚ್ಚಾಗಿರುತ್ತದೆ. ಆದ್ದರಿಂದ ಉತ್ತಮ ಬೇಟೆಗಳು ಮುಂಗಾರು ಮಳೆಯನ್ನು ಅವಲಂಬಿಸಿವೆ.

- ವಸಂತ ಋತುವಿನ ಆಗಮನ.
- ಪುಷ್ಪಗಳ ಅರಳುವಿಕೆ.
- ನಿಸರ್ಗದಲ್ಲಿಯ ಬದಲಾವಣೆ.
- ಜೇನು ನೊಣಗಳ ಸ್ವರ ಬದಲಾವಣೆ.
- ಜೇನಿನ ಪ್ರತ್ಯಕ್ಷ ವೀಕ್ಷಣೆ.
- ಹೂವಿಂದ ಹೂವಿಗೆ ಹಾರುವ ನೊಣದ ವೀಕ್ಷಣೆ.
- ಜೇನು ನೊಣಗಳ ಸ್ವರೂಪ ಮತ್ತು ಆಕಾರದಲ್ಲಿ ಆಗುವ ಬದಲಾವಣೆ.
- ಸೂರ್ಯಾಸ್ತ ಸಮಯದಲ್ಲಿ ಆಗಿರುವ ಬದಲಾವಣೆ.
- ಜೇನಿನ ಹಿಕ್ಕೆಯಿಂದ ಜೇನು ವಾಸ್ತವ್ಯ ಮಾಡಿದ ಪ್ರದೇಶವನ್ನು ಗುರುತಿಸಬಹುದು.

ಜೇನು ಬೇಟೆಯ ಸಿದ್ದತೆಗಳು:-

- ೨ ರಿಂದ ೬ ಜನರಿರುತ್ತಾರೆ, ಹಗ್ಗವಿರಬೇಕು, ಜೇನು ಸಂಗ್ರಹಿಸಲು ಟಿನ್‌ಡಬ್ಬಿ ಇರಬೇಕು.
- ಬಕೇಟು ಇರಬೇಕು, ಚೂರಿ, ಕತ್ತಿ ಇರಬೇಕು ಜೊತೆಗೆ ಕೊಡಲಿ ಇರಬೇಕು.
- ಬೆಂಕಿ ಪೊಟ್ಟಣ ಇರಬೇಕು.
- ಬೆಳ್ಳುಳ್ಳಿ ಮತ್ತು ಇರುಳ್ಳಿ ಇರಬೇಕು. (ಕಚ್ಚಿದಾಗ ಔಷದಿಗಾಗಿ)
- ಕೈಚೀಲ ಮತ್ತು ಮುಖ ಪರದೆ ಇರಬೇಕು.

ಜೇನು ಬೇಟೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿ ಕೈಗೊಳ್ಳುವ ರಕ್ಷಣಾಕ್ರಮಗಳು:-

- ಜೇನು ನೊಣಗಳು ಕಚ್ಚದಂತೆ ಎಚ್ಚರಿಕೆ ವಹಿಸುವುದು.

- ಜೇನು ಹುಳುಗಳು ಸಾವಿಗೀಡಾಗದಂತೆ ಕ್ರಮ ಕೈಗೊಳ್ಳುವುದು.
- ಜೇನುನೊಣ ಕಚ್ಚಿದಾಗ ಸಹಿಸಿಕೊಳ್ಳುವ ತಾಳ್ಮೆ ಇರಬೇಕು.
- ಜೇನುಗೂಡು ಕೆಳಗಿಳಿಸುವಾಗ ಅವು ಕೆಡದಂತೆ ರಕ್ಷಣಾಕ್ರಮ ವಹಿಸಬೇಕು.
- ಡಬ್ಬಿಯಲ್ಲಿ ಸಂಗ್ರಹಿಸಬೇಕು.
- ರಕ್ಷಣೆಗಾಗಿ ಮುಖಪರದೆ ಮತ್ತು ಕೈಚೀಲ ಇಟ್ಟುಕೊಳ್ಳಬೇಕು.
- ಜೇನುಗಳ ಧ್ವನಿಯ ಸಾಹಾಯದಿಂದ ಜೇನಿರುವ ಪ್ರದೇಶ ಕಂಡು ಹಿಡಿಯುವುದು.
- ರಾತ್ರಿ ಜೇನು ಬೇಟೆ ಮಾಡುವುದರಿಂದ ಆ ಸ್ಥಳದ ಸಂಪೂರ್ಣ ವಿವರಗಳನ್ನು ತಿಳಿದಿರಬೇಕು.
- ಹೆಜ್ಜೆನಾಗಲಿ ಇತರೇ ಜೇನಾಗಲಿ ಅವುಗಳಿಂದ ಜೇನು ಬೇಟೆ ಮಾಡುವುದು ಅಮವಾಸ್ಯೆ ದಿನಗಳು ಸೂಕ್ತ ಸಮಯ.
- ತುಡವೆ ಜೇನುಗಳನ್ನು ಸಾಯಂಕಾಲ ತೆಗೆಯಬೇಕು.

ಜೇನು ನೊಣಗಳ ವರ್ಗೀಕರಣ:–

೧.ಹೆಜ್ಜೇನು:

ಇವು ಎತ್ತರವಾದ ಮರದ ಕೊಂಬೆ, ಬಂಡೆ, ಕಟ್ಟಡಗಳಲ್ಲಿ ಜೇನು ಗೂಡು ಕಟ್ಟುತ್ತವೆ. ಎರಿಯ ಮಧ್ಯದ ಮತ್ತು ಕೆಳಭಾಗದಲ್ಲಿ ಮೊಟ್ಟೆಗಳನ್ನಿಟ್ಟು ಮರಿ ಮಾಡುವ ಪರಾಗವನ್ನು ಸಂಗ್ರಹಿಸಲು ಉಪಯೋಗಿಸುತ್ತವೆ. ಈ ನೊಣಗಳು ತುಂಬಾ ಅಪಾಯಕಾರಿ ಆಗಿರುತ್ತವೆ.

೨. ತೊಡುವೆ ಜೇನು:–

ತೊಡುವೆ ಜೇನನ್ನು ಸಾಕುಜೇನು, ಮಡಕೆಜೇನು, ಹತ್ತಜೇನು, ಎಂದು ಕರೆಯಲ್ಪಡುತ್ತವೆ ಇವು ಮರದ ಪೊಟರೆ, ಗೆದ್ದಲು, ಹುತ್ತ, ಕಲ್ಲು ಕಟ್ಟಡಟ ಮನೆಗಳಲ್ಲಿ ವಾಸಿಸುತ್ತವೆ. ಇದರಿಂದ ಸಂಗ್ರಹಿತ ಜೇನು ತುಂಬಾ ಉಪಯುಕ್ತ ಆದದ್ದಾಗಿದೆ.

೩. ಕೋಲ್ಜೇನು:–

ಗಾತ್ರದಲ್ಲಿ ಚಿಕ್ಕದಾಗಿದ್ದು ಮರಗಿಡ, ಪೊದರೆ, ರೆಂಬೆ ಕೊಂಬೆಗಳಲ್ಲಿ ನೇತಾಡುತ್ತಿರುತ್ತ ಒಂದೇ ಎರಿಯನ್ನು (ಗುಂಚಲು) ಕಟ್ಟಿರುತ್ತವೆ.

೪.ಮುಂಜಟಿ ಕುಟುಂಬ (ನಸರಿ):–

ಅತ್ಯಂತ ಚಿಕ್ಕ ಜೇನಾಗಿದ್ದು ಎರಿಯನ್ನು ಕಟ್ಟುವದಿಲ್ಲ. ಇವು ಮಣ್ಣು ಮತ್ತು ಅಂಟಿನಿಂದ ಗೂಡನ್ನು ಕಟ್ಟುತ್ತವೆ. ಇವು ಅತೀ ಚಿಕ್ಕದಾದ ಹೂಗಳಿಂದ ಮತ್ತು ಕೊಳವೆ ಆಕಾರದ ಹೂಗಳಿಂದಲೂ ಫುಷ್ಪರಸವನ್ನು ತಂದು ಜೇನುತುಪ್ಪವನ್ನು ತಯಾರಿಸುತ್ತವೆ.

ಸಿದ್ಧನು ಮಲೆನಾಡಿನ ಜನರಿಗೆಲ್ಲ ಹೆಸರುವಾಸಿಯಾಗಿದ್ದನು ಈತ ಜೇನು ಕೀಳೊದ್ರಲ್ಲಿ ನಿಸ್ಸಿಮನಾಗಿದ್ದ ಸಿಬ್ಬಲ್‌ಜೇನು, ಕೋಲ್‌ಜೇನು, ತುಡುಜೇನು, ಹೆಜ್ಜೇನು, ಕೀಳುತ್ತಿದ್ದ ಅದರಲ್ಲೂ ಹೆಜ್ಜೇನು ಕೀಳುವದು ಗೊತ್ತಿಲ್ಲದೆ ಈ ಸಾಹಾಸಕ್ಕೆ ಕೈಹಾಕಿದರೇ ಸಾವು ಗ್ಯಾರಂಟಿ ಅವು ಬೆನ್ನಟ್ಟಿ ಬಂದರೇ ಕಿಲೋಮಿಟರ್ ಓಡಿದರೂ ಬಿಡೋದಿಲ್ಲ ಮಲೆನಾಡಲ್ಲಿ ಇಂಥದ್ದೇನಾದ್ರು ಅವಘಡ ನಡೆದರೇ ಕಂಬಳಿ ಮುಚ್ಚಿಕೊಂಡು ಜೇನು ಹುಳುಗಳಿಂದ ರಕ್ಷಣೆ ಪಡೆಯುತ್ತಾರೆ. ಇಲ್ಲವೆ ನೀರಲ್ಲಿ ಹಾರಿ ರಕ್ಷಿಸಿಕೊಳ್ಳಬೇಕು ಸಿದ್ದನು ವೆಂಕ್ಟೇಗೌಡರ ಮನೆ ಹಾಡ್ಯದಲ್ಲಿನ ಮರದ ೩೦-೪೦ ಜೇನು ಕೊಯ್ದು ತುಂಬಿಸಿದನು. ೧೦ ಮಣ ದೆಯ್ಯದ್ ಮರ ಆಗಿದ್ರುನು ಹೆದರದೇ ಇಷ್ಟೊಂದು ಜೇನ್ ಕೊಯ್ದದ್ದನ್ನು ನೋಡಿ ವೆಂಕ್ಟೇಗೌಡನೆ ಹೌಹಾರಿ ತನ್ನಲ್ಲಿದ್ದ ಜೇನನ್ನು ಜನರಿಗೆ ಬಂದು ಬಳಗದವರಿಗೆ ಹಂಚುತ್ತಿದ್ದನು.[೩] ಒಟ್ಟಾರೆಯಾಗಿ ಮಲೆನಾಡಿನ ಹಸಿರಿನ ಮದ್ಯೆಸಿಗುವ ಪದಾರ್ಥಗಳನ್ನು ಮಲೆನಾಡಿನ ಜನರು ಸವಿಯುತ್ತಿದ್ದದ್ದು ಸಿದ್ದನಚಿತವರ ಸಹಕಾರದೊಂದಿಗೆ ಸಿದ್ದನಂತವರು ಮಲೆನಾಡಿನಲ್ಲಿ ಇಲ್ಲ ಅಂದ್ರೆ ಮಲೆನಾಡಿನ ಸಮಸ್ಯೆಗಳಂತು ಆಕಾಶದೆತ್ತರ ಬೆಳೆದುಬಿಡುತ್ತಿತ್ತು. ಸಿದ್ದನ ಸಾಹಸಗಳನ್ನು ಗಮನಿಸುತ್ತಾಹೊದಂತೆ ಸಿದ್ದನು ಸಾಮಾನ್ಯರಲ್ಲೇ ಅಸಾಮಾನ್ಯ ಮನುಷ್ಯನಾಗಿ, ಜೀತದಾಳುವಾಗಿ, ಬೇಟೆಗಾರನಾಗಿ, ಮಲೆನಾಡಿನವರ ಮನೆಮಗನಾಗಿ, ಸಂಸಾರಿಯಾಗಿ, ಮಲೆನಾಡಿನ ಸಮಸ್ಯೆಗಳ ನಿವಾರಕನಾಗಿ, ಬೇಟೆಯ ಹಿಂಬಾಲಕನಾಗಿ, ಸರ್ಕಾರದ ಸವಾಲನ್ನು ಗೆದ್ದು ತನ್ನ ಸಾಹಸವನ್ನು ಪ್ರದರ್ಶಿಸುತ್ತಿದ್ದನು.

ಸಿದ್ಧನು ವಂಶಪಾರಂಪರಿಕವಾಗಿ ತನ್ನ ತಂದೆಯಿಂದ ಬಳುವಳಿಯಾಗಿ ಮಾದಾರಿಕೆ ಕೆಲಸವನ್ನು ಪಡೆದುಕೊಂಡಿದ್ದ ಆದರೇ ಬ್ರಾಹ್ಮಣರ ಮಾದಾರಿಕೆ ಮಾಡಲಿಕ್ಕೆ ಇಷ್ಟ ಪಡುತ್ತಿರಲಿಲ್ಲ, ಶೂದ್ರರ ಮಾದಾರಿಕೆಯನ್ನು ಇಷ್ಟಪಟ್ಟು ಮಾಡುತ್ತಿದ್ದನು. ಈ ಮೇಲಿನ ವಾಕ್ಯವನ್ನು ಗಮನಿಸಿದಾಗ ಒಬ್ಬ ಸಾಮಾನ್ಯ ಮನುಷ್ಯ ತಾನು ಮಾಡುವ ಕರ್ತವ್ಯದ ಮೇಲು ಸಹ ಭಿನ್ನಾಭಿಪ್ರಾಯಗಳನ್ನು ತೋರಿಸುತ್ತಿರುವುದು ಕಂಡುಬರುತ್ತದೆ. ಮನುಷ್ಯನು ಕನಿಷ್ಠ ಅವಶ್ಯಕತೆಯಾದ ಊಟ, ಬಟ್ಟೆ ಇವುಗಳ ಸಂಪಾದನೆಗಾಗಿ ಹಗಲು ಇರುಳೆನ್ನದೆ ಸದಾಕಾಲ ದುಡಿಯುತ್ತಾನೆ. ಬ್ರಾಹ್ಮಣ ಶೂದ್ರರನ್ನು ಗಮನಿಸಿದಾಗ ಬ್ರಾಹ್ಮಣರು ಮೇಲು ವರ್ಗಕ್ಕೆ ಸೇರಿದ ಶ್ರೀಮಂತರು ಆದ್ರೆ ಶೂದ್ರರು ಕೆಳವರ್ಗದವರು ಎಂಬುದು ನಾವು ನಂಬಿರುವ ಸತ್ಯ ಸಂಗತಿ ಅದರಲ್ಲೂ ಸಿದ್ಧನು ಶ್ರೀಮಂತರ ಮಾದಾರಿಕೆಯನ್ನು ಅಲ್ಲಗಳೆಯುತ್ತಿದ್ದನು. ಅದೇ ಶೂದ್ರರ ಮಾದಾರಿಕೆಯನ್ನು ಇಷ್ಟಪಡುತ್ತಿದ್ದನು. ಇಲ್ಲಿ ಒಬ್ಬ

ಮನುಷ್ಯನನ್ನು ಜನಾಂಗೀಯ ಧೋರಣೆಯಿಂದ ನಿರೀಕ್ಷಿಸದೆ, ತನ್ನ ಅವಶ್ಯಕತೆಯನ್ನು ಪೂರೈಸುವತ್ತ ಸಾಗುತ್ತಿರುವುದನ್ನು ಆಯ್ದುಕೊಳ್ಳಲಾಗುತ್ತಿದೆ.

ಮಾದಾರಿಕೆ ಸಂಪ್ರದಾಯವು ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವುದಾಗಿದೆ. ಊರಲ್ಲಿ ಯಾರಾದ್ರು ಸತ್ರೆ ಇಂತವರು ಸತ್ತಿದ್ದಾರೆ "ನಿನ್ನ ಹಕ್ಕಲ್ಲಿ ೩ ಮೇಟ್ಟಿನ ಜಾಗಕೊಡು ಮಾದಾರ ಎಂದು ಕೇಳಿದಾಗ ಮಾದಾರನು ಇವತ್ತಿಗೆ ಕೊಡ್ತಿನಿ ಆದ್ರೆ ನಾಳೆಗೆ ಕೆಳಬ್ಯಾಡಿ" ಅಂತ ಹೇಳಬೇಕಿತ್ತು ಹಾಗೇನೆ ಕೊಡಲಿ ಕಾವನ್ನು ಕಳಚಿ ಹಿಂದೆ-ಮುಂದೆಮಾಡಿ ಸೇರಿಸಿ ಕೊಡಲಿಯನ್ನು ಸೂಡಿನ ಮೇಲೆ ಆಚೆ-ಈಚೆ ಎತ್ತಿಹಾಕಿಸುತ್ತಾರೆ.[೬] ಒಬ್ಬ ಸಾಮಾನ್ಯ ವ್ಯಕ್ತಿ ಅದರಲ್ಲೂ ಕೀಳು ಜಾತಿಯಲ್ಲಿ ಜನಿಸಿದವನು ಮೇಲು ಜಾತಿ (ಬ್ರಾಹ್ಮಣ)ರ ಕೆಲಸ ಕಾರ್ಯಗಳನ್ನು ಮಾಡಲು ಹಿಂಜರಿಯುವುದನ್ನು ಅವಲೋಕಿಸಿದಾಗ ಮನುಷ್ಯ-ಮನುಷ್ಯನ ನಡುವೆ ಇರುವಂತಹ ಭಿನ್ನಾಭಿಪ್ರಾಯಗಳನ್ನು ಹಾಗೂ ಜಾತಿ ಜನಾಂಗದವರಲ್ಲಿ ಕಂಡುಬರುವ ಸಾಂಪ್ರದಾಯಿಕ ಕರ್ತವ್ಯಗಳ ಪಾಲನೆ ಪೋಷಣೆಯನ್ನು ಕೈಗೊಳ್ಳುವದರಲ್ಲೂ ಕೂಡಾ ಭಿನ್ನಾಭಿಪ್ರಾಯಗಳು ಕಂಡುಬರುವುದನ್ನು ಕಾಣಬಹುದಾಗಿದೆ.

ಮಾವಿನ ಮಿಡಿಕೊಯ್ದ ಸಿದ್ಧ :-

ಮಲೆನಾಡಿನ ದಟ್ಟ ಅರಣ್ಯದಲ್ಲಿ ಆಕಾಶದೆತ್ತರ ತಲೆಬಾಗಿ ನಿಂತಿರುವ ಮರಗಳ ಸಾಲುಗಳಲ್ಲಿ ಮಾವಿನ ಮಿಡಿ ಕುಯ್ಯೊದಂದ್ರೆ ಸುಲಭದ ಕೆಲಸವಲ್ಲ, ಅದರಲ್ಲೂ ಜನಸಾಮಾನ್ಯರಿಗಂತು ಸಾಧ್ಯವಿಲ್ಲದ ಮಾತು ಇಂತಹ ಕೆಲಸಕ್ಕೆ ಸಿದ್ದನಂತ ನಿಪೂಣರು ಇದ್ರೆ ಮಾತ್ರ ಸಾಧ್ಯ. ಮಲೆನಾಡಿನ ಬೆಣ್ಣೆಗುಡ್ಡೆಯಲ್ಲಿ ಮಿಡಿ ಹೆಸರು ವಾಸಿಯಾಗಿತ್ತು, ಅರಶ್ನನಹಳ್ಳಿ ಲಕ್ಷ್ಮಮ್ಮ ಬೆಣ್ಣೆಗುಡ್ಡದವಳು ತನ್ನ ಗಂಡನ ಮನೆ ಸೇರಿ ೨೦ ವರ್ಷ ಕಳೆದರು ತವರು ಮನೆಯಲ್ಲಿ ಮಿಡಿತಿಂತಿದ್ದನ್ನು ಮರೆತಿರಲಿಲ್ಲ, ಆ ವರ್ಷ ದೇವರ ದಯದಿಂದಲೋ ಏನೋ ಮಿಡಿಕೊಯ್ಯೋದ್ ಅಂತ ಮಾತಾಯ್ತು. ಆದ್ರೆ ಮಿಡಿಕುಯ್ಯೋಕ್ಕೆ ಒಬ್ಬನನ್ನು ಹುಡುಕುತ್ತಿರುವಾಗ ಸಿದ್ದನ ಹೆಸರನ್ ಕೇಳಿ ಕರೆತರಲು ನಿಶ್ಚಯಿಸಿದ್ರು, ಅದ್ರಲ್ಲು ಸಿದ್ಧ ಮಲೆನಾಡಿನವರ ಮನೆ ಮಗನಂತೆ ಇರುತಿದ್ದನು. ಬರೋಲ್ಲ ಅನ್ನೊ ಮಾತೆಲ್ಲಿ ಆದ್ರೆ ಸಿದ್ದ ಹೇಳಿದ್ದು ಪುರುಸೊತ್ತಿಲ್ಲ. "ಅವರ ಮನೇಲಿ ವಾಟೆಹುಳಿ ಕೊಯ್ಬೇಕು, ಜೇನು ಕುಯ್ಯೊಕೆ ಬರ್ತೀನಿ ಅಂತ ಹೇಳಿನಿ ಅದಕ್ಕೆ ನನಗೆ ಪುಕಳಿ ತುರಿಸೋಕೂ ಪುರುಸೊತ್ತಿಲ್ಲ ಬೇರೆಯಾರಾದ್ರೂ ನೋಡಿ" ಅಂತ ಹೇಳಿ ಕೊನೆಗೆ ಅಶ್ನಳ್ಳಿ ಲಕ್ಷ್ಮಮ್ಮನ ಬಯಕೆ ತಿರೀಸಲ್ಲಿಕ್ಕಾಗಿ ಮಾವಿನ ಮಿಡಿ ಕೊಯ್ಯೊಕೆ ಒಪ್ಪಿಕೊಂಡನು. ಈ ಮೇಲ್ಕಾಣಿಸಿದ ಚಿತ್ರಣವನ್ನು ಗಮನಿಸಿದಾಗ "ಒಂದು ಮನೆಯಲ್ಲಿ ಜಗಳ ಆಗ್ತಿದ್ರೆ ಪಕ್ಕದ ಮನೆರೂಬಂದು ಸಮಾಧಾನಿಸಿದಂತೆ" ಸಿದ್ಧನನ್ನು ಮಿಡಿಕೊಯ್ಯೊಕೆ? ಆ ಊರಿನ ಜನ ಒಪ್ಪಿಸಿದ್ದಾಯ್ತು. ಇಲ್ಲಿ ಸಿದ್ದ ತನ್ನ ತಂತ್ರಗಾರಿಕೆಯ ಮೂಖೇನ ತನ್ನಲ್ಲಿರುವ ಸಾಹಸದ

ಲೀಲೆಗಳನ್ನು ಪ್ರದರ್ಶಿಸುತ್ತ ಪ್ರದೇಶದಿಂದ ಪ್ರದೇಶಕ್ಕೆ ಊರಿನಿಂದ ಊರಿಗೆ ತನ್ನ ಹೆಸರು ಕಂಡು ಕೇಳಿದವರಿಲ್ಲ ಎಂಬಂತೆ ಹೆಸರುವಾಸಿಯಾಗಿದ್ದನು.

ಸಿದ್ಧ ಮಿಡಿಕೊಯ್ಯೊಕೆ ಬೆಣ್ಣೆಗುಡ್ಡೆಯ ಅಗಸ್ತೇಶ್ವರ ದೇವಸ್ಥಾನ ಭಟ್ಟರ ಮನೆ ಹಿತ್ತಲಲ್ಲಿದ್ದ ಮಾವಿನ ಮರದ ಬುಡಕ್ಕೆ ಹೋಗಿ ನೋಡಿದ್ರೆ ಊರಿಗೆ ಊರೇ ಸೇರಿತ್ತು, ಜನರನ್ನು ಕಂಡ ಸಿದ್ದ ಗಲಿಬಿಲಿಗೊಂಡು ಲಕ್ಷ್ಮಮ್ಮನ ಕಿರಿತಮ್ಮನತ್ರ ಒಂದು ಚೊಂಬು ಹೆಂಡ ಕುಡಿದು "ಹೆಂಡ ವಯನಾಗದೆ ಕಂಡ್ರೊ ಅಂತ ಉಚ್ಚೆ ಹುಯ್ಯಕ್ಕೆ ಹೋಗಿ ಬಂದು ಎಲೆ ಅಡಿಕೆ ಹಾಕ್ತ ಕೊನೆನೇಣು ಸೊಂಟಕ್ ಸುತ್ತಿಕೊಂಡು ಕತ್ತಿ, ಗೋಣಿಗಳನ್ನು ಸೊಂಟಕ್ಕೆ ನೇತು ಹಾಕಿಕೊಂಡು ಮರಹತ್ತಿದನು. ಮಾವಿನ ಎಳೆಯ ಕಾಯಿಗಳನ್ನು ಕೈಯಿಂದಲೇ ತೊಟ್ಟು ಸಹಿತ ಕೊಯ್ಯಬೇಕು, ಅದನ್ನು ನೆಲಕ್ಕೆ ಬೀಳಿಸುವಂತಿಲ್ಲ. ಯಾಕೆಂದ್ರೆ ಮಿಡಿಗೆ ಒಂಚೂರು ಪೆಟ್ಟಾಗಬಾರದು, ಮುರಿದ ಮಿಡಿಗಳನ್ನು ಮರದ ಮೇಲಿಂದ ಹಗ್ಗದ ಸಹಾಯದಿಂದ ಕೆಳಗೆ ಇಳಿಸಿದನು. ಸಿದ್ದ ಮೂಟೆಗಟ್ಟಲೆ ಮಿಡಿಯನ್ನು ಕೆಳಗೆ ಇಳಿಸಿದನು, ಸರಿಯಾಗಿ ಇಳಿ ಹೊತ್ತಿನಲ್ಲೆ ಮರದಿಂದ ಇಳಿದನು. ಮಾವಿನ ಮಿಡಿಯನ್ನು ೩ ಭಾಗಮಾಡಿ ತನಗೊಂದು, ಊರವರಿಗೆ ಎರಡು ಪಾಲು ಎಂದೂ ವಿಭಜಿಸಿ ಹಚ್ಚಿಕೊಂಡರು; ಸಿದ್ದ ಖ್ಯಾತಿ ಬೆಣ್ಣೆಗುಡ್ಡೆ ಮಿಡಿಯ ಪರಿಮಳದಂತೆ ಊರೆಲ್ಲ ಹಬ್ಬಿತು.[೫]

ಸಿದ್ಧನ ಸಾಹಸಲೀಲೆಗಳನ್ನು ಕೆದಕುತ್ತಾಹೊದಂತೆ ಅವನ ಇತಿಹಾಸವೆ ಸೃಷ್ಟಿಯಾಗುತ್ತದೆ. ಸಿದ್ಧನು "ಕಾಡು ಶಿಕಾರಿ, ಉಪ್ಪಿನಕಾಯಿ ಮಿಡಿಕೊಯ್ಯೋದು, ಜೇನುಕುಯ್ಯೋದು, ದಿರ್ಕನಹುಳಿ ದೆರ್‍ರೊದು, ವಾಟೇಹುಳಿ ದೆರ್‍ರೋದು, ಸೀಗೆ ಕೆಲಸ" ಎಂಬತೆ ತನ್ನ ಕೈಚಳಕವನ್ನು ಊರಿಂದ ಊರಿಗೆ ತೊರಿಸುತ್ತ ಹೆಸರುವಾಸಿ ಆಗುತ್ತಿದ್ದದು ಕಂಡುಬರುತ್ತದೆ. ಮಲೆನಾಡ ಪ್ರಕೃತಿಯ ಮಡಿಲಲ್ಲಿ ಸಿಗುವ ಇಂತಹ ಬೇಟೆಗಳು ಸಿದ್ದನನ್ನು ಮುಗಿಲು ಮುಟ್ಟುವಂತೆ ಮಾಡಿವೆ. ಸಿದ್ಧನ ಸಾಹಸಲೀಲೆಗಳನ್ನು ನೆನಪಿಗೆ ತಂದುಕೊಂಡರೆ ಸಮಾಜದಲ್ಲಿ ಬದುಕುತ್ತಿರುವ ಮಧ್ಯಮ ವರ್ಗದ ಜನರ ಬದುಕಿನ ಬವಣೆಯನ್ನು ಎತ್ತಿತೋರಿಸುವಂತೆ ಬಾಸವಾಗುತ್ತದೆ. ಮಧ್ಯಮ ವರ್ಗದ ಜನರು "ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ" ಬದುಕಿನ ಚಿತ್ರಣವನ್ನು ಎತ್ತಿತೋರಿಸಿದಂತಿದೆ. ಮನುಷ್ಯ ತನ್ನ ಆಸೆ ಅಕಾಂಕ್ಷೆಯ ಈಡೇರಿಕೆಗಾಗಿ ಬೇರೊಬ್ಬರ ಜೀತದ ಬದುಕಿಗೆ ಒಳಗಾಗುವ ಸಂದರ್ಭಗೂ ಓದುಗರ ಮನಮುಟ್ಟುವಂತಿವೆ. ಮಲೆನಾಡಿನ ಚಿತ್ರಣವು ಕಣ್ಣಮುಂದೆ ಬಂದರೆ ಮೊದಲು ಬಸವಾಗುವುದು ಹಚ್ಚಹಸಿರಿನ ಕಾಫಿತೋಟದಲ್ಲಿ ಸಾಲುಗಳು ಬೆಟ್ಟಗುಡ್ಡವನ್ನು ಆವರಿಸಿಕೊಂಡಿರುತ್ತವೆ. ಕಣ್ ಬಿಟ್ಟು ಎಲ್ಲಿ ನೋಡಿದರು ಕಾಣುವದೇ ಹಸಿರು ಗದ್ದೆ, ಮುಗಿಲು ಮುಟ್ಟುತ್ತಿರುವ ಮರಗಿಡದ ಸಾಲುಗಳು, ಇಂಥ ಮಲೆನಾಡ ಪ್ರಕೃತಿಯಲ್ಲಿ ಸಿದ್ದನು ಮಲೆನಾಡಿಗರ ಮನಗೆದ್ದವನಾಗಿದ್ದನು. ಸಿದ್ದ ನೋಡುವದಕ್ಕೆ ಗಿಡ್ಡನಾಗಿದ್ದರೂ ಮಾಡುವ ಕೆಲಸವು ಅಚ್ಚುಕಟ್ಟಾಗಿರುತ್ತಿತ್ತು.

ಮಂಗನ ಬ್ಯಾಟೆ:-

ಸಿದ್ಧ ಬಚ್ಚನ್ ಮಗಳು ಸೀತುನ ಮದುವೆ ಮಾಡ್‌ಕೊಳ್ಳಕೆ ಬಚ್ಚನ್ ಮಾತನ್ ಕೇಳಿ ಮಂಗನ್ ಬ್ಯಾಟೆ ಮಾಡಕ್ಕೆ ಒಪ್ಪಿಕೊಂಡು ಆಕಾಶದಂತಿರುವ ಮರವನ್ನು ಸಿದ್ದ ಉಡಾ ಹತ್ತಿದಂಗೆ ಹತ್ತೇಬಿಟ್ಟನು. ಇಲ್ಲಿ ಮನುಷ್ಯ ತನ್ನ ಅವಶ್ಯಕತೆಯ ಪೂರೈಕೆಗಾಗಿ ತನ್ನಲ್ಲಿರುವ ತಂತ್ರವನ್ನು ಉಪಯೋಗಿಸಿಯಾದರು ಅದನ್ನು ಪಡೆಯಲು ಹರಸಾಹಸ ಪಡುವುದನ್ನು ತಿಳಿಯಬಹುದಾಗಿದೆ. ದುಡ್ಡು ಕೊಟ್ಟರೆ ಬೇಕಾದ್ದ್ ಸಿಗತೈತಿ ಈ ಜಗದಲಿ ನೋಡಾ। ಎಂಬ ಜನಪದರ ಹಾಡಿನಂತೆ ಶ್ರೀಮಂತ ವರ್ಗದವರು ಕೆಳವರ್ಗದವರನ್ನು ತುಳಿತಕ್ಕೊಳಪಡಿಸಿ ತಮಗೆ ಬೇಕಾದಂತ ವಸ್ತುವನ್ನು ಅವರಿಂದ ಪಡೆಯುತ್ತಿರುವ ಪ್ರತಿಬಿಂಬವು ಗೋಚರಿಸುತ್ತಿರುವದನ್ನು ಕಾಣಬಹುದಾಗಿದೆ. ಸಿದ್ದ ಮರದ ಮ್ಯಾಲಿಂದ ಎಲ್ಲರೂ ನಿಗಾದಾಗ ಇರಿ ಅಂದರೇ ಅವನಿಗೆ ಕೆಳಸ್ತಿರಲಿಲ್ಲ ಅಷ್ಟು ಎತ್ತರವಾದ ಮರವನ್ನು ಹತ್ತಿ ತನ್ನಲ್ಲಿರುವ ಸಾಹಸವನ್ನು ತೋರ್ಪಡಿಸಿದನು. ಸಿದ್ದ ಮರ ಹತ್ತುತ್ತ ಹತ್ತಿರಕ್ಕೆ ಬಂದಂತೆ ಮಂಗಗಳು ಹಲಸಿನಕಾಯಿ ಬಿದ್ದಂಗ್ ಮರದಿಂದ ದ್ವಪ್ ದ್ವಪ್ ಅಂತ ಮಂಗಗಳು ಕೆಳಗೆ ಬೀಳುತಿದ್ದವು. ಕೆಳಗಿದ್ದವರೆಲ್ಲ ಅಲ್‌ಹೊತ್ ಇಲ್‌ಹೋತ್ ಹೊಡಿ ಬಡಿ ಅಂತಿದ್ರು ಕೊನೆಗೆ ಹೋರಿ ಮಂಗವು ಕೆಳಗೆ ಬಿತ್ತು. ಸಿದ್ದನನ್ನು ತೋರ್ಪಡಿಕೆಗಾಗಿ ಮಾಡುತ್ತಿರುವ ಕೆಲಸಕಾರ್ಯವಲ್ಲ ತನ್ನ ದೈನಂದಿನ ಜೀವನ ಸುಧಾರಣೆಗಾಗಿ, ಹೊಟ್ಟೆಪಾಡಿಗಾಗಿ ಮಾಡಿರುವ ಕಾರ್ಯವೆಂದು ತಿಳಿಯಹುದಾಗಿದೆ. ಇದರಂತೆಯೆ ಸರ್ಕಸ್ ಮಾಡುವವರು ಸಹ ತಮ್ಮಲ್ಲಿರುವ ತಂತ್ರಗಳನ್ನು ಉಪಯೋಗಿಸಿಕೊಂಡು ತಮಗೆ ಗೋತ್ತಿರುವ ಪ್ರದರ್ಶನವನ್ನ ಜನರ ಗುಂಪಿನಲ್ಲಿ ಮಾಡಿತೋರಿಸುವುದರಿಂದ ಸ್ವಲ್ಪ ಹಣದೊರೆತು ಅವರು ಹೊಟ್ಟೆಪಾಡು ಸಾಗಿಸುತ್ತಿರುತ್ತಾರೆ. ಆದರೆ ಸಿದ್ದ ಹಾಗಲ್ಲ ಸಿದ್ದ ಜನರ ಕೆಲಸಮಾಡಿ ಜನರಿಂದ ಹೆಸರುವಾಸಿ ಆಗಿರುವದು ತಿಳಿದು ಬರುತ್ತದೆ. ಸಿದ್ದನು ಮಂಗಗಳನ್ನು ಹೊಡೆದು ರೈತರ ಹಾವಳಿಯನ್ನು ನಿಯಂತ್ರಿಸಿದ್ದರಿಂದ ಊರಿನ ಜನ ಗೌಡ್ರು ವಡೇರು ಗೋವಿಂದ ಹೋಗಳಿ ಏನಾರ್ ಆಗ್ಲಿ ಬಚ್ಚ ಒಳ್ಳೆ ಅಳಿಯಾನ್ ಹುಡುಕಿದ್ದಿ ನಿನ್ ಎಷ್ಟು ನೆನಸ್ಕೊಂಡ್ರು ಸಾಲದು ಅಂತ ಬಚ್ಚಾನ್ ಗೌಡ್ರು ಹೋಗಳಿದ್ರು ಅಳಿಯನಿಂದ ಹೋಗಳಿಕೆಗೆ ಒಳಗಾದ ಬಚ್ಚ ಸಿದ್ದನನ್ ತನ್ನ ಮಗಳು ಸೀತುನ್ ಕೊಟ್ಟು ಮದುವೆ ಮಾಡಿದನು. ಈ ಮದುವೆ ಸಿದ್ದನ್ ಅಕ್ಕ ನಿಂಗಿಯ ಮಾತಿನಂತೆ ನಡೆದು ರಾತ್ರಿ ಮಂಗನ ತುಂಡನ್ನು ಮತ್ತು ಹಂದಿ ಮಾಂಸವನ್ನು ಸೇವಿಸಿದರು; ಅಂತು ಸಿದ್ದ ಶುಂಠಿಕುಬ್ರಿಯ ಮನೆ ಅಳಿಯನಾಗಿ ಶಡ್ಲುಗುಡ್ಡೆಗೆ ಬಳುವಳಿಯಾದನು.[೬]

ಕುವೆಂಪು ಅವರು ಮಲೆನಾಡಿನ ಸುಂದರ ನಿಸರ್ಗದ ಮರೆಯಲ್ಲಿ ನಡೆಯುವ ಕಾರ್ಯ, ಕಾಠಿಣ್ಯ, ಪರಸ್ಪರ ಹಿಂಸೆ, ಈರ್ಷ್ಯೆ, ಅಸೂಯೆ, ಅಸಭ್ಯತೆ, ಮೌಢ್ಯತೆ ಎಲ್ಲವು ಮನುಷ್ಯ ಸಂಸ್ಕೃತಿಯ

ಕೆಟ್ಟ ಮುಖವನ್ನು ಪರಿಚಯಿಸುತ್ತವೆ. ಬಲಿಷ್ಠ ಪ್ರಾಣಿ ಬಲಹೀನ ಪ್ರಾಣಿಗಳನ್ನು ಬೇಟೆಯಾಡುವ, ಅವಲಂಬಿಸುವ, ಒಂದನ್ನೊಂದುತಿಂದುಂಡು ಬದುಕುವ ಚಿತ್ರಗಳು ಕುವೆಂಪುರ ಕೃತಿಗಳಲ್ಲಿ ಕಾಣಬಹುದಾಗಿದೆ. ಹೀಗೆ ಧೈರ್ಯ ಸಾಹಸಗಳೊಂದಿಗೆ ಅಸೂಯೆ ಬುದ್ದಿ, ಹಟ, ಶೌರ್ಯ ಕಾಠಿಣ್ಯ ಅನ್ನ ಪಾನಾದಿಗಳ ಬಗೆಯಲ್ಲಿಯೇ ತ್ರಿವ್ರವಾದ ಆಸಕ್ತಿಗಳಂಥ ಪಾಶವೀ ಪ್ರವೃತ್ತಿಗಳು ಮಲೆನಾಡ ಕಾಡುಗಳಲ್ಲಿಯ ಹಿಂಸೆ ಪಶುಗಳೊಡನೆಯೇ ಸಹವಾಸ ಸಂಘರ್ಷಗಳ ಫಲವಾಗಿಯೇ ಅಲ್ಲಿಯ ಜನಗಳ ಸ್ವಭಾವತ್ವದಲ್ಲಿಯ ಅಂಶವಾಗಿ ಬೆಳೆದಿರುತ್ತದೆ. ಕಾನೂರು ಹೆಗ್ಗಡಿತಿಯಲ್ಲಿ ಪುಟ್ಟಣ್ಣ ಹೆಗ್ಗಾಡಿನಲ್ಲಿ ಬೇಟೆಯಾಡುವ ಸಂದರ್ಭವನ್ನು ವಿಕ್ಷಿಸಿದಾಗ ಹೆಗ್ಗಾಡಿನಲ್ಲಿ ಅವನ ನಾಯಿಗಳು ಹಂದಿಯನ್ನು ಅಟ್ಟಿಸಿಕೊಂಡು ಬಂದು ಪುಟ್ಟಣ್ಣನ ಗುಂಡಿಗೆ ಬಲಿಯಾಗುವ ದೃಶ್ಯ ಅಥವಾ ಬೇಟೆಯಲ್ಲಿ ಮೊಲ ಸಿಗದ ಕೋಪಕ್ಕೆ ಸಾಕು ಪ್ರಾಣಿಯಾದ ಮೇಕೆ ಮರಿಯೊಂದನ್ನು ಬೇಟೆ ನಾಯಿಗಳು ಕೊಂದ ಸನ್ನಿವೇಶ, ಕಪ್ಪೆ ಕೊಂದು ಅದನ್ನು ಕೊಲಿನ ತುದಿಗೆ ಕಟ್ಟಿ ಇದರ ಮೂಖೇನ ಏಡಿಗಳ ಕೈಕಾಲುಗಳನ್ನು ಗಂಗ ಮುರಿಯುವ ದೃಶ್ಯ, ಇವು ಪ್ರಾಣಿ ಪ್ರಂಪಂಚದ ಮೇಲೆ ಮನುಷ್ಯ ಎಸಗಿರುವ ದೃಶ್ಯವನ್ನು ವ್ಯಕ್ತಪಡಿಸುತ್ತಿದೆ.

ಮಲೆನಾಡಿನಲ್ಲಿ ಮದುವೆ ಸಂಭ್ರುಗಳು ಅದರಲ್ಲೂ ಸಿದ್ದನಂತೋರ ಮನೆಯಲ್ಲಿ ಮಾಂಸಾಹಾರಿ ಊಟದ ಸಂಬ್ರಮ ಹೇಳತೀರದು ಸೀತು ಪಡೆಯಲ್ಲಿಕ್ಕಾಗಿ ಅವತ್ತು ಸಿದ್ಧ ಮಂಗಗಳನ್ನು ಬೇರೆ ಬೇಟೆಮಾಡಿದ್ದ ಹಾಗೂ ಹಂದಿ ಮಾಂಸದ ತುಂಡುಗಳನ್ನು ಸವಿಯುವುದರ ಜೊತೆಗೆ ಕಳ್ಳು ಇದ್ದೆಯಿರ್ತಿತ್ತು. ಮದುವೆ ಸಮಾರಂಬಗಳಲ್ಲಿ ಅದರಲ್ಲೂ ಕೆಳವರ್ಗದ ಜನರ ಮದುವೆಯಲಂತು ಕಳ್ಳು ಇರಲೇಬೇಕು ಒಂದುವೇಳೆ ಕಳ್ಳು ಇರಲಿಲ್ಲ ಅಂದರೆ ಆ ಮದುವೆನೆ ನಡೆಯೊದಿಲ್ಲ ಕಳ್ಳು ಇಲ್ಲದ ಮದುವೇ ಕೆಳವರ್ಗದ ಜನರಲ್ಲಿ ನಡೆಯೋದೆ ಇಲ್ಲವೆನ್ನಬಹುದಾಗಿದೆ. ಇಂತಹ ಸಂಗತಿಗಳನ್ನು ಗಮನಿಸುತ್ತಿದ್ದಂತೆ ಬೆನಕನಳ್ಳಿ ಜಿ.ನಾಯಕರ 'ವಲಸೆ' ಕಾದಂಬರಿ ನೆನಪಿಗೆ ಬರುತ್ತದೆ. ವಲಸೆ ಕಾದಂಬರಿಯಲ್ಲೂ ಲಂಬಾಣಿ ಜನಾಂಗವು ರಾತ್ರಿಯೆಲ್ಲ ಬೇಟೆಮಾಡಿ ತಿಂದು ಕುಡಿದು ಕುಪ್ಪಳಿಸುವ ದೃಶ್ಯಗಳನ್ನು ಕಾಣಬಹುದಾಗಿದೆ.

ಮಂಗವು ಮಲೆನಾಡಿನ ಪ್ರಥಮ ಶತ್ರು ಅದೇ ಮಂಗವು ಬಯಲು ಸೀಮೆ ಜನರಿಗೆ ದೇವರಾಗಿ ಪರಿಚಯವಾಗುತ್ತದೆ. ಮಲೆನಾಡಿನ ಪರಿಸರಕ್ಕೂ ಬಯಲು ಸೀಮೆ ಪರಿಸರಕ್ಕು ಅಜಗಜಾಂತರ ವ್ಯತ್ಯಾಸವಿರುವುದು ಕಂಡುಬರುತ್ತದೆ. ಮಂಗನ ಬೇಟೆ ಕೈಗೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ ಅದು ಕೋವಿಯೆತ್ತಿದರೆ ಸಾಕು ಕ್ಷಣಾರ್ದದಲ್ಲೆ ಕಣ್ಮುಂದಿದ್ದ ಮಂಗ ಮಾಯವಾಗಿಬಿಡುತ್ತದೆ. ಅಂತದ್ರಲ್ಲಿ ಸಿದ್ದ ಮಂಗನಬ್ಯಾಟೆ ಮಾಡೊದ್ರಲ್ಲಿ ನಿಪುಣನಾಗಿದ್ದನು.

ಬಳ್ಳಾರಿಯಲ್ಲಿ ಹೆಚ್ಚಿದ ಕಪಿಚೇಷ್ಟೆ..!

ಸ್ಥಳೀಯ ಗಾಂಧಿನಗರ ಮತ್ತು ಬಸವೇಶ್ವರ ನಗರ ಪ್ರದೇಶದಲ್ಲಿ ಕಪ್ಪು ಕೋತಿಯೊಂದು ದಾರಿಹೋಕರು ಹಾಗೂ ವಾಹನ ಸವಾರರ ಮೇಲೆ ದಾಳಿಮಾಡಿ ಗಾಯಗೊಳಿಸಿರುವ ಘಟನೆ ಶನಿವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನಡೆಯಿತು. ಸ್ಥಳೀಯ ಗಾಂಧಿ ನಗರದ ಮುಖ್ಯ ರಸ್ತೆಯಲ್ಲಿನ ಶಬರಿ ಹೊಟೇಲ್ ಬಳಿ ಬೆಳಿಗ್ಗೆ ೧೧.೩೦ಕ್ಕೇ ದಿಢೀರ್ ಪ್ರತ್ಯೇಕ್ಷವಾದ ಕರಿ ಕೋತಿಯೊಂದು ರಸ್ತೆಯಲ್ಲಿ ಹಾದು ಹೋಗುತ್ತಿದ್ದ ದ್ವಿಚಕ್ರ ವಾಹನಗಳ ಸವಾರರ ಮೇಲೆ ದಾಳಿ ನಡೆಸಲು ಮುಂದಾಯಿತು.

ಇದನ್ನು ಕಂಡು, ವಾಹನವನ್ನು ವೇಗವಾಗಿ ಚಾಲನೆ ಮಾಡಲು ಮುಂದಾದಾಗ ಕೋತಿ ಬೆನ್ನಟ್ಟಿತ್ತು. ಅಕ್ಕಪಕ್ಕದಲ್ಲಿದ್ದ ಸ್ಥಳೀಯರು ಕಕ್ಕಾಬಿಕ್ಕಿಯಾಗಿ ದಿಕ್ಕಾಪಾಲಾದರು. ಅಲ್ಲದೆ, ದಾಳಿ ಮುಂದುವರಿಸಿದ ಕೋತಿಯು ಕೆಲವು ಪಾದಚಾರಿಗಳ ಮೇಲೆ ಎರಗಿ ಪರಚಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ೨೫ಕ್ಕೂ ಅಧಿಕ ಜನ ಗಾಯಗೊಂಡಿದ್ದಾರೆ. ಇನ್ನೂ ಕೆಲವರನ್ನು ಕೋತಿಯು ಕಚ್ಚಿ ಗಾಯಗೊಳಿಸಿದ್ದು, ಗಾಯಾಳುಗಳು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಬಹುಶಃ ಈ ಕೋತಿಗೆ ಹುಚ್ಚು ಹಿಡಿದಿರುವ ಸಾಧ್ಯತೆ ಇದ್ದು, ಅರಣ್ಯ ಇಲಾಖೆ ಸಿಬ್ಬಂದಿ ಕೂಡಲೇ ಅದನ್ನು ಹಿಡಿದು, ಅರಣ್ಯಕ್ಕೆ ಬಿಡಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಕೋತಿಯ ಕಾಟದಿಂದ ನಿಟ್ಟುಸಿರುಬಿಟ್ಟ ಜನ:-

ಕಳೆದ ೪ ದಿನಗಳಿಂದ ಮರದ ವಿವಿಧೆಡೆ ಸಾರ್ವಜನಿಕರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ್ದ ಕಪ್ಪು ಕೋತಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಮಂಗಳವಾರ ಸ್ಥಳೀಯ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ವಿಮ್ಸ್)ಯ ಆಸ್ಪತ್ರೆ ಬಳಿ ಸೆರೆಹಿಡಿಯುವಲ್ಲಿ ಯಶಸ್ವಿಯಾದರು. ಕೋತಿ ಹಿಡಿಯುವುದಕ್ಕೆಂದೇ ಗಂಗಾವತಿಯಿಂದ ಆಗಮಿಸಿದ್ದ ವಾನರ ತಜ್ಞ, ಅರಣ್ಯ ಇಲಾಖೆ ದಿನಗೂಲಿ ನೌಕರ ಮೌಲಾ ಅವರು ವಾಹನವೊಂದರಲ್ಲಿ ವಿಶೇಷ ಬಲೆ ಇರಿಸಿ, ಉಪಾಯವಾಗಿ ಆಕರ್ಷಿಸಿ ಸಂಜೆ ೪.೩೦ರ ವೇಳೆಗೆ ಕೋತಿಯನ್ನು ಯಾಶಸ್ವಿಯಾಗಿ ಸೆರೆ ಹಿಡಿದರು. ವಿಮ್ಸ್ ಸುತ್ತಮುತ್ತ ಮಧ್ಯಾಹ್ನ ಈ ಕೋತಿ ಜನರ ಮೇಲೆ ದಾಳಿ ನಡೆಸುತ್ತ, ಕೀಟಲೆ ಮಾಡುತ್ತಿರುವ ಮಾಹಿತಿಯ ಮೇರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಸರ್ವಸನ್ನದ್ಧರಾಗಿ ಸ್ಥಳಕ್ಕೆ ಧಾವಿಸಿದರು. ಹುಚ್ಚಾಗಿ ವರ್ತಿಸುತ್ತ ಕಂಡಕಂಡ ಜನರ ಮೇಲೆ, ರಸ್ತೆ ಮೇಲೆ ಸಾಗುತ್ತಿದ್ದ ವಾಹನಗಳ ಮೇಲೆ ದಾಳಿ ನಡೆಸುತ್ತಿದ್ದ ಕೋತಿಗೆ ಶೇಂಗಾ ಬೀಜ ಹಾಕುತ್ತ ಬಲೆ ಇರುವ ಜಾಗಿಯವರೆಗೂ ಆಕರ್ಷಿಸಲಾಯಿತು. ಬಲೆಯೊಳಗೆ ಇದ್ದ ಮತ್ತಷ್ಟು ಶೇಂಗಾ ತಿನ್ನಲು ಕೋತಿ ಒಳನುಗ್ಗುತ್ತಿದ್ದಂತೆಯೇ ಬಾಗಿಲನ್ನು ಭದ್ರಪಡಿಸಲಾಯಿತು. ಬಹುಶಃ ಈ ಕೋತಿಯು ಮಾನಸಿಕ ಸ್ಥಿಮಿತ ಕಳೆದುಕೊಂಡಿರುವರ ಸಾಧ್ಯತೆ

ಇದೆ. ಇದು ಹುಚ್ಚಾಟದ ಆರಂಭಿಕ ಹಂತವಾಗಿದ್ದು, ಇನ್ನಷ್ಟು ದಿನ ಕಳೆದಿದ್ದರೆ ಜನರ ಮೇಲೆ ಭೀಕರ ದಾಳಿ ನಡೆಸುವ ಸಾದ್ಯತೆ ಇತ್ತು ಎಂದು ಮೌಲಾ ಅವರು ಪ್ರಜಾವಾಣಿಗೆ ತಿಳಿಸಿದ್ದರು.

ಕಳೆದ ೪ ದಿನಗಳಿಂದ ನಗರದ ಕಪಗಲ್ ರಸ್ತೆ, ಸಿದ್ಧಾರ್ಥ ಕಾಲೋನಿ, ಬಸವೇಶ್ವರ ನಗರ, ಎಸ್.ಜಿ. ಕಾಲೇಜು ರಸ್ತೆ, ಗಾಂಧಿ ನಗರ, ಕನಕ ದುರ್ಗಮ್ಮ ದೇವಸ್ಥಾನ ಮತ್ತಿತರ ಕಡೆ ಜನರ ಮೇಲೆ ದಾಳಿ ನಡೆಸಿದ್ದ ಈ ಕೋತಿಯು ಕೆಲವರನ್ನು ಗಾಯಗೊಳಿಸಿದ ಕುರಿತು ಇಲಾಖೆಗೆ ದೂರುಗಳು ಬಂದಿದ್ದವು. ಕಳೆದ ಮೂರು ದಿನಗಳಿಂದ ಇದನ್ನು ಹಿಡಿಯಲು ಕಾರ್ಯಚರಣೆ ನಡೆಸಲಾಯಿತು, ಆದರೂ ಲಂಗೂರ ಜಾತಿಯ ಈ ಕಪ್ಪು ಕೋತಿ ಸುಲಭದಲ್ಲಿ ಬಲೆಗೆ ಬಿದ್ದಿರಲಿಲ್ಲ. ವಾನರ ತಜ್ಞ ಮೌಲಾ ಅವರು ಉಪಾಯದಿಂದ ಅದನ್ನು ಹಿಡಿಯುವಲ್ಲಿ ಸಫಲರಾದರು ಎಂದು ಜಿಲ್ಲಾ ಅರಣ್ಯಾಧಿಕಾರಿ ಮಣಿಕಂಠನ್ ವಿವರಿಸಿದರು. ಒಂದು ವಾರ ಕಾಲ ನಗರದ ಪ್ರಾಣಿ ಸಂಗ್ರಹಾಲಯದಲ್ಲಿ ಈ ಕೋತಿಯನ್ನು ಇರಿಸಿ, ಅದರ ವರ್ತನೆಯನ್ನು ಅವಲೋಕಿಸಲಾಗುತ್ತದೆ. ನಂತರ ಅಗತ್ಯ ಬಿದ್ದರೆ ಸೂಕ್ತ ಚಿಕಿತ್ಸೆ ನೀಡಿ ಸುರಕ್ಷಿತವಾಗಿ ಕಾಡಿಗೆ ಬಿಡುವ ಬಗ್ಗೆ ನಿರ್ಧರಿಸಲಾಗುತ್ತದೆ ಎಂದು ಅವರು ಹೇಳಿದರು. (ಪ್ರಜಾವಾಣಿ, ಜೂನ್. ೨೦೧೩)

ಕೋವಿ ಎತ್ತಿ ಕಟ್ಟುವ ಕ್ರಮವು ಬಹಾಳ ಅಪಾಯಕಾರಿ ಮೃಗಗಳ ಬಾಧೆಯನ್ನು ತಡೆಯಲಾರದೇ ಅದಕ್ಕು ಜನರು ಹಿಂದೆಗೆಯುತ್ತಿರಲಿಲ್ಲ. ಈ ವಿಧಾನವನ್ನು ಅನುಸರಿಸುವುದು ಪ್ರಾಣಾಪಾಯವನ್ನು ಉಂಟುಮಾಡುವಂತದ್ದು. ಆದ್ದರಿಂದ ಸರಕಾರವು ಇದನ್ನು ನಿಷೇದಿಸಿದೆ. ಒಂದು ವೇಳೆ ಪತ್ತೆಯಾದರೆ ಕಠಿಣ ಶಿಕ್ಷೆ ಯೆಂದುಸಾರಿತ್ತು ಅದುದ್ದರಿಂದ, ಮೃಗಗಳ ಹಾವಳಿಯಿಂದ ನೊಂದ ಬೇಸಾಯಗಾರರು ಇದಕ್ಕಾಗಿ ಪರವಾನಿಗೆ ಇಲ್ಲದ ಕೋವಿಗಳನ್ನು ಉಪಯೋಗಿಸಿ ಯಾರಾದರು ತನಿಖಾಧಿಕಾರಿಗಳ ಕೈಯಲ್ಲಿ ಸಿಕ್ಕಿ ಬಿದ್ದಾಗ ಕೋವಿಯು ತನ್ನದಲ್ಲ ಎಂದು ಸಾದಿಸುತ್ತಿದ್ದರು. ಇದೊಂದು ತುಂಬಿಸುವ ಕೋವಿಯಿಂದ ಸ್ವಯಂಚಾಲಿತವಾಗಿ ಮೃಗವನ್ನು ಕೊಲ್ಲುವ ವಿಧಾನ, ಒಳ್ಳೆಯ ಕೋವಿಗಳನ್ನು ತಯಾರಿಸಿ ಈ ಕಸುಬುದಾರರು ಇದಕ್ಕೆ ಉಪಯೋಗಿಸುತ್ತಿದ್ದರು. ಈ ಕೋವಿಗೆ ಬೇಕಾದ ಮದ್ದುಗುಂಡನ್ನು ತುಂಬಿಸಿ, ಒಳ್ಳೆಯ ಕೇಪನ್ನು ನಿಪ್ಪಲಿಗೆ ಇಟ್ಟು ಕೋವಿಯ ಕುದುರೆಯನ್ನು ಎತ್ತಿ ನಿಲ್ಲಿಸಿ ಕುತ್ತು (ಟ್ರಿಗರ್)ಗೆ ಉದ್ದವಾದ ಹುರಿನೂಲನ್ನು ಕಟ್ಟಿ ಮೃಗವು ಬರುವ ಉದ್ದಗಲವನ್ನು ಕಂಡು ನಿರ್ದರಿಸಿ ಆ ಅಳತೆಯಂತೆ ಹಿಂದಿನ ದಿನ ಬಂದ ಮೃಗದ ಹೆಜ್ಜೆಯಿಂದ ಅದು ಯಾವ ಜಾತಿಯ ಮೃಗ ಅದರ ಎತ್ತರ ಎಷ್ಟಿದೆ ಎಂಬುದನ್ನು ಅರಿತು "ಅಡಿಗೆ ಅಂಗುಲವೆಂಬ ನಿಯಮ್ಮದಂತೆ", ತುಂಬಿಸಿದ ಕೋವಿಯನ್ನು ಸಜ್ಜುಗೊಳಿಸಿ ಅದನ್ನು ನೀಳವಾಗಿ ಎರಡು ಕಂಬಗಳಿಗೆ ಸಿದ್ದಗೊಳಿಸಿಟ್ಟು ಬೇರೆ ಸ್ಥಳದಿಂದ ಇಳಿಯುವ ಮೃಗಗಳನ್ನು ಹೆದರಿಸಲು ಹೋಗುವುದು ರೂಡಿ, ಬೇಸಾಯ ಗಾರನು ಕೋವಿಯ

ಬಳಿಯಲ್ಲೆ ಕುಳಿತರೆ ಎಳೆದ ಕಡೆಗಳಿಂದ ಇಳಿದು ಪೈರನ್ನು ನಾಶಗೊಳಿಸುವ ಮೃಗಗಳನ್ನು ಓಡಿಸುವವರಾರು? ಗದ್ದೆಗೆ ಇಳಿಯುವ ಆತುರದಲ್ಲಿರುವ ಮೃಗಗಳು ಎತ್ತಿಕಟ್ಟಿದ ಹಗ್ಗವು ಕಾಲಿಗೆ ತೊಡಕಿದಾಗ ಬೀಳೆಂದು ಭ್ರಮಿಸಿ ನೂಕಿಕೊಂಡು ಬರುವಾಗ ಕಾಲಿಗೆ ಕುತ್ತು ಬಳೆಯಲ್ಪಟ್ಟು ಎತ್ತಿಟ್ಟ ಕುದುರೆಯು ಬಿದ್ದು ಕೋವಿ ಈಡಾಗುತ್ತದೆ.

ಶಾಂತಿನಾಥ ದೇಸಾಯಿ ಅವರ ಮುಕ್ತಿ ಕಾದಂಬರಿಯಲ್ಲಿ ಕಾಮಿನಿಯನ್ನು ತನ್ನ ಪ್ರೊಫೆಸರ್ ಶರ್ಮ ಜೊತೆಗೆ ಎಷ್ಟೇ ತಂತ್ರಗಳನ್ನು ಹೂಡಿದರೂ ತನ್ನ ಕಾರ್ಯ ಯಶಸ್ವಿ ಆಗದಿರುವುದು ಅಷ್ಟರಲ್ಲೆ ಕಾಮಿನಿಯ ಸೌಂದರ್ಯಕ್ಕೆ ಸೋತ ಗಂಗಾಲರು ಕಾಮಿನಿಯನ್ನು ತಂತ್ರ ಹೂಡಿ ತಮ್ಮ ಬಲೆಗೆ ಹಾಕಿಕೊಂಡು ಬಸರು ಮಾಡುವುದು; ಈ ಕಾದಂಬರಿಯಲ್ಲಿ ಮೂಡಿಬಂದಿದ್ದು ಕಾಮಿನಿಯ ಅಣ್ಣ ಕಾದಂಬರಿ ನಾಯಕ ಶ್ರಿಕಾಂತ ತನ್ನ ಪ್ರೇಯಸಿ ಮೇರಿಯನ್ನು ತಂತ್ರ ಹೂಡಿ ತನ್ನ ಬುಟ್ಟಿಗೆ ಹಾಕಿಕೊಳ್ಳುವುದನ್ನು ಮುಕ್ತಿ ಕಾದಂಬರಿಯಲ್ಲಿ ಮೂಡಿ ಬಂದಿರುವ ಸಂಗತಿಗಳಾಗಿವೆ.

ಕಬ್ಬೆಕ್ಕಿನ ಬ್ಯಾಟೆ:–

ಮನುಷ್ಯ ಅನಾದಿ ಕಾಲದಿಂದಲೆ ಬೇಟೆ ಮಾಡುವುದನ್ನು ಅಳವಡಿಸಿಕೊಂಡು ಬಂದಿರುವುದರ ಜೊತೆಗೆ ಬೇಟೆಯ ಮುಂಕಾತರನೇ ಆಹಾರ ಸಂಪಾದನೇಯ ಮಾರ್ಗವನ್ನು ಕಂಡುಕೊಂಡಿರುವುದನ್ನು ಕಾಣಬಹುದಾಗಿದೆ. ಬೇಟೆ ಕೈಗೊಳ್ಳುವದು ಮನುಷ್ಯನ ಸಹಜ ಗುಣ. ಆದರೆ ಬೇಟೆಗೆ ಹೋಗಿ ಬೇಟೆ ಮಾಡುವಾಗ ಉಪಯೋಗಿಸುವ ತಂತ್ರಗಳು ಪ್ರತಿಯೊಬ್ಬ ಬೇಟೆಗಾರನಲ್ಲೂ ಭಿನ್ನಭಿನ್ನವಾಗಿರುತ್ತವೆ. ಅದರಲ್ಲೂ ಬೇಟೆಯಾಗುತ್ತೋ ಇಲ್ಲವೊ ಗೊತ್ತಿಲ್ಲ. ಆದರೂ ಬೇಟೆಗಾರ ತನ್ನ ಹೊಟ್ಟೆಪಾಡಿಗಾಗಿ, ಕರ್ತವ್ಯ ನಿರ್ವಹಣೆಗಾಗಿ ಬೇಟೆಗೆ ಹೊರಡುತ್ತಾನೆ. ಇಲ್ಲಿ ಮಲೆನಾಡಿನ ಬೇಟೆಗಳು ತುಂಬಾ ಅಪಾಯಕಾರಿಯಾಗಿರುವದನ್ನು ಈ ಹಿಂದೆ ಕಲಿತುಕೊಂಡು ಬಂದಿರುವುದಾಗಿದೆ.

ಸಿದ್ಧನನ್ನು ಗೋವಿಂದ ಶಿಕಾರಿ ಮಾಡುವುದಕ್ಕಾಗಿ ಜೊತೆಗೆ ಇಟ್ಟುಕೊಂಡಿದ್ದ ಅದ್ರಲ್ಲೂ ಸಿದ್ದಂಗೆ ಶಿಕಾರಿ ಅಂದ್ರೆ ತವರು. ಒಂದಿನ ಕಬ್ಬೆಕ್ಕು ಬೇಟೆಗಾಗಿ ರಾತ್ರಿ ಹೋದರು ಮಲೆನಾಡು ಅಂದಮೇಲೆ ಕಾಡಲ್ಲಿ ಹೋಗುವುದು ಸುಲಭ ಸಾಧ್ಯವಿಲ್ಲ. ಮಲೆನಾಡಿನ ಕಾಡುಗಳ್ಲಲಿ ಸುಮಾರು ೫೦–೭೦ ಅಡಿ ಎತ್ತರದ ಬೈನೆ ಮರದ ಮೇಲೆ ಕಬ್ಬೆಕ್ಕಿರುವುದನ್ನು ಕಂಡ ಗೋವಿಂದ ಕೋವಿಯಲ್ಲಿನ ಗುಂಡಿನ್ನಿಂದ ಹೊಡೆದು ಕೆಳಗುದುರಿಸಿದ ಅವು ಸುತ್ತೊಗಿವೆ ಅಂತ ತಿಳಿದ ಸಿದ್ದ ಚೀಲದಲ್ಲಿ ತುಂಬಿಕೊಂಡು ನಡೆದ ಸ್ವಲ್ಪ ಹೊತ್ನಲ್ಲೆ ಸಿದ್ಧ ಅಯ್ಯಯ್ಯೋ ಅಂತ ಕೂಗಿದ ಕಬೆಕ್ಕು ಇನ್ನು ಸತ್ತಿರಲಿಲ್ಲ ಅದು ಸಿದ್ದನ ಕೈಯನ್ನು ಗಾಯಮಾಡಿತ್ತು. ಗೋವಿಂದ ಅದನ್ನು ಕೊವಿಯಿಂದ ತಿವಿದು ಸಾಯಿಸಿ ಸಿದ್ದಂಗೆ ಸಮಾದಾನಿಸಿದನು. ಇಲ್ಲಿ ಸಿದ್ದ ನಿಪೂಣನಿದ್ದರು ಅವನ ಬುದ್ದಿಗೆ ಲದ್ದಿಹೇಲು ಮೆದ್ದಂತ್ತಾಗಿತ್ತು. ಒಬ್ಬ

ಬೇಟೆಗಾರ ಬೇಟೆಯಾಗಿದೆ. ಎಂದರೇ ಹಿಂದು ಮುಂದುನೋಡದೇ ಮಾಡುವ ಕರ್ತವ್ಯವಿದು ಎಲ್ಲಿ ಆ ಪ್ರಾಣಿ ತಪ್ಪಿಸಿಕೊಳ್ಳುತ್ತೋ ಎಂಬ ಅವಸರದಿಂದ ಮಾಡುವ ಕೆಲಸ ತನ್ನನ್ನೆ ಅಪಾಯಕ್ಕೆ ಸಿಕ್ಕಿಸಿಬೀಳಿಸುತ್ತದೆ. "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯಮಾಡಿ ತನ್ನ ಸಾವು ತಾನೇ ತಂದುಕೊಂಡತೆ" ಸಿದ್ಧ ಮಾಡಿದ ಕೆಲಸವಾಗಿತ್ತು.

ಮೀನಿನ ಬ್ಯಾಟೆ:–

ಪುರಾಣ ಕಾಲದಿಂದಲೂ ಮೀನು ಮಾನವನಿಗೆ ಪರಿಚಿತ ಜಲಚರವಾಗಿದೆ. "ಶ್ರೀಮನ್ ನಾರಾಯಣ ಮತ್ಸ್ಯವತಾರ ಎತ್ತದ ಉಲ್ಲೇಖವಿದೆ". ಮತ್ಸ್ಯ ಕನ್ಯೆಯರ ದಂತಕತೆಯುಂಟು, ಪ್ರಪಂಚದ ಉದ್ದಗಲಕ್ಕೆ ಮೀನಿನ ಇರುವಿಕೆಯನ್ನು ಕಾಣಬಹುದು. "ಕೆರೆ, ಕುಂಟೆ, ಬಾವಿ, ನದಿ, ಸಮುದ್ರಗಳೆಲ್ಲೆಡೆ" ಮೀನುಗಳನ್ನು ಕಾಣಬಹುದಾಗಿದೆ. ಮೀನಿನಷ್ಟು ಸಣ್ಣ ಪ್ರಾಣಿ ಹಾಗೂ ಮೀನಿನಷ್ಟು ದೊಡ್ಡ ಪ್ರಾಣಿ ಮತ್ತೊಂದಿಲ್ಲ ಎಂಬ ವಾಡಿಕೆಯುವುಂಟು. ಅದ್ರಲ್ಲೂ "ಕೆರೆ, ಕುಂಟೆ, ಬಾವಿಗಳಲ್ಲಿ ಕುಚ್ಚುಮೀನು, ಕೊರವ, ಸಸಲು, ಚೇಳು ಮೀನು, ಗಿರಲುಮೀನು, ಮಳ್ಳ (ಹುಣ್ಣಿ) ಮೀನು, ಸಿಗಡಿಮೀನು, ಗೆಂಡೆಮೀನು, ನಂಜೆ ಮೀನು, ಬಾಳೆಮೀನು, ಹಾವ್‌ಮೀನುಗಳು ಕಂಡು ಬರುವುದನ್ನು ಕಾಣಬಹುದಾಗಿದೆ.

ಮೀನನ್ನು ಹಿಡಿಯುವ ವಿಧಾನಗಳು:–

ಕೆರೆಬೇಟೆ, ಬಲೆಬೇಟೆ, ಬೀಸುಬೇಟೆ, ಗೋರು ಬಲೆಬೇಟೆ, ಗಾಳ, ಕೊಡಮೆ ಬೇಟೆ, ಸರಗಾಳ ಬೇಟೆ, ಕೊಳೆ ವಿಧಾನ, ಕಟ್ಟೆ ವಿಧಾನದ ಮುಖಾಂತರ ಮೀನುಗಳನ್ನು ಬೇಟೆಯಾಡುತ್ತಾರೆ.

➢ **ಬಲೆಬೇಟೆ:–**

ಬಲೆ ಬೇಟೆಯನ್ನು ಆಡುವದರಲ್ಲಿ ಬೆಸ್ತರು ಸಿದ್ಧಹಸ್ತರು, ಇವರನ್ನು ಗಂಗೆ ಮತಸ್ತರೆಂದೂ ಕೂಡಾ ಕರೆಯುತ್ತಾರೆ. ನದಿ, ಕೆರೆ, ಕಟ್ಟೆಗಳು ವಿಸ್ತಾರ ಅನುಸರಿಸಿ ಬಲೆಗಳನ್ನು ಉಪಯೋಗಿಸುತ್ತಾರೆ. ಮೊದಲು ಬಲೆಯನ್ನು ನೂಲಿನಿಂದ ನೆಯ್ಯುತ್ತಿದ್ದರು ಆದರೇ ಇತ್ತೀಚೆಗೆ ಪ್ಲಾಸ್ಟಿಕ್ ಬೇರು ಬೀಡುತ್ತಿದ್ದರಿಂದ ಪ್ಲಾಸ್ಟಿಕ್ ಮತ್ತು ಸುಟ್ಟ ಮಣ್ಣಿನ ಮಣಿಗಳು ಮತ್ತೊಂದು ಬದಿಲೆ ಬೆಂಡುಗಳನ್ನು ಹಾಕಿರುತ್ತಾರೆ. ಬಲೆಯು ೨೫–೩೦ ಮೀಟರ್ ಉದ್ದವಿರುತ್ತದೆ. ಬಲೆಯನ್ನು ತೆಗೆಯುವಾಗ ಬಲೆಯನ್ನು ಎಳೆದು ದಂಡೆಗೆ ತಂದು ಬಲೆಯಲ್ಲಿ ಸಿಕ್ಕಿಬಿದ್ದ ಮೀನುಗಳನ್ನು ಬಲೆಯಿಂದ ಬಿಡಿಸಿ ಬುಟ್ಟಿಗೆ ಹಾಕಿಕೊಳ್ಳುತ್ತಾರೆ.

➢ **ಹತ್‌ಮೀನು ಬೇಟೆ:–**

ಮುಂಗಾರಿನ ಹೊಸ ನೀರಿನಲ್ಲಿ ಓಡಾಡುವ, ವಲಸೆ ಹೋಗುವಂತೆಯೇ ಕೆರೆಯಲ್ಲಿ ಅಥವಾ ಹೊಸನೀರು ಹರಿದು ಹೋಗುವ ಅಂಚಿನಲ್ಲಿ ಎದುರಾಗುವ ದಿಬ್ಬಗಳ ಮೇಲೆ ಮೀನು

ಹತ್ತುವುದುಂಟು. ಮಲಗುವುದುಂಟು ಇದಕ್ಕೆ ಮೀನು 'ದಡ ಹತ್ತುವದು' ಎನ್ನುವರು. ಇಂತಹ ಬೇಟೆಯನ್ನೇ ಹತ್‌ಮೀನ್ ಬೇಟೆಯೆಂದು ಕರೆಯುತ್ತಾರೆ. ಹತ್‌ಮೀನ್ ಬೇಟೆಗೆ ಕೊಳೆಸೂಕ್ತ ಏಕೆಂದರೆ ಮೀನು ತಪ್ಪಿಸಿಕೊಂಡು ಹೋಗುವ ಮುನ್ನ ಮೀನಿನ ಮೇಲೆ ಕೊಳೆಹಾಕಿ ಸುಲಭವಾಗಿ ಹಿಡಿಯಬಹುದಾಗಿದೆ.

➢ **ಕೂಳೆವಿಧಾನ:–**

ಕೂಳೆಹಾಕಿ ಮೀನು ಹಿಡಿಯುವಾಗ ಒಂದು ಎಚ್ಚರಿಕೆ ವಹಿಸಬೇಕು ಕೂಳೆಗೆ ಬಿದ್ದ್ ಕುಚ್ಚು ಕೂಳಗಳು ಕೂಳೆಯಿಂದ ನೆಗೆದು ತಪ್ಪಿಸಿಕೊಳ್ಳಬಹುದು. ಆದ್ದರಿಂದ ಒಂದು ಕೈಯಿಂದ ಕೂಳೆ ಬಾಯಿ ಮುಚ್ಚಿ, ಮತ್ತೊಂದು ಕೈಯಿಂದ ಕೈಹಾಕಿ ಮೀನು ಹಿಡಿಯುತ್ತಾರೆ. ಕೂಳೆಹಾಕಿದ ಕೂಡಲೆ ಬಾಯಿಮುಚ್ಚಿ ನಂತರ ಮೀನು ಹಿಡಿಯಲು ಮುಂದಾಗುತ್ತಾರೆ. ಆಗ ಮೀನು ಕೂಳೆಗೆ ತಗಲುವುದರಿಂದ ಮೀನು ಕೂಳೆಯಲ್ಲಿ ಬಿದ್ದಿವೆ ಎಂದು ಗೋತ್ತಾಗುತ್ತದೆ.

➢ **ಗಾಳದ ವಿಧಾನ:–**

ಒಂಟಿಗಾಳ ಮತ್ತು ಸರಳಗಾಳ ಎಂಬ ರೂಪದಲ್ಲಿ ಕಂಡುಬರುತ್ತದೆ. ಕೆರೆ, ಕಟ್ಟೆ, ನದಿ, ಬಾವಿಗಳ ತಡಿಯಲ್ಲಿ ಕುಳಿತು ಗಾಳಕ್ಕೆ ಎರೆಹುಳುಗಳನ್ನು ಸಿಕ್ಕಿಸಿ ನೀರಿನೋಳಗೆ ಹಾಕುತ್ತಾರೆ. ದಾರದ ಒಂದು ತುದಿಗೆ ಗಾಳವಿರುತ್ತದೆ. ಮತ್ತೊಂದು ತುದಿಯನ್ನು ಬಿದರಿನ ಕಡ್ಡಿಗೆ ಕಟ್ಟಿರುತ್ತಾರೆ ಗಾಳವಿರುವ ಕಡೆಯಿಂದ ಸುಮಾರು ಒಂದೂ ಒಂದೂವರೇ ಅಡಿ ಅಥವಾ ಎರಡು ಅಡಿ ಮೇಲಕ್ಕೆ ಬೆಂಡನ್ನು ಕಟ್ಟಿರುತ್ತಾರೆ, ಹೀಗೆ ಗಾಳ ಸಿದ್ದಪಡಿಸಿ ನೀರಿನಲ್ಲಿ ಹಾಕಿದಾಗ ಗಾಳಕ್ಕೆ ಸಿಕ್ಕಿಸಿರುವ ಎರೆ ಹುಳುವನ್ನು ತಿನ್ನಲು ಮೀನು ಬರುತ್ತದೆ. ಅದು ಗಾಳವನ್ನು ಜಗ್ಗುತ್ತದೆ. ಬೆಂಡು ಮುಳುಗೇಳುವುದರಿಂದ ಗಾಳಕ್ಕೆ ಮೀನು ಬಿದ್ದಿರುವುದು ಗೊತ್ತಾಗುತ್ತದೆ. ಆಗ ತಡಮಾಡದೇ ಗಾಳವನ್ನು ಹೊರಕ್ಕೆ ಎಳೆದು ಗಾಳದಲ್ಲಿನ ಮೀನನ್ನು ತೆಗೆದುಕೊಳ್ಳುತ್ತಾರೆ.

ಬಾಳೆಮೀನು, ಹಾವ್‌ಮೀನು, ಕರಮೀನು, ಸೀಗಡಿಗಳನ್ನು ಒಣಗಿಸಿ ಬೇಕಾದಾಗ ಉಪಯೋಗಿಸುತ್ತಾರೆ. ನೆಗಡಿ ಬಂದಾಗ ಅವರೆ ಕಾಳು ಇಲ್ಲವೆ ಕಡಲೆಕಾಳು ಜೋತೆ ಸಾರುಮಾಡಿ ತಿನ್ನುತ್ತಾರೆ. ಇದರಿಂದ ನೆಗಡಿ ವಾಸಿಯಾಗುತ್ತದೆ ಎಂಬ ಜನಪದರ ನಂಬಿಕೆ ಬೇರೆ ಇದೆ.

ಪುರಾಣ ಕಾಲದಿಂದಲೂ ಕಣ್ಣಿನ ಸೌಂದರ್ಯವನ್ನು ವರ್ಣಿಸುವದಕ್ಕೆ ಮೀನಿನ ಹೋಲಿಕೆ ಮಾಡುತ್ತಾರೆ. "ಸುಂದೋಪ ಸುಂದರ ಸಂಹಾರಕ್ಕಾಗಿ ಶ್ರೀಹರಿ ಮೋಹಿನಿ ಅವತಾರವೆತ್ತಿ ಸೋದರರ ಮುಂದೆ ಪ್ರತ್ಯಕ್ಷವಾದಾಗ ಅಗ್ರಜ ಅನುಜನನ್ನು ಕುರಿತು ಅವಳ ಕಣ್ಣಿನ ಸೌಂದರ್ಯವನ್ನು ಮೀನ ಕಣ್ಣಿವಳು' ಎಂದು ಹೇಳುತ್ತಾನೆ. ಅಂತೆಯೇ ಹಿಂದಿನ ಅಥವಾ ಇಂದಿನ ಕವಿವರ್ಯರೆಲ್ಲಾ ಮೀನಿನ ಕಣ್ಣಿನ ಬಗ್ಗೆ ಸೌಂದರ್ಯದ ಬಗ್ಗೆ ವರ್ಣಿಸುತ್ತಲೇ ಬಂದಿದ್ದಾರೆ. ಹಾಗೆಯೇ, ಮೀನಿನ

ಹೆಜ್ಜೆಯನ್ನಾದರೂ ಕಂಡು ಹಿಡಿಯಬಹುದು ಹೆಣ್ಣಿನ ಮನಸನ್ನು ಕಂಡುಹಿಡಿಯಲಾರದು ಎಂದು ಹೆಣ್ಣಿನ ಸೊಬಾವವನ್ನು ಹೋಲಿಸಿ ವರ್ಣಿಸಿದ್ದಾರೆ.[೨]

ಮಲೆನಾಡಿನ ಮಳೆಗಾಲದಲ್ಲಿ ಸಿದ್ದ ರಾತ್ರಿ ಜಬ್ರ ಅಂತ ಮಳೆ ಸುರಿಯಿತು ಆಗ ಸಿದ್ದ ಮಲಗಿದೋನು ಎದ್ದು ಕೂಳಿಹೊತ್ತುಕೊಂಡು ಹೋಗಿ ಅಡೆಹಳ್ಳಕ್ಕೆ ಹಾಕಿ ಬಂದಿದ್ದ ಬೆಳಿಗ್ಗೆಹೋಗಿ ನೋಡ್ತಾನೆ ಕೂಳಿ ತುಂಬಾ ಕಲ್‌ಗಿರಿಮೀನು ತುಂಬಿವೆ. ಸಿದ್ದ ಹಳೆ ಕೊಟ್ಟೆ ಸಾಕಾಗದೆ ಮತ್ತೊಂದು ಹೊಸ ಕೊಟ್ಟೆಯನ್ನು ಕೇಸಿನ ಎಲೆಯಲ್ಲಿ ಮಾಡಿ ಮೀನನ್ನೆಲ್ಲ ತುಂಬಿಕೊಂಡು ಊರಕಡೆ ನಡೆದ ವಡೇರ ಆಳುಗಳು ಇವನು ಮೀನ್ ಹಿಡಿದಿದ್ದಕ್ಕೆ ವಡೇರ್ ಹತ್ರಾ ಕರ್‍ಕೊಂಡ್ ಬಂದ್ರು ಆ ವಡೇರ್ ಇವನಿಗೆ 'ಕಳ್ಳೂಳೇ ಮಗನೇ ಕೂಳೀಲಿದ್ದ ಮೀನನ್ ಕದಿತಿಯಾ' ಅಂತ ಬೈದು ಅದಕ್ಕೆ ಸಿದ್ದ ನೋಡಿ ಅಯ್ಯಾರೇ ಮೀನ ಬೇಕಾರೇ ತಗೊಳ್ಳಿ ಕಳ್ಳ ಗಿಳ್ಳ ಅಂತ ಬೈಬೇಡಿ ನಾನ್ ಎಷ್ಟೋಮೀನು ಹಿಡ್ದು ಯಾರಾರ್‍ಗೊ ತಿನಿಸಿದಿನಿ ಅಂತ ಅಂದು ವಡೇರಲ್ಲಿ ಮೀನ್ ಕೊಟ್ಟು ಅವರಿಂದ ಪಾರಾಗಿ ಬಂದು ಮತ್ತೊಂದ್ ಸಾರಿ ಕೂಳಿಲ್‌ಹೋಗಿ ನೋಡ್‌ತಾನೆ ಕೂಳಿಲಿ ಹಾವು ಮೀನು (ಹಿಮಗಲ ಮೀನು) ಬಿದ್ದಿತ್ತು. ಅದನ್ನು ಕುಳಿಯಲ್ಲೆ ಸುತ್ತಿ ತೆಗೆದುಕೊಂಡು ಬಂದು ಮೀನುಗಳ ಮಾಂಸದಲ್ಲೆ ಹಿಮಗಲ ಮೀನಿನ ಮಾಂಸ ಶ್ರೇಷ್ಠವಾದದ್ದು ಅದನ್ನು ಹಿಡಿದದ್ದು ಸಿದ್ದನ ಮೊದಲ ಅನುಭವ ಆಗಿತ್ತು. ಮಲೆನಾಡಿನ ಪರಿಸರದಲ್ಲಿ ಮೀನಿನ ಬೇಟೆಯನ್ನು ಗಮನಿಸಿದಾಗ ಹೊಲದ ಒಡೆಯನ ಪಕ್ಕದ ಹಳ್ಳದಲ್ಲಿ ತಾನೆ ಮೀನು ಬೇಟೆ ಮಾಡಬೇಕೆ ಹೊರತು ಬೇರೆಯವರ ಅಧಿಕಾರ ಇಲ್ಲದಂತಿದೆ. ಸಿದ್ದನನ್ನು ಗದರಿಸಿದ ವಡೇರು ತಮ್ಮ ಶ್ರೀಮಂತಿಕೆಯ ದರ್ಪದಿಂದ ಬಡವರನ್ನು ತುಳಿತಕ್ಕೊಳಗಾಗಿರುವದನ್ನು ಕಾಣಬಹುದಾಗಿದೆ. ಮಳೆ ಹನಿಯ ನೀರು ಎಲ್ಲಿ ಹರಿದರೇನಂತೆ ಸಾಮಾನ್ಯ ಜನರು ಹೊಟ್ಟೆಪಾಡಿಗಾಗಿ ಮೀನನ್ನು ಹಿಡಿದುಕೊಂಡರೆ ತಪ್ಪೆಂದು ಹೇಳುವ ಇಂಥ ದುಷ್ಠ ಸಮಾಜದಲ್ಲಿ ಬದುಕುತ್ತಿರುವ ನರಮನುಷ್ಯ, ಬೇರೊಬ್ಬನ ಮೇಲೆ ಹಕ್ಕನ್ನು ಚಲಾಯಿಸುತ್ತಾನೆ ಆದರೆ ಪ್ರಾಣಿಗಳು ಹಾಗಲ್ಲ ಅವು ಮನುಷ್ಯನಿಂದ ಎಷ್ಟೋ ಉತ್ತಮ ಅವುಗಳಲ್ಲಿ ಹಂಚಿಕೊಂಡು ತಿನ್ನುವ ಮನೋಭಾವವಿದೆ. ಸಾಮಾನ್ಯವಾಗಿ ಕೆಳವರ್ಗದ ಜನರು ಶ್ರೀಮಂತ ವರ್ಗದವರಿಂದ "ನೈತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ತುಳಿತಕೊಳ್ಳಗಾಗಿರುವುದನ್ನು ಕಂಡು ಕೊಳ್ಳಬಹುದಾಗಿದೆ.

ಮಲೆನಾಡಿನ ಜನರಿಗೆಲ್ಲಾ ಸಿದ್ದ ಬೇಕಾದವನಾಗಿದ್ದ ಆದ್ದರಿಂದ ಜನರು ಸಿದ್ದನನ್ನು ಕಂಡಾಗ ಮನೆಯ ಹೆಂಗಸರೆಲ್ಲ ಮಂಗನ ಬಳ್ಳಿ, ಒಳ್ಳೆಕುಡಿ, ಸುಗಂಧಿಬೇರು, ತಂದು ಕೊಡೊಕ್ಕೆ ಹೇಳುತ್ತಿದ್ದರು. ಜೊತೆಗೆ ಮದುವೆ ಆಗುವ ಹುಡುಗಿಯರು ಗುಳದ ಸೊಪ್ಪು, ಬೆಳ್ಳಟ್ಟೆ ಸೊಪ್ಪು, ಕಮ್ಮೆಣ್ಣು, ಸೀಗೆತೆಪ್ಪೆ, ಮುಣಿಗಿನ ಚೆಕ್ಕೆನ ತೊಟ್ಟನ್ನು ಸಿದ್ದ ತಂದು ಕೊಡುತ್ತಿದ್ದ ಬಿಟ್‌ನಲ್ಲಿ ಸಿದ್ದ

ಎಲ್ಲರಿಗೂ ಬೇಕಾದವನು ಆಗಿದ್ದ. ಸಿದ್ದನು ಕಾಜಾಣ ಹಕ್ಕಿಯಂತೆ ಕೂಗೂತ್ತಿದ್ದ ಕಾಜಾಣ ಹಕ್ಕಿಯು ಯಾವುದೇ ಧ್ವನಿ ಇರಲಿ ಅದನ್ನು ಕೂಗುತ್ತ ಕಲಿಯುತ್ತದೆ. ಅದರಂತೆ ಸಿದ್ದನು ಹಾಗೆಯಾಗಿದ್ದ ಆದರೇ ಸಿದ್ಧ ತನ್ನ ಹೆಂಡತಿ ಸೀತುನ ಬಾಷೆಯನ್ನು ಕಲಿಯಲು ಅವನಿಗೆ ಆಗಿರಲಿಲ್ಲ. ಸಿದ್ದನು ಮಲೆನಾಡಿನಲ್ಲಿ ಯಾವ ಋತು ಮಾನದಲ್ಲಿ ಯಾವ ಯಾವ ಬೇಟೆಗಳು ನಡೆಯುತ್ತವೆ, ಯಾವ ಗಳಿಗೆಯಲ್ಲಿ ಬೇಟೆಗೆ ಹೋಗಬೇಕು ಯಾವ ಸ್ಥಳದಲ್ಲಿ ಬ್ಯಾಟೆ ಸಿಗಬಹುದು, ಬ್ಯಾಟೆಗೆ ಹೋಗುವಾಗ ಯಾರನ್ನು ಕರೆದುಕೊಂಡು ಹೋಗಬೇಕು ಎಂದೂ ಸಿದ್ದನು ಪೂರ್ವ ತಯಾರಿಯನ್ನು ಮಾಡಿಕೊಂಡಿರುತ್ತಿದ್ದನು. ಸಿದ್ದನ ಬ್ಯಾಟೆ ಪುರಾಣವನ್ನು ಕೇಳುತ್ತಿದ್ದಂತೆ ನಮ್ಮಲ್ಲು ಸಹ ಅಂತಹ ಭಾವನೆಗಳು ಚಿಗುರೊಡೆಯುವಂತೆ ಬಾಸವಾಗುತ್ತದೆ. ಮನುಷ್ಯ ಒಬ್ಬ ಜೀವಿ ಮನುಷ್ಯನಂತೆ ಪ್ರಾಣಿಗಳು ಸಹ ಜೀವಿಯೆಂದು ಅರಿತರು ನರಮನುಷ್ಯ ತನ್ನ ಬಾಯಿ ಚಟಕ್ಕಾಗಿ ಮಾಡಬಾರದ ಕೆಲಸಕಾರ್ಯಗಳನ್ನೆಲ್ಲ ಮಾಡಿ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿರುತ್ತಾನೆ.

- **ಪುಣಿಗನ ಬೆಕ್ಕಿನ ಬ್ಯಾಟೆ:-**

ಮಲೆನಾಡಿನಲ್ಲಿ ಸಿದ್ದನ ಸಾಹಸಲೀಲೆಗಳು ಒಂದೋ ಎರಡೋ ಸಿದ್ಧನು ಬ್ಯಾಟೆ ಮಾಡೋದಲ್ಲದೆ ಮಲೆನಾಡಿನ ಜನರ ಕಷ್ಟ ಸುಃಖಗಳಿಗೆ ಭಾಗಿಯಾಗುತ್ತಿದ್ದನು. ಆದ್ದರಿಂದ ಸಿದ್ದ ಮಲೆನಾಡಿಗೆ ಮನೆ ಮಗನಾಗಿದ್ದನು. ಸಿದ್ದ ಕಾಡಿಗೆ ಹೋದಾಗ ಒಂದಿನ ಪುಣಿಗನ ಬೆಕ್ಕು ಸಿಕ್ಕಿದ್ದು ಒಂದು ಅಪರೂಪದ ಬೇಟೆಯಾಗಿತ್ತು ಅವತ್ತು ಅದನ್ನು ಪಾರೆಸ್ಟ ಗಾರ್ಡ ಕೇಳಿದ್ರೆ ಕೊಡೆಲ್ಲ ಅಂದಿದ್ರಿಂದ ಗಾರ್ಡು ಸಿದ್ದನ ಮೇಲೆ ಒಂದು ಕಣ್ಣಿಟ್ಟಿದ್ದರು ಸಿದ್ದನನ್ನು ಸರಕಾರಿ ಕಾನೂನು ಬಾಹಿರವಾಗಿ ಕಾಡಿಗೆ ನುಗ್ಗಿ ಬೇಟೆ ಯಾಡುತ್ತಿದ್ದನು. ಇದನ್ನು ಗಮನಿಸಿದ ಗಾರ್ಡು ಸರಕಾರಿ ಕಾನೂನಿನಂತೆ ಇದ್ದನು ಒಂದಿನ ಸಿಕ್ಕಿಬಿದ್ದ ಅದಕ್ಕೆ ಗಾರ್ಡು ಸಿದ್ದನನ್ ಗದರಿಸಿ ಅವತ್ತು ಪುಣಿಗನ್ ಬೆಕ್ಕು ಕೇಳಿದ್ರೆ ಅದೇನ್ ಹೇಳಿದೆ ? ಸಾಹೇಬ್ರಾಹತ್ರ ಬೊಗಳು ಅಂದ ೬ ಅಡಿ ಎತ್ತರದ ಪಾರೆಸ್ಟರ್ ಸಿದ್ದನ್ ಕುತ್ತಿಗೆಗೆ ಕೈಹಾಕಿ ನೀನೇ ಏನೋ? ಸಿದ್ದ ಇದಕ್ಕೆಲ್ಲ ನೀನೇ ಕಾರಣ ಕಾಡು ನಿನ್ನ ಅಪ್ಪಂದೇನು? ದಿನಾ ಶಿಕಾರಿ ಮಾಡ್ತಿಯಾ ಅದೇನೋ ಕೇಳಿದ್ರೆ ಅದ್ಯಾರಿಗೋ ಬೇಕಂತಿಯಾ ಅವಳೇನ್ ತ್ರಿಪುರ ಸುಂದರೀನಾ? ನಿನ್ನ ಹೂತಾಕಿಬಿಡ್ತಿನಿ ಸುವರ್ ಅಂತ ಸಾಹೆಬ್ರು ತರಾಟೆಗೆ ತೆಗೆದುಕೊಂಡರು. ಇಲ್ಲಿ ಸರಕಾರಿ ಕಾನೂನುಗಳೇಗೋತಿಲ್ಲದ ಹಳ್ಳಿ ಜನರಿಗೆ ಹೊಟ್ಟೆ ತುಂಬಿಸಿಕೊಳ್ಳುವ ಮಾರ್ಗ ಮಾತ್ರಗೊತ್ತೆ ಹೊರತು ಇಂತಹ ಕಾಯ್ದೆ ಕಾನೂನುಗಳನ್ನು ಅರಿತವರಲ್ಲ ಅವತ್ತು ಮಂಗನ ಬ್ಯಾಟೆ ವಡೆಯರ ಸಮ್ಮತಿಯಂತೆ ನಡೆದಿದ್ದರಿಂದ ವಡೇರು ಪೊಲಿಸರಿಗೆ ಸಮಾಧಾನಿಸಿದ್ರು ಅವತ್ತು ವಡೇರ ಮಾಲಿನಂತೆ ಮಂಗಗಳನ್ನು ಕಾಡಿನಿಂದ ಪೇಟೆಗೆ ಸಾಗಿಸಲಾಯಿತು.[೮]

ಪ್ಯಾಟೆಗೆ ಬಂದ ಮಂಗಗಳು ಪ್ಯಾಟೆಯ ಅಂಚಿನಲ್ಲಿರುವ ಮಠದ ಸ್ವಾಮೀಜಿಯ ಮೇಲೆ ದಾಳಿ ಮಾಡಿದವು. ಮಠದ ಸ್ವಾಮಿಜಿಯ ವಿಷಯ ತಿಳಿದ ಪೊಲಿಸರಿಗೆ ನೆನಪಿಗೆ ಬಂದವನೇ ಸಿದ್ಧ, ಆದ್ದರಿಂದ ಸಿಧ್ದನಲ್ಲಿ ರೆಂಜರ್ ಪಾರೆಸ್ಟರ್ ಬಂದು ಮಂಗಗಳನ್ನು ಹಿಡಿಯಬೇಕೆಂದು ಬೇಡಿಕೊಂಡರು. ಆದ್ರೆ ಸಿದ್ಧ ಒಪ್ಪದಿದ್ರಿಂದ ಸಾಹೆಬ್ರು ಸಿದ್ದನ ಜೇಬಿನಲ್ಲಿ ೨ ದೊಡ್ಡ ನೋಟನ್ನು ಹಾಕಿದರು ಕಾಂಚಣದ ದರ್ಭಾರಿನಲ್ಲಿ ಮೆರೆಯುತ್ತಿರುವ ಸರಕಾರವು ಸಹ ಕಣ್ಣು ಮುಚ್ಚಿರವುದನ್ನು ಕಾಣಬಹುದಾಗಿದೆ. ಹಳ್ಳಿಗರಿಗೆ ಕಾನೂನಿನ ಅರಿವು ಇಲ್ಲದಾಗ ಕಾನೂನಿನಲ್ಲಿ ಸಿಕ್ಕಿಹಾಕಿಸಿ ತಮ್ಮ ತರಾಟೆಗೆ ತಗೊಂಡು ಚಿತ್ರಹಿಂಸೆಗೆ ಒಳಪಡಿಸಿದಾಗ ಹಳ್ಳಿಗರ ನೋವು ಸರಕಾರದವರಿಗೆ ಅರಿಯದಾಯಿತು. ಆದರೇ ಗುಡಿಯ ಒಬ್ಬ ಪೂಜಾರಿಯ ಮೇಲೆ ಮಂಗವುದಾಳಿಮಾಡಿದ್ದರಿಂದ ಎಚ್ಚೆತ್ತ ಕ್ರಮಗಳು ನುರಾರು ಅದೇ ರೈತರಿಗೆ ತೊಂದರೆ ಕೊಡುತ್ತಿದ್ದಾಗ ಯಾವ ಸರಕಾರದವರು ಮಲೇನಾಡಿನತ್ತ ಕಣ್ಣು ಸಹ ಎತ್ತಿತೋರದಿರುವುದನ್ನು ಈ ಹಿಂದೆ ಅರಿತುಕೊಂಡಿದ್ದೇವೆ.

ಒಬ್ಬ ಸಾಮಾನ್ಯ ಬಡ, ಕೂಲಿಕಾರ್ಮಿಕ, ಬೇಟೆಯನ್ನೆ ತನ್ನ ಕಸುಬನ್ನಾಗಿಸಿಕೊಂಡು ಬದುಕುತ್ತಿದ್ದ ಸಿದ್ದನನ್ನು ಈ ಹಿಂದೆ ಚಿತ್ರಹಿಂಸೆಗೆ ಗುರಿಪಡಿಸಿದ ಅದೇ ಸರಕಾರವು ಬಂದು ಬೇಡಿಕೊಳ್ಳುವುದನ್ನು ನೋಡಿದರೆ ಅಕ್ಷರಸಹ ನಿಜವಾದದ್ದು ಸರಕಾರದವರು ಸಿದ್ದನತ್ರ ಬಂದು ಅಯ್ಯಾ ಮಾರಾಯಾ ಹಾಗೆಲ್ಲ ಮಾಡೋಹಾಗಿಲ್ಲ ಮೇಲಿನ ಅಧೀಕಾರಿಗಳೆಲ್ಲ ಬಂದು ಕೂತಿದ್ದಾರೆ, ನಾವು ಅವರಿಗೆ ಮುಖ ತೊರಿಸಬೇಕಾಬೇಡವ ಏನಾದರು ಮಾಡಿ ಜೀವಂತವಾಗಿ ಮಠದ ಮಂಗಗಳನ್ನು ಹಿಡಿಯೊಕೆ? ಒಂದು ಪ್ಲಾನುಮಾಡು ನಮ್ಮ ಇಡೀ ಸ್ಟಾಪು ನಿನ್ನ ಜೊತೆ ಇರ್ತಿವಿ ಅಂದ್ರು ಸಿದ್ದ ಆಗಲಿ ನಾಳೆ ಬರ್ತಿನಿ ಸಾರ್ ಅಂದು ಕೆಳಪ್ಯಾಟೆ ಇರುವಲ್ಲಿ ಹೊರಟು ಹೊದನು.

ಮಲೆನಾಡಿನ ಶತ್ರು ಮಂಗನಿಂದ ಕಂಡು ಬರುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಸರಕಾರದವರು ಸೋತು ಸುಣ್ಣವಾಗುತ್ತಿದ್ದಾರೆ. ವಿದ್ಯೇ, ಬುದ್ದಿ, ಇದ್ರು ಸಾಮಾನ್ಯ ಪ್ರಾಣಿಯನ್ನು ನಿಯಂತ್ರಣದಲ್ಲಿಡಲು ಹೆಣಗಾಡುತ್ತಿದ್ದಾರೆ ಏಕೆಂದರೆ ಸರಕಾರಿ ಕಾನೂನಿನಂತೆ ಮಂಗನ ಬ್ಯಾಟೆ ಮಾಡಂಗಿಲ್ಲ ಆದರೇ ಅವುಗಳನ್ನು ಹಿಡಿದು ಬೋನಲ್ಲಿ ತುಂಬೋದು ಅಷ್ಟು ಸುಲಭವಲ್ಲ. ಸಿದ್ದ ಅದೇ ವಿಷ್ಯ ಯೊಚಿಸುತ್ತಿರುವಾಗ್ಲೇ ಎದುರಿಗೆ ಗೋವಿಂದ ಬಂದು ಸಿದ್ದನಹತ್ರ ಮಠದ ಮಂಗಗಳನ್ನು ಹಿಡಿಯೋ ವಿಷ್ಯವನ್ನೆ ಹೆಳ್ದ. ಅದಕ್ಕೆ ಸಿದ್ದ ಪಾರೆಸ್ಟ್‌ನವರು ಹೇಳ್ತಾರೆ ಅಂತ ನೀವು ನಂಬಿರಲ್ಲಾ! ಜೀವಂತ ಬೋನಿಗೆ ತುಂಬೊಕ್ಕೆ ಅವೇನ್ ಹುಲಿನಾ.. ದನಾನಾ? ಮಂಗಗಳು ನೆಲದ ಮ್ಯಾಲೆ ಓಡಾಡ್ತಾವ? ಅದೇಲ್ಲಾ ಆಗೂಹೋಗೊಮಾತಾ? ನಿಮ್ಮ ಹುಚ್ಚು ಹಾಳಾಯ್ತು ಎಂದು ಸಿದ್ದ ಗೋಪಿಂದನಿಗೆ ಹೇಳಿದನು. ಬೇಟೆಗಾರನು ಪ್ರಾಣಿಗಳನ್ನು ಹಿಡಿಯುವ ತಂತ್ರವನ್ನು ಮೊದಲೇ ಕಲಿತುಕೊಂಡಿದ್ದರೂ ಕೆಲವು ವಿಶೇಷ ಪ್ರಾಣಿಗಳನ್ನು ಬೇಟೆಯಾಡಲು ಹಿಂಜರಿಯುತ್ತಾನೆ. ಅದೇ

ರೀತಿಯಲ್ಲಿ ಸಿದ್ದನು ಸಹ ಮಂಗಗಳ ಬ್ಯಾಟೆ ವಿಷಯದಲ್ಲಿ ಹಿಂಜರಿಯುತ್ತಿರುವುದನ್ನು ಗಮನಿಸಿದ ಗೋವಿಂದ ಸಿದ್ದನಿಗೆ ಮಿಲಿಟ್ರಿ ಹೋಟಲಿಗೆ ಕರೆದುಕೊಂಡುಹೋಗಿ ಮೀನ್ ಊಟಮಾಡ್ಸಿ ಮಂಗನ ಹಿಡಿಯೋ ಚರ್ಚೆ ಶೂರುಮಾಡಿದ ಸಿದ್ದ ಬೋನ್ ತಯಾರಿಗಾಗಿ ಅಡಿಕೆಮರ ಬೇಕು ಮತ್ತು ಬೋನನ್ನು ತಯಾರಿಸಲು ರಾಘವಾಚಾರಿಯಿಂದಲೇ ಸಾಧ್ಯ ಅಂದ ಅದಕ್ಕೆ ಚಿಂತಿತನಾದ ಗೋವಿಂದ ಅದ್ಯಾಕೆಚಿಂತೆ ಮಾಡ್ತಿಯ ರಾಘವಾಚಾರಿನ್ ನಾನೇ ಒಪ್ಪಿಸ್ತಿನಿ ಬಿಡು ಅಂತ ಸಿದ್ದನೆ ಒಪ್‌ಕೊಂಡು ಅಧಿಕಾರಿಗಳು ಸಭೆ ಸೇರಿದಲ್ಲಿ ಬಂದುರು. ಬೇಟೆಗಾರನಿಗೆ ಮಾತ್ರ ಬೇಟೆಮಾಡುವ ಒಳಗುಟ್ಟಿನ ಮಾರ್ಗಗಳು ಗೋತ್ತಿರುತ್ತವೆ ಹೋರತು ಬೇರೆಯವರಿಗಲ್ಲ ಅದ್ರಲ್ಲೂ ಸಿದ್ದ ಎಲ್ಲವನ್ನು ಅರಿತವನಾಗಿದ್ದನು.

ಸಭೆ ಸೇರಿದ್ದಲ್ಲಿ ಬಂದ್ರು ಆಗ ಸಿದ್ದನನ್ನು ಆದಿವಾಸಿ ನಾಯಕ, ಗಿಡಮೂಲಿಕೆ ಔಷದ ತಜ್ಞ, ಮಂಗನ ಬ್ಯಾಟೆಗೆ ಪರಿಣಿತ ಅಂತ ಪರಿಚಯಿಸಿದ್ರು ಸಿದ್ದಂಗೆ ಸಭೆಕುರಿತು ಮಾತನಾಡಲು ಹೇಳಿದಾಗ "ಸಿದ್ದ ಎದ್ದು ನಿಂತ ಗಾರ್ಡಗೆ ಉದ್ದೇಶಿಸಿ ಮಂಗನ ಬ್ಯಾಟೆ ಮಾಡೊಂಗಿಲ್ಲ ಅಂತ ನಮಗೆಲ್ಲ ತಾಕಿತು ಮಾಡಿದ್ರು ಕಾಡಿನಲ್ಲಿನ ಮಂಗಗಳನ್ನು ಪ್ಯಾಟೆಗೆ ಬಿಟ್ರ ಅದ್ರಿಂದ ಪ್ಯಾಟೆ ಮನುಷ್ಯರು ತಿಂಡಿಕೊಟ್ಟು ಅವು ಜನರ ಬುದ್ದಿ ಕಲಿತವು ಅವು ಮಠಕ್ಕೂ ಸೇರಿದ ಮೇಲೆ ಕೊಬ್ಬಿಹೋಗಿವೆ". ಅದಕ್ಕೆ ಅವುಗಳಿಂದ ಊರಾಗ್ ಇರೊಂಗಿಲ್ಲ ಅನ್ನೊಕಾಲ ಬಂದಿದೆ "ನಾನು ಮತ್ತು ಗೋವಿಂದ ಸೇರಿ ಒಂದು ಪ್ಲಾನ್ ಮಾಡೀವಿ ಮಂಗಗಳನ್ನು ಬೋನಿಗೆ ತುಂಬೋದು ಸುಲಭ ಕೆಲ್ಸ ಅಲ್ಲ, ನಮ್ಮ ಪ್ರಯತ್ನ ನಾವು ಮಾಡ್ತಿವಿ ಮಂಗಗಳು ಸ್ವಲ್ಪ ಸಿಗ್ತಾವೋ ಪೂರ್ತಿ ಸಿಗ್ತಾವೋ ಗೊತ್ತಿಲ್ಲ. ಆದ್ರೆ ನನ್ ಸಂಬಳ ನನಗೆ ಕೋಡಬೇಕು ಎಚಿದನು. ಮೊದಲು ಮಠದ ಬಾಗಿಲು ೩ ದಿನ ಬಂದ್ ಮಾಡಿ ಮಂಗಗಳನ್ನು ಉಪವಾಸ ಹಾಕಬೇಕು ಬೋನ್ ತಂದು ನಾನ್ ಹೇಳಿದ್ ಜಾಗದಲ್ಲಿ ಇಡಬೇಕು ಮಠದ ಒಳಗೆ ಯಾರು? ಬರಬಾರದು ಮಂಗಗಳಿಗೆ ಏನು? ಕೊಡಬಾರದು ಕುತುಕೊಂಡ ಕೊನೆಗೆ ಸಿದ್ದನ ಮಾತಿನಂತೆ ಅಪರೇಷನ್ ಮಂಕಿಯನ್ನು ಪ್ರಾರಂಭಿಸಲಾಯಿತು.

ಸಿದ್ದನನ್ನು ಕ್ಯಾರೆ ಎನ್ನದ ಸರಕಾರದವರು ಸಿದ್ದನಲ್ಲಿಗೆ ಬಂದು ಬೇಡಿಕೊಂಡರು ಒಬ್ಬ ಸಾಮಾನ್ಯ ಮನುಷ್ಯನಹತ್ರ ಅದ್ರಲ್ಲೂ ವಿದ್ಯೆಯಿಲ್ಲದವನ ಹತ್ರ ವಿದ್ಯೆ ಪಡೆದವರು ಬಂದು ಬೇಡಿಕೊಳ್ಳುವದೆಂದರೆ ಸುಲಭದ ವಿಷ್ಯನ ಸಿದ್ದ ಮೊದಲು ನಿರಾಕರಿಸಿ ಆ ಮೇಲೆ ಒಂದು ನಿರ್ದಾರಕ್ಕೆ ಬಂದು ಮಂಗನ ಹಿಡಿಯಲು ಒಪ್ಪಿಕೊಂಡುನು.

ಕೆಳವರ್ಗದಲ್ಲಿ ಜನಿಸಿದ ಸಿದ್ದನಿಗೆ ರಾಜಮರ್ಯದೆಯಿಂದ ಸರಕಾರಿ ಅಧಿಕಾರಿ ಜೋತೆಕೂತು ಮಾತನಾಡುವ ಅವಕಾಶ ಸಿಕ್ಕಿದ್ದು ತನ್ನ ಕುರಿತು ಸರಕಾರಿ ಅಧಿಕಾರಿಗಳು ಹೊಗಳಿದ್ದುನ್ನು ಸಿದ್ದ ಮೀಟಿಂಗ್ ಮುಗಿಸಿಕೊಂಡು ಪ್ಯಾಟೆ ಹೆಂಡ್ತಿ ಕೆಳಪ್ಯಾಟೆ ಹತ್ರ ಬಂದು ತನ್ನನ್ನು ಸರ್ಕಾರದವರು

ಹೋಗಳಿದ್ದು ಮುನ್ಸಿಪಾಲಿಟಿಯವರು ಹಾರ ಹಾಕಿದ್ದು ವಡೇರು ಗೌರವ ಕೊಟ್ಟಿದ್ದನ್ನು ಪ್ಯಾಟೆಗೆ ಹೇಳಿದಕ್ಕೆ ಪ್ಯಾಟೆ ದಿನದ ಸಾಹಸಗಳಲ್ಲಿ ಹತ್ತರಲ್ಲಿ ಹನ್ನೊಂದು ಎಂದುಕೊಂಡಳು; ಅದಕ್ಕೆ ಸಿದ್ದ ಮಂಗಗಳನ್ನು ಕೊಲ್ಲೊಹಂಗಿಲ್ಲ ಅದಕ್ಕೆ ನನ್ನ ಕರೆದಿದ್ದಾರೆ. ಕಾಂಟ್ರಾಟ್ ಮಾಡಿಕೊಂಡು ಬಂದಿನಿ ಅಂದ ಪ್ಯಾಟೆ ಮರುಉತ್ತರವಾಗಿ "ಅವಾಗೆಲ್ಲ ಕಾಡಿನ ಮಂಗನ ತಂದು ಪ್ಯಾಟೆಗ್ ಬಿಡೋದ್ ಆಯ್ತು ಈಗ ಪ್ಯಾಟೆಯಿಂದ ಕಾಡಿಗೆ ಬಿಡೊದಾ" ನಿಂಗೊಂದ್ ಬ್ಯಾರೆ ಕೆಲ್ಸಇಲ್ಲ ಜೀವಮಾನವೆಲ್ಲ ಮಂಗನ ಹಿಡಿಯೋದೆ ಆತು ಅಂದ್ಲು, ಇಲ್ಲಿ ಸರಕಾರದವರ ಹೋಗಳಿಕೆಗೆ ಗುರಿಯಾದ ಸಿದ್ದ ತನ್ನನ್ನು ಸರಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡಿದರಲ್ಲ ಎಂಬ ಖುಷಿಯಲ್ಲಿ ಏನೇ ಕೆಲಸ ಮಾಡೋಕೆ ಸಿದ್ಧ ಸಿದ್ದನಾಗಿದ್ದನು.

ಅಪರೇಷನ್ ಮಂಕಿ ಸುರುವಾಗಿತ್ತು ಸಿದ್ದ ಮತ್ತು ಗೋವಿಂದ ಸನ್ನೆ ತಂತಿ ಹಿಡಿದು ಬೋನನ್ನು ಕಾಯಿತಿದ್ರು ಸಿದ್ದ ಬೇಜಾರಾಗಿ ಮನೆಕಡೆ ಹೋಗಲು ಗೋವಿಂದನ ಕೈಲಿ ಸನ್ನೆ ತಂತಿಕೊಟ್ಟು ಹೋದಾ ಆದ್ರೆ ಗೋವಿಂದ ಸನ್ನೆ ತಂತಿ ಎಳೆಯಲು ಹೋಗಿ ಬೋನಿನಲ್ಲೆ ಸಿಕ್ಕಿಹಾಕಿಕೊಂಡು ಸಂಕಟ ಪರಿಸ್ಥಿತಿಯಲ್ಲಿದ್ದು ಸಿದ್ದನನ್ನೆ ನೆನೆದು ಸಿದ್ದ ನೀನು ಏಷ್ಟಾದರು ಬುದ್ದಿವಂತ ನಿನಗೆ ದ್ರೋಹ ಮಾಡೊಕೆ ಹೋಗಿ ನನಗೆ ಹಿಗಾಯ್ತು ಅಂತ ಗೋವಿಂದ ಆಂಜನೆಯಂಗೆ ಕೈಮುಗಿದು ತನ್ನ ಪೂರ್ವ ಇತಿಹಾಸವನ್ನು ಮರುಕಳಿಸಿಕೊಂಡನು. ಈ ಹಿಂದೆ ಸಿದ್ದ ಗೋವಿಂದರಿಬ್ಬರೂ ಸಹಪಾಠಿಗಳಂತೆ ಬೇಟೆಯಲ್ಲಿ ಒಂದಾಗಿದ್ದರು ಗೋವಿಂದ ಆಗ ಕೋವಿಯಿಂದ ಹೆಬ್ಬುಲಿಯನ್ನು ಹೋಡೆದು ಮಲೆನಾಡಿಗರಿಗೆ ಹೆಸರುವಾಸಿಯಾದವನು ಇಂದು ಬೋನಿನೊಳಗೆ ಸಿಕ್ಕಿಹಾಕಿಕೊಂಡು ತನ್ನ ಶಿಷ್ಯ ಸಿದ್ದನನ್ನು ನೆನಪಿಸಿಕೊಳ್ಳುವ ಸಂದರ್ಭಗಳು ಬಂದುಹೋಗುತ್ತವೆ ಬೇಟೆಯಲ್ಲಿ ಎಷ್ಟೇ ನಿಪುಣನಿದ್ದರು ತನ್ನ ತಂತ್ರಗಾರಿಕೆಯನ್ನು ಮರೆಯಬಾರದು ಕೆಲವು ಸಮಯ ಸಂದರ್ಭಗಳು ಹಾಗೆ ಇರುತ್ತವೆ ಎಂದು ತಿಳಿದಿರಬಾರದು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುತ್ತವೆ ಎಂಬುದು ಮರೆಯಬಾರದು.

ಮಂಗನ ಬ್ಯಾಟೆ ಮಲೆನಾಡ ಪರಿಸರ ಕಥನವನ್ನು ಓದುತ್ತಾಹೊದಂತೆಲ್ಲ ಕು. ವೀರಭದ್ರಪ್ಪರ 'ಬೇಟೆ' ಕತೆಯಲ್ಲಿನ ದೃಶ್ಯಗಳು ನೇನಪಿಗೆ ಬರುತ್ತವೆ. ಮಂಗನ ಬ್ಯಾಟೆ ಕಥನದಲ್ಲಿ ಮಂಗನ ಬ್ಯಾಟೆಯನ್ನು ಎತ್ತಿ ತೋರಿಸಿಕೊಟ್ಟಿದ್ದಾರೆ. ಆದರೆ ಕು. ವೀರಭದ್ರಪ್ಪರ ಬೇಟೆ ಕತೆಯಲ್ಲಿ ಚಿರತೆಯ ಬ್ಯಾಟೆಯ ಜೊತೆಗೆ ಮನುಷ್ಯ-ಮನುಷ್ಯರ ನಡುವನ ಬ್ಯಾಟೆಗಳು ಕಂಡುಬರುತ್ತವೆ. ಮಂಗನ ಬ್ಯಾಟೆಯಲ್ಲಿ ಸಿದ್ದನನ್ನು ಹೋಗಳಿದರೇ ಕು.ವೀರಭದ್ರಪ್ಪರ ಬೇಟೆ ಕತೆಯಲ್ಲಿ ಚಂದ್ರನನ್ನು ಉತ್ತುಂಗತೆಗೆ ತಂದಿರುವುದು ಈ ಎರಡು ಕಥೆಗಳಲ್ಲಿನ ಆಶಯಗಳಂತು ಬೇರೆ ಬೇರೆ ಯಾಗಿರುವಂತಿವೆ.

ಮಂಗನ ಬ್ಯಾಟೆಯಲ್ಲಿ ಸಿದ್ದನು ಗೌಡರ ಜೀತದಾಳಗಿ ಮೆಚ್ಚಿಗನಾದಂತೆ. ಕು. ವೀರಭದ್ರಪ್ಪರ ಬೇಟೆ ಕಥೆಯಲ್ಲು ಚಂದ್ರ ಗೌಡರ ಜೀತದಾಳಾಗಿ ಮೆಚ್ಚಿಗೆಗೆ ಪಾತ್ರನಾಗುತ್ತಾನೆ ಜೊತೆಗೆ ಗೌಡರ ಮಗಳು ಗೌರಿಯನ್ನು ಕದ್ದು ಮುಚ್ಚಿ ಪ್ರೀತಿಸುತ್ತಿರುತ್ತಾನೆ. ಶ್ರಾವಣ ಮಾಸದಲ್ಲಿ ಊರಿನಲ್ಲಿ ಜೂಜಾಟಗಳು ನಡೆಯುವ ಪ್ರಸಂಗ ಬಂದಾಗ ಚಂದ್ರನು ಗೌಡನೊಂದಿಗೆ ಸವಾಲು ಒಡ್ಡಿ ೧೪ ಮಣದ ಗುಂಡನ್ನು ನಾನು ಎತ್ತಿದರೆ ನಿನ್ನ ಮಗಳು ಗೌರಿಯನ್ನು ಕೊಟ್ಟು ಮದುವೆ ಮಾಡಲು ಸವಾಲುಹಾಕಿ ಗೆದ್ದರೂ ಗೌಡನು ತನ್ನ ದರ್ಬಾರಿನಂತೆ ಕೆಳವರ್ಗದವರಿಗೆ ತನ್ನ ಮಗಳನ್ನು ಕೊಡಲು ನೀರಾಕರಿಸಿದನು. ಮುಂದೆ ಒಂದು ದಿನ ಊರಿಗೆ ಚಿರತೆಯ ಕಾಟ ಬಂದೊದಗಿದಾಗ ಗೌಡ ಚಂದ್ರನನ್ನು ಕರೆದು ಆ ಚಿರತೆಯನ್ನು ಬೇಟೆಯಾಡಿ ನನಗೆ ತಂದೊಪ್ಪಿಸಿದರೇ ನನ್ನ ಮಗಳನ್ನು ನಿನಗೆ ಕೊಡುವುದಾಗಿ ಒಪ್ಪಿಕೊಂಡನು. ಮಾತಿನಂತೆ ಚಂದ್ರ ಒಬ್ಬನೇ ಕಾಡನ್ನು ಪ್ರವೇಶಿಸಿ ಚಿರತೆಯನ್ನು ಬೇಟೆಯಾಡಿ ಸಾಯಿಸಿ ಹೊತ್ತಿಕೊಂಡು ಊರಿಗೆ ಬಂದು ಗೌಡನಲ್ಲಿಗೆ ಬಂದು ಒಪ್ಪಿಸಿ ತನ್ನ ಪ್ರಿಯತಮೆ ಗೌರಿಯನ್ನು ಮದುವೆಯಾಗುವ ಸಂದರ್ಭಗಳು ಕುಂ. ವೀರಭದ್ರಪ್ಪರ ಬೇಟೆ ಕಥೆಯಲ್ಲಿ ಕಂಡುಬರುತ್ತವೆ. ಬೇಟೆ ವೃತ್ತಿಯು ಒಳ್ಳೆಯ ಕೇಲಸ ಕಾರ್ಯಗಳಿಗೂ ಉಪಯೋಗವಾಗಿದೆ. ಕೆಟ್ಟ ಕೆಲಸ ಕಾರ್ಯಗಳಿಗೂ ಉಪಯೋಗವಾಗಿದೆ ಎಂಬುದು ಸತ್ಯ ಬ್ಯಾಟೆ ಮಾಡೊದ್ರಿಂದ ಕಾಡು ಪ್ರಾಣಿಗಳು ನಾಶವಾಗುತ್ತವೆ. ಹೊರತು ಕಾಡು ನಾಶವಾಗಲಾರದು.[೯]

ಬಾಯಿಯಲ್ಲಿ ಬಿದ್ದ ಚಿರತೆ:

ಚಿಕ್ಕ ಆಕಾರದ ಚಿರತೆಗಳಿಗೆ ಕುರ್ಕಾ ಎನ್ನುತ್ತಾರೆ. ಇವು ಹೆಚ್ಚಾಗಿ ಗ್ರಾಮಗಳ ಸುತ್ತ ಇರುವ ಕುರುಚಲು, ಕಾಡು, ಅರಣ್ಯ, ಇಲಾಖೆಯ ಪ್ಲಾಂಟೋಷನ್‌ಗಳಲ್ಲಿ ವಾಸಿಸುತ್ತದೆ. ಈ ಪ್ರಾಣಿಗಳು ತಮ್ಮ ಆಹಾರಕ್ಕಾಗಿ ಸಾಮಾನ್ಯವಾಗಿ ಕುರಿ, ಮೇಕೆ, ಹಂದಿ, ಆಕಳು, ಎಮ್ಮೆಯ ಕರುಗಳು, ನಾಯಿ, ಕೋಳಿ, ಇತ್ಯಾದಿ ಪ್ರಾಣಿಗಳನ್ನು ಅವಲಂಬಿಸಿರುತ್ತವೆ. ಈ ಚಿರತೆಗಳು ಹಾಳು ಬಿದ್ದ ಊರುಗಳು ಕೋಟೆ ಕೋತ್ತಲುಗಳು, ಹಾಳು ಮನೆಗಳು, ಪಾಳು ಬಿದ್ದ ದೇವಾಲಯಗಳಲ್ಲಿ ಕೂಡಾ ವಾಸಿಸುತ್ತವೆ. ದೈರ್ಯವಂತ, ಆಸೆಬುರುಕ, ಈ ಪ್ರಣೀ ಬೇಟೆಯಾಡುವ ಭರದಲ್ಲಿ ಗೋಂದಲಕ್ಕೊಳಗಾಗಿ ಬಾವಿಗಳಲ್ಲಿ ಬೀಳುವುದು ದನದ ಕೊಟ್ಟಿಗೆಯೊಳಗೆ ಸಿಕ್ಕಿ ಹಾಕಿಕೊಳ್ಳುವದು ನಾವು ಕಂಡಿರುವ ಸತ್ಯ ಘಟನಾವಳಿಗಳಾಗಿವೆ. ಅದರಲ್ಲೂ ಬಾವಿಗೆ ಬಿದ್ದ ಚಿರತೆಯ ಕೂಗಾಟ, ಚೀರಾಟಗಳನ್ನು ಶಾಲಾದಿನದ ಪುಸ್ತಕದಲ್ಲಿಯೆ ಓದಿ ಕಲಿತುಕೊಂಡಿದ್ದೇವೆ.

ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲೂಕಿನಲ್ಲಿ ಹಟ್ಟಿ ಅರಣ್ಯ ಪ್ರದೇಶದಲ್ಲಿ ಎಲೆ ಉದುರುವ ಕಾಡುಗಳು, ಕುರುಚಲು ಅರಣ್ಯಗಳು ಕಾಣಿಸುತ್ತವೆ. ಚನ್ನಗಿರಿಯಿಂದ ೪ ರಿಂದ ೫ ಕಿಮೀ ದೂರದಲ್ಲಿ ಅಜ್ಜನಹಳ್ಳಿ ಗ್ರಾಮದ ಪಾಳು ಬಿದ್ದ ಬಾಪಿಯಲ್ಲಿ ೧೯೯೦ರ ಡಿಸೆಂಬರ್‌ನ ಚಳಿಯಲ್ಲಿ ಎಮ್ಮೆ ಕಾಯುವ

ಹುಡುಗನಿಗೆ ಹಾಳುಬಾವಿಯಲ್ಲಿ ಚಿರತೆ ಇದ್ದಿರುವದನ್ನು ಕಂಡನು ಆ ವಿಷಯವನ್ನು ಊರಿನ ಜನರಿಗೆ ತಿಳಿಸಿದ ಹಾಗೆಯೆ ಅರಣ್ಯ ಇಲಾಖೆಯ ಗಮನಕ್ಕೆ ತರಲಾಯಿತು, ಅರಣ್ಯ ಇಲಾಖಾ ಸಿಬ್ಬಂದಿಗಳು ಬಂದು ನೋಡಿ ಬಾವಿಸುತ್ತ ರಕ್ಷಣಾಗೋಡೆ ಇಲ್ಲದ್ದರಿಂದ ಸುರಕ್ಷತಾ ಕ್ರಮಕೈಗೊಂಡರು. ಆ ಬಾವಿಯನ್ನು ಇಣಕಿ ನೋಡಿದಾಗ ೩೦ ಅಡಿ ಆಳದ ಪಾಳು ಬಾವಿ ೬ ರಿಂದ ೭ ಅಡಿ ವ್ಯಾಸವಿತ್ತು. ಆ ಬಾವಿಯಲ್ಲಿ ೨೦-೨೫ ಅಡಿ ಎತ್ತರದ ಎರಡು ಬೊಂಬುಗಳನ್ನು ಹಗ್ಗಕಟ್ಟಿ ಅಲ್ಲಲ್ಲಿ ಒಂದು ಸಣ್ಣ ಕೋಲುಗಳನ್ನು ಇರಿಸಿ ಭದ್ರಮಾಡಿ ಬಾವಿಯಲ್ಲಿ ಇಳಿಸಿದೆವು ಚಿರತೆ ಘರ್ಜಿಸಿತು. ತೆರೆದ ಬಾವಿಗೆ ಬಲೆಯನ್ನು ಮುಚ್ಚಿ ಭದ್ರಗೂಟನೆಟ್ಟು ಬಲೆಯಿಂದ ಮಾಡಿದ ಕೋಳವೆಯಾಕಾರದಲ್ಲಿ ಸುತ್ತಿ ಬೋನಿನ ಬಾಯಿಗೆ ಜೋಡಿಸಿದೆವು ಬಲೆಯಿಂದ ಮಾಡಿದ ಕೊಳವೆ ಒಳಗೆ ಕಲ್ಲುಕಟ್ಟಿ ಕೋಳವೆಯ ಮೇಲ್ಭಾಗವನ್ನು ದಾರದ ಸಹಾಯದಿಂದ ಮೇಲೆತ್ತಿ ಕಟ್ಟಿದೆವು ಚಿರತೆ ಬೋನಿನ ಮೆಟ್ಟಿಲುಗಳನ್ನು ಹತ್ತಿ ಮೇಲೆ ಬಂದು ಬಲೆಗೆ ಬಿದ್ದ ಚಿರತೆಯನ್ನು ಹಿಡಿದರು.[೧೦] ಆ ಚಿರತೆಯನ್ನು ಅರಣ್ಯ ಸಿಬ್ಬಂದಿಗಳು ಲಕ್ಕವಳ್ಳಿ ಅರಣ್ಯಕ್ಕೆ ಸಾಗಿಸಿ ಜನರಿಗೆ ರಕ್ಷಣೆಯನ್ನು ನೀಡಿದಂತಾಯಿತು.

ಕಾನೂರು ಹೆಗ್ಗಡಿತಿ ಕಾದಂಬರಿಯ ಮೊದಲ ಪುಟದಲ್ಲೆ ಬರುವ ಚೆನ್ನಯ್ಯನ ಮೀನು ಬೇಟೆ ಮತ್ತು ಸೆರೆಗಾರ ರಂಗಪ್ಪ ಶೆಟ್ಟಿಯ ಕೋಳಿ ಬೇಟೆ ಇದಕ್ಕೆ ಸರಿಯಾದ ಸಾಕ್ಷಿ, ಹೂವಯ್ಯ ರಾಮಯ್ಯರಿಗೆ ಊಟ ಹಾಕಬೇಕೆಂದು ತಿರ್ಮಾನಿಸುವ ಚಿನ್ನಯ್ಯ ರಸ್ತೆಯ ಪಕ್ಕದ ಕೆರೆಯಲ್ಲಿ ತನ್ನ ಪಾಡಿಗೆ ತಾನಿದ್ದ ದೊಡ್ಡ ಮೀನೊಂದನ್ನು ಗುಂಡಿಟ್ಟುಕೊಂದ ಅನಿರೀಕ್ಷಿತವಾಗಿ ಮನೆ ಸೇರಲು ತೊಂದರೆಯಾಗಿ ಮೀನನ್ನು ಅಲ್ಲೇ ಬಿಟ್ಟು ಹೋಗುತ್ತಾನೆ. ಆ ಸತ್ತ ಮೀನಿನ ಬಗ್ಗೆ ಕುವೆಂಪು ಹೇಳುವ ಪರಿ ಚಿನ್ನಯ್ಯನು ತನ್ನ ಮಿತ್ರ ಬಂಧುಗಳಿಂದ ಚಿರವಿಯೋಗ ಹೊಂದಿ ಕರೆಯಾಚೆಯದಡದಲ್ಲಿ ಕ್ರಿಮಿಕೀಟಗಳಿಗೆ ಆಹಾರವಾಗಿ ಕಳೆದುಹೋಯಿತು.[೧೧]

ಅಡಿ ಟಿಪ್ಪಣಿಗಳು

೧) ಕಲ್ಕುಳಿ ವಿಠಲ ಹೆಗ್ಗಡೆ ಮಂಗನಬ್ಯಾಟೆ-೨೦೧೨. ಪು. ೩೬

೨) ಅದೇ, ಪುಟ. ೪೦

೩) ಅದೇ, ಪುಟ. ೪೪

೪) ಅದೇ, ಪುಟ. ೫೦

೫) ಅದೇ, ಪುಟ. ೫೦-೫೩

೬) ಅದೇ, ಪುಟ . ೭೦-೭೨

೭) ದೇವೇಂದ್ರ ಕುಮಾರ ಹರಾರಿ ಮತ್ತು ಡಾ.ಸಂಧ್ಯಾರೆಡ್ಡಿ"ಗ್ರಾಮೀಣ ಬೇಟೆಗಳು-೨೦೦೦...ಪು. ೪೪-೫೫

೮) ಅದೇ, ಪುಟ . ೧೮೦

೯) ಕುಂ.ವೀರಭದ್ರಪ್ಪರ ಬೇಟೆ ಕಥೆ

೧೦) ಡಾ. ಟಿಎಸ್.ರಮಾನಂದ್ ವೈದ್ಯರ ಶಿಕಾರಿ-೨೦೦೫. ಪು. ೩೬-೩೭

೧೧) ಕುವೆಂಪು ಕಾನೂರು ಹೆಗ್ಗಡಿತಿ. ಪು. ೧೫-೧೯

೧೨) ಬೆನಕನಹಳ್ಳಿ ಜಿ.ನಾಯಕ 'ವಲಸೆ'ಕಾದಂಬರಿ

ಅಧ್ಯಾಯ–೪

ಪ್ರಾಣಿ ಜಗತ್ತಿನೊಂದಿಗೆ ಮಾನವನ ಸಂಬಂಧ

- ಪ್ರಾಣಿ ಮತ್ತು ಮನುಷ್ಯನ ನಡುವಿನ ಸಂಬಂಧ
- ಪ್ರಾಣಿ ಮತ್ತು ಪ್ರಾಣಿಗಳ ನಡುವಿನ ಸಂಬಂಧ

ಮನುಷ್ಯ-ಪ್ರಾಣಿಗಿರುವ ಸಂಬಂಧವು ಅನಾದಿ ಕಾಲದಿಂದಲೂ ಹರಿದು ಬಂದಿದೆ. ಈ ಸಂಬಂಧಗಳು ಅನೋನ್ಯ ಸಂಬಂಧವಾಗಿಯು ಬೆಳಕು ಬೀರಿವೆ. ಪ್ರಾಚೀನ ಕಾಲದಿಂದಲು ಮನುಷ್ಯನ ಬದುಕು ಪ್ರಾಣಿಯೊಂದಿಗೆ ಸಾಗಿ ಬಂದಿರುವದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯದ ಮುಂಚೆ ಮತ್ತು ಸ್ವಾತಂತ್ರ್ಯದ ನಂತರದ ಘಟನಾವಳಿಗಳನ್ನು ಗಮನಿಸಿದಾಗ ಕೆಲವು ನಿಷೇಧಗಳನ್ನು ಸರ್ಕಾರವು ಹೇರಿತ್ತು. "ಹೆಂಡ ಮಾಡಬಾರದು, ಬ್ಯೆನೆ ಕಟ್ಟಬಾರದು, ಕಾಡೊಳಗೆ ಹೋಗಬಾರದು, ಮಂಗನ ಹೊಡೆಯಬಾರದು, ದನದ ಮಾಂಸ ತಿನ್ನಬಾರದು ಇತ್ಯಾದಿ ಇವು ರೈತಾಪಿ ಮತ್ತು ಕೆಳಸ್ತರದ ಜನರ ಬದುಕನ್ನು ನಿರಾಕರಿಸುತ್ತದೆ. ಬಯಲು ಸೀಮೆಯಿಂದ ಮಲೆನಾಡಿಗೆ ಬಂದ ಶಾಲಾ ಮೇಷ್ಟರೊಬ್ಬರು ಅರಿಯದೇ ಹಾವು ಹೊಡೆದು ದಂಡ ಕಟ್ಟುವದು ಇದೇ ರೀತಿ ಮಲೆನಾಡಿನ ಯುವಕನು ಬೆಂಗಳೂರಿನಲ್ಲಿ ಮಂಗವನ್ನು ಕೊಂದು ಅಪರಾಧಿಯಾಗುವದು ಇದೇ ರೀತಿ ಲೇಖಕರು ಮಲೆನಾಡಿನ ಬ್ರಾಹ್ಮಣರಿಗೂ ದಲಿತ ಶೂದ್ರರಿಗೂ ಇರುವ ಜೀವನ ನಿರ್ವಹಣೆಯಲ್ಲಿರುವ ಭಿನ್ನತೆಯನ್ನು ಎತ್ತಿತೋರಿಸಿದ್ದಾರೆ. ಕಾಡಿನಲ್ಲಿ ಬದುಕುವ ಪ್ರತಿಯೊಂದು ಪ್ರಾಣಿಯು ಸದಾಕಾಲ ಶತ್ರುವಿನ ದಾಳಿಯ ಬಗ್ಗೆ ಆತಂಕದಲ್ಲಿಯೇ ಇರುತ್ತ ಸ್ವಚ್ಛಂದ ಬದುಕು ಸಾಗಿಸುತ್ತಿರುತ್ತದೆ.

ಪರಿಸರಕ್ಕೆ ತಕ್ಕಂತೆ ಜನರ ಸಂಪ್ರದಾಯ, ಆಚಾರ, ವಿಚಾರಗಳು ಇರುತ್ತವೆ ಅನ್ನೊದು ಎಲ್ಲರಿಗೂ ಗೊತ್ತು. ಮಲೆನಾಡಿನವರಿಗೆ ಪ್ರಥಮ ಶತ್ರು ಮಂಗ ಅದೇರಿತಿ ಬಯಲು ಸೀಮೆ ಜನರಿಗೆ ನಾಗರ ಹಾವು ಶತ್ರುವಾಗಿದೆ. ಬ್ರಿಟೀಷರೂ ತಮ್ಮ ಕಾಲದಲ್ಲಿ ಕಾಡಿನಲ್ಲಿ ಶಿಕಾರಿ ಮಾಡುವುದನ್ನು ಅಡ್ಡಿಪಡಿಸುತ್ತಿರಲಿಲ್ಲ ತಾವು ಶಿಕಾರಿ ಮಾಡೋಕೆ ಅಂತ ನಿಗದಿಪಡಿಸಿಕೊಂಡ ಕಾಡು ಬಿಟ್ಟು ಉಳಿದಂತೆ ಶಿಕಾರಿ ಮಾಡಿದ್ರೆ ಕೆಳ್ತಿರಲಿಲ್ಲ ಆದರೇ ಸ್ವಾತಂತ್ರ್ಯ ನಂತರ ಬ್ರಿಟೀಷರ ಕಾಲದಲ್ಲೂ ಇಲ್ಲದ ಕಾನೂನುಗಳು ಜಾರಿಯಾದವು.ಈ ಕಾಡನ್ನೆ ನಂಬಿ ಬದುಕುತ್ತಿದ್ದ ಸಿದ್ದನಂತವರ ಪಾಡು ನಾಯಿ ಪಾಡಾಯಿತು.[೧]

ಕಾಡು ನಿಷೇದದಿಂದ ಸಿದ್ದನು ಕೆಲಸ ಇಲ್ದೆ ಪೇಟೆಕಡೆ ಪ್ರಯಾಣ ಬೆಳೆಸುತ್ತಾನೆ. ಪೇಟೆಯ ಕದರಂಗಡಿಯ ಚಾಂದ್ ಸಾಬ್ರ ಹತ್ತಿರ ವಾದಮಾಡುತ್ತ ದಿನ ಕಳೆಯುತ್ತಾನೆ, ಅದರಲ್ಲೂ ಹಿಂದೂ ಮುಸ್ಲಿಂ ಜಾತಿಗಳ ನಡುವಿನ ವಾದಗಳು ಬೆಳೆಯುತ್ತವೆ. ಇಲ್ಲಿ ಸಿದ್ದನಂತೋರ ಪಾಡನ್ನು ಗಮನಿಸಿದಾಗ ಬೇಟೆಯಿಂದಾಗುವ ಅನುಕೂಲವನ್ನು ಗಮನಿಸಬಹುದಾಗಿದೆ. ಬೇಟೆ ನಿಷೇದದಿಂದಾಗಿ ಸಾಮಾನ್ಯ ಜನರು ತಮ್ಮನ್ನು ತಾವು ಸುಧಾರಿಸಿಕೊಳ್ಳಲಿಕ್ಕಾಗಿ ಹಾಗೂ ತಮ್ಮ ಕೌಟುಂಬಿಕ ಪರಿಸ್ಥಿತಿಯನ್ನು ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕವಾಗಿ ತುಳಿತಕ್ಕೊಳಗಾಗಿರುವ ತಮಗೆ ಬೇಕಾಗಿರುವ ಕನಿಷ್ಠ ಅವಶ್ಯತೆಗಳ ಪೂರೈಕೆಗಾಗಿ ಅಥವಾ

ನಿವಾರಣೆಗಾಗಿ ಬೇರೊಂದು ಪ್ರದೇಶಕ್ಕೆ ವಲಸೆಹೋಗಿ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾರೆ. ಸಿದ್ದ ಸಾಬಿಯನ್ನು ನಿಮ್ದೇಂತ ಜಾತಿ ಮಾರಾಯರೇ ಅದೆಂತಕ್ಕೆ ತುಣ್ಣಿಯನ್ನು ಕುಯ್ಯೊದು ಅಂದನು. ಅದಕ್ಕೆ ಸಾಬಿ ಅದನ್ ಕೊಯ್ದ್ರೇ ಸಂತಾನ ಉಂಟಾ ಅದು ಶುದ್ದಿ ಮಾಡುವುದು ದೇವರ ಸ್ಮರಣೆಗೆ ವಾಸನೇ ಬರಬಾರದು ಅಂತ ನೋಡು ಸಿದ್ದ ನೀವೂ ಕಲ್ಲು ಮರಸಿಕ್ಕಿದ್ದೆಲ್ಲಾ ದೇವರು ಅಂತಿರಾ ನಾಯಿ, ಮಂಗ, ದನ, ಯಾವುದು ದೇವರಲ್ಲ ಹೇಳು ಅವನ್ನೆಲ್ಲಾ ಬಡಿದು ತಿಂತಿರಾ ಆದರೇ ನಮಗ್ ಒಬ್ನೆ ದೇವರು ಅವಾಕಣ್ಣಿಗೆ ಕಾಣೋದಿಲ್ಲ ಅಂದ. ಇಂತಹ ವಿಷಯವನ್ನು ಗಮನಕ್ಕೆ ತೆಗೆದುಕೊಂಡರೇ "ಜನ ಮರುಳೋ ಜಾತ್ರೆ ಮರುಳೋ" ತಿಳಿಯದಾಗಬಹುದಾಗಿದೆ. ಜನರು ಇನ್ನೂ ತಮ್ಮಲ್ಲಡಗಿರುವ ಮೂಢನಂಬಿಕೆಗಳನ್ನು ಕೈಬಿಟ್ಟಿಲ್ಲ ಮೂಡನಂಬಿಕೆಯ ಆಚಾರಣೆಯಲ್ಲಿಯೇ ಇನ್ನೂ ದಿನಗಳನ್ನು ಜನರು ಕಳೆಯುತ್ತಿದ್ದಾರೆ. ಎಂಬುದನ್ನು ಗಮನಿಸಬಹುದಾಗಿದೆ. ಮತ್ತೊಂದೆಡೆ ಶಾಸ್ತ್ರದಲ್ಲೂ ನಂಬಿಕೆಯಿರುವುದನ್ನು ಸಿದ್ದ ಸಾಬಿನ ನಡುವೇ ನಡೆಯುವ ಚೆರ್ಚೆಯಲ್ಲಿ ಅರಿಯಬಹುದಾಗಿದೆ "ಸಿದ್ದ ಸಾಬಿಗೆ ನೀವು ಎಲ್ಲಾ ತಿಂತರಾ ಆದ್ರೆ ಹಂದಿ, ನಾಯಿ, ಯಾಕೆ? ತಿನ್ನಲ್ಲ ನೋಡು ಸಿದ್ದ ಹಂದಿ, ನಾಯಿ, ಎರಡು ನಮ್ ಶಾಸ್ತ್ರದಲ್ಲಿ ನಿಷಿದ್ದ ಅದನ್ನು ತಿನ್ನುವುದು ಹೋಗಲಿ ಮುಟ್ಟಿಸಿಕೊಂಡರೇ ೬ ಸಾರಿ ಮಣ್ಣಲ್ಲಿ ೧ ಸಾರಿ ನೀರಲ್ಲಿ ಮೈ ತೊಳೆದುಕೊಳ್ಳೊ ಶಾಸ್ತ್ರವಿದೆ. ನೋಡು ಸಿದ್ದ ನಮ್ಮ ಶಾಸ್ತ್ರದ ಪ್ರಕಾರ ಹಲಾಲ್, ಜುಬಾ, ಆಗಬೇಕು ಹಾಗಾದರೇ ಮೀನನ್ ಯಾಕ್ ತಿಂತಿರಾ ಅಂದ ಅದಕ್ಕೆ ಸಾಬಿ ಸಮುದ್ರದ ಪ್ರಾಣಿಗಳಿಗೆ ದೇವ್ರೆ ಚೂರಿ ಹಾಕಿರ್‌ತಾರೆ ಅಂತ ಹೇಳಿ ಮೀನಿನ ಗಲ್ಲವನ್ನು ಉದಾರಣೆಗೆ ಹೇಳಿದ.[೨] ಇಲ್ಲುಕೂಡ ಮನುಷ್ಯ ತಾನು ತಿನ್ನುವಂತ ವಸ್ತುಗಳನ್ನು ಶಾಸ್ತ್ರದ ರೂಪದಲ್ಲಿ ಬಳಸಿಕೊಳ್ಳುತ್ತಿದ್ದಾನೆ. ಮನುಷ್ಯ ತನ್ನ ಹಸಿವನ್ನು ನಿವಾರಿಸಿಕೊಳ್ಳಲು ಗೆಡ್ಡೆ ಗೆಣಸುಗಳನ್ನು ಬಳಸುತ್ತಿದ್ದನು ಬೆಂಕಿಯ ಉಪಯೊಗ ತಿಳಿದುಕೊಂಡ ನಂತರದಲ್ಲಿ ಹಸಿಮಾಂಸ ತಿನ್ನುವುದನ್ನು ಬಿಟ್ಟು ಕಾಡಿನಲ್ಲಿನ ಪ್ರಾಣಿಗಳ ಜೋತೆಯಾಗಿ ಸಾಕು ಪ್ರಾಣಿಯನ್ನು ತಿನ್ನಲು ಕಲಿತುಕೊಂಡನು. ಪ್ರಾಣಿಗಳನ್ನು ಕೊಲ್ಲುವದು ನಿಯಮಾನು ಸಾರ ಕಾನೂನು ಬಾಹಿರ ಎಂದುಗೊತ್ತಿದ್ದರು ಆತ ಯಾವುದೋ ಒಂದು ನೆವಹೇಳಿ ಕೊಲ್ಲುತ್ತಿದ್ದನು. ಉದಾರಣೆಗೆ: ದೇವರ ಹರಕೆ, ಮದುವೆಯ ಮನರಂಜನೆಯಲ್ಲಿ, ಬೇಡಿಕೆಯ ನಿವಾರಣೆಗಾಗಿ, ಜಾತ್ರೆ, ಹಬ್ಬಗಳಲ್ಲಿ, ಇತ್ಯಾದಿ ಸಂದರ್ಭದಲ್ಲಿ ಪ್ರಾಣಿಯನ್ನು ಕೊಲ್ಲುತ್ತ ಮಾಂಸಾಹಾರಿ ಆಹಾರವನ್ನು ಸೇವಿಸುತ್ತಿರುವುದು ಸತ್ಯಸಂಗತಿಯಾಗಿದೆ.

ಮನುಷ್ಯ ತಿಂದ ಶೇ. ೧೦ರಷ್ಟು ಕರಗಿಸಿಕೊಂಡು ಶೇ. ೯೦ರಷ್ಟು ಆಹಾರ ಹಾಗೆ ಹೊರಹಾಕುತ್ತಾನೆ. ಇದರ ಗುಟ್ಟು ಹಂದಿನಾಯಿಗೆ ಗೊತ್ತು ಆದ್ದರಿಂದ ಅವು ಮನುಷ್ಯನ ಬೆನ್ನು ಬಿಡದೇ ಬದುಕುತ್ತವೆ; ಮನುಷ್ಯನ ಮಲ ತಿಂತವೆ. ಹಂದಿ ನಾಯಿಗಿಂತ ವಾಸನೆ ಓಡಿಯುವ ಪ್ರಾಣಿ

ಇನ್ನೊಂದಿಲ್ಲ ಅದಕ್ಕಾಗಿ ನಾಯಿಯನ್ನು ಪೊಲಿಸರು ಮಿಲ್ಟ್ರಿಯವರು ಬಳಸುತ್ತಾರೆ. ಅದರಲ್ಲೂ ಹಂದಿಗೂ ಮನುಷ್ಯನಿಗೂ ಜೀರ್ಣ ಕ್ರಿಯೆಯಲ್ಲಿ ಒಂದು ವ್ಯತ್ಯಾಸವಿದೆ. ಮನುಷ್ಯ ತಿಂದ ಆಹಾರವೆಲ್ಲಾ ಕೊಬ್ಬಾಗಿ ಹೊಟ್ಟೆ ಸುತ್ತ ಮುತ್ತಾ ಶೇಖರವಾಗಿ ಹೊಟ್ಟೆ ಬೆಳೆಯುತ್ತದೆ. ಆದರೇ ಹಂದಿ ಹಾಗಲ್ಲ ಮೈ ತುಂಬಾ ಕೊಬ್ಬು ಶೇಖರವಾಗಿರುತ್ತದೆ. ಅದಕ್ಕೆ ಕಾಡಲ್ಲಿ ಹುಲಿಕೂಡಾ ಎದುರಿನಿಂದ ಹಂದಿಯನ್ನು ಹಿಡಿಯಲು ಸಾದ್ಯವಿಲ್ಲ. ಏಕೆಂದರೇ ಹಂದಿಗೆ ಕುತ್ತಿಗೆ ತಿರುಗಿಸಿ ಹಿಂದೇ ನೋಡಲು ಸಾಧ್ಯವಿಲ್ಲ ಎಂಬುದನ್ನು ಅರಿತ ಜುಲಿ ಹಿಂದಿನಿಂದ ಬಂದು ಹಂದಿಯನ್ನು ಹಿಡಿಯುತ್ತದೆ.[೩] ಇಂತಹ ಸನ್ನಿವೇಶವನ್ನು ಮನುಷ್ಯ ತನ್ನ ವಿವೇಚನಾ ಶಕ್ತಿಗೆ ಕೆಲಸ ಕೊಟ್ಟು ನೋಡಿದಾಗ ಪ್ರಾಣಿಗಳಿಗೂ ಸಹ ಮನುಷ್ಯ ತನ್ನ ಹಸಿವನ್ನು ನೀಗಿಸಿಕೊಳ್ಳಲು ಬೇಟೆಯನ್ನು ಆಡಿ ಅದರಿಂದ ಬಂದ ಮಾಂಸವನ್ನು ತಿನ್ನುತ್ತಾನೆ. ಆದರೇ ಆ ಮನುಷ್ಯ ಪ್ರಾಣಿಯನ್ನು ಬೇಟೆ ಮಾಡಲು ಮೊದಲು ತನ್ನ ವಿವೇಚನಾ ಶಕ್ತಿ ಉಪಯೋಗಿಸಿ ಕೆಲವು ತಂತ್ರಗಳನ್ನು ಉಪಯೋಗಿಸಿ ತದನಂತೆ ಬೇಟೆ ಯಾಡುತ್ತಾನೆ. ಇದೇ ರೀತಿಯಲ್ಲೂ ಪ್ರಾಣಿಗಳು ಸಹ ತಮ್ಮಲ್ಲಿರುವ ತಂತ್ರವನ್ನು ಉಪಯೋಗಿಸಿಯೇ ಮತ್ತೊಂದು ಪ್ರಾಣಿಯನ್ನು ಬೇಟೆ ಯಾಡುತ್ತದೆ. ಉದಾರಣೆಯಾಗಿ: ದೊಡ್ಡಮೀನು ಚಿಕ್ಕ ಮೀನನ್ನು ಹೊಂಚು ಹಾಕುವುದು, ಬೆಕ್ಕು ಇಲಿಯನ್ನು ಹೊಂಚುಹಾಕುವುದು, ಮುಂಗಸಿ ಹಾವನ್ನು ಹೊಂಚುಹಾಕುವುದು. ಹುಲಿ ದನವನ್ನು ಹೊಂಚು ಹಾಕುವುದು ಇತ್ಯಾದಿ.

ಇತ್ತ ಅರಣ್ಯ ಇಲಾಖೆಯವರು ಕಾಲೇಜ್ ಸರ್ಕಲ್ ಹತ್ರ ಮಂಗಗಳನ್ನು ತಂದು ಬಿಟ್ಟರು ಆ ಮಂಗಗಳು ಕಾಲೇಜ್ ಹತ್ರದ ನೀಲಗಿರಿ ಮರವನ್ನೇ ಆಶ್ರಯಿಸಿದವು. ಅವು ಕಾಲೇಜಿನ ಕ್ಯಾಂಟನು ಅಂಗಡಿ ಕಂ ಹೋಟೆಲು ಪಕ್ಕ ವಿದ್ಯಾರ್ಥಿಗಳೆಲ್ಲ ತಿಂದು ಬಿಸಾಕುತ್ತಿದ್ದ ತಿಂಡಿಗಳನ್ನು ತಿಂದು ಕಾಲೇಜಿನ ವಿದ್ಯಾರ್ಥಿಗಳಿಗೆನೆ ತೊಂದರೇ ಕೊಡುತ್ತಿದ್ದವು ಮಂಗ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಬಲವಾಗುತ್ತಾ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಓದುವದಕ್ಕಿಂತ ಅದರ ತುಂಟತನ ನೋಡೋಕೆ ಕಾಲ ಕಳೆಯುತ್ತಿದ್ದರು.[೪] ಅರಣ್ಯ ಇಲಾಖೆಯವರು ಮಲೆನಾಡಿನವರ ಗೋಳನ್ನು ತಾಳಲಾರದೇ ಸಿದ್ದನ ಸಹಾಯವನ್ನು ಪಡೆದು ಕಾಡಲ್ಲಿನ ಮಂಗಗಳನ್ನೇಲ್ಲ ನಾಡಿಗೆ ತಂದು ಬಿಡುತ್ತಾರೆ. ಇಲ್ಲಿ ಸಮಸ್ಯೆ ಸೃಷ್ಟಿಯಾಗುವುದು ಮಂಗಗಳಿಂದ ಮಾನವನಿಗೆ ಹೊರತು ಮಂಗಗಳಿಗಲ್ಲ "ಮಂಗನಿಂದ ಮಾನವ" ಎಂಬ ಗಾದೆ ಎಷ್ಟು ಸತ್ಯವೋ ಎಷ್ಟು ಸುಳ್ಳೊ ನಾನರಿಯೇ ಆದರೇ ಮಂಗಗಳಿಂದ ಸಮಸ್ಯೆಯಂತು ಸೃಷ್ಟಿಯಾಗುವದಂತು ಸತ್ಯ. ಇವರ ಸಮಸ್ಯೆಗಳನ್ನು ಮನ್ನಿಸಲು ಮುಂದಾದ ಸರಕಾರದವರು ಸಾಮಾನ್ಯ ಜನರ ಸಮಸ್ಯೆನು ಗಮನದಲ್ಲಿಟ್ಟು ಇಂತಹ ಕಾರ್ಯವನ್ನು ಕೈಗೊಳ್ಳಬೇಕಾಗಿತ್ತು. ಮಲೆನಾಡಿನ ಪ್ರಥಮ ಶತ್ರು ಮಂಗನನ್ನು ನಾಡಿಗೆ ಸಾಗಿಸಲಾಯಿತು, ಮಂಗವು ಒಂದು ದಿನ ಕಾಲೇಜಿನ ಒಬ್ಬ ವಿದ್ಯಾರ್ಥಿನಿಯ ಕೈಯಲ್ಲಿನ ಟಿಫಿನ್ ಬಾಕ್ಸ್ ಕೀಳಲು ಅವಳ ಮೇಲೆ

ದಾಳಿಮಾಡಿತ್ತು ವಿದ್ಯಾರ್ಥಿಗಳೆಲ್ಲ ನಾಮುಂದು ತಾಮುಂದು ಎನ್ನುತ್ತ ರಕ್ಷಣೆಯಲ್ಲಿ ತೊಡಗಿದರು.[೫] ಈ ಘಟನೆಯನ್ನು ಮನನ ಮಾಡಿಕೊಂಡರೇ ಮನುಷ್ಯ-ಮನುಷ್ಯನನ್ನು ಹೊಂಚಾಕುವುದನ್ನು ಕಾಣಬಹುದಾಗಿದೆ. ಇದೇ ರೀತಿ ಮಂಗವು ಒಂದುದಿನ ಪ್ರಿನ್ಸಿಪಾಲರ ಕೈಯಲ್ಲಿನ ಮೊಬೈಲನ್ನು ಮಂಗವು ಕಸಿದುಕೊಂಡು ಮರವೇರಿತ್ತು. ಆ ಮೊಬೈಲ್‌ನಲ್ಲಿ ಪ್ರಿನ್ಸಿಪಲ್ ತಾನು ಕಾಲೇಜಿನಲ್ಲಿನ ಜೀವಶಾಸ್ತ್ರ ಟೀಚರ್ ಲೂಸಿಫರ್ನಾಂಡಿಸಳ ಫೋಟೋ ತೆಗೆದಿದ್ದ ಪ್ರಿನ್ಸಿಪಲ್‌ನ ರಹಸ್ಯ ಎಲ್ಲಿ ಬಯಲಾಗುತ್ತೊ ಎಂದು ಸಿದ್ದನ ಸಹಾಯದೊಂದಿಗೆ ಮೊಬೈಲನ್ನು ಮರಳಿ ಪಡೆಯುತ್ತಾನೆ.[೬] ಇಲ್ಲಿ ಒಂದು ಸಮಸ್ಯೆಯಿಂದ ಮತ್ತೊಂದು ಸಮಸ್ಯೆ ಸೃಷ್ಠಿಯಾಗುತ್ತಿರುವದನ್ನು ಕಾಣಬಹುದಾಗಿದೆ. ಕಾಡಿನಿಂದ ನಾಡಿಗೆ ಬಂದ ಮಂಗಗಳು ಸಮಸ್ಯೆಯ ಮೇಲೆ ಸಮಸ್ಯೆಯನ್ನು ಸೃಷ್ಠಿಸುತ್ತಾಬಂದಿತು. ಪ್ರೀನ್ಸಿಪಾಲರು ಮೊಬೈಲಿನ ಸಮಸ್ಯೆಯನ್ನೆ ಎತ್ತಿಕೊಂಡು ಆ ಪ್ರಿನ್ಸಿಪಲ್ ಮತ್ತು ಮ್ಯಾನೇಜ್‌ಮೆಂಟಿನವರು ಕಾಲೇಜಿನ ಕ್ಯಾಂಟಿನ್ ಕಂ ಅಂಗಡಿಯನ್ನು ಮುಚ್ಚಿಸಿದರು ಒಂದು ವೇಳೆ ಮಂಗಗಳಿಗೆ ತಿಂಡಿಕೊಟ್ಟ ವಿದ್ಯಾರ್ಥಿಗಳನ್ನು ಡಿಬಾರ್ ಮಾಡುವುದಾಗಿ ಹೆದರಿಸಿದರು, ಆದ್ದರಿಂದ ಮಂಗಗಳೆಲ್ಲ ಆಹಾರವಿಲ್ಲದೆ ನರಳುವುದನ್ನು ನೋಡಿ ಎನ್‌ಎಸ್‌ಎಸ್, ಎನ್‌ಸಿಸಿ, ಹುಡುಗರು ಸಿದ್ದನ್ ಸಹಾಕಾರದೊಂದಿಗೆ ಮಂಗಗಳನ್ನು ಪ್ಯಾಟೆಗೆ ಸಾಗಿಸಿದರು. ಮಂಗಗಳಿಂದ ಒಂದರ ಮೇಲೊಂದು ಸಮಸ್ಯೆಗಳಂತು ದಿನದಿಂದ ದಿನಕ್ಕೆ ಸೃಷ್ಠಿಯಾಗುತ್ತಲೆ ಸಾಗುತ್ತವೆ. ಅದು ಹೇಗೆಂದರೆ ಆ ಮಂಗಗಳು ಕಾಲೇಜಿನಿಂದ ದೂರವಾಗಿ ಸದಾನಂದ ಮಲ್ಯರ ತೆಂಗಿನ ತೋಟಕ್ಕೆ ದಾಳಿ ಇಟ್ಟವು.[೭] ಇಲ್ಲಿ ಗಮನಕ್ಕೆ ಬರುವ ವಿಷಯ ಅಥವಾ ಸಮಸ್ಯೆ ಏನೆಂದರೆ ಮಲೆನಾಡಿನಲ್ಲಿ ಸೃಷ್ಠಿಯಾದ ಮಂಗಗಳ ಸಮಸ್ಯೆ ಏಷ್ಟೇ ಪ್ರಯತ್ನ ಪಟ್ಟರೂ ಆ ಸಮಸ್ಯೇಗಳನ್ನು ನಿವಾರಿಸಲು ಆಗುತ್ತಿರಲಿಲ್ಲ.

ಮತ್ತೊಂದೆಡೆ ಮಲ್ಯ ಮಂಗಗಳ ರಕ್ಷಣೆಗಾಗಿ ಚಾಟಿ, ಬಿಲ್ಲು ತಗೊಂಡು, ಕಲ್ಲು ಹೊಡೆದರು ಮಂಗಗಳು ಕ್ಯಾರೇ ಅನ್ನುತ್ತಿರಲಿಲ್ಲ, ಇಲ್ಲಿ ಮನುಷ್ಯ ತಿಳಿದುಕೊಂಡಂತೆ ಎಲ್ಲಾ ಪ್ರಾಣಿಗಳಿಗಿಂತ ಮನುಷ್ಯ ಬುದ್ದಿವಂತ ಬೇರೆ ಪ್ರಾಣಿಗಳು ಸಹ ಹೆಚ್ಚು ಬುದ್ದಿ ಉಪಯೋಗಿಸುತ್ತವೆ. ಮನುಷ್ಯ ಪ್ರಾಣಿಗಿರುವ ವ್ಯಾತ್ಯಾಸ ಆಯುಧಗಳ ಬಳಕೆಯಷ್ಟೆ ಆದರೇ ಉತ್ತಿ ಬಿತ್ತಿ ಬೆಳೆಯಲು ಪ್ರಾಣಿಗಳಿಗೆ ಬರುವುದಿಲ್ಲ ಅವಕ್ಕೆ ಪ್ರಜ್ಞೆ ಇಲ್ಲ ಜ್ಞಾನವೂ ಇಲ್ಲ ಅನ್ನೊ ಜನರಿದ್ದಾರೆ. ಆದರೇ ಪ್ರಾಣಿಗಳಿಗೆ ಎಲ್ಲಾಯಿದೆ. ಆ ಮಂಗಗಳು ಮಲ್ಯನ ತೆಂಗಿನಕಾಯಿಹಾಳಾಗಿ ಹೊಗ್ಲಿ ಆದರೇ ಅವು ಮಲ್ಯನ ಮನೆಯ ಹಂಚನ್ನು ನಾಶಮಾಡುತ್ತಿದ್ದವು.[೮] ಇಲ್ಲಿ ತಿಳಿದಂತೆ ಮನುಷ್ಯ-ಪ್ರಾಣಿಗೂ ಇರುವ ವ್ಯತ್ಯಾಸ ಮನುಷ್ಯ ಮಾಡುವುದನ್ನು ಪ್ರಾಣಿ ನಾಶಮಾಡಿ ತಿನ್ನುತ್ತವೆ. ಪ್ರಾಣಿಗಳೆಲ್ಲ ಮನುಷ್ಯನಿಗೆ ಉಪಯುಕ್ತಿ ವಸ್ತುವು ಹೌದು ಅನುಪಯುಕ್ತ ವಸ್ತುವು ಆಗಿ ಮನುಷ್ಯನ ಮೇಲೆ ಪ್ರಭಾವ ಬೀರಿವೆ.

ಮಲೆನಾಡಿನ ಪ್ರಥಮ ಶತ್ರುವಾದ ಮಂಗನ ಹಾವಳಿಯನ್ನು ತಾಳಲಾರದ ಮಲ್ಯನಿಗೆ ಮನೆ ಉಳಿಸಿಕೊಳ್ಳುದು ಹೇಗೆ? ಎಂಬ ಚಿಂತೆ ಬಂತು ಯಾರೋ ಸಿದ್ದ ಹೆಸರ್ ಹೇಳಿದ್ದಕ್ಕೆ ಮಲ್ಯ ಸಿದ್ದನ್ ಕರೆಸಿ ಅವನಿಗೆ ದಿನಗೂಲಿಯಂತೆ ಹೇಳಿದ ಆದರೇ ಸಿದ್ದ ಒಪ್ಪದೇ ಮರಕ್ಕೆ ೫ರಂತೆ ಹೇಳಿದ ಇದಕ್ಕೆ ಒಪ್ಪದ ಮಲ್ಯ ಕೇಸಿಗೆ ೨ ರೂಪಾಯಿ ಹೊಳಿ ಮೀನು ಮಲ್ಯರ ಲೆಕ್ಕದಲ್ಲಿ ಅಂದು ಮುಂಗಡವಾಗಿ ಸಿದ್ದ ೧೦೦/- ರೂಪಾಯಿ ತಗೊಂಡು ಚಾಂದ್‌ಸಾಬ್ರ ಅಂಗಡಿಲಿ ೨.೫ ಕೆ.ಜೀ. ಪುಡಿಮೀನು ೦.೨೫ ಕೇ.ಜಿ ಸೊರ್ಲುಮೀನು ಬೇರೆ ಕಟ್ಟಿ ಒಣಪುಡಿಯಿರ್ಲಿ ಅಂದ ಅದಕ್ಕೆ ಸಾಬಿ ಇಷ್ಟೊಂದು ಮೀನು ಯಾರಿಗೆ ಅಂತ ಮರು ಪ್ರಶ್ನಿಸುತ್ತ ಸಿದ್ದ ಸಾಬಿ ಜೊತೆಯಲ್ಲಿ ದಿನ ದೂಡಿದನು. ಈ ಮಂಗನ ಬ್ಯಾಟೆ ಪರಿಸರ ಕಥನದಲ್ಲಿ ಬರುವಂತ ಇಂತಹ ಸನ್ನಿವೇಶಗಳು ಮನುಷ್ಯರೂ ಒಬ್ಬರಿಗೊಬ್ಬರಂತೆ ಸಹಾಯಕ್ಕೆ ಮುಂದಾಗುತ್ತಾರೆ ಎಂಬುದು ಕಂಡು ಬರುತ್ತದೆ. ಉನ್ನತ ಜಾತಿಯಲ್ಲಿರುವ ಮಲ್ಯನಿಗೂ ಕೆಳಜಾತಿಯ ಸಿದ್ದನ ನಡುವೆ ಜಾತಿಯತೆ ಹುಟ್ಟದೆ ಸಹಕಾರಿ ಮನೋಭಾವ ಹುಟ್ಟಿರುವುದನ್ನು ಗಮನಿಸಿದಾಗ ಒಂದು ಪರಿಸರದಲ್ಲಿನ ಜನರು ತಮ್ಮ ಸುತ್ತಮುತ್ತಲಿನ ಪರಿಸರದ ಜನರೊಂದಿಗೆ ಸಹಕಾರಿ ಭಾವನೆಯನ್ನು ತೋರುತ್ತಾ ಅವರಂತೆ ಹೊಂದಿಕೊಂಡು ಬಂದಿರುವುದು ಕಂಡುಬರುತ್ತದೆ.[೯]

ಸಿದ್ದ ಮಲ್ಯರಿಗೆ ಮಾತುಕತೆ ನಡೆಸುತ್ತಿದ್ದಂತೆ ಮಲ್ಯನಿಗೆ ಸಿದ್ದ ಮೀನು ಕೊಂಡು ಕೊಳ್ಳುತ್ತಿರುವುದನ್ನು ಕಂಡು ಯಾರಾದ್ರು ಹೋದ್ರ ಹೊದ್ರೆನಿಂಗೆ ಚಾನ್ಸು ಬಿಡಿ ನೀನು ಕಿಂದರಿ ಹಿಡಿದು ಸ್ವರ್ಗಕ್ಕೆ ಕಳಸ್ತಿ ಅಂತ ಅದಕ್ಕೆ ಸಿದ್ದ ಚಾನ್ಸು ಇಲ್ಲ ಗಿನ್ಸು ಇಲ್ಲ ಮಲ್ಯರ ಮನೆಗೆ ಬೇಕಿತ್ತು ಅಂದ ಅದಕ್ಕೆ ಸಾಬಿ ಏನೇನೋ ಹೇಳುತ್ತಿದಂತೆ ಸಿದ್ದ ಹೊತ್ತಾತು ಮಾರಾಯ ನಿವ್ ಬ್ಯಾಗ್ ಮೀನ್‌ಕೊಡಿ ಒಳ್ಳೆಕಡ ಕೆಲೊಕ್ ಬಂದಾರಲ್ಲಂಗೆ ಮಾಡ್ತಿರಲ್ಲ ಅಂದನು. ಅದಕ್ಕೆ ಸಾಬಿ ಈ ಇಸ್ಯ ಎಲ್ಲಾ ನಾಂಗ್ಯಾಕಯ್ಯ ನೀನು ಮಂಗನಿಗಾದ್ರು ತಿನಿಸು ಕೊಂಕಣಿಗಾದ್ರು ತಿನಿಸು ಅಂತ ಹೇಳಿ ಮೀನು ಕೊಟ್ಟ ೨.೫ ಕೇ.ಜಿ ಮೀನನ್ನು ಮಲ್ಯಗೆ ಕೊಟ್ಟು ೦.೨೫ ಕೇ.ಜಿ ಮೀನನ್ನು ತಾನು ತೆಗೆದುಕೊಂಡು ಸಿದ್ದ ನಾಳೆ ಬರ್ತಿನಿ ಅಂತ ಮನೆಗೆಹೋದನು.

ಮಲೆನಾಡಲ್ಲಿ ಮಂಗಗಳ ಹಾವಳಿಗಳು ಸಾಮಾನ್ಯ ಜನರನ್ನು ನಿದ್ದೆ ಗೆಡಿಸುತ್ತಿದ್ದವು ಹಾಗೂ ರೈತರಿಗೆ ತಲೆ ನೋವಾಗಿ ಪರಿಣಾಮ ಬೀರುತ್ತಿದ್ದವು. ಮಲೆನಾಡಿನಲ್ಲಿ ಪ್ರಾಣಿ ಬೇಟೆಗಳು ಆಯಾ ಕಾಲಕ್ಕಾನುಗುಣವಾಗಿ ನಡೆಯುತ್ತಲೆ ಇರುತ್ತವೆ. ಬೆಟೆಗಳು ಋತುಮಾನಕ್ಕೆ ತಕ್ಕಂತೆ ಯಾವ ಯಾವ ತಿಂಗಳಲ್ಲಿ ಯಾವ ಯಾವ ಬೇಟೆಗಳನ್ನು ಮಾಡಬೇಕು. ಯಾರನ್ನು ಜೋತೆಗಾರನಾಗಿಟ್ಟುಕೊಂಡು ಬೇಟೆಗೆ ಹೋಗಬೇಕು ಹೋಗುವ ದಿನ ಶುಭದಿನನೋ ಅಪಶಕುನದ ದಿನನೋ ಎಂದೂ ಮುಂಜಾಗ್ರತೆಯ ಕ್ರಮವನ್ನು ಬೇಟೆಗಾರನು ಕೈಗೊಂಡು ಬೇಟೆಗೆ ಹೊರಡಲು ಸಿದ್ದನಾಗುತ್ತಾನೆ.

ಅದೇ ರೀತಿಯಂತೆ ಇಲ್ಲಿ ಸಿದ್ದನು ಮಂಗಗಳ ಹಾವಳಿ ನಿವಾರಣೆಗಾಗಿ ಮಲ್ಯರಿಗು ಸಿದ್ಧಂಗೂ ಒಬ್ಬರಿಗೊಬ್ಬರು ಒಳ್ಳೆ ಜೋಡಿಯಾದರು. ಸಿದ್ಧ ನೀನ್ ಯಾವಾಗ್ಲು ನನ್ ಜೋತೇಲಿ ಇರಬೇಕು ಎನ್ನುವಷ್ಟು ಇವರ ಮಧ್ಯೆ ಗೆಳೆತನ ಬೆಳೆದಿತ್ತು. ಇಲ್ಲಿಯು ಕೂಡಾ ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳನ್ನು ಕಲೆ ಹಾಕಬಹುದಾಗಿದೆ. ತನ್ನ ಕಷ್ಟ ನಿವಾರಣೆಗಾಗಿ ಬಂದ ಮನುಷ್ಯನನ್ನು ಮೇಲು ಕೀಳುಯೆನ್ನದೇ ಅವರ ಮಧ್ಯೆ ಹುಟ್ಟಿಕೊಳ್ಳುವ ಸಂಬಂಧವನ್ನು ಅವಲೋಕಿಸಿದಾಗ ಮನುಷ್ಯನಂತೆ ಪ್ರಾಣಿಗಳು ಸಹ ತಮ್ಮಲ್ಲಿ ಸಹಕಾರಿ ಭಾವನೆಯನ್ನು ಇಟ್ಟುಕೊಂಡಿರುತ್ತವೆ. ನಮ್ಮ ವಚನ ಸಾಹಿತ್ಯದ ವಚನಕಾರರಲ್ಲೊಬ್ಬರು ಹೇಳುವಂತೆ "ಕಾಗೆಯು ಒಂದು ಅಗುಳವನ್ನು ಕಂಡು ತನ್ನ ಬಳಗವನ್ನು ಕೂಗಿ ಕರೆಯುವಂತೆ" ಎಂಬ ವಚನ ಗಮನಕ್ಕೆ ತಗೆದುಕೊಂಡರೆ ಪ್ರಾಣಿಗಳಿಗೂ ಇಂತಹ ಭಾವನೆಯಿರುತ್ತವೆ.

ಮನುಷ್ಯ ಪ್ರಾಣಿಗಿರುವ ವ್ಯತ್ಯಾಸ ವಿಸ್ಮಯವೆಂದರೆ ಮನುಷ್ಯರಲ್ಲಿ ಹೆಣ್ಣು ಸೌಂದರ್ಯವನ್ನು ಹೊದ್ದು ಅಲಂಕೃತಳಾಗಿ ಕಂಡರೆ ಪ್ರಾಣಿಗಳಲ್ಲಿ ಗಂಡು ಜೀವಿ ಸುಂದರವಾಗಿ ಕಂಡುಬರುತ್ತದೆ. ಮನುಷ್ಯ ಜಾತಿಯಲ್ಲಿ ಗಂಡು ಹೆಣ್ಣನ್ನು ಒಲಿಸಿಕೊಳ್ಳಲು ಗಂಡು ಹೆಣ್ಣಿನ ಸುತ್ತ ಸುತ್ತ ಸುತ್ತುತ್ತದೆ. ಪ್ರಾಣಿಗಳಲ್ಲಿ ಗಂಡು ರಾಜನಂತೆ ಬೀಗುತ್ತದೆ. ಉದಾಹರಣೆ: ಹೆಣ್ಣು ಸಿಂಹಕ್ಕಿಂತ ಗಂಡು ಸಿಂಹ, ಜಿಂಕೆ, ನವಿಲು, ಕೋಳಿ, ಆನಡ ಮುಂತಾದ ಪ್ರಾಣಿಗಳ ಒಡನಾಟವನ್ನು ವಿಕ್ಷಿಸಿದಾಗ ನಮ್ಮ ಗಮನಕ್ಕೆ ಇಂತಹ ಸಂಗತಿಗಳು ಕಂಡು ಬರುತ್ತದೆ. ದಿನ ಕಳೆದಂತೆ ಮಾನವ ಕ್ರೂರ ಪ್ರಾಣಿಗಳನ್ನು ಕೊಲ್ಲುವುದರ ಜೊತೆಗೆ ಸಾದು ಪ್ರಾಣಿಗಳನ್ನು ಹಿಡಿದು ಪಳಗಿಸಿ, ಪ್ರೀತಿ ತೋರಿಸಿ ಅವುಗಳನ್ನು ಕೃಷಿಗೆ ಉಳಲು, ಊರಿಂದೂರಿಗೆ ಪ್ರಯಾಣ ಮಾಡಲು ಭಾರ ಹೊರಲು, ಮನೆ ಕಾಯಲು, ಬಳಸಿದ ಕೆಲ ಪ್ರಾಣಿಗಳ ಮಾಂಸ ಕೊಬ್ಬುಗಳಲ್ಲಿ ಔಷದಿಯ ಗುಣವಿರುವದನ್ನು ಕಂಡುಕೊಂಡನು. ಪ್ರಾಣಿಗಳನ್ನು ಬೇಟೆ ಯಾಡಲು, ಯುದ್ದಮಾಡಲು, ವೇಗವಾಗಿ ಚಲಿಸಲು ಕುದುರೆ, ಮರದ ಕೆಲಸ ನಿರ್ವಹಿಸಲು ಆನೆ, ಹೈನಿಗೆ ಹಸು ಎಮ್ಮೆ, ಮಾಂಸಕ್ಕೆ ಕುರಿ, ಕೋಳಿ, ಹಂದಿ ಹೀಗೆ ಸಾಗಿದ ಆದರೂ ಕಾಡಿನಲ್ಲಿದ್ದ ಪ್ರಾಣಿಗಳನ್ನು ಬೇಟೆ ಯಾಡಲು ಮನುಷ್ಯ ಕಲೆತುಕೊಂಡನು.

ಮಲೆನಾಡಿನ ಮಂಗಗಳಿಗೆ ಸಿದ್ದನ ಕಾಟವಾದರೇ ಮಲೆನಾಡಿನ ಜನರಿಗೆ ಮಂಗಗಳ ಕಾಟ ತಪ್ಪಿದ್ದಲ್ಲ. ತೆಂಗಿನ ತೋಟಕ್ಕೋಂದು ರೌಂಡು ಹಾಕುತ್ತಿದ್ದ ಸಿದ್ದನ ಕಂಡ ಮಂಗಗಳು ತೋಟ ಬಿಟ್ಟು ಪ್ಯಾಟೆ ಮಧ್ಯಕ್ಕೆ ಸರಿದವು. ಪ್ಯಾಟೆಗೆ ಬಂದ ಮಂಗಗಳು ಮರ ಬಿಟ್ಟು ಮನೆ ಮಾಡುಗಳಲ್ಲಿ ಆಶ್ರಯ ಪಡೆದವು ರಸ್ತೆ ದಾಟಲು ಕರೆಂಟ ವೈರ್ ಮತ್ತು ಕೇಬಲ್ ವೈರುಗಳನ್ನು ಬಳಸುತ್ತಿದ್ದವು, ಅದಕ್ಕಾಗಿ ಕರೆಂಟ್, ಪೋನ್, ಕೇಬಲ್, ಇಲಾಖೆಯವರಿಗೆ ತಲೆ ನೋವಾಯಿತು. ಇನ್ನೊಂದೆಡೆ ಅಂಗಡಿಗಳಲ್ಲಿದ್ದ ತಿಂಡಿ, ತಿನಿಸು, ತರಕಾರಿ, ಹಣ್ಣು, ಚಿಪ್ಸ್, ಗುಟ್ಕದ ಪ್ಯಾಕೇಟ್ ತಿನ್ನೊಕೆ

ಸುರುಮಾಡಿದ್ದವು. ಮನೆಯ ಹಂಚು ತೆಗೆದು ಒಳಗೆ ನುಗ್ಗೊವಷ್ಟು ಮುಂದುವರೆದವು. ಇದೇ ತರಹದ ಕಿಟಲೆಗಳನ್ನು ದಿನದಿಂದ ದಿನಕ್ಕೆ ಗಮನಿಸಿತ್ತಿದ್ದ ಪ್ಯಾಟೆ ಜನರು ಮಂಗನ ಹಾವಳಿಯನ್ನು ತಾಳಲಾರದೆ ಸರಕಾರದವರಿಗೆ ದೂರನ್ನು ಕೊಟ್ಟರು ಮತ್ತೊಂದೆಡೆ ಮಂಗಗಳಿಂದ ರೋಸಿಹೋಗಿ ಈ ಊರಿನ ಸಹವಾಸನೆ ಬೇಡ ಎನ್ನುವಂತ ಗುಂಗಿಗೆ ಮಲೆನಾಡಿನ ಪ್ಯಾಟೆ ಜನರೆಲ್ಲರೂ ತಮ್ಮ ತಮ್ಮಲ್ಲೆ ಗುನುಗಲು ಪ್ರಾರಂಬಿಸಿದರು. ಇಂಥಹ ಸಮಸ್ಯೆಗಳೆಲ್ಲ ಮಲೆನಾಡಿನಲ್ಲಿ ಸಹಜವಾಗಿಬಿಟ್ಟಿವೆ. ಕಲ್ಕುಳಿ ವಿಠಲ ಹೆಗ್ಗಡೆರು ತಾವು ಮಲೆನಾಡಿನಲ್ಲೆ ಜನ್ಮತಾಳಿದರಿಂದ ಇಂಥಹ ಅನುಭವಗಳು ತಮ್ಮಲ್ಲಿ ಆಗಿರುವುದರಿಂದಲೆ ಹಾಗೂ ಮಲೆನಾಡಿನ ಪರಿಸರ ಕಥನವನ್ನಾಗಿ ಮಂಗನ ಬ್ಯಾಟೆಯನ್ನು ಹೊರತಂದು ತಮ್ಮ ಸಮಸ್ಯೆಗಳನ್ನು ಸಮಾಜದ ಮುಂದೆ ತೋಡಿಕೊಂಡಿದ್ದಾರೆ.

ಪೇಟೆಗೆ ಬಂದ ಮಂಗಗಳು ಪೇಟೆಯ ತುದಿಯಲ್ಲಿರುವ ಮಠದ ಗೋಪುರದಲ್ಲಿ ಆಶ್ರಯ ಪಡೆದುಕೊಂಡವು ಅವುಗಳಿಗೆ ಭಕ್ತರು ದೈವ ಕೃಪೆಯಿದೆ ಎಂದು ಭಾವಿಸಿದರು; ಇದು ಪುಣ್ಯ ಕ್ಷೇತ್ರ ಎಂದು ಮಂಗಗಳಿಗೆ ಆಹಾರ ನೀಡುತ್ತಿದ್ದರು. ಮಠದ ಸ್ವಾಮಿಗಳು ಒಂದುದಿನ ೩೦೦ ಅಡಿ ಉದ್ದದ ಸೇತುವೆ ದಾಟಲು ೧೦-೧೫ ನಿಮಿಷ ಬೇಕಾಗಿತ್ತು ಸ್ವಾಮಿಗಳ ಕೈಯಲ್ಲಿ ದಂಡ (ಕೊಲು) ಕಂಡ ಎಳೆಮಂಗ ಅರಚಲು ಆರಂಬಿಸಿತು. ತನ್ನ ಕಂದನ ಅಳಲು ಕೇಳಿದ ಆ ತಾಯಿ ಮಂಗವು ಕೋಪಗೊಂಡು ಸ್ವಾಮಿಜಿಗಳ ಮೇಲೆ ದಾಳಿಗೆ ದಾವಿಸಿತು. ಇದನ್ನು ತಿಳಿದ ಜಿಲ್ಲಾಡಳಿತ ಮಠಕ್ಕೆದಾವಿಸಿ ಸ್ವಾಮಿಜಿಯ ಸ್ಥಿತಿಯನ್ನು ನೋಡಿ ಮಠದಲ್ಲಿರುವ ಮಂಗಗಳ ಬ್ಯಾಟೆಗಾಗಿ ಬಡ್‌ಜೆಟ್ ಅನ್ನು ಮಂಡಿಸಲಾಯಿತು.

ಮನುಷ್ಯ ಮತ್ತು ಪ್ರಾಣಿಗಿರುವ ಸಂಬಂಧವನ್ನು ಸ್ವಾಮಿಜಿಯ ಮೇಲೆ ಗಾಯಮಾಡಿದ ಮಂಗನಿಂದ ತಿಳಿಯಬಹುದು ಮನುಷ್ಯನಿಗಿಂತ ಪ್ರಾಣಿಗಳ ಬೇಟೆಯು ಅಪಾಯಕಾರಿಯಾದದ್ದು ತಿಳಿದುಬರುತ್ತದೆ. ಯಾವುದೇ ಪ್ರಾಣಿಯಾಗಲಿ ಆ ಪ್ರಾಣಿಗೆ ಬೇಕಾದ ವಸ್ತುವನ್ನು ನರಮನುಷ್ಯ ದಕ್ಕದಂತೆ (ಸಿಗದಂತೆ) ಮಾಡಿದಾಗ ಪ್ರಾಣಿಗಳಿಗೆ ಕೋಪಾ ಅಥವಾ ಸಿಟ್ಟುರೋಷ ಬರುವದು ಸಹಜ ಗುಣ ಆ ಪ್ರಾಣಿ ತನ್ನಮೇಲೆ ಕಲ್ಲಿನಿಂದಾಗಲಿ ಇತರೆ ವಸ್ತುವಿನಿಂದಾಗಲಿ ಗಾಯಮಾಡಿ ವ್ಯಕ್ತಿಯನ್ನು ಕಂಡೋಡನೆ ಬೊಗಳಲು ಸುರುಮಾಡುತ್ತದೆ. ಅದೇ ರೀತಿ ಮನುಷ್ಯನು ಕೂಡಾ ಉದಾರಣೆ "ಹಾವಿನ ರೋಷ ೧೨ ವರುಷ ನನ್ನರೋಷ ನೂರು ವರುಷ" ಎಂಬಂತೆ ಸಿಟ್ಟು ಆ ವ್ಯಕ್ತಿಯಾಗಲಿ ಪ್ರಾಣಿಯಾಗಲಿ ತನ್ನ ವೈರಿ ತನ್ನ ಕಣ್ಣೆದುರಿಗೆ ಬಂದಾಗ ತನ್ನಲ್ಲಿ ಕೋಪವು ಹೊರಹೊಮ್ಮುತ್ತದೆ.[೧೦]

ಗಿರೀಶ್ ಕಾರ್ನಾಡ್‌ರ ಅಗ್ನಿ ಮತ್ತು ಮಳೆ ನಾಟಕದಲ್ಲಿ ಮನುಷ್ಯ-ಮನುಷ್ಯನ ಬೇಟೆಗಳು ನಡೆದಿರುವ ಪ್ರಸಂಗಗಳ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ. ಈ ನಾಟಕದಲ್ಲಿ ತಂದೆ ಮಗನ

ಸಂಹಾರ ನಡೆದಿರುವುದನ್ನು ಗುರುತಿಸಲಾಗಿದೆ ತಂದೆ ರೈಭ್ಯನನ್ನು ತನ್ನ ಮಗ ಪರವಸು ಕೊಲ್ಲುತ್ತಾನೆ. ಪ್ರಾಚೀನ ಯುಗದಲ್ಲಿ ಇಂತಹ ಘಟನೆಗಳು ಗೊತ್ತಿಲ್ಲದೆ. ನಡೆದು ಹೋಗಿರುವುದನ್ನು ಕಾಣಬುಹುದು ಆದರೇ ಈ ದೃಶ್ಯವು ಕನ್ನಡ ಚಿತ್ರರಂಗದಲ್ಲೂ ಖ್ಯಾತಿಯನ್ನು ಪಡೆದಿದೆ ಅರ್ಜುನ ತನ್ನ ತಂದೆಯೆಂದು ಗೊತ್ತಿಲ್ಲದೆ ಬಬ್ರುವಾಹನ ಅವನ ಜೊತೆ ಸರಸವಾಡುವ ದೃಶ್ಯಗಳ ಮನುಷ್ಯ-ಮನುಷ್ಯನ ನಡುವೆ ಇರುವ ತಂತ್ರವನ್ನು ರೂಪಿಸಿಕೊಟ್ಟಿದೆ ಈ ಚಿತ ್ರ(ಬಬ್ರು ವಾಹನ)ಕನ್ನಡ ಚಿತ್ರರಂಗದಲ್ಲೆ ಖ್ಯಾತಿಯನ್ನು ಪಡೆದಿದೆ.

ಮಲೆನಾಡಿನ ಪರಿಸರದಲ್ಲಿ ವಿಶೇಷ ಜನಾಂಗಗಳು ಕಂಡುಬರುತ್ತಾರೆ. ಅದರಲ್ಲಿ ಹಕ್ಕಿ-ಪಕ್ಕಿ ಜನಾಂಗದವರು ಅವರ ಬದುಕೇ ಸಂಚಾರಿ ಬದುಕಾಗಿತ್ತು. ಅವರು ದಿನಿಕ್ಕೊಂದು ಊರಿನಂತೆ ವಾಸಿಸುತ್ತ ಜೀವನ ಕಳಿತಿದ್ರು ಅವರ ಭಾಷೆ ಮತ್ತು ಹೆಸರುಗಳು ವಿಚಿತ್ರವಾಗಿದ್ದವು. ಅವರು ಯಾವ ಸ್ಥಳದಲ್ಲಿ ಜನ್ಮ ತಾಳುತ್ತಿದ್ದರೋ ಅದೇ ಹೆಸರನ್ನು ಇಟ್ಟುಕೊಳ್ಳುತ್ತಿದ್ದರು. ಉದಾ:-ಲಿಂಗನ ಮಕ್ಕಿ ಡ್ಯಾಂ, ಎಂ.ಜಿ.ಆರ್. ಬಸ್‌ಸ್ಟ್ಯಾಂಡ್. ಲಾಯರ್ ಇತ್ಯಾದಿ. ಇದೇರೀತಿ ದಕ್ಷಿಣ ಕನ್ನಡ ಜಿಲ್ಲೆಯ ಕಾರಾಜಿ ಎಂಬ ತುಳು ಬುಡಕಟ್ಟಿನವರು ಅವರ ಹೆಸರುಗಳೆ ಅವಮಾನಕರವಾಗಿ ಇಟ್ಟುಕೊಳ್ಳುತ್ತಿದ್ದರು ಏಕೆಂದರೇ ಅವರ ಹೆಸರನ್ನು ಬ್ರಾಹ್ಮಣರು ಇಡುತ್ತಿದ್ದರು. ಇವರು ಜೀತದಾಳುಗಳು ಆಗಿದ್ದರಿಂದ ಈ ಬುಡಕಟ್ಟಿನ ಹೆಸರುಗಳು ಗುಲಾಮ, ಹಂದಿ, ನಾಯಿ, ಬೇವರ್ಸಿ, ಇತ್ಯಾದಿ. ಇಲ್ಲಿ ಮಲೆನಾಡಿನ ಬುಡಕಟ್ಟಿನ ಜನರು ತಮ್ಮ ಕಸುಬನ್ನೆ ನಂಬಿಕೊಂಡು ಕೆಲಸವನ್ನು ಮಾಡುತ್ತಿದ್ದರು. ಬದುಕೆ ಅವರಿಗೆ ಕಾಯಕಲ್ಪವಾಗಿತ್ತು, ಕನ್ನಡ ಸಾಹಿತ್ಯದಲ್ಲಿ ಇಂತಹ ಬೇಟೆಯ ಕಥೆಗಳಾಗಲಿ, ಗ್ರಾಮೀಣ ಬೇಟೆಗಳಾಗಲಿ, ಶಿಕಾರಿಯಾಗಲಿ, ಶಿಕಾರಿ ನೆನಪುಗಳಾಗಲಿ, ಪರಿಸರದ ಕಥೆಗಾಳಾಗಲಿ, ಕರ್ವಾಲೊ ಕಾದಂಬರಿಳಾಗಲಿ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡಿತಿಯಲ್ಲಿ ಬರುವಂತಹ ಬೇಟೆಯ ಪ್ರಸಂಗಗಳಾಗಲಿ, ಕನ್ನಡ ಸಾಹಿತ್ಯದ ಕೆಲವು ಕಾವ್ಯ, ಕಥೆ, ನಾಟಕ, ಕಾದಂಬರಿಗಳಾಗಲಿ, ಅವುಗಳಲ್ಲಿ ಬಂದಿರುವ ಬೇಟೆ ಕುರಿತ ಪ್ರಸಂಗಗಳಂತು ಮಲೆನಾಡಿನ ಸೊಬಗನ್ನು ವರ್ಣಿಸುತ್ತ ಮಲೆನಾಡಿನಲ್ಲಿ ಹೊದ್ದುನಿಂತಿರುವ ಮರಗಳ ಹಸಿರನ್ನು ಕಣ್ಣಿಗೆ ಗೊಚರವಾಗುವಂತೆ ಭಾಸವಾಗುತ್ತವೆ.

ಇಂತಹ ಪ್ರಕೃತಿಯ ಮಡಿಲಲ್ಲಿ ಮಲೆನಾಡಿನ ರೈತರ ಸಮಸ್ಯೆಗಳನ್ನು ಗಮನಿಸಿದಾಗ ಜನರ ಅಳಲು ಲಕ್ಷಾರ್ಥದಲ್ಲಿ ಕಂಗೋಳಿಸುತ್ತಿರುವದನ್ನು ಗಮನಿಸಬಹುದಾಗಿದೆ. ಈ ಅಳಲನ್ನು ಹೋಗಲಾಡಿಸಲು ಮಂಗನ ಬ್ಯಾಟೆ ಮಾಡಲಿಕ್ಕಾಗಿ ಬಡ್‌ಜೇಟ್ ಮಂಡಿಸಿದ್ದಾತು, ಬೋನು ತಂದದ್ದಾತು, ಸಿದ್ದ ಮತ್ತು ಗೋಪಿಂದ ತಮ್ಮ ತಂತ್ರವನ್ನು ಉಪಯೋದಗಿಸಿ ಮಂಗನ ಬೆಟೆಗೆ ಮುಂದಾಗುತ್ತಾರೆ.

ಮಲೆನಾಡಿನ ಸಮಸ್ಯೆಯ ನಿವಾರಣೆಗಾಗಿ ಸಿದ್ದ ಮತ್ತು ಗೊವಿಂದ ತಮ್ಮಲ್ಲೆ ತಂತ್ರವನ್ನು ಉಪಯೋಗಿಸಿದರು. ಬೊನು ತಯಾರಿಸಿ ಇಬ್ಬರು ಸನ್ನೆ ತಂತಿಯನ್ನು ಹಿಡಿದು

ಕಾಯತೋಡಗಿದರು. ಸಿದ್ದ ಸುಸ್ತಾಗಿ ಮನೆಯ ಕಡೆ ನಡೆಯಲು ಮುಂದಾಗಿ ಸನ್ನೆ ತಂತಿಯನ್ನು ಗೋವಿಂದನ ಕೈಯಲ್ಲಿ ಕೊಟ್ಟು ಹೋದನು. ಇತ್ತ ಗೋವಿಂದ ಸನ್ನೆ ತಂತಿಯನ್ನು ಎಳೆದು ಬೋನಿನಲ್ಲಿ ಸಿಕ್ಕಿ ಹಾಕಿಕೊಂಡ ಅಂದು ಹುಲಿ ಹೊಡೆದಿದ್ದ ಗೋವಿಂದ ಇಂದು ಬೋನಿನಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಾನೆ. ಎಷ್ಟೇ ಪ್ರಯತ್ನ ಪಟ್ಟರು ಬೋನಿನ ಬಾಗಿಲು ಬರುವುದಿಲ್ಲ ತಾನು ರಾತ್ರಿ ಹಿಂಡುಗಟ್ಟಲೆ ಮಂಗಗಳು ಬಂದು ಬೋನಿನೋಳಗೆ ಸಿಕ್ಕ ಹಾಕಿಕೊಂಡಿರುವ ಮಂಗಗಳನ್ನು ಬಿಡಿಸಲು ಪ್ರಯತ್ನಿಸುತ್ತಿವೆ. ನನ್ನನ್ನು ನೋಡಿ ಅರ ಚಾಡುತ್ತಿದ್ದವು ಬೇಟೆಯಲ್ಲಿ ಗೋವಿಂದ ಸಿದ್ದನಿಗಿಂತಲು ನಿಪುಣ ಆದರೇ ಇಂದು ಬೋನಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತ ಇರುತ್ತಾನೆ ಇಂತಹ ಸನ್ನಿವೇಶಗಳನ್ನು ಗಮನಿಸಿದಾಗ ಮನುಷ್ಯನಿಗೆ ಶಕ್ತಿಗಿಂತ ಯುಕ್ತಿಯೇ ಮುಖ್ಯ ಎಂಬುದನ್ನು ತಿಳಿದುಕೊಳ್ಳ ಬಹುದಾಗಿದೆ.

ಅತ್ತ ಸಿದ್ದ ಕೆಳಪ್ಯಾಟೆ ಹತ್ರ ಮನೆಗೆಹೋಗಿ ಮಾತಾಡುತ್ತ ಇರುವಾಗ ತನ್ನಲ್ಲಿ ಹೆಂಡತಿ ಇಂದ ಒಂದು ತಂತ್ರ ಸಿಗ್ತುನೋಡು ಅನ್ಕೊಡ ಅದೇನಂದ ಹಡ್ಬೆಗೆ ಹುಟ್ಟಿರೋ ಮಂಗಗಳು ಪೇಟೆ ಸೇರಿ ಅದೇನ್ ಬುದ್ದಿ ಕಲ್ತವೆ ನೋಡು ಬೋನಿನೋಳಗೆ ತರಕಾರಿ, ಬಾಳೆಹಣ್ಣು ಇಟ್ರೆ ಅದನ್ನು ಹೊರಗೆ ತಗೊಂಡ್‌ಹೋಗಿ ತಿಂತವೇ ನಾಳೆ ನೀನ್ ಹೇಳ್ದಂಗ್ ಮಾಡ್ತೀನಿ ಬೋನಿನಲ್ಲಿ ಮಂಡಕ್ಕಿ ಪುರಿ ಹಾಕಿದ್ರೆ ಅದನ್ನು ಬಾಚಿಕೊಳ್ಳೊಕೆ ಮಂಗಗಳಿಗೆ ಬರೋಲ್ಲ ಮಂಗಗಳು ಮುಷ್ಠಿ ಕಟ್ಟಿದ್ರೆ ಬಿಚ್ಚಕ್ಕೆ ಬರೊಲ್ಲ ಹೆಬ್ಬೆರಳು ಸೇರಿಸಿ ಹಿಡಿಯಕ್ಕೆ ಬರಲ್ಲ ಅವಕ್ಕೆ ಮಾಡ್ತಿನಿ ನೋಡು, ಅಂತ ಸಿದ್ದ ಮುಂದಿನ ಕಾರ್ಯಕ್ಕೆ ಹಕ್ಕಿ ಪಿಕ್ಕಿ ಜನಾಂಗದ ಹೆಂಡತಿಯಿಂದಲೆ ಮಲೆನಾಡಿನ ಮಂಗಗಳನ್ನು ಹಿಡಿಯೋ ಉಪಾಯವಂತು ಸಿದ್ದ ಪಡೆದುಕೊಂಡನು.

ಮಲೆನಾಡಿನಲ್ಲಿ ಕೋನೆಗೂ ಸರ್ಕಾರದ ಒಪ್ಪಿಗೆಯ ಮೇರಿಗೆ ಸಿದ್ದನಿಗಂತು ರಾಜಮರ್ಯಾದೆ ಸಿಗ್ತು ಆದರೇ ಮಂಗಗಳನು ಕೊಲ್ಲಂಗಿಲ್ಲ ಆ ಮಂಗಗಳನ್ನು ಬೋನಿ ನೋಳಗೆ ತುಂಬೋದಂದ್ರೆ ಸುಲಬದ ಮಾತ "ಕೋಲು ಮುರಿಬಾರದು ಹಾವು ಸಾಯಬಾರದು" ಎಂಬ ಗಾದೆಯಂತೆ ಆತು ಸಿದ್ದನ್ ಸ್ಥಿತಿ ಅದರಲ್ಲೂ ಮಂಗಗಳನ್ನು ಬೋನಲ್ಲಿ ತುಂಬುವುದು ಸುಲಭದ ಕೆಲಸವಂತು ಅಲ್ವೇಅಲ್ಲ ಇತರೇ ಪ್ರಾಣಿಗಳಂತೆನಾದ್ರು ಮಂಗಗಳು ಭೂಮಿ ಮೇಲೆ ಓಡಾಡ್‌ತಾವಾ ಮರದಿಂದ ಮರಕ್ಕೆ ನೆಗಿತ ಸಿಕ್ಕಿದ್ದನ್ನು ತಿಂತಾ ಜನರನ್ನು ಅದರಲ್ಲೂ ಇತರರ ಸಮಸ್ಯೆಗಳನ್ನು ಬಲಿಪಶುವನ್ನಾಗಿ ಮಂಗಗಳು ಮಾಡಿಕೊಂಡಿರುತ್ತವೆ.

ಸರಕಾರದವರ ಮಾತಿನಂತೆ ಮಂಗನ ಹಿಡಿಯೋ ಕಾರ್ಯದಲ್ಲಿ ಕೈಹಾಕಿದ ಸಿದ್ದ ಅದೇ ಚಿಂತೆಯಲ್ಲಿ ಇರುತ್ತಾನೆ. ಅತ್ತ ಬೋನಿನೊಳಗೆ ಸಿಕ್ಕು ಒದ್ದಾಡುತ್ತಿದ್ದ ಗೋವಿಂದನ ಪಾಡು ನಾಯಿ ಪಾಡಾಗಿತ್ತು, ನೇಪಾಳದ ಬಹದ್ದೂರ ಮಠದ ಕಾವಲು (ಪಾರು)ಕಾಯುವುದಕ್ಕೆ ನೇಮಿಸಲಾಗಿತ್ತು.

ಗೋವಿಂದ ಬೆಳಗಾಗೋಹೊತ್ತು ಅಂದ್ರೆ ಇನ್ನು ಮಂಪರು ಇರುವಾಗ ಆತ ತನ್ನನ್ನೆ ತಾನೇ ಇನ್ನು ಬದುಕಿದ್ದೇನೋ ಸತ್ತಿದ್ದೇನೋ ಕನಸೋ ನನಸೋ ಎಂದೂ ತನಗೆ ಕೇಳಿಸುತ್ತಿದ್ದ ಪೈಪಿನ ಶಬ್ದನೋಡಿದ್ದಂತೆ ಎದುರಿಗೆ ಬಂದವ ಬಹದ್ದೂರ್ ಬಂದು ಬೋನನ್ನು ಬಡಿದ ಅದಕ್ಕೆ ಗೋವಿಂದ ಅಯ್ಯೊ ದೇವರೇ ಸಿದ್ದ ಅಂದದಕ್ಕೆ ಆತ ಹೆದರಿ ಬಂದು ಪೋಲಿಸ್‌ನವರಿಗೆ ತಿಳಿಸಿದ "ಬೋನೋಳಗೆ ಏಕ್ ಆದ್ಮಿ ಐತೆ ಮಂಗ ಇದ್ದಾವೆ ಅಂದ" ಫಾರೆಸ್ಟ್‌ನವರು ಏನೇ ತಂತ್ರ ಮಾಡಿದ್ರು ಬೋನಿನ್ ಬಾಗಿಲು ಬರಲಿಲ್ಲ ಆದ್ದರಿಂದ ಸಿದ್ದನನ್ನು ಕರೆತಂದರು ಸಿದ್ಧ ಬೋನಿನ ಮೇಲಿನ ತಾಳ ಜಾರಿಸಿ ನಾನು ಸಿದ್ದ ಕಂಡ್ರ ಹೊರಗೆ ಬನ್ನಿ ಎಂಥದು ಕೆಲ್ಸ ಮಾಡಿಕಂಡ್ರಿ ಅಂದು ಆತನ ಕೈ ಹಿಡಿದುನೋಡಿ ನಾನ್ ಕಣ ಸಿದ್ದ ಅಂದು ಬೋನಿನ ಬಾಗಿಲು ತೆಗೆದನು.

ಮಂಗಗಳ ಹಾವಳಿ ಇಡೀ ಮಲೆನಾಡನ್ನೆ ಬೆಪ್ಪಾಗಿಸುವ ಪ್ರಸಂಗವನ್ನು ಸೃಷ್ಟಿಮಾಡುವುದನ್ನು ಗಮನಿಸಿದರೆ ಪ್ರಾಣಿಗಳು ಎಷ್ಟೋಂದು ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಿಬಿಡುತ್ತವೆ. ಈ ಪ್ರಾಣಿ ಜಗತ್ತು ಮನುಷ್ಯ ಜಗತ್ತಿಗಿಂತಲು ಬಿನ್ನವಾದದ್ದು ಎಂಬುದನ್ನು ತಿಳಿಯಬಹುದಾಗಿದೆ. ಕೇವಲ ಪ್ರಾಣಿಯಿಂದ ಇಷ್ಟೊಂದು ಸಮಸ್ಯೆ ಸೃಷ್ಟಿಯಾಗಿರುವುದನ್ನು ಗಮನಿಸಿದರೆ ಮಲೆನಾಡಿನ ಸಮಸ್ಯೆ ಇನ್ನುಮುಂದೆ ಗಂಬೀರ ಸಮಸ್ಯೆಯಾಗಿಯೇ ಊಳಿಯಬಹುದೇ?

ಮಂಗನ ಬ್ಯಾಟೆ ಮಾಡಲು ಹೋಗಿ ಗೋವಿಂದ ಬೋನಿನ ದಬ್ಬೆ ಹುಲಿಗೆ ಒಳಗೆ ಪಿಳಿಪಿಳಿ ಕಣ್ಣು ಮಾತ್ರ ಬಿಡುತ್ತಿದ್ದ ಬೋನಿನ ಹೊರಗೆ ಬಂದವ ಅಂಗಲಾಚಿ ಸಿದ್ದಂಗೆ ಹೇಳಿದ ಸಿದ್ದ ಈ ಕೆಲ್ಸ ನಮ್ಮ ಶತ್ರುಂಗೂ ಬ್ಯಾಡಾ ನಿಂಗೂ ಬ್ಯಾಡಾ ಬದುಕೊಂಡಿದ್ರೆ ಬೇಡಿ ತಿನ್ನಬಹುದು ಮಠದ ಮಂಗಗಳ ಸಹವಾಸ ಬ್ಯಾಡಾ ಈ ವಿಷ್ಯ ಯಂಕಣ್ಣಂಗೆ ತಿಳಿಬಾರ್ದು ಅಂದು ಹೇಳಿದ ಮನೆಗೆ ಬಂದು ಸಿದ್ದ ಕೆಳಪ್ಯಾಟೆಗೆ ಗೋವಿಂದನ ವಿಷ್ಯ ಹೇಳಿದಕ್ಕೆ ಅವಳು ನಾನಿಂಗೆ ಅವತ್ತೆ ಹೇಳಲಿಲ್ಲ ಮಠದ ಮಂಗಗಳ ಸಹವಾಸ ಬ್ಯಾಡ ಅಂತ, ಮಠದವರಿಗೆ ತೊಂದ್ರೆ ಆದ್ರೆ ದೇವರಿದ್ದಾನೆ. ನಮ್ಮಂತೋರಿಗೆ ತೊಂದ್ರೆ ಆದ್ರೆ ಯಾರು? ಗತಿ! ನಿನ್ನ ಯಾರಾರು ಹೊಗಳಿದ್ರೆ ಆಕಾಶಕ್ಕೆ ಹೆಗರ್ತಿ ನೀನ್ ಇನ್ನು ಮಠದ ಮಂಗ ಹಿಡಿಯೋಕೆಲ್ಸ ಬಿಡು ಅತ್ತ ತಲೆ ಹಾಕಿದ್ರೆ ನನ್ಮೇಲಾಣೆ ಎಂದಳು. ಇಲ್ಲಿ ಜನರ ಸಮಸ್ಯೆಗಿಂತ ಮಂಗಗಳನ್ನು ಹಿಡಿಯೋ ಸಮಸ್ಯನೆ ದೊಡ್ಡ ಸಮಸ್ಯೆಯಾಗಿ ಪರಿಣಾಮ ಬೀರಿದೆ ಅದರಲ್ಲೂ ಮಠದ "ಮಂಗಗಳ ಸಹವಾಸ ಹಗಲೆಲ್ಲ ಉಪವಾಸವಂತು ಗ್ಯಾರೆಂಟಿಯಾಗಿತ್ತು".

ಮಠದ ಮಂಗಗಳನ್ನು ಹಿಡಿಯಲು ಪಡುತ್ತಿರುವ ಕಷ್ಟ ಅಷ್ಟಿಷ್ಟಲ್ಲ ಇಡೀ ಸರಕಾರವೇ ಕೈಹಾಕಿದ್ದರು ಮಂಗನನ್ನು ಬೇಟೆ ಮಾಡಲಿಕ್ಕಂತು ಆಗುತ್ತಿಲ್ಲ. ಒಂದಾನೋಂದು ಸಮಸ್ಯೆಯಂತು ದಿನದಿಂದ ದಿನಕ್ಕೆ ಸೃಷ್ಟಿಯಾಗುತ್ತಲೆ ಸಾಗುತ್ತಿವೆ. ಸಿದ್ಧನಂತು ತನ್ನ ಪ್ಯಾಟೆ ಹೆಂಡ್ತಿಯ ಮಾತಿನಂತೆ ದೆಯ್ಯನಂಬಿ ಕೈಬಿಡಲು ಮುಂದಾಗುತ್ತಾನೆ. ಈ ವಿಷ್ಯ ಮುಖ್ಯಮಂತ್ರಿವರೆಗೂ ಹೊಯ್ತು ವಡೇರು ನೇರವಾಗಿ

ಸಿದ್ದನ್ ಮನೆಗೆ ಬಂದು ಸಿದ್ದನನ್ನು ಕರೆದುಕೊಂಡು ಬಂದು ಮಠದಲ್ಲಿನ ಮಂಗಗಳನ್ನು ಹಿಡಿಯಲೇಬೇಕು. ನನ್‌ಗೋಸ್ಕರ ನನ್ನ ಮರ್ಯಾದೆ ಪ್ರಶ್ನೆ ನಿನ್ ಏನು? ಕೆಳ್ತಿಯ ಕೇಳು ಕೊಡ್ತಿನಿ ಮರುಮಾತಾಡ್ಬೇಡ ಎಲ್ಲಾ ವ್ಯವಸ್ಥೆ ನಾನ್ ಮಾಡ್ತಿನಿ ಅಂದ ಅದಕ್ಕೆ ಸಿದ್ದ ಕಾಲು ಹಿಡಿದು ವಡೇರಿಗೆ ಅಯ್ಯ ಅವು ದೇವರ ಮಂಗಗಳು ನಮ್‌ಕುಲ ನಾಶವಾಗ್ತದೆ. ಅದೊಂದ್ ಕೆಲ್ಸಬ್ಯಾಡ ನೀವ್ ಹೋಳೆಗ್‌ಹಾರು ಅನ್ನು ಹಾರ್‌ತಿನಿ ಅಂತ ಸಿದ್ಧ ಹೇಳಿದನು. ಇಲ್ಲಿ ಮನುಷ್ಯ ಮನುಷ್ಯರ ರಕ್ಷಣೆಗಾಗಿ ನಡೆಯುತ್ತಿರುವ ಬೇಟೆಯಾಗಿದೆ. ಸ್ವತಹ ತನ್ನನ್ನು ತಾನು ರಕ್ಷಣೆ ಮಾಡಲಾಗದವನು ಮತ್ತೊಬ್ಬನ ರಕ್ಷಣೆಗೆ ಹೋಗುವುದೆಂದರೆ ಏನು ಅರ್ಥ ಅದರಲ್ಲೂ ತನ್ನ ಹೆಂಡತಿಯ ಮಾತನ್ನು ಮೀರಿಹೋಗುವದು ಅಷ್ಟು ಸುಲಭವೇ?

ಅದಕ್ಕೆ ವಡೇರು ಹೆದರಿಸಿ ದೇವರ್ ಮಂಗಗಳು ಅಲ್ಲ ನೀನು ಯಾರ್ ಮಾತು ತಲೇಗ್ ಹಾಕ್‌ಕೊಬೇಡ ಅಂತ ಹೇಳಿ ೫೦೦ ಜೇಬಿಗೆ ಹಾಕಿದ್ರು ಸಿದ್ದ ವಡೇರ್ ಮಾತಿನಂತೆ ಆ ದುಡ್ಡನ್ನು ಮಂಡಕ್ಕಿ ಪುರಿ ತರಕ್ಕೆ ಅಂತ ತೆಗೆದುಕೊಂಡು ಅವನ ಓಡಾಟಕ್ಕಾಗಿ ಒಂದು ಜೀಪಿನ ವ್ಯವಸ್ಥೆನು ಆಯ್ತು ಸಿದ್ದ ಮತ್ತೆ ತನ್ನ ಅಪರೇಷನ್ ಮಂಕಿ ಕೆಲಸವನ್ನು ಮುಂದುವರೆಸಿದನು.ಇಲ್ಲಿ ಮೆಲ್ವರ್ಗದ ಜನ ಕೆಳವರ್ಗದ ಜನರಿಗೆ ತುಳಿತ್ತಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದ ಕೆಲವು ಬೇಡರು ಕರಡಿ, ಕೋತಿ ಮತ್ತು ಹೋರಿಗಳಿಗೆ ತರಬೇತಿ ಕೊಟ್ಟು ಅವುಗಳಿಂದ ಜನರನ್ನು ರಂಜಿಸಿ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿರುವ ವೃತ್ತಿ ಇನ್ನೂ ಇದೆ. ಇಲ್ಲಿ ಬೆಸ್ತ, ಗೊಲ್ಲ ಇತರ ಬುಡಕಟ್ಟುಗಳು ಕಂಡು ಬಂದರೂ ಬೇಡರೂ ಮಾತ್ರ ಬೇಟೆಯನ್ನು ಇನ್ನೂ ಕೈಬಿಟ್ಟಿಲ್ಲ ಇವರು ಪ್ರತಿವರ್ಷ ಯುಗಾದಿಯಲ್ಲಿ ಹಂದಿಬೇಟೆ ಶಿವರಾತ್ರಿಯಲ್ಲಿ ಮೊಲದ ಬೇಟೆ ಮತ್ತು ಮೊಳೆ ಬಾರದಿದ್ದಾಗ ಹೊಲಮೇರಿ ಬೇಟೆಯಂಥ ಆಚರಣೆಗಳನ್ನು ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ಈ ಬುಡಕಟ್ಟು ಜನಾಂಗದಲ್ಲಿಯೆ ಬೇಟೆ ಮಾಡುವದರಲ್ಲಿ ಅತೀ ನಿಪುಣರೆಂದರೆ ಬೇಡರು ಇವರು ಯಾವುದೆ ಕಾರಣಕ್ಕಾಗಿ ಆದ್ರು ಬೇಟೆಯ ಕಸುಬನ್ನು ಬಿಡುವವರಲ್ಲ. ತಮ್ಮದೇಯಾದ ಸಂಪ್ರದಾಯದಂತೆ ತಮ್ಮದೇ ಆಚರಣೆಯಂತೆ ಈ ಬೇಡ ಬುಡಕಟ್ಟಿನವರು ಬೇಟೆಯನ್ನು ಆಡುತ್ತಾರೆ. "ಬೇಟೆ ಯಾಡುವುದು ಕೆಲವರ ಸ್ವತ್ತಲ್ಲ ಹಲವರ ಸ್ವತ್ತು" ಬೇಟೆ ಯಾಡಿ ತನ್ನ ದೈನಂದಿನ ಬದುಕನ್ನು ಸುಧಾರಿಸಿಕೊಳ್ಳುತ್ತಾನೆ.[೧೧]

ಸಿಂಧೂ ಬಯಲಿನ ನಾಗರಿಕತೆಯಲ್ಲಿ ಕೃಷಿ ಪ್ರದಾನವಿದ್ದರೂ ಬೇಟೆ ಪಶುಪಾಲನೆ ತಕ್ಕಮಟ್ಟಿಗಿತ್ತು. ವೇದ ಕಾಲದ ಯಜ್ಞಾ, ವಿಧಾನಕ್ಕೆ ಪಶುಬಲಿ ಕೊಡುತ್ತಿದ್ದರು. ರಾಮಾಯಣ ಮಹಾಭಾರತಗಳಲ್ಲಿ ಬೇಟೆಯ ಚಿತ್ರಣ ಸಮಗ್ರವಾಗಿ ಬಂದಿದೆ. ಈ ಎಲ್ಲಾ ಹಿನ್ನೆಲೆಯಿಂದಲೆ ೧೮ ವರ್ಣನೆ. ಸಪ್ತವ್ಯಸನ ನವರಸಗಳಿಗೆ ಅನಿವಾರ್ಯವೆಂಬಂತೆ ಬೇಟೆ ಸಾಹಿತ್ಯದಲ್ಲಿ ದಾಖಲಾಗಿದೆ. ಸತ್ತ ಹಂದಿಗಾಗಿ

ಅರ್ಜುನ ಮತ್ತು ಕಿರಾತಕನಿಗೂ(ಶಿವ)ಯುದ್ಧ ವಾಗುವುದು ಕಾವ್ಯದಲ್ಲಿ ಕಂಡು ಬರುವ ಸಂಗತಿ ಇಂತಹ ಅನೇಕ ಸಂಗತಿಗಳಿಂದ ಮಹಾಭಾರತ ಮತ್ತು ರಾಮಾಯಣವನ್ನು ಬುಡಕಟ್ಟು ಜನರು ಕಟ್ಟಿಕೊಡುವ ಮೌಖಿಕ ಕಾವ್ಯಗಳೆನ್ನಬಹುದು ಆ ಪ್ರಸಂಗಗಳನ್ನು ಶಿಷ್ಟ ಕಾವ್ಯದಲ್ಲಿ ಕವಿ ಬಳಸಿಕೊಂಡಿದ್ದಾನೆ.[೧೧]

ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲೇ ಮಾಂಸದ ಬಳಕೆಗಾಗಿ ಬೇಟೆ ಬಳಕೆಯಲ್ಲಿತ್ತು. ರಾಮಾಯಣದಲ್ಲಿ ವಾಲ್ಮಿಕಿ, ಲಕ್ಷ್ಮಣನಿಗೆ ಮೃಗಗಳನ್ನು ಕೊಂದು ಮಾಂಸ ತರಲು ಹೇಳುವುದು ರಾವಣನು ಪಂಚವಟೆಗೆ ಬಂದಾಗ ಸೀತೆ ಪತಿ ದೇವರು ಬೇಟೆಗೆ ಹೋಗಿದ್ದಾರೆ ಎಂದು ಹೇಳುವದು, ಮಹಾಭಾರತದ ಪಾಂಡು ಚಕ್ರವರ್ತಿ ಬೇಟೆಯಲ್ಲಿ ಋಷಿ ದಂಪತಿಗಳನ್ನು ಹೊಡೆದು ಸಾಯಿಸುತ್ತಾನೆ. ಇದರಲ್ಲಿ ತಾಂಡವ ಮುನಿಯ ದುರಂತದ ಕಥೆಯಲ್ಲಿ ಬೇಟೆ ಚಿತ್ರಣವಿದೆ. ಹೀಗೆ ರಾಜ ಮಹಾರಾಜರು ಅನೇಕ ಅನೇಕ ವರ್ಷಗಳಿಂದ ಬೇಟೆಯನ್ನು ಆಡುತ್ತಾಬಂದಿದ್ದಾರೆ. ಮೊಘಲರ ಬಾಬರ ಹುಮಾಯೂನ್, ಅಕ್ಬರ್, ಜಹಾಂಗೀರ್, ಬೇಟೆಯಲ್ಲಿ ನಿಪುಣರು.[೧೨]

ಸಿಂಧೂ ನಾಗರಿಕತೆಯಿಂದ ಹಿಡಿದು ಇಂದಿನ ಆಧುನಿಕತೆ ಈವರೆಗೂ ಹರಿದು ಬಂದಿರುವ ಬೇಟೆಯ ಸಂದರ್ಭಗಳನ್ನು ಸನ್ನಿವೇಶಗಳನ್ನು ಉಲ್ಲೇಕಿಸುತ್ತ ಹೊದಂತೆಲ್ಲ ಮಾನವನಲ್ಲಿರುವ ಬೇಟೆಯ ಕುರಿತ ಭಿನ್ನಾಭಿಪ್ರಾಯಗಳನ್ನು ರೂಡಿ ಸಂಪ್ರದಾಯಗಳನ್ನು ಪಾಲಿಸುತ್ತ ತನ್ನ ಅವಶ್ಯಕತೆಯನ್ನು ನೀಗಿಸಿಕೊಳ್ಳುತ್ತಾ ಬಂದಿರುವದನ್ನು ಗಮನಿಸಿದರೇ ಬೇಟೆ ಪುರಾಣವು ವಿಶಾಲವಾದದ್ದು ಅನಾಧಕಾಲದಿಂದಲು ಹರಿದು ಬಂದಿರುವ ಇತಿಹಾಸ ಕಂಡುಬರುತ್ತದೆ. ಅದರಲ್ಲೂ ಪ್ರಾಣಿಗಳು ಕುರುಚಲು ಕಾಡುಗಳಿಗಿಂತ ಹಚ್ಚ ಹಸಿರಾದ ಕಾಡುಗಳಲ್ಲೆ ಹೆಚ್ಚು ಹೆಚ್ಚಾಗಿ ಬೇಟೆಯನ್ನು ಮಾಡಬಹುದಾಗಿದೆ.[೧೩]

ಮಲೆನಾಡಿನಲ್ಲಿ ಕೃಷಿ ಕಾರ್ಮಿಕರ ಅಲಭ್ಯತೆಯಿಂದಾಗಿ ಭತ್ತದ ಬೇಸಾಯ ಲಾಭದಾಯಕವಲ್ಲದೇ ಇರುವುದರಿಂದ ಕೆಲವು ರೈತರು ಅಕೇಶಿಯಾದ ತೋಪುಗಳನ್ನು ಬೆಳೆಸಿರುವುದು ಆತಂಕಕಾರಿಯಾಗಿದೆ. ಅಕೇಶಿಯದ ಮನೋ ಕಲ್ಚರ್‌ನಿಂದಾಗಿ ಅಕೇಶಿಯಾ ಬೆಳೆದ ಪರಿಸರದಲ್ಲಿ ಪ್ರಾಣಿ ವೈವಿಧ್ಯತೆ ಕಡಿಮೆಯಾಗುತ್ತದೆ.[೧೪]

ಮಲೆನಾಡಿನ ಶಿಕಾರಿ ಅಷ್ಟು ಸುಲಬದ ಕೆಲಸವಲ್ಲ ಪೆಟ್ಟುತಿಂದ ಪ್ರಾಣಿಗೆ ಗಾಯ ಸಣ್ಣದಾಗಿದ್ದು ಅದು ತನ್ನ ಜೀವನ ರಕ್ಷಣೆಗಾಗಿ ಪಕ್ಕದ ಕಾಡಲ್ಲಿ ಮಾಯವಾಗುವ ಸಂದರ್ಭವು ಕಂಡುಬರುತ್ತವೆ. ಬೇಟೆಯಾಡುವುದು ಹೆಚ್ಚು ಅಪಾಯಕಾರಿ ಕೆಲಸ ತಾನು ಬದುಕಿ ತಿರುಗಿಬರುತ್ತಿನೋ ಇಲ್ಲವೋ ಎಂಬ ನಂಬಿಕೆಯು ಈ ಬೇಟೆಗಾರನಿಗೆ ಇರುವುದಿಲ್ಲ.

ಮಲೆನಾಡಿನಲ್ಲಿ ಮೊದಲು ನಾಗರಿಕ ಪ್ರಪಂಚದ ಸಂಪರ್ಕ ಇರದಿದ್ದ ದಿನಗಳಲ್ಲಿ ತಮ್ಮ ಮನೆಗಳಲ್ಲೆ ಕೃಷಿ ಚಟುವಟಿಕೆಗೆ ಮನೆಯ ಬಳಕೆಗೆ ಅಗತ್ಯವಾಗಿರುತ್ತಿದ್ದ ಬುಟ್ಟಿಗಳು, ಮೊರ, ಚಾಪೆಗಳನ್ನು ಬಿದಿರನ್ನು ಕಾಡಿನಿಂದ ತಂದು ಸಣ್ಣಗೆ ಸೀಳಿ ತಮ್ಮ ಮನೆಗಳಲ್ಲೆ ಹೆಣೆಯುತ್ತಿದ್ದರು, ಬಿಡುವಿನ ವೇಳೆಯನ್ನು ಹೀಗೆ ಸದುಪಯೋಗ ಪಡಿಸಿಕೊಳ್ಳುತ್ತಿದ್ದರು, ಈಗ ಐಶಾರಾಮಿ ಜೀವನಕ್ಕೆ ಮಾರುಹೋದ ರೈತ ಸಮುದಾಯ ಇಂದು ತಮ್ಮ ಬಿಡುವಿನ ಸಮಯದಲ್ಲಿ ರಾಜಕೀಯದ ಬಗ್ಗೆ ಹರಟೆ ಹೊಡೆಯುತ್ತಲೊ ಇತರ ದುಶ್ಚಟಗಳೆಡೆಗೆ ವಾಲುತ್ತಿರುವುದಾಗಿದೆ. ಆದರೆ ಇಂದು ಪ್ಲಾಸ್ಟಿಟಿ ಹಗ್ಗಗಳು ಪ್ಲಾಸ್ಟಿಕ್ ಮತ್ತು ರಬ್ಬರ್ ಬುಟ್ಟಿಗಳು ಹೊರೆಗಳು ಅವುಗಳ ಸ್ಥಾನ ಪಡೆದುಕೊಂಡಿವೆ.

ಪ್ರಾಣಿಗಳೆಲ್ಲ ಅಂದು ಅರಣ್ಯಗಳಲ್ಲೆ ನಿರಾತಂಕವಾಗಿ ವಾಸಿಸುತ್ತಿದ್ದವು, ಬ್ರಿಟೀಷರ ಖಾರವಾದ ಕಾನೂನಿನ ರಕ್ಷಣೆ ಅವಕ್ಕಿತ್ತು. ಮೀಸೆಹೊತ್ತವರೆಲ್ಲ ಬಂದೂಕ ಇಟ್ಟುಕೊಳ್ಳಲು ಲೈಸೆನ್ಸ್ ಕೊಟ್ಟರೂ ಬೇಟೆಗೆ ಬೇರೆ ಲೈಸೆನ್ಸ್ ಬೇಕೆಬೇಕಿತ್ತು. ಅಂದುಕೊಂಡ ವ್ಯಕ್ತಿಗಳನ್ನು ನೋಡಿ, ಆತನ ಸ್ಥಾನಮಾನ ಅಂತಸ್ತು ಅಳೆದು ಪರವಾನಗಿ ಕೊಡಲ್ಪಡುತ್ತಿತ್ತು ಒಟ್ಟಾರೆಯಾಗಿ ಬೇಟೆ ಮಾಡುವವರನ್ನು ಸರಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಕೆಲವು ಶರತ್ತಿನ ಮೂಖೇನ ಬೇಟೆಗೆ ಅವಕಾಶವನ್ನು ನೀಡುತ್ತಿದ್ದರು.[೧೫]

ಕಲ್ಕುಳಿ ವಿಠಲ ಹೆಗ್ಗಡೆ ಅವರ ಮಂಗನ ಬ್ಯಾಟೆ ಮಲೆನಾಡಿನ ಪರಿಸರ ಕಥನದಲ್ಲಿ ಒಟ್ಟಾರೆ ಮಲೆನಾಡಿನಲ್ಲಿ ನಡೆಯುತ್ತಿರುವ ರೈತರ ಸಮಸ್ಯೆ ಹಾಗೂ ಸಾಮಾನ್ಯ ಜನರಗೋಳು ಮತ್ತು ವ್ಯಾಪಾರಿಗಳ ಸಮಸ್ಯೆಯ ಜೊತೆ-ಜೊತೆಗೆ ಬುಡಕಟ್ಟು ಜನರ ಆರ್ಥಿಕ ತುಮಲುಗಳನ್ನು ಜಾತಿಯತೆಯ ಗೊಂದಲಗಳನ್ನು ಮತ್ತು ಮಲೆನಾಡಿನ ಪರಿಸರದ ಬೇಟೆಯ ಜೊತೆಗೆ ಬಡವರು ಮಾಡುವ ಜೀತದಾಳುತನವನ್ನು ಮಲೆನಾಡಿನ ಪರಿಸರದ ಪ್ರಾಣಿಸಾಮ್ರಾಜ್ಯದಲ್ಲಿ ತೋರಿಸಿಕೊಟ್ಟಿದ್ದಾರೆ. ಮಲೆನಾಡು ಸದಾ ಹಸಿರು, ತಂಪಾದ, ಗಾಳಿ, ಮಳೆಗಾಲದಲ್ಲಿನ ಚಳಿ, ಮಳೆಯ ಮಬ್ಬಿನ ಹನಿಗಳು ಕಾಫಿ ತೋಟದಿಂದ ಆವೃತ್ತವಾಗಿರುವ ಬೆಟ್ಟಗುಡ್ಡಗಳ ಸಾಲುಗಳು ನೋಡುಗರ ಮನಮುಟ್ಟುವಂತೆ ಬಾಸವಾಗುತ್ತವೆ.

"ಕಾಡಿನಿಂದ ನಾಡುನಾಡಿನಿಂದ ನಗರ ನಗರದಿಂದ ಮಹಾನಗರ" ಮುಂತಾದ ವ್ಯವಸ್ಥೆಗಳು ಸೃಷ್ಟಿಯಾಗಿರಬಹುದು. ಮೇಲಿನ ಸ್ಥಿತ್ಯಂತರಗಳಿಗೆ ಸಂವಾದಿಯಾಗಿ ಮಾನವನ ಬೆಳವಣಿಗೆಯ ಚರಿತ್ರೆಯಲ್ಲಿ ಬೇಟೆ, ಪಶುಸಂಗೊಪನೆ, ಆಹಾರ, ಸಂಗ್ರಹಣೆ, ಕೃಷಿ, ಮತ್ತು ವಿಜ್ಞಾನ ಯುಗಗಳೆಂದು ೫ ಆವಸ್ಥೆಯನ್ನು ಕಾಣಬಹುದು. ಆದ್ದರಿಂದ ಒಂದು ಜನಾಂಗದ ಎಲ್ಲಾ ಸಾಮಾಜಿಕ ಚಲನಾಶೀಲತೆ ಹಾಗೂ ಪರಿವರ್ತನೆಯ ಹಿನ್ನೆಲೆಯಲ್ಲಿ ಮತ್ತು ವಿವಿಧ ಘಟ್ಟಗಳ ಮನುಷ್ಯ ಕುಲದ ಚರಿತ್ರೆಯ ಹಿನ್ನೆಲೆಯಲ್ಲಿ ಇವತ್ತಿನ ಯಾವುದೆ ಜನಾಂಗವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಮಲೆನಾಡಿನ ಋತುಮಾನದಲ್ಲಿ ಸಂಭವಿಸುವ ಬೇಟೆಗಳು ಆಯಾಕಾಲ, ವಾತಾವರಣಗಳಿಗೆ, ನಂಬಿಕೆ, ಶಕುನ, ಧೈರ್ಯ ಸಾಹಸಗಳ ಮೇಲೆ ನಡೆಯುತ್ತಿರುತ್ತವೆ, ಬೇಟೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ಮನುಷ್ಯನಿಂದ ಮನುಷ್ಯನಲ್ಲಿ ಭಿನ್ನವಾಗಿರುತ್ತವೆ.[೧೬]

ಮಲೆನಾಡಿನಲ್ಲಿ ಹಾವುಗಳ ಕಾಡಟವಂತು ತಪ್ಪಿದ್ದಲ್ಲ ಹೆಬ್ಬಾವಿಗೆ ವಿಷದ ಹಲ್ಲಿಲ್ಲ ಹೆಬ್ಬಾವಿನ ವಿಶೇಷ ಗುಣ ಅಂದ್ರೆ ವರುಷಕ್ಕೆ ಒಂದಾವರ್ತಿ ಹೊಟ್ಟೆತುಂಬಾ ಸಿಕ್ಕಿದ್ರೆ ಸಾಕು ಆಮೇಲೆ ಕುಂಭಕರ್ಣ ನಿದ್ರೆಮಾಡ್ತಿರ್ತದೆ. ಹೊಟ್ಟೆಗೆ ಸಿಗದಿದ್ರು ಅದು ಸುರುಳಿ ಹೊಡೆದು ತನ್ನ ಆಹಾರಕ್ಕಾಗಿ ಕಾದುಕೊಂಡು ತಿಂಗಳುಗಟ್ಟಲೆ ಮಲಗಿರುತ್ತೆ ಅದರ ಸುರುಳಿಯ ಎದುರಿನಲ್ಲಿ ಸಿಕ್ಕ ಯಾವುದೇ ಪ್ರಾಣಿಯನ್ನು ಕ್ಷಣ ಮಾತ್ರದಲ್ಲಿ ಹಿಡಿದು ನುಂಗುತ್ತೆ. ಅದರ ಬಾಯಿ ಒಳಗೆ ಇರುವ ಹಲ್ಲುಗಳು ಬಟ್ಟೆ ತಿಕ್ಕುವ ಬ್ರಶನ ಎಳೆಗಳಂತೆ ಹಿಮ್ಮೂಕವಾಗಿ ಕೊಕ್ಕೇಯಾಗಿರುತ್ತವೆ. ಈ ಹಾವು ಕೆಲವು ಸಾರಿ ತನ್ನ ಸಾಮರ್ಥಕ್ಕಿಂತ ದೊಡ್ಡ ಪ್ರಾಣಿಯನ್ನು ನುಂಗಿ ಪ್ರಾಣ ಕಳೆದುಕೊಳ್ಳುವ ಪ್ರಸಾಂಗವಿದೆ. ಹೆಬ್ಬಾವಿಗೆ ನುಂಗೋಕೆ ಮಾತ್ರ ಗೊತ್ತು. ಜೀವಹೋಗುತ್ತೆ ಅನ್ನೋಪರಿವೇ ಇಲ್ಲ. ಹಾವು ಮಲೆನಾಡಿನ ಜನರಿಗೆ ದೇವರಾದರೇ ಅದೇ ಹಾವು ಬಯಲು ಸೀಮೆ ಜನರಿಗೆ ಶತ್ರುವಾಗಿ ಜನರ ಮೇಲೆ ಪರಿಣಾಮ ಬೀರುತ್ತದೆ.[೧೭]

ಪ್ರಾಚೀನ ಮಾನವ ತನ್ನ ಪರಿಸರದಲ್ಲಿ ಪ್ರಾಣಿವರ್ಗದೊಂದಿಗೆ ಸತತವಾಗಿ ಹೋರಾಡುತ್ತಲೇ ಬಂದಿದ್ದಾನೆ. ಇದರ ಪರಣಾಮವಾಗಿ ಜನಪದರ ಜೀವನದಲ್ಲಿ ಅನೇಕ ನಂಬಿಕೆ, ತರ್ಕಗಳು ಹುಟ್ಟಿವೆ. ಮನುಷ್ಯವರ್ಗ ಪ್ರಾಣಿಗಳೊಂದಿಗೆ ತನ್ನ ಸಂಬಂಧವನ್ನು ನಿರ್ಣಯಿಸುವಾಗ ಇಂತಹ ನಂಬಿಕೆಗಳು ಹುಟ್ಟಿದವು. ಮನುಷ್ಯ ಮತ್ತು ಪ್ರಾಣಿ ಸಂಬಂಧಿ ಇಂಥ ನಂಬಿಕೆಗಳು ಪ್ರದೇಶದಿಂದ ಪ್ರದೇಶಕ್ಕೆ ಬಿನ್ನವಾಗಿವೆ. ಧಾರ್ಮಿಕ, ಬೌಗೋಳಿಕ, ಕಾರಣಗಳಿಂದ ಬಿನ್ನ ಬಿನ್ನವಾಗಿವೆ. ಬಹು ಸಂಖ್ಯೆಯಲ್ಲಿ ಜನಪದರು ಕಾಡು ಮತ್ತು ಅದರ ಸುತ್ತಲಿನ ಬಯಲನ್ನು ತಮ್ಮ ವಾಸಸ್ಥಳವನ್ನಾಗಿ ಆ ಪರಿಸರದಲ್ಲಿ ತಾವು ಬಿತ್ತಿ ಬೆಳಿಸಿದ ಆಹಾರ ವಸ್ತುವನ್ನು ಕಾಡು ಮೃಗಗಳಿಂದ ಕಾಪಾಡಿಕೊಳ್ಳಲು ಹೊರಾಡುತ್ತಾ ಬರಬೇಕಾಯಿತು, ಬೆಳೆಗಳನ್ನಷ್ಟೇ ಅಲ್ಲದೇ ತನ್ನನ್ನೆ ಕಬಳಿಸಲು ಬರುವ ಕ್ರೂರಮೃಗಗಳೊಂದಿಗೂ ಮಾನವ ದ್ವೇಷದಿಂದಲೇ ಇರಬೇಕಾಯಿತು.

ಕಾಡಿನ ಕ್ರೂರ ಮೃಗಗಳನ್ನು ನಿಯಂತ್ರಿಸಲು ಅಥವಾ ಮಣಿಸಲು ಜನಪದರು ನೇರವಾಗಿ ತಮ್ಮ ಕೈಯಾರೇ ಆಗದೇ ಇದ್ದಾಗ ಶಕ್ತಿ ಯೊಂದಕ್ಕೆ ತಲೆಬಾಗಿದ್ದಾರೆ. ಬೇಟೆಗೆ ಸಂಬಂಧಿಸಿದ ಪ್ರಾಚೀನ ಚಿತ್ರಗಳು ಇದನ್ನು ಸಾದರಪಡಿಸುತ್ತವೆ. ಸ್ಪೆನಿನ ಕೆಲವೊಂದು ಪುರಾತನ ಗುಹೆಗಳಲ್ಲಿ ಇಂಥ ಬೇಟೆಯ ಚಿತ್ರಗಳಿವೆ ಇವರು ಬುಸ್‌ಮನ್ ಜನಾಂಗಕ್ಕೆ ಸೇರಿದವರು, ಇವರು ಇಪ್ಪತ್ತು ಸಾವಿರ ವರ್ಷಗಳ ಹಿಂದೆ ಬದುಕಿದ ಜನರು ಎಂಬ ಅಭಿಪ್ರಾಯ ಬೇಟೆಯ ಪ್ರಾಚೀನತೆ ತಿಳಿಸುತ್ತದೆ. (ಪು. ಳಳ ಕಲೆಯ ದರ್ಶನ)

ಮಂಗನ ಬ್ಯಾಟೆ ಕಥನವನ್ನು ಅವಲೋಕಿಸುತ್ತ ಹೋದಂತೆ ಬೇಟೆ ಹಾಡುಗಳಲ್ಲಿ ಮಹಾಭಾರತದ ಸುಭದ್ರೆ ಅರ್ಜುನರಿಗೆ ಸಂಬಂಧಿಸಿದ ಪ್ರಚಲಿತ ಕಥನ ಕವನ ರೂಪದ ಹಾಡೊಂದರಲ್ಲಿ ಬೇಟೆಯ ಉಲ್ಲೇಖವಿದೆ. ಅರ್ಜುನನು ದ್ರೌಪದಿಯನ್ನು ಗೆದ್ದು ಬರುವ ಪ್ರಸಂಗ ಇದರಲ್ಲಿದ್ದು ಅಲ್ಲಿ ಬೇಟೆಯ ಪ್ರಸ್ತಾಪ ಬರುತ್ತದೆ.

"ಆಲದ ಮರದಡಿಯ ಅರ್ಜುನರಾಯ
ಹೋಗಿ ಬೇಟ್ಯಾಡುವಾಗ
ನಾರೀನ ಕಣ್ಣಲಿ ನೋಡುತ್ತಾನೆ ಅರ್ಜುನರಾಯ
ಅಷ್ಟೊಂಬೊ ಅಡವಿಯೊಳೆ ದೌಪದಿ ಕಟ್ಟಿರುವ ಕಣ್ಣ ಬಿಚ್ಚಿ"

ಶಿಕಾರಿ ಎಂದರೆ ಸಾಹಸ ಪ್ರದರ್ಶನದ ರಸನಿಮಿಷಗಳು ಅಡಕವಾಗಿರುವ ಕಾಡುಪ್ರಾಣಿಗಳ ಬೇಟೆ, ಇದರಲ್ಲಿ ಧೈರ್ಯ, ಭಯ, ಸಿಟ್ಟು, ಹಾಸ್ಯ, ಬುದ್ದಿ, ಕೌಶಲ್ಯಕ್ಕೆ ಅವಕಾಶವಿಯುವ ಪ್ರಸಂಗಗಳಲ್ಲದೆ. ಮಾಸದ ಔತಣವೂ ದೊರೆಯುವ ಅವಕಾಶವುಂಟು. ಶಿಕಾರಿಯು ಹಳ್ಳಿಗರ ಹವ್ಯಾಸವೂ ಹೌದು. ಅಂದಿನ ದಿನಗಳಲ್ಲಿ ಅವಿದ್ಯಾವಂತರೇ ಮಲೆನಾಡಿನಲ್ಲಿ ಶಿಕಾರಿ ಮಾಡುವ ಹವ್ಯಾಸದವರಿದ್ದರಿಂದ ಹಾಗೂ ಬಡವರೇ ಹೆಚ್ಚಾಗಿ ಸಾಹಸಮಯವಾದ ಸನ್ನಿವೇಶಗಳನ್ನು ಸಂಗ್ರಹಿಸಲು ಯಾರೂ ಪ್ರಯತ್ನಮಾಡಲಿಲ್ಲ.[೧೯]

ಪ್ರಕೃತಿಯಲ್ಲಿ ಬಲಶಾಲಿ ಪ್ರಾಣಿ ಅಥವಾ ಬುದ್ಧಿವಂತ ಮನುಷ್ಯ ಬಲಹೀನ ಪ್ರಾಣಿಗಳ ಮೇಲೆ ಹೊಂಚುವ, ದಬ್ಬಾಳಿಕೆ ಮಾಡುವ. ಹಿಂಸಿಸುವ, ಪ್ರವೃತ್ತಿ ನಿಸರ್ಗದಷ್ಟೇ, ಸಹಜ, ಬೇಟೆಯ ಕ್ರೀಯೆ ಬರೀ ಆಯುಧ ತಂತ್ರಗಳಿಂದಷ್ಟೇ ಪರಿಪೂರ್ಣವಾಗುವುದಿಲ್ಲ, ಬೇಟೆಗಾಗಿ ಆಯುಧಗಳನ್ನು, ಸುಧಾರಿತ ತಂತ್ರಗಳನ್ನು ಬಳಸುವಲ್ಲಿ ಬುದ್ದಿವಂತ ಮನುಷ್ಯ ಯಶಸ್ವಿಯಾದರೆ ನಿಸರ್ಗವೇ ಕರುಣಿಸಿದ ಕ್ರಮಗಳಾಗಿವೆ.

ಬೇಟೆ ಕುರಿತ ನಂಬಿಕೆಗಳು :-

- ಬೇಟೆಗೆಂದು ಖರೀದಿಸಿದ ಹೊಸ ಕೋವಿಯಲ್ಲಿ ಮೊದಲು ಕಾಗೆಗೆ ಈಡು ಹೊಡೆಯಬಾರದು.
- ಮಲಗಿಟ್ಟ ಬಂದುಕನ್ನು ಯಾರು ಮೇಲಿಂದ ದಾಟಬಾರದು.
- ಬಂದೂಕನ್ನು ಬೆನ್ನಹಿಂದೆ ಎರಡು ಹೆಗಲ ಮೇಲೆ ಹಾಕಿ ತಿರುಗಾಡಬಾರದು.
- ಪೊರಕೆ ಬಂದೂಕಿಗೆ ತಾಗಬಾರದು.
- ಮುಟ್ಟಾದವರು ಕೋವಿಯನ್ನು ಮುಟ್ಟಬಾರದು.

- ಬಂದುಕ ಸಮೀಪ ಚಪ್ಪಲಿ ಕಳಿಚಿಡಬಾರದು.
- ಆಯುಧ ಪೂಜೆಯ ಸಂದರ್ಭದಲ್ಲಿ ಕೋವಿಗೆ ಪೂಜೆ ಸಲ್ಲಿಸಿದ ವೇಳೆಯೆ ಬೇಟೆ ಯಾಡಬೇಕು.
- ಗಂಡಸರೊಂದಿಗೆ ಹೆಂಗಸರು ಬೇಟೆ ಯಾಡಬಾರದು.
- ಬೇಟೆಯಲ್ಲಿ ಜಾತಿ, ಮತ, ಧರ್ಮದ, ವಿಂಗಡನೆಯಿಲ್ಲ, ಎಲ್ಲರೂ ಸಮಾನರು, ತೆಂಗಿನ ಮರ ಅರಳಿ ಮರದ ಮೇಲಿರುವ ಯಾವುದೇ ಪಕ್ಷಿ, ಮಿಕವಿರಲಿ ಬೇಟೆ ಮಾಡಾಬಾರದು.
- ಕೋವಿಗೆ ದೃಷ್ಠಿ ಬಿದ್ದರೆ ಮಂತ್ರಿಸಿದ ಕೋಳಿ ಮೊಟ್ಟೆಗೆ ಗುಂಡು ಹೊಡೆದು ದೃಷ್ಠಿ ತೆಗೆಯಬೇಕು.
- ಒಂದು ಜೋಡಿ ನಳಿಕೆಯದಾದರೆ ಮೊದಲು ಎಡನಳಿಕೆ ಸಿಡಿಸಬೇಕು.
- ಗರ್ಬಿಣಿ ಇರುವ ಪ್ರಾಣಿಯನ್ನು ಹೊಡೆಯಬಾರದು.
- ಹೆಂಡತಿ ಗರ್ಬಿಣಿ ಯಾಗಿದ್ದರೆ ಗಂಡ ಶಿಕಾರಿಗೆ ಹೋಗುವಂತಿಲ್ಲ.
- ಪ್ರಾಣಿಯ ಜೊತೆ ಚಿಕ್ಕ ಮರಿಗಳಿದ್ದರೆ ಬೇಟೆ ಮಾಡುವಂತಿಲ್ಲ.
- ಬಿಳಿ ಬಟ್ಟೆದರಿಸಿ ಬೇಟೆಗೆ ಹೊಗಬಾರದು.
- ಒಂಟಿ ಸೀನು ಸೀನಬಾರದು, ಇದೇ ತರಹದ ಅನೇಕ ನಂಬಿಕೆಗಳನ್ನು ಜಾನಪದರು ಈಗಲು ನಂಬಿಕೊಂಡು ಬಂದಿರುವ ಸತ್ಯ ಸಂಗತಿಗಳನ್ನು ಗಮನಿಸಬಹುದಾಗಿದೆ.[೨೦]

ಅಡಿ ಟಿಪ್ಪಣಿ

೧) ಕಲ್ಕುಳಿ ವಿಠಲ ಹೆಗ್ಗಡೆ. ಮಂಗನ ಬ್ಯಾಟೆ. ೨೦೧೨. ಪು. ೧೭೮

೨) ಅದೇ, ಪುಟ . ೧೮೪–೧೮೫

೩) ಅದೇ, ಪುಟ . ೧೮೮

೪) ಅದೇ, ಪುಟ . ೧೯೦

೫) ಅದೇ, ಪುಟ . ೧೯೧

೬) ಅದೇ, ಪುಟ . ೧೯೨

೭) ಅದೇ, ಪುಟ . ೧೯೪

೮) ಅದೇ, ಪುಟ . ೧೯೬

೯) ಅದೇ, ಪುಟ . ೨೦೦

೧೦) ಅದೇ, ಪುಟ . ೨೩೦–೨೬೬

೧೧) ಅದೇ, ಪುಟ . ೨೩೦

೧೨) ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು–೨೦೦೭. ಪು. ೩೬

೧೩) ಅದೇ ಪುಟ . ೩೫

೧೪) ಕುವೆಂಪು, ಕಾದಂಬರಿಯಲ್ಲಿ ಮಲೆನಾಡಪರಿಸರ ಮತ್ತು ಇಂದಿನ ಮಲೆನಾಡಪರಿಸರ, – ೫೯–೬೧

೧೫) ಕಾಕೆಮಾನಿ, ಬೇಟೆ ನೆನಪು–೨೦೦೬. ಪು. ೧

೧೬) ಕಾಕೆಮಾನಿ, ಕಾಡು ಕಾಂಕ್ರೀಟ್ ಮತ್ತು ಜಾನಪದ–೧೯೯೫. ಪು. ೧೫

೧೭) ಕಲ್ಕುಳಿ ವಿಠಲ ಹೆಗ್ಗಡೆ. ಮಂಗನ ಬ್ಯಾಟೆ. ೨೦೧೨. ಪು. ೧೩೪

೧೮) ಕಲೆಯ ದರ್ಶನ–೧೯೮೨ . ಪು. ೪೪

೧೯) ಕೆ.ಎಸ್.ರಾಮಪ್ಪಗೌಡ ಮಲೆನಾಡಿನ ಶಿಕಾರಿ ನೆನಮುಗಳುಪು. ೧೫

೨೦) ನರೇಂದ್ರ ದೇರ್ಲ 'ಬೆಟೆ'–೨೦೦೭ ಪು. ೨೦೬

ಅಧ್ಯಾಯ-೫

ಬ್ಯಾಟೆ ಕುರಿತ ತಂತ್ರಗಾರಿಕೆ

ಮೂಲತಃ ಹುಟ್ಟು ಬೇಟೆಗಾರನಾದ ಮಾನವ ಆದಿಯಲ್ಲಿ ಒಂಟಿಯಾಗಿ ಅರಣ್ಯ ಪ್ರದೇಶದಲ್ಲಿ ಅಲೆದಲೆದು ಗೆಡ್ಡೆಗೆಣಸು ಹಾಗೂ ಕೈಗೆಸಿಕ್ಕ ವಸ್ತು ಪ್ರಾಣಿ–ಪಕ್ಷಿಗಳನ್ನು ಬೇಟೆಮಾಡಿ ಹಸಿವನ್ನು ನೀಗಿಸಿಕೊಳ್ಳುತ್ತಿದ್ದು ಸಂಶೋಧನೆಯಿಂದ ತಿಳಿದು ಬಂದಿದೆ. **ಉದಾರಣೆ:–** ಜೇಡವು ಬಲೆಯ ಮುಖೇನ ಬೇಟೆಮಾಡುವುದು, ಹಲ್ಲಿ ಹಾವುಗಳು ಹೊಂಚು ಹಾಕಿ ಬೇಟೆ ಮಾಡುವುದು, ಮಿಂಚುಳ್ಳಿ ನೀರಿಗೆ ಧುಮುಕಿ ತನ್ನ ಕೊಕ್ಕಿನಿಂದ ಮೀನು ಹಿಡಿಯುವುದು, ಹುಲಿ ಚಿರತೆಗಳು ಹೊಂಚು ಹಾಕಿ ಬೇಟೆ ಮಾಡುವುದು, ತೋಳ ಕಾಡುನಾಯಿಗಳು ಗುಂಪುಗೂಡಿ ಬೇಟೆ ಮಾಡುವುದು.

ಸಿದ್ಧನು ಅವನದೇ ಆದ ಲೋಕದೃಷ್ಟಿಯಲ್ಲಿ ದಡ್ಡನೇ ಆದರೆ ಅರಣ್ಯ ಲೋಕದಲ್ಲಿ ತನಗೆ ಬೇಕಾದದ್ದನ್ನು ಪಡೆಯಬಲ್ಲ ನಿಸ್ಸೀಮನಾಗಿದ್ದವನು. ಅವನ ಎದುರು ನಾವುಗಳು ಶುದ್ಧ ಪೆದ್ದರು ಆಗಿಬಿಡುತ್ತೇವೆ. ಸಿದ್ಧ ಮುರುಗುಣಿ ಮಾಡುವುದರಲ್ಲಿ ಬಾಹಾಳ ನಿಪುಣ ಅವನ ತಂತ್ರಗಾರಿಕೆ ಹೇಗಿದೆ ನೋಡಿ ಒಂದೊಂದು ಮರುಗುಣಿಗೂ ಒಂದೊಂದು ಸ್ವರವು ಬರುವಂತೆ ಮಾಡುತ್ತಿದ್ದ ಅದರಲ್ಲೂ ತುಡುಗು ದನ ಎಲ್ಲಿದೆ ಎಂದೂ ತಿಳಿಯಲು ಮಾಡಿಕೊಂಡ ತಂತ್ರವಿದು.[೨] ಮರುಗುಣಿಯು ಕೊಳಲಿನಂತೆ ಇರುತ್ತದೆ. ವಿಶೇಷವಾಗಿ ಮರುಗುಣಿ ತಯಾರಿಸುವ ತಂತ್ರ ಕೆಲವರಿಗೆ ಮಾತ್ರಗೊತ್ತಿರುತ್ತದೆ. ಸಿದ್ದನು ಮಲೆನಾಡಿನವರಿಗೆ ನಮ್ಮೂರಿನ ಹುಡ್ಗನಾಗಿದ್ದ ಹೇಗೆಂದರೆ ಕಾಡೇ ಅವನ ಸ್ವತ್ತು ಆತನು ಕಾಡಿಗೆ ಹೋದರು ಮಲೆನಾಡಿನ ಹೆಂಗಸರಿಗಾಗಲಿ ಗಂಡಸರಿಗಾಗಿ ಕೇಳಿದ್ದನ್ನು ತಂದುಕೊಡುತ್ತಿದ್ದನು. ತಾನು ಮಲೆನಾಡಿನಲ್ಲಿ ತನ್ನ ಹೆಸರನ್ನು ಸಂಪಾದಿಸಿದ್ದನು.

ಸಿದ್ದನು ಮಂಗನ ಬ್ಯಾಟೆಗಾಗಿ ಎರಡು ನಾಯಿಗಳನ್ನು ಸಾಕಿ ತೋಟದಲ್ಲಿ ಕಟ್ಟಿದ್ದು, ಆಂಜನೇಯರಿಗೆ ಎಲೆಪೂಜೆ ಮಾಡಿದ್ದು, ಮೊಸರು ಅಭಿಷೇಕ ಪೂಜೆ ಪುರಸ್ಕಾರಗಳನ್ನು ಮಾಡಿ ಮಂಗಗಳ ಹಾವಳಿ ನಿಯಂತ್ರಿಸಿದನು. ಹೆಬ್ಬುಲಿ ಹೊಡೆದು ಶಭಾಸ್ ಎನಿಸಿಕೊಂಡವರು ಇರಬಹುದು ಆದರೇ ಹುಲಿ ಹೊಡೆದಷ್ಟು ಸುಲಬಕ್ಕೆ ಮಂಗಗಳನ್ನು ಶಿಕಾರಿ ಮಾಡೋಕೆ ಮನುಷ್ಯರಿಂದ ಸಾದ್ಯವಿಲ್ಲ. ಹಂಗೆ ಮಂಗನ ಶಿಕಾರಿ ಮಾಡಿ ಶಭಾಸ್ ಎನಿಸಿಕೊಂಡವರು ಇಲ್ಲ. ಒಂದುವೇಳೆ ಮಂಗನ ಬ್ಯಾಟೆಗೆ ಕೋವಿ ತೆಗೆದುಕೊಂಡರೆ ಅವು ಮಂಗಮಾಯ ಆಗಿಬಿಡ್ತಾವೆ. ಮರದ ಮೇಲಿರುವ ಮಂಗನ ಪತ್ತೆಮಾಡಲಿಕ್ಕೆ ಒಂದೇ ಉಪಾಯ ಜೊತೆಯಲ್ಲಿ ಒಂದು ನಾಯಿ ಕರೆದುಕೊಂಡು ಹೋಗಬೇಕು.[೩] ತಂತ್ರಗಾರಿಕೆಯಲ್ಲಿ ಪ್ರಮುಖ ಪಾತ್ರವಹಿಸುವ ವಿಧಾನವೆಂದರೆ 'ಜೊತೆಗಾರಿಕೆ' ಮನುಷ್ಯ ಬೇಟೆಗೆ ಹೊರಡಲು ಸಿದ್ದನಾದಾಗ ಜೊತೆಯಲ್ಲಿ ನಾಯಿ ಕರೆದುಕೊಂಡ್ಯೊವನು. ಏಕೆಂದರೆ ನಾಯಿಯಿಂದ ಬೇಟೆಯ ಸ್ಥಳದಲ್ಲಿ ನಾಯಿ ಇರುವದುನ್ನು ಪತ್ತೆ ಹಚ್ಚಬಹುದು ಒಂದುವೇಳೆ ಬಂದುಕಿನ ಗುಂಡು ಪ್ರಾಣಿಯನ್ನು ತಾಕಿದರೂ ಆ ಪ್ರಾಣಿಗೆ ಸರಿಯಾಗಿ ಪೆಟ್ಟುಬೀಳದೆ ತಪ್ಪಿಸಿಕೊಂಡು ದೂರ ದೂರ ಪ್ರಯಣಕ್ಕೊಳಗಾದಾಗ ನಾಯಿಯಿಂದ ಆ

ಪ್ರಾಣಿಯನ್ನು ಹಿಡಿಯಬಹುದು. ಅದರಲ್ಲಿ ಕೆಲವು ವಿಶೇಷ ನಾಯಿಗಳನ್ನು ಸಾಕಿರುತ್ತಾರೆ ಅವುಗಳನ್ನು ಕೇವಲ ಬೇಟೆಯ ಸಂದರ್ಭದಲ್ಲಿ ಮಾತ್ರ ಉಪಯೋಗಕ್ಕೆ ಬಳಸುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಕನ್ನಡಿಗರ ಉಸಿರಮೇಲೆ ನಿಂತಿರುವ ಧಿಮಂತ ಕವಿ ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ನಾಯಿಗಳ ವಿಶೇಷ ಪಾತ್ರವನ್ನೆ ಸೃಷ್ಠಿಸಿ ತೋರಿಸಿದ್ದಾರೆ ಟೈಗರ್, ರುಭಿ, ರೋಜಿ, ಕೊತ್ವಾಲ, ಗುತ್ತಿ, ಎಂಬ ನಾಮಾಕಿಂತದ ಮೂಖೇನ ಬೇಟೆಯ ಪ್ರಸಂಗಗಳಲ್ಲಿ ನಾಯಿಯನ್ನು ಬಳಸಿರುವುದು ಕಂಡುಬರುತ್ತದೆ.

ಶಿಕಾರಿಗೆ ಹೋಗುವುದು ತುಂಬಾ ಅಪಾಯಕಾರಿ ಕೆಲಸವಾಗಿದೆ. ಶಿಕಾರಿಗೆ ಹೋದರೆ ಕನಿಷ್ಠ ಎರಡು ಜನರಾದರು ಹೋಗ ಬೇಕಾಗುತ್ತದೆ. ಕಾಡಿಗೆ ಬೇಟೆಗಾಗಿ ಹೋಗುವ ಮುನ್ನ ಬೇಟೆಗಾರ ತಾನು ಬೇಟೆ ಯಾಡಿಕೊಂಡು ಬರುವವರೆಗೂ ತಾನು ಬದುಕಿ ಕಾಡಿನಿಂದ ಬರುತ್ತನೋ ಇಲ್ಲವೋ ಎಂಬ ಭಯದಿಂದಲೆ ಕಾಡನ್ನು ಪ್ರವೇಶಿಸುತ್ತಾನೆ. ಬೇಟೆ ಯಾಡಲು ಜಾತಿಯತೆ ಕಂಡು ಬರುವದಿಲ್ಲ ಬೇಟೆ ಯಾಡುವ ತಂತ್ರಯಾರಿಗೆ ಗೊತ್ತಿರುತ್ತದೋ ಅವರೆಲ್ಲರೂ ಬೇಟೆ ಯಾಡಬಹುದು ಇದಕ್ಕೆ ನಿರ್ಬಂಧಗಳಂತು ಇಲ್ಲ ಸ್ವಯಿಚ್ಚೆಯಿಂದ ಮಾಡುವ ಕಾರ್ಯವಾಗಿದೆ.

ಪ್ರಕೃತಿಯಲ್ಲಿ ಕೊಲ್ಲುವ ಗೆಲ್ಲುವ ಕ್ರಿಯೆ ಕೇವಲ ಮನುಷ್ಯ ಪರವಲ್ಲ ಸರಿಯಾದ ಸಿದ್ದತೆ, ಆಯುಧ, ತಂತ್ರಗಳಿಲ್ಲದಿದ್ದರೆ ಯಾವಮಿಕವೂ ತಾನು ಒಟ್ಟುವ ಬಲೆಗೆ ಬೀಳದು, ಎಂಬ ಸತ್ಯ ಗೊತ್ತಿರುವದರಿಂದಲೆ ಮನುಷ್ಯ ಶಿಕಾರಿಗಾಗಿ ಎಲ್ಲಿಲ್ಲದ ತಯಾರಿಗೆ ತೊಡಗಿದ್ದಾನೆ. ಕಾಡಿನ ವ್ಯಾಪ್ತಿ ಜೀವಿಗಳ ಸಂಖ್ಯೆ ಕುಗ್ಗುತ್ತಾ ಬಂದಂತೆ ಈ ತಯಾರಿ ಮತ್ತು ಪ್ರಯತ್ನ ಮತ್ತಷ್ಟು ಸೂಕ್ಷ್ಮ ವಾಗುತ್ತಬಂದಿದೆ. ಅನುಭವ ಬುದ್ಧಿವಂತಿಕೆ ಬೆಳೆದಂತೆ ಬೇಟೆಯಲ್ಲಿ ಪರಿಕರಗಳು ಸೃಷ್ಠಿಯಾಗಿವೆ. ಮನುಷ್ಯ ಪ್ರಾಣಿ ನೆಲೆಯಲ್ಲಿ ಜೀವಿಗಳ ಸ್ವಭಾವಕ್ಕೆ ಅನುಗುಣವಾಗಿ ತಂತ್ರ ರೂಪಿಸಿಕೊಂಡಿದ್ದಾನೆ. ವಡ್ಡರಾಧನೆಯಲ್ಲಿನ ಕತೆಗಳೆಲ್ಲ ತಂತ್ರರೂಪದಲ್ಲೆ ನಡೆಯುತ್ತಸಾಗುತ್ತವೆ. ವಿದ್ಯುತ್ಚ್ಚೋರನ ಕಥೆಯಲ್ಲು ತನ್ನ ತಂತ್ರಗಾರಿಕೆಯಿಂದ ಇಡೀ ಊರಿನ ಜನರೆಲ್ಲರಿಗೆ ಮೋಸ ವಂಚನೆಮಾಡಿ ದೋಚುವುದನ್ನು ಕಂಡುಕೊಳ್ಳಬಹುದಾಗಿದೆ. ಸುಕುಮಾರ ಸ್ವಾಮಿಯ ಕತೆಯಲ್ಲೂ ಇಂತ ತಂತ್ರಗಳಿವೆ ಸ್ವಾಮಿಯ ಕಿರುಕುಳ ಜೈನ ಧರ್ಮದ ಪರಿಪಾಲನೆಗಾಗಿ ಅನುಭವಿಸುವ ಚಿತ್ರಹಿಂಸೆಗಾಗಿ ಕೈಗೋಳ್ಳುವ ತಂತ್ರಗಳು ಅದರಂತೆ ಗುರುದತ್ತ ಭಟಾರರ ಕತೆಯಲ್ಲಿ ಹಳಮುಖನಿಗೆ "ಭವಸಂಬಂಧಿಯಪ್ಪ ವೈರಂ ಕಾರಣಮಾಗಿ ಕ್ರೋಧಾಗ್ನಿ ಪೆರ್ಚಿಯೆನ್ನಂ ಪನಿವಿನಿಂ ಸುಟ್ಟೋನಿಂ ಕಿಚ್ಚಿನಿಂಸುಟ್ಟಲ್ಲದುಣ್ಣೆನೆಂದು ಪ್ರತಿಜ್ಞೆಗೆಯ್ದು ಪುಲ್ಲಬೆಂಟಿಯಂ ನಿನ್ನಂ ಪೊಸೆದು ಕಿಚ್ಚು ಮೆಣ್ಣೆಯಕೊಡನುಂ ಬೆಂಟಿಯುಮಂಕೊಂಡು ಪೋಗಿ ಭಟಾರರ ಮುಂದಿಟ್ಟೆಲವೋ ಸವಣಾ ನೀನ್ನೇನ್ನಂ ಪಸಿವಿಂದಂ ಸುಟ್ಟಿಯಂತೆಯಾನುಂ ನಿನ್ನಂ ಕಚ್ಚಿನಿಂದ ಸುಟ್ಟಪ್ಪೇ ಕಾವೋದಾರೆಂದು" ಗುರುದತ್ತ ಭಟಾರರಿಗೆ

ಬೇಂಕಿ ಹಚ್ಚಿದನು. ವಡ್ಡರಾಧನೆಯ ಗಂಬೀರೆ ಕತೆ ಗಂಬೀರೆ ಎಂಬ ಮುದುಕಿ ತನ್ನ ಮಗಳು ಹರಿಣಿ ಗರ್ಬಿಣಿಯಾಗಿದ್ದಳಿಂದ ಅವಳಿಗಾಗಿ ತರತರದ ಭಕ್ಷ್ಯ (ಅಡಿಗೆ) ಮಾಡಿಕೊಂಡು ಮಗಳ ಮನೆಕಡೆ ನಡೆದಾಗ ಕಾಡಿನಲ್ಲಿ ೮ ಜನ ಕಳ್ಳರ ಕಾಟ ತಪ್ಪಿಸಿಕೊಳ್ಳಲಿಕ್ಕಾಗಿ ಮಾಡುವ ತಂತ್ರ ಇಡೀ ವಡ್ಡರಾಧನೆ ಕಥೆಯನ್ನೆ ಉನ್ನತಿಗೆ ಏರಿಸುವಂತಿದೆ.

ಪ್ರಕೃತಿಯಲ್ಲಿ ಮಾಂಸವನ್ನು ಆಹಾರವನ್ನಾಗಿ ಉಪಯೋಗಿಸುವ ಜೀವ ಜಂತುಗಳು ಪರಸ್ಪರ ಒಂದನ್ನೊಂದು ತಿಂದು ಬದುಕುತ್ತವೆ. ಅವು ಚಕ್ರಾಕಾರದ ಆಹಾರ ಗೋಪುರವನ್ನು ಕಟ್ಟಿಕೊಂಡಿವೆ. ಸಣ್ಣ ಮೀನುಗಳು ದೊಡ್ಡಮೀನುಗಳನ್ನು ತಿನ್ನುವುದು, ಆ ಮೀನುಗಳನ್ನು ಅದಕ್ಕಿಂತ ಬಲಶಾಲಿ ಮೀನುಗಳು ಕಬಳಿಸುವುದು ಈ ತರಹದ ತಂತ್ರಗಳು ಸಹಜವಾಗಿ ನಡೆಯುತ್ತಿರುತ್ತವೆ. ಜೊತೆಗೆ ಪ್ರಾಣಿಗಳನ್ನು ಬೇರೆ ಬೇರೆ ಸೂಕ್ಷ್ಮ ತಂತ್ರಗಳಿಂದ ಜಯಿಸುವ ಮೂಲಕ ತನ್ನ ಸಾಹಸ, ಸಾಧ್ಯತೆಯನ್ನು ಪರಿಷ್ಕರಿಸುತ್ತಾ ಬಂದಿದ್ದಾನೆ. ಬೇಟೆಯಲ್ಲಿ ಮಾನವ ಉಪಯೋಗಿಸಿದ ಯುಕ್ತಿ, ಜಾಣ್ಮೆಗಳು ಬೌದ್ಧಿಕ ಪ್ರಗತಿಗೂ ಪೂರಕವಾಗಿವೆ.

ಬೇಟೆ ಕುರಿತ ಹಾಡು:–

"ಮೆಲ್ಲಮೆಲ್ಲನೆ ನಡೆವುದು ಹುಲಿವಚ
ಯಾವ ಕೊಂಬೆಯವಿತಿಳಿಹಳು
ಯಾವ ಮರದಿಂ ಹಾರುಹುಳು?
ಪೊಟರೆಯ ನರೆಯೊಳಗೆ
ಉತ್ತರದಿಂದ ಧುಮಕುವಳು
ಒಂದೇ ಹಾರಿಗೆ ಬೇಟೆಯು ದೊರೆಯುವುದು
ಕಾಡಂಚಿನಲ್ಲಿ

(ಕಾಡು ಕಾಂಕ್ರೀಟ್ ಮತ್ತು ಜಾನಪದ: ಪು–೫೫, ೧೯೯೫)

ಬೇಟೆ ಅಥವಾ ಮನುಷ್ಯ ಪ್ರಾಣಿಯ ಮುಖಾಮುಖಿ ಹಣಾಹಣಿಯ ನೆಲೆಯಾಗಿ ಬರುವ ಕಾಡು ಪುರಾಣ ಪ್ರಪಂಚದ ಅನೇಕ ವೀರರ ಅಡಂಬೋಲವಾಗಿಯೂ ಬಂದಿದೆ. ಮಹಾಭಾರತ ರಾಮಾಯಣಗಳ ಬಹುಭಾಗ ಅಡವಿಯಲ್ಲೆ ತೆರೆದುಕೊಳ್ಳುತ್ತದೆ. ರಾಮ ಸೀತಾ ಲಕ್ಷಣ ಮತ್ತು ಪಾಂಡವರ ವನವಾಸ ಅಜ್ಞಾತ ವಾಸಗಳು ಕಾಡಿನಲ್ಲೆ ನಡೆಯುತ್ತದೆ. ಕಾಡು ಈ ಮೇಲಿನ ನಾಗರಿಕರಿಗೆ ರಹಸ್ಯವಾಗಿರಲು ಸಹಾಯ ಮಾಡುವುದರೊಂದಿಗೆ ಮುಂದಿನ ಸಜ್ಜಗೊಳಿಸುತ್ತದೆ. ಹಾಗೆಯೆ ಪುರಾಣದ ನಾಯಕರಾದ ಆಂಜನೆಯ, ಸುಗ್ರೀವ, ಅಂಗದ, ಏಕಲವ್ಯ ಮುಂತಾದವರು ಅಡವಿಯ ನಡುವೆಯೇ ಬೆಳೆದು ತಮ್ಮ ಅಸ್ತಿತ್ವವನ್ನು ಹೊರ ಜಗತ್ತಿಗೆ ತೋರಿಸುತ್ತಾರೆ. ಇವರಿಗೆಲ್ಲ

ಕಾಡೇ ತಮ್ಮ ಬದುಕಿನ ಆವಾರ, ಮನೆ ಆಗಿರುತ್ತದೆ. ತನ್ನ ಸುಳಿದಾಡುವ ಕೀಟ ಪತಂಗ ಜೀವಿ ಜಂತುಗಳು ಒಂದನ್ನು ಇನ್ನೊಂದು ಕಬಳಿಸುವ ಜೀವ ಚಕ್ರವನ್ನು ಇವರೂ ಕಾಣುತ್ತಾರೆ. ಇಲ್ಲಿಂದಲೇ ಒಂದು ಇನ್ನೊಂದನ್ನು ಜಯಿಸುವ ನಿರ್ಬಂಧಿಸುವ ತಂತ್ರವನ್ನು ಕಲಿಯುತ್ತಾರೆ.

ಕಾಡಿನ ಒಳಗೆ ಪ್ರಾಣಿಗಳು ನುಸುಳುವ ಪರಿ ಜಾಗದ ಅರಿವು ಮತ್ತು ಅವುಗಳ ಆಗಮನ ನಿರ್ಗಮನ ಕ್ರಮ ಒಟ್ಟಾರೆ ಪ್ರಾಣಿಗಳ ಗುಣಸ್ವಭಾವ ಬೇಟೆಗಾರನಿಗೊಂದು ದಿಟ್ಟಸವಾಲು ಶಿಕಾರಿಯ ಈ ಮೇಲಿನ ಸೂಕ್ಷ್ಮತೆ ಬೇಟೆಗಾರ ರಾಜನಿಗಾದಾಗ ಆತನಿಗೆ ಯುದ್ಧದಲ್ಲು ಪ್ರೌಢಿಮೆಯನ್ನು ಸಾಧಿಸುವುದು ಸುಲಭವಾಗುತ್ತದೆ. ಮರದ ಮೇಲೆ ಕೂತ ಪಕ್ಷಿಗಳನ್ನು ಹಾರಿಸಿ ಗುರಿ ಇಡುವುದು, ಹೆಬ್ಬುಲಿ, ಕಾಡು ಹಂದಿಗಳನ್ನು ಮುಖಾಮುಖಿಯಾಗಿ ಕೊಲ್ಲುವುದು, ರಾತ್ರಿಹೊತ್ತು ದೀಪದ ಸಹಾಯದಿಂದ ಬೇಟೆಯಾಡುವ ತಂತ್ರವನ್ನು ಬೇಟೆಗಾರ ಬಲ್ಲವನಾಗಿರುತ್ತಾನೆ. ಬೇಟೆಯಲ್ಲಿ ತಂತ್ರ, ನಿಯಮ, ಎಚ್ಚರಗಳೆ ಯುದ್ದದಲ್ಲೂ ಇರುತ್ತವೆ. ಯುದ್ಧ ತೆರೆಯ ಬಯಲಿನ ವ್ಯೂಹವಾದರೇ ಬೇಟೆ ಕತ್ತಲೆಯ ಕಾಡಿನ ಒಳಗಿನ ವ್ಯೂಹವಾಗಿದೆ.

ಬಾಲನಾಗಮ್ಮನ ಕಥೆಯ ಬೇಟೆ ಪ್ರಸ್ತಾಪದ ಹಾಡು:-

"ಕೇಳೊ ಕೇಳೊ ಅಣ್ಣಯ್ಯ ನಾನೊಂದ ಹೇಳೆನು
ಮೂಡಲ ಗುಡ್ಡಕೆ ಗುಬ್ಬಿ ಸಾರಂಗಕೆ
ಹುಲಿ ಕರಡಿ ಬ್ಯಾಟಿಗೆ ಹೊಗಬೇಕು ಕಾಣಣ್ಣ"

ಸರ್ವಜ್ಞನ ವಚನಗಳು:-

"ಎಂಟು ಪಟ್ಟದ ಮೇಲೆ ತುಂಟ ಬೇಡನು ಹುಟ್ಟಿ
ನಂಟಾರನೆಲ್ಲ ಸದೆಬಡಿದು ಶ್ರೀರಂಗದಲ್ಲಿ
ಮಂಟಪಾದ ಹೋದನಯ್ಯ ಸರ್ವಜ್ಞ
ಬಿಲ್ಲಾಸೆ ಬೇಡಂಗೆ ।ಕೊಲ್ಲಾಸೆ ಕಟುಗಂಗೆ।
ಬೆಲ್ಲದ ಆಸೆ ಬಾಲರಿಗೆ ಸೂಳೆಗೆ
ಚಲ್ಲಟದಾಸೆ ಸರ್ವಜ್ಞ

ವಿಶ್ಲೇಷಣೆ:-ಬೆಡನಿಗೆ ಬಿಲ್ಲಿನ ಆಸೆ, ಕಟುಕಂಗೆ ಪ್ರಾಣಿಗಳನ್ನು ಕೊಲ್ಲೊ ಆಸೆ, ಬಾಲಕರಿಗೆ ಬೆಲ್ಲದಾಸೆ, ಇರುವಂತೆ ಸೂಳೆಗೆ ಚೆಲ್ಲಾಟದಾಸೆ.

ಬೇಡ ಕಾಯದೆ ಕೆಟ್ಟ। ಜೇಡ ನೇಯದೆ ಕೆಟ್ಟ।
ನೋಡದಲೆ ಕೆಟ್ಟ ಕೃಷಿಕನು, ಸತಿಯು ಬಿ
ಟ್ಟಡಿದವ ಕೆಟ್ಟ ಸರ್ವಜ್ಞ

ಚಿಪ್ಪಂದಿ ಬೇಟೆ:-

ಚಿಪ್ಪಂದಿ ನೆಲದ ಮೇಲಿನ ಮೊಸಳೆ. ಇದರ ಮೈಯೆಲ್ಲ ಹರಿತವಾದ ಚಿಪ್ಪಿನಿಂದ ವಿಶೇಷವಾಗಿ ಜೋಡಿಸಲ್ಪಟ್ಟಿರುತ್ತದೆ. ಮೊಸಳೆಯಂತ ಬಾಲ, ಉಡದಂತ ಕೈಕಾಲನ್ನು ಹೊಂದಿರುತ್ತದೆ. ಚಿಪ್ಪಂದಿಗೆ ಅಪಾಯವಿದೆ ಎಂದೂ ಗೊತ್ತಾಗುತ್ತಿದಂತೆ ತನ್ನ ಚಿಪ್ಪುಗಳನ್ನು ಕೆದರಿಸಿಕೊಂಡುಬಿಡುತ್ತವೆ. ಚಿಪ್ಪಂದಿಗೆ ಸೋಲೊ ಪ್ರಾಣಿ ಎಂದರೆ ಹುಲಿ. ಈ ಮಲೆನಾಡಿನ ಅಪರೂಪದ ಪ್ರಾಣಿಯೆಂದರೆ ಚಿಪ್ಪಂದಿ ಮಾತ್ರ. ಚಿಪ್ಪಂದಿ ತನ್ನ ಆಹಾರಕ್ಕಾಗಿ "ಕೀಟಹಾರಿ, ಇರುವೆ, ಗೆದ್ದಲ, ಗೂಡುಗಳಿರುವ ಹುತ್ತಗಳನ್ನು ಅಥವಾ ಮರದ ಪೊಟರೆಗಳನ್ನು ತನ್ನ ಬಲವಾದ ಉಗುರಿನಿಂದ ಕಿತ್ತುತಿನ್ನುತ್ತದೆ. ಚಿಪ್ಪಂದಿಗೆ ಕಡಿಲ್ಲಿಯ ಗೂಡು ಸಿಕ್ಕರೆ ವಿಶೇಷ ಹಬ್ಬ. ಅದರಲ್ಲೂ ಕಡಿಲ್ಲಿಯ ಗೂಡು ಭಯಂಕರವಾಗಿರುತ್ತದೆ. ಇಂತ ಚಿಪ್ಪಂದಿಯ ಬೇಟೆಗಾಗಿ ಒಂದಿನ ಗೋವಿಂದ ಮತ್ತು ಸಿದ್ಧ ಹೋಗಿರುತ್ತಾರೆ. ಕಾಡೆಲ್ಲ ಅಲೆದರು ಎಲ್ಲೂ ಬೇಟೆಯಾಗದೆ ರಾತ್ರಿಯೆಲ್ಲ ಕಾಡಲ್ಲೆ ಕಳೆದ ಬೆಳಗಿನ ಜಾವದಲ್ಲಿ ಚಿಪ್ಪಂದಿ ಸಿಕ್ಕಿತು. ಸಿದ್ದಂಗೆ "ಅಟ್ಟೆ ಬೀಳ್ ಉಕ್ಕೊಂಡ್ ಬಾ ಅದನ್ತಾ ಇದನ್ತಾ.. ಅಂತ ಗೋಳು ಇಡುತ್ತಿದ್ದನು". ಅಟ್ಟೆ ಬೀಳಿನಿಂದ ಸಿಕ್ಕ ತಯಾರಿಸಿ ಅದರಲ್ಲಿ ಚಿಪ್ಪಂದಿ ಹಾಕಿಕೊಂಡು ಮನೆಕಡೆ ಧಾವಿಸುತ್ತಾರೆ. ದಾರಿಯುದ್ದಕ್ಕು ಹಂದಿಯನ್ನು ಬಡಿತಾನೆ ಸಾಗಬೇಕಾಗಿತ್ತು ಸಿದ್ದ ಬಡಿತಾ ಬಡಿತಾ ಅಲ್ಲಾ ಗೋವಿಂದ ಸುಮ್ನೆ ಹೆಣಹೊತ್ಗೊಂಡು ಹೊದಂಗೆ ಎಂತಾಹೊಗೋದು ಇದೆಂಥಾ ಕೆಟ್ಟ ಹಂದಿನೆಂಡ್ರೊ ಬಡಿದ್ರೂ ಕೂಗೋದಿಲ್ಲ. ಬೈದ್ರು ಕೂಗೋದಿಲ್ಲ ಇದರ ಕತೆಯಂತಯೆಂದನು ಸಿದ್ಧ ಬಡಿತಾ ಬಡಿತಾ.. ಕೈಸೋತು ಬಡಿಯೊದನ್ನು ನಿಲ್ಲಿಸಿದನು. ಅದ್ರಿಂದ ಗೋವಿಂದ ಸಿಟ್ಟಿನಿಂದ ಮನೆಹಾಳ್ ಬಿಕನಾಸಿ ನಿಂಗೆ ಯಾರಾದ್ರು ಹೊಡೆದು ಕೊಟ್ರೆ ಕೊಳಗ್‌ತಿನ್ನಕ್ಕೆ ಬೇಕು ಕತ್ತಿಲಿ ತಟ್ಟಿಸಾಯೋ ಅಂದ್ರೆ ಕೈಯಲ್ಲಿ ಆಟಾಡೋಕೆ ಹೋಗಿ ಕೈ ಬೇರಳ್ ಕಳಕೊಂಡೆ, ಅದು ಸತ್ತಿಲ್ಲ ಕಣೋ ಸತ್ತಂಗ್ ಮಡ್ತದೆ. ಅದಕ್ಕೆ ಗುಂಡು ಬಡಿಯಾಕಿಲ್ಲ ಅಂದ್ರೆನಿಂಗೆ ಅರ್ಥ ಅಗೊಲ್ಲೆನ್ ಇನ್ನೊಂದ್ ಸಲ ಶಿಕಾರಿ ಸುದ್ದಿ ಎತ್ತಿದ್ರೆ ಹುಷಾರ್ ಬೇವರ್ಷಿ ಅಂತ ಸಿದ್ದಂಗೆ ಬೈದು ತಮ್ಮ ಕೇರಿಗ್ ತಂದು ಬ್ಯಾಟೆನ್ ಕುಂತೆಗಳಿಂದ ಸುಟ್ಟು ಚಿಪ್ಪಂದಿಯನ್ನು ತಿಂದರು.[೪]

ಬಯಲುಸೀಮೆಯ ಜನರು ಬರಡು ಬಿಸಿಲಿನ ಬೇಗೆಯಲ್ಲಿ ಬೇಯುತ್ತಿದ್ದರೆ ಅತ್ತ ಮಲೆನಾಡಿನ ಜನರು ಹಚ್ಚಹಸಿರಿನ ತಂಗಾಳಿಯ ತಂಪಿನಲ್ಲಿ ಕಾಲ ಕಳೆಯುತ್ತಿರುತ್ತಾರೆ. ಗೋವಿಂದ ಸಿದ್ದನಲ್ಲಿಗೆ ಬಂದು ಅಲ್ಲಾ ಸಿದ್ದ ಒಂದ್‌ಕೆಲ್ಸ ಆಗ್ಯದಲ್ಲ ಮಾರಾಯಾ ಏನೋ ಎಂತೊಗೊತ್ತಿಲ್ಲ ಗದ್ದೆತೋಟದಲ್ಲಿ ಹೊಸದಾಗಿ ನೆಟ್ಟ ಎಲ್ಲಾ ಅಡಿಕೆ ಸಸಿಗಳದ್ದು ಒಂದು ಹೆಡ್ಲು ಬಿಡದೇ ಕತ್ತರಿಸಿ ಹಾಕ್ಯಾವೆ ಅದಕ್ಕೆ ನೀನ್ ಸಹಾಯಬೇಕೆಂದನು. ಅದೇ ಸಂದರ್ಭದಲ್ಲಿ ಸಿದ್ದನು ಗೋಲ್ಲರ ರಾಮನ್‌ಹತ್ರ ನಾಯಿ ತಗೊಂಡಿದ್ದ ಆತಾ ಇದು ಶಿಕಾರಿನಾಯಿ ಹಂಗೆ ಮಾಡ್ತದೆ; ಹೀಗೆ ಮಾಡ್ತದೆ.

ಕಣೆಹಂದಿ ಗುದ್ದು ನುಗ್ಗೋದ್ರಲ್ಲಿ ಉಡಾ ಹಿಡಿಯೋದ್ರಲ್ಲಿ ಬಾರಿರುಸ್ತುವ ಎಂದು ಹೇಳಿದ್ದ ಆದ್ದರಿಂದ ಆ ನಾಯಿನ ಬೇಟೆಗೆ ಕರೆದೊಯ್ದು ರಾತ್ರಿ ಇಡೀ ಕಾದ್ರು ಕಂಡದ್ದು ಮೊಲ ಮಾತ್ರ ಅದನ್ನ ಗೊವಿಂದ ಬೇಟೆಮಾಡ್ತಾ ಮತ್ತೊಂದೆಡೆ ಕೆರೆಯಲ್ಲಿ ಹುಡುಗ್ರು ಸ್ನಾನ ಮಾಡ್ತಿರುವಾಗ ಕಾಳಿಂಗನ ಹಾವು ಕೆರೆ ಹಾವನ್ನು ಬೆನ್ನುಹತ್ತಿತ್ತು ಅಂದರೇ ಕಾಳಿಂಗನ ಹಾವು ಕೆರೆಯಲ್ಲಿ ಈಜುವುದು ಕೇರೆ ಹಾವಿಗಾಗಿ ಎಂಬುದನ್ನು ಇದರಿಂದ ತಿಳಿದುಬಂದಿತು. ಇದರಿಂದ ತಿಳಿದುಬಂದ ವಿಷಯ ಏನೆಂದರೆ ಮನುಷ್ಯ-ಮನುಷ್ಯನ ನಡುವೆ ನಡೆಯುವ ಬೇಟೆಯಂತೆ ಪ್ರಾಣಿ ಪ್ರಾಣಿಗಳ ಮಧ್ಯೆಯು ಸಾಕಷ್ಟು ಬೇಟೆಗಳು ದಿನದಿಂದ ದಿನಕ್ಕೆ ನಡೆದು ಬಂದಿರುವುದನ್ನು ಸಿಂಧೂ ಬಯಲಿನ ನಾಗರಿಕತೆಯಿಂದಲು ತಿಳಿದುಕೊಂಡು ಬಂದಿರುವ ಸಂಗತಿಯಾಗಿದೆ.[3] ಪ್ರಾಣಿ ತನ್ನ ಆಹಾರಕ್ಕಾಗಿ ಮತ್ತೊಂದು ಪ್ರಾಣಿಯನ್ನು ಬೇಟೆಮಾಡಿ ತಿಂದು ತನ್ನ ಹಸಿವನ್ನು ನೀಗಿಸಿಕೊಳ್ಳುವುದನ್ನು ಕಲ್ಕುಳಿಯರ ಮಂಗನ ಬ್ಯಾಟೆ ಮಲೆನಾಡ ಪರಿಸರದಲ್ಲಿ ಚಿತ್ರಿತ ವಾಗಿರುವುದನ್ನು ಕಾಣಬಹುದಾಗಿದೆ. ಕೆಲವು ಪ್ರಾಣಿಗಳು ತಮ್ಮ ಸ್ವತಹ ರಕ್ಷಣೆಗಲ್ಲದೇ ಬೇರೆ ಪ್ರಾಣಿಯ ರಕ್ಷಣೆಗಾಗಿ ಬೇಟೆಯಾಡುವುದನ್ನು ಕಾಣಬಹುದಾಗಿದೆ. ಉದಾರಣೆ: ನಾಯಿಗಳು, ಹಾವು, ಮನುಷ್ಯ, ಮುಂಗಸಿ, ಮೀನು, ಇತ್ಯಾದಿಗಳನ್ನು ಹೆಸರಿಸಬಹುದಾಗಿದೆ.

ಗುಡ್ಡ ಬೆಟ್ಟಗಳ ಮಧ್ಯೆ ಎದ್ದಿರುವ ಮಲೆನಾಡಿನ ಪ್ರಕೃತಿಯ ಸೌಂದರ್ಯವನ್ನು ಲೇಖಕರು ಓದುಗರ ಮನಮುಟ್ಟುವಂತೆ ಮಲೆನಾಡಿನ ಸೋಬಗನ್ನು ಚರ್ಚಿಸಿದ್ದಾರೆ. ಇಂತ ಹಚ್ಚಹಸಿರಿನ ಕಾಡಿನಲ್ಲಿ ಹುಲಿಗಳ ದರ್ಬಾರು ಕಂಡು ಬರುವಂತ ಸಹಜ ಸಂಗತಿ ದನ ಹಿಡಿಯುವುದೆ ಹುಲಿಗಳ ಕೆಲಸವಾಗಿರುತ್ತದೆ. ಒಂದಿನ ಹುಲಿಯು ದನವನ್ನು ಹಿಡಿದು ತಿಂದು ಬಿಸಾಕಿತ್ತು, ಆ ದನ ಹಿಡಿದದ್ದು ಪಟ್ಟೆಹುಲಿ ಅಥವಾ ಚಿಟ್ಟೆಹುಲಿ ಎಂಬುದನ್ನು ಪತ್ತೆಮಾಡಿದ್ದು ಮಾರ ಹೇಗೆಂದರೆ ಪಟ್ಟೆಹುಲಿ ಹಿಡಿದ್ರೆ ರಕ್ತ ಕುಡಿದ ಮೇಲೆ ಹೆಚ್ಚೆಂದ್ರೆ ಅದು ಹೊಟ್ಟೆ ಬಗೆದು ಮೆತ್ತಗಿರುವ ಕರುಳನ್ನು ಮಾತ್ರ ತಿನ್ನುತ್ತದೆ. ತದ ನಂತರ ಅದು ಮಾಂಸತಿನ್ನಕ್ಕೆ ಒಂದು ದಿನ ಬಿಟ್ಟು ಬರುತ್ತದೆ. ಆದರೆ ಚಿಟ್ಟೆಹುಲಿ ಮೊದಲು ಮಾಂಸ ತಿನ್ನುತ್ತದೆ ಮಾಂಸ ತಿನ್ನುವದರಲ್ಲಿ ಪಟ್ಟೆ ಹುಲಿ ಗಲೀಜು ಪ್ರಾಣಿ ಆಗಿದೆ. ಇಂತಹ ಮಲೆನಾಡಿನ ಸಂಗತಿಗಳ ಚಿತ್ರಗಳನ್ನು ವಿಕ್ಷಿಸುತ್ತಿದ್ದರೆ ಅಥವಾ ಓದುತ್ತಹೋದಂತೆ ದೃಶ್ಯ ಮಾಧ್ಯಮಗಳು ಕಣ್ಣಮುಂದೆ ಬಿಂಬಿತವಾಗುತ್ತವೆ. ಇಂತಹ ಘಟನೆಯಂಥ ದೃಶ್ಯಗಳನ್ನು ಈಗಲೂ ನ್ಯಾಷನಲ್ ಜಯೋಗ್ರಾಪಿ ಚಾನಲ್‌ನಲ್ಲಿ, ಎನಿಮಲ್‌ಪ್ಲಾಂಟ್ ಚನಲ್‌ಗಳಲ್ಲಿ ಚಿತ್ರಮಂದಿರಗಳಲ್ಲಿ ಕಾಣಬಹುದಾಗಿದೆ.

ಮಲೆನಾಡನ್ನು ಅವಲೋಕಿಸುತ್ತ ಹೋದಂತೆಲ್ಲ ಮಲೆನಾಡಿನಲ್ಲಿನ ಸಮಸ್ಯೆಗಳೆಲ್ಲ ಒಂದರ ಮೇಲೊಂದರಲ್ಲಿ ಗರಿಬಿಚ್ಚುತ್ತಾ ಸಾಗುತ್ತಿರುತ್ತವೆ. ಮಂಗಗಳ ಬ್ಯಾಟೆಯನ್ನು ಸರ್ಕಾರ

ನಿಷೇದಿಸಿದ್ದರಿಂದ ಉಪವಾಸ ಕುಂತು ಧರಣಿ ಮಾಡಿದರು. ಅದಕ್ಕೆ ಸರ್ಕಾರದವರು ಮಂಗಗಳನ್ನು ಪುನಃ ಪೇಟೆಗೆ ಸಾಗಿಸಲು ಸಿದ್ದನ ಸಹಾಯ ಕೇಳಿದರು. ಅದು ಅರಣ್ಯ ಇಲಾಖೆಯವರ ಕೆಲಸವಾಗಿದ್ದರಿಂದ ಸಿದ್ಧಂಗೆ ಸಖ್ಯ ಮತ್ತು ಸಂಬಳವೂ ಸಿಗುತ್ತಿತ್ತು ಇದರಿಂದ ತನ್ನ ಕಸುಬನ್ನು ಒಂದಿಷ್ಟು ದಿನ ಸುಲಭವಾಗಿ ನಡೆಸಿದ ನಂತರ ಅದು ನಿಂತುಹೊಗಿ ಜೀವನಕ್ಕೆ ಕಷ್ಟದಾಯಕವಾಯಿತು. ಇದೇ ರೀತಿಯಲ್ಲಿ ಸಿದ್ದನ ಬದುಕು ಮಲೆನಾಡಿನ ಮಡಿಲಲ್ಲಿ ಸಾಗುತ್ತ ಇತ್ತು. ಏನೇ ಇದ್ದರು ಸಿದ್ದನ ಪಾಡಂತು ನಾಯಿಪಾಡಾಗಿಯೆ ಮುಂದುವರೆಯಿತು, ಬೇಟೆಯ ನಿಷೇದದಿಂದ ಸಿದ್ದನ ಬದುಕು ದಿನದಿಂದ ದಿನಕ್ಕೆ ಹೀನಾಯ ಪರಿಸ್ಥಿತಿಗೆ ಬಂದೊದಗಿತು.[೬]

ಮಂಗಗಳ ಬೇಟೆಯನ್ನು ಏನೋ ತಂತ್ರ ಹೂಡಿ ಗುರಿ ಸಾಧಿಸಲಾಯಿತು. ಆದರೇ ಮಂಗಗಳ ಸಾವಿನಿಂದ ಸಾಮಾನ್ಯ ಜನರಿಗೆ ಬಂದೊದಗಿದ ಪರಿಸ್ಥಿತಿಯಂತು ಗಂಭೀರವಾಯಿತು. ಮಲೆನಾಡಿನ ಪರಿಸರದಲ್ಲಿನ ಇಂತಹ ಸಮಸ್ಯೆ ನಿವಾರಣೆಗಾಗಿಯು ಸರಕಾರದವರೆ ಮುಂದೇಬಂದು ಆರೋಗ್ಯವನ್ನು ಸುಧಾರಣೆಯತ್ತ ದಾಪುಗಾಲು ಹಾಕಿತು. ಒಟ್ಟಾರೆಯಾಗಿ ಸರಕಾರದವರಂತು ಮಲೆನಾಡಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸೋತು ಕಾಂಗಾಲಾಗಿದ್ದರು. ಅಂತಹ ಸಮಯದಲ್ಲಿ ಸಿದ್ದನ ಉಪಾಯದಂತೆ ರಾಘವಾಚಾರಿ ೫೦೦೦/- ರೂ ತೆಗೆದುಕೊಂಡು ಬೋನನ್ನು ತಯಾರಿಸಿ ಕೊಟ್ಟ ಅದನ್ನು ಮಠಕ್ಕೆ ತಂದು ಸಿದ್ದ ಹೇಳಿದ ಜಾಗದಲ್ಲಿ ಇಡಲಾಯಿತು. ಇಲ್ಲಿ ಗಮನಿಸಬೇಕಾದ ಸಂಗತಿ. ಏನೆಂದರೆ ವಿದ್ಯೆ ಬುದ್ದಿ ಇಲ್ಲದ ಒಬ್ಬ ಸಾಧಾರಣ ಮನುಷ್ಯ ಅದರಲ್ಲೂ ಕೀಳುಜಾತಿಗೆ ಸೇರಿರುವ ಸಿದ್ದನನ್ನು ಇಡೀ ಸರಕಾರವೇ ಅವನ ಬೆನ್ನ ಹಿಂದೆ ಬೀಳುತ್ತದೆ. ಇಲ್ಲಿ “ಶಕ್ತಿಗಿಂತ ಯುಕ್ತಿ ಮುಖ್ಯ” ಎಂಬ ನಾಣ್ನುಡಿಯಂತೆ ಸಿದ್ದನಂತೆ ಸರಕಾರದ ಕಾನೂನುಗಳು ನಡುಗಲು ಪ್ರಾರಂಭಿಸಿದವು.

ಅಂತು ಸಿದ್ದ ಮಂಗ ಹಿಡಿಯುವ ಕಾರ್ಯ ಕೈಗೊಂಡು ಬೋನಿನ ಬಾಗಿಲನ್ನು ತೆಗೆದು ಅದರಲ್ಲಿ ತರಕಾರಿ ಹಾಕಿ ಬೋನಿನ ಮರೆಯಲ್ಲಿ ಸಿದ್ದ ಮತ್ತು ಗೋವಿಂದ ಬೋನಿನ ಸನ್ನೆ ತಂತಿಯನ್ನು ಹಿಡಿದು ಕೂತರು ಪ್ರಯೊಜನವಾಗಲಿಲ್ಲ. ಮಾರನೇ ದಿನ ಬೋನಿಗೆ ಬಾಳೆಗೊನೆ ಇಟ್ಟರು ಸಿದ್ದ ಸನ್ನೆ ತಂತಿಯನ್ನು ಗೋವಿಂದನಿಗೆ ಕೊಟ್ಟು ಹೆಂಡ ಕುಡಿಯೋಕೆ ಹೋದನು. ಆ ಹೊತ್ತಿಗೆ ಬೋನಿನಲ್ಲಿ ೩ ಮಂಗಗಳು ಬಂದಿದ್ದನ್ನು ಕಂಡ ಗೋವಿಂದ ಅವುಗಳನ್ನು ಬೋನಿನ್ ಮಧ್ಯ ಸರಿಸಲು ಹೋಗಿ ಬೋನಿನೊಳಗೆ ಸಿಕ್ಕಿಹಾಕಿಕೊಂಡನು. ಮಂಗಗಳ ಜೊತೆ ತನ್ನ ಕಷ್ಟ ಹೇಳತೀರದು ಕಿರಿಚಿ ಕೂಗಿದರು ಯಾರು? ಬರಲಿಲ್ಲ. ರಾತ್ರಿಯಾದರು ಯಾರು? ಬರಲಿಲ್ಲ ರಾಘವಾಚಾರಿ ಜೊತೆಗೆ ಸಿದ್ದಂಗೆ ಶಾಪಹಾಕಿದ ಬೋನಿನ ಬಾಗಿಲನ್ನು ತೆಗೆಯಲು ಪ್ರಯತ್ನಿಸಿ ಪ್ರತಿಯೊಂದು ದಬ್ಬೆಯನ್ನು ಅಲುಗಾಡಿಸಿ ಕೀಳಲು ಪ್ರಯತ್ನಿಸಿದರೂ ಬರಲಿಲ್ಲ. ತಾನು ಅಪಹಾಸ್ಯಕ್ಕೆ ಒಳಗಾದೆನಲ್ಲ ನನ್ನ

ಬುದ್ದಿಗೇನಾಯಿತೆಂದು ತಾನೇ ತನ್ನನ್ನು ಹೀಯಾಳಿಸಿಕೊಂಡನು.[೭] ಬ್ಯಾಟೆ ಮಾಡುವುದರಲ್ಲಿ ನಿಪುಣ ಎಷ್ಟೇ ಅನುಭವಸ್ತನಿದ್ದರೂ ಕೆಲವು ಸಮಯ ಸಂದರ್ಭಗಳಲ್ಲಿ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಪರಿಸ್ಥಿತಿ ಕೈಮೀರಿದರೆ ಆಗಬಾರದ ಅನಾಗುತಗಳು ಆಗಿಬಿಡುತ್ತವೆ. ಇವರಿಬ್ಬರು ಒಂದಿನಾ ಬ್ಯಾಟೆಗಾಗಿ ಕಾಡಿಗೆ ಹೋದರು ಅವತ್ತು ಅಕಸ್ಮಾತಾಗಿ ಗೋವಿಂದನಿಗೆ ಹೆಬ್ಬುಲಿ ತನ್ನ ಟಾರ್ಚನ ಬೆಳಕಿನಲ್ಲಿ ಕಂಡಿತು ಗೋವಿಂದನಿಗೆ ತನ್ನ ತಂತ್ರಗಾರಿಕೆಯಿಂದ ಲೈಟ್ ಹಾಕದೇ 'ಢಂ' ಅಂತ ಗುಂಡು ಹಾರಿಸಿಬಿಟ್ಟ ಆ ಶಬ್ದಕ್ಕೆ ಸಿದ್ದ ಗೋವಿಂದನ ಮೈ ಮೇಲೆ ಉಚ್ಚೆಹೊಯ್ದಿದ್ದ ಅದಕ್ಕೆ ಸಿದ್ದ ಎಂಥದಕ್ಕೆ ಹೊಡೆದೆ ಎಂದು ಕೇಳಿದ ನೋಡಿಲ್ಲೇನೊ ಹುಲಿ ಹೆಬ್ಬುಲಿ ಎಂದ ರಾತ್ರಿ ಕಳೆದು ಬೆಳಿಗ್ಗೆ ಬಂದುನೋಡ್ತಾರೆ ಹುಲಿ ಸತ್ತುಬಿದ್ದಿದೆ. ಶಿಕಾರಿ ಅಂದ್ರೆ ಹಾಗೆ? ಅದು ಮಾಂಸದ ಆಸೆಗೆ ಮಾಡುವ ಕೃತ್ಯವಲ್ಲ ಶತ್ರು ನಾಶಕ್ಕೆ ಮಾಡೋ ಯುದ್ದವು ಅಲ್ಲ ಏನೋ ಸಾಧಿಸಬೇಕೆಂಬ ಹಠ ಎಂದು ಗೋವಿಂದ ಹಳೆ ನೆನಪುಗಳನ್ನು ಮರುಕಳಿಸಿದನು. ಮಲೆನಾಡಿನ ಕಾಡಿನ ಸಂಪತ್ತಿನಲ್ಲಿ ಪ್ರಾಣಿಗಳ ಬ್ಯಾಟೆ ಯಾಡುವುದೆಂದರೇ ಸುಲಭದ ವಿಷಯವಲ್ಲ ಪ್ರಾಣಿಗಳು ಯಾವ ಸಂದರ್ಭದಲ್ಲಿ ತಮ್ಮ ಮೇಲೆ ಎಗರಿ ದಾಳಿ ಮಾಡುತ್ತವೊಗೋತ್ತಿಲ್ಲ ಆದ್ದರಿಂದ ಬೇಟೆಗಾರ ಮೈತುಂಬಾ ಕಣ್ಣನ್ನು ಹೋಂದಿರಬೇಕಾಗುತ್ತದೆ. ಅದರಲ್ಲೂ ಮಲೆನಾಡಿನಲ್ಲಿ ಅತಿ ಹೆಚ್ಚು ಅಪಾಯಕಾರಿ ಪ್ರಾಣಿಗಳು ಕಂಡುಬರುತ್ತವೆ. ಇತ್ತೀಚೆಗಂತು ಅರಣ್ಯ ಇಲಾಖೆಯವರು ಮಲೆನಾಡಿನ ಜನರಿಗೆ ರಕ್ಷಣೆಯ ಕವಚವಾಗಿ ತೋರ್ಪಡುತ್ತಿದ್ದಾರೆ.[೮]

ಕೊನೆಗೆ ಸಿದ್ದ ಅಪರೇಷನ್ ಮಂಕಿಗಾಗಿ ಶೆಟ್ರ ಅಂಗಡಿಯಿಂದ ೧೫ ಸೇರು ಮಂಡಕ್ಕಿ ತೆಗೆದುಕೊಂಡು ಸಾರಾಯಿ ಕುಡಿದುಕ್ಕೊಂಡು ಬಂದು ಗೋವಿಂದನ ಹಿಡಿದ ೩ ಮಂಗಗಳನ್ನು ಹುಲಿ ಬೋನಿಗೆ ಸಾಗಿಸಿ ಬೋನಿನ ಸುತ್ತ ಒಳಗೆ ಮಂಡಕ್ಕಿ ಚೆಲ್ಲಿ ಬೋನಿನೊಳಗೆ ೧ ಮಡಕೆ ನೀರು ತುಂಬಿದನು. ಸಂಜೆ ಹೊತ್ತಿಗೆ ಮಂಗನ ಮರಿಯು ಬೋನಿನೊಳಗೆ ಹೋಯಿತು; ಅದರ ಹಿಂದೆ ತಾಯಿ ಮಂಗವು ಹೋಯಿತು. ಹೀಗೆ ಎಲ್ಲಾ ಮಂಗಗಳು ಒಳಗಿನ ಮಂಡಕ್ಕಿ ತಿನ್ನಲಿಕ್ಕಾಗಿ ಹೋಗುತಿದ್ದಂತೆ ಸಿದ್ದ ಸನ್ನೆ ತಂತಿ ಎಳೆದುನೋಡ್ತಾನೆ ಬೋನಿನೊಳಗೆ ೨೫ ರಿಂದ ೩೦ ಮಂಗಗಳು ಇದ್ವು ಅಂತು ಸಿದ್ದನ ಮೊದಲನೇದಿನದ ತಂತ್ರವು ಯೆಶಸ್ವೀಯಾಯಿತು. ನಂತರನು ಹೀಗೆನೆ ಮಾಡಿ ಮಂಗಗಳನೆಲ್ಲ ಅಭಯಾರಣ್ಯಕ್ಕೆ ತೆಗೆದುಕೊಂಡುಹೋಗಿ ಬಿಡಲಾಯಿತು.[೯] ಇಲ್ಲಿ ಸರ್ಕಾರಕ್ಕೆ ಮತ್ತೆತಲೆನೋವಾಗಿ ಪರಿಣಮಿಸುವ ಮಲೆನಾಡ ಪರಿಸರ ಕಂಡು ಬರುತ್ತದೆ. ಪೇಟೆಯಿಂದ ಮಂಗಗಳನಂತು ಅಭಯಾರಣ್ಯಕ್ಕೆ ಸಾಗಿಸಿ ಸಧ್ಯ ಸಮಸ್ಯೆಯ ಸುಳಿಯಲ್ಲಿ ಸಿಕ್ಕು ಒದ್ದಾಡುತ್ತಿರುವ ಪೇಟೆ ಜನರ ಮತ್ತು ಮಲೆನಾಡಿನ ಸಮಸ್ಯೆಯನ್ನು ಸಿದ್ದನ ಮುಂದಾಳತ್ವದಲ್ಲಿ ನಿವಾರಿಸಲಾಯಿತು.

ಪೇಟೆಯಿಂದ ಕಾಡಿಗೆ ಬಂದ ಮಂಗಗಳು ಕಾಡು ಸೇರಿದ ಮೇಲೆ ರೈತರ ಜಮಿನಿಗೆ ನುಗ್ಗಿ ನಾಯಿ, ಕೊವಿ ಯಾವುದಕ್ಕೂ ಹೆದರದೇ ಬಾಳೆಗೊನೆ, ತರಕಾರಿ, ಭತ್ತ, ಎಲೆ, ಅಡಿಕೆ, ಕಾಯಿಗಳನ್ನು ಕಿತ್ತು ತಿಂದು ಎಲ್ಲವನ್ನು ಸರ್ವನಾಶ ಮಾಡಿದವು. ಇದರಿಂದ ರೋಸಿಹೋದ ಅಲ್ಲಿನ ಜನರು ಸರ್ಕಾರಕ್ಕೆ ಹೆದರದೇ ಭೂಮಿ ಕೊಡಲು ನಿರಾಕರಿಸಿದ್ದವರು ಮಂಗಗಳ ಹಾವಳಿಗೆ ಬೇಸತ್ತು ಕಾಡನ್ನು ಬಿಟ್ಟುನಾಡಿಗೆ ಬಂದು ವಾಸಿಸಲಾರಂಬಿಸಿದರು. ಅದಕ್ಕೆ ಸರ್ಕಾರವು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದ ಸಂಭ್ರಮದಲ್ಲಿತ್ತು, ಇದು ಹೀಗೆಯೆ ಮುಂದುವರೆದರೇ ಮಲೆನಾಡಿನ ಗತಿ ಏನು? ಮುಂದೇ ಮಲೆನಾಡಿನ ವಿಶೇಷ ವಿಸ್ಮಯ ಬದುಕು ಹೇಳಲು ಹೆಸರಿಲ್ಲದಂತೆ ಆಗುತ್ತದೆಯೇ..? ಮಲೆನಾಡು ಮಂಗಗಳ ನಾಡಾಗುವ ಸಾಧ್ಯತೆಗಳೇನಾದರೂ ಇವೆಯೇ ಮಲೆನಾಡಿನ ಪ್ರಕೃತಿ ಪ್ರಾಣಿಗಳಿಂದ ನಾಶವಾಗುವ ಸಾಧ್ಯತೆಗಳೇನಾದರು ಇವೇಯೆ ಎಂಬ ಪ್ರಶ್ನಾರೂಪವಾಗಿಯೆ ಉಳಿದಿದೇ....ಬೇಟೆ ಯಾವಾಗಲು ಅಮಾನವೀಯವಾದದ್ದು ತಾಜಮಾಹಲಿನಂತಹ ಒಂದು ದಿವ್ಯ ಕಟ್ಟಡವು ನಾಶವಾದರೇ ಅದನ್ನು ಕಟ್ಟಬಹುದು, ಅನೇಕ ಗೊಮ್ಮಟವನ್ನು ಕೆತ್ತಬಹುದು ಆದರೇ ಹುಲಿ, ಚಿರತೆ, ಸಿಂಹ, ಆನೆ, ಮುಂತಾದ ಜೀವಿಗಳ ಸಂತತಿಯನ್ನು ಬೆಳೆಸುವುದು ಖಂಡಿತ ಸಾಧ್ಯವಾಗುವುದಿಲ್ಲ. ಕಾಡಿನಲ್ಲಿ ಕಂಡು ಬರುವ ಜೀವಿ ಸಂಕುಲವನ್ನು ನಾಶ ಮಾಡುವುದರಿಂದ ಪ್ರಾಣಿಗಳ ಸಂತತಿನೆ ನಾಶವಾಗಿಹೋಗುವ ಸಾಧ್ಯತೆಗಳಿವೆ.[೧೦] ಆಮೇಲೆ ಆ ಪ್ರಾಣಿಗಳನ್ನು ಕೇವಲ ಪೋಸ್ಟರ್‌ಗಳಲ್ಲಿ, ಕಲೆ, ಪ್ರದರ್ಶನ, ಸಿನಿಮ ಮಾಧ್ಯಮಗಳಲ್ಲಿ, ಪುಸ್ತಕದಲ್ಲಿ, ಚಿತ್ರಪಟಗಳಲ್ಲಿ ಕಾಣುತ್ತೇವೆ, ಇಂತಹ ಪ್ರಾಣಿ ಸಂಕುಲವನ್ನು ನಾಶಮಾಡಬಾರದೆಂದು ಭಾರತ ಸರಕಾರವು ಪ್ರಾಣಿ ಬೇಟೆಯನ್ನು ನಿಷೇಧಿಸಿದೆ ಒಂದು ವೇಳೆ ಕಾನೂನು ಮೀರಿ ಬೇಟೆ ಯಾಡುವವರಿಗೆ ಕಾನೂನು ಕ್ರಮ ಕೈಗೊಂಡು ಶಿಕ್ಷೆಯ ಜೊತೆಗೆ ದಂಡವನ್ನು ವಿಧಿಸಲಾಗುತ್ತದೆ. ಇಂತಹ ಘಟನಾವಳಿಗಳಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ. **ಉದಾರಣೆ:** ಹಿಂದಿ ಫಿಲ್ಮ ಹೀರೊ ಸಂಜೆಯ ದತ್ತಗೆ ಈಗಲು ಟಾಡಾ ನ್ಯಾಯಾಲಯವು ಪ್ರಾಣಿ ಬಲಿಗಾಗಿ ಶಿಕ್ಷೆಯನ್ನು ನೀಡಿ ಜೈಲಿನಲ್ಲಿ ಕೊಳೆಯುವಂತೆ ಮಾಡಿದೆ. ಹಿಂದಿ ಹೀರೊಯಿನ್ ಪ್ರೀತಿಜಿಂಟಾ ಕೂಡಾ ಪ್ರಾಣಿ ಬೇಟೆಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ.

ಬೇಟೆ ಎನ್ನುವುದು ಜನಪದ ಜೀವನಕ್ಕೆ ಹೊಂದಿಕೊಂಡು ಬಂದ ಸಹಜ ಕ್ರಿಯೆ ಇದು "ವೀರ, ಭಯಾನಕ, ರೌದ್ರ, ಭೀಭತ್ಸ, ಹಾಸ್ಯ" ಮೊದಲಾದ ನವ ರಸಗಳಿಗೆ ಸಾಕಷ್ಟು ಅವಕಾಶವನ್ನು ನೀಡುವ ರೋಚಕ ಪ್ರಸಂಗ ಬೇಟೆಯಿಂದ ಪ್ರಭಲ ವರ್ಗ ಸಂತೋಷ ಪಟ್ಟರೆ ದುರ್ಬಲ ವರ್ಗ ದುಃಖ ಪಡುತ್ತದೆ. ಜಲಚರ, ಕ್ರಿಮಿಕೀಟ, ಪಕ್ಷಿಗಳಿಂದ ತೊಡಗಿ ಕಾಡಿನ ಕ್ರೂರ ಪ್ರಾಣಿಗಳಿಂದ ಬೆಳೆದು ಮಾನವನವರೆಗೂ ಈ ಕ್ರಿಯೆ ಸಹಜವಾಗಿದೆ.[೧೧] ಬೇಟೆಯನ್ನು ಮಲೆನಾಡಿನ ಪರಿಸರವಾದ ಮಂಗನ ಬ್ಯಾಟೆಗೆ ಹೋಲಿಸಿ ನೋಡಿದಾಗ ಬೇಟೆಗಳು ಉದ್ದೇಶ ಪೂರಿತವಾಗಿರುವದನ್ನು

ಕಾಣಬಹುದಾಗಿದೆ. ಅದರಲ್ಲೂ ಮಲೆನಾಡಿನ ಬೇಟೆಗಳಂತು ಬೇಟೆಗಾರನ ಮುಂಜಾಗ್ರತೆ ಕ್ರಮವನ್ನು ರೂಪಿಸಿ ಕೊಡುವಂತಿರುತ್ತವೆ. ಬೇಟೆಯ ವಿವಿಧ ತಂತ್ರಗಳನ್ನು ಮೃಗ, ಪಕ್ಷಿ, ಕೀಟಾದಿಗಳಿಂದಲೆ ಮನುಷ್ಯ ಕಲಿತಿರುಪುದು ಈ ಬಗ್ಗೆ ಯಾವ ವಿವಾದವು ಇಲ್ಲ ಜೇಡನಿಂದ ಬಲೆ ಒಡ್ಡುವುದನ್ನು ಕಲಿತರೆ ಚಿರತೆ ಹುಲಿಗಳಿಂದ ಮರಸು ಬೇಟೆ ವಿಧಾನವನ್ನು ಅರಿತ, ಸೀಳು ನಾಯಿಗಳಿಂದ ಸಮೂಹ ಬೇಟೆಯನ್ನು, ಮುಳ್ಳು ಹಂದಿಗಳಿಂದ ಬಾಣ ಬಿಡುವಿಕೆಯನ್ನು, ಕರಗತ ಮಾಡಿಕೊಂಡನು. ಈ ಸುಧಾರಿತ ತಂತ್ರಗಳಿಂದ ಮತ್ತೆ ಆಹಾರ ಉತ್ಪಾದನೆ ಹೆಚ್ಚಿತು, ಅಲೆಮಾರಿಯಾಗಿದ್ದ ಮಾನವ ಒಂದುಕಡೆ ನೆಲೆನಿಂತ ತನ್ನ ಜಿವನ ನಿರ್ವಾಹಣೆಗಾಗಿ ಕೃಷಿ ಮಾಡತೋಡಗಿದನು.[೧೨] ಇಲ್ಲಿ ಮಾನವ ದಿನದಿಂದ ದಿನಕ್ಕೆ ಕಾಲದ ಬದಲಾವಣೆಯಂತೆ ಬೇಟೆಯಲ್ಲೂ ಸುಧಾರಿತ ತಂತ್ರಗಳನ್ನು ಬಳಸುತ್ತ ಬೇಟೆ ಮಾಡಲು ಹೊಸಹೊಸ ತಂತ್ರಗಳನ್ನು ರೂಪಿಸಿ ಕೊಂಡನು ಹೀಗೆಯೆ ಮುಂದೆ ಸಾಗುತ್ತ ಬೇಟೆ ಮಾಡಲು ಬಳಸುತ್ತಿದ್ದ ಆಯುಧಗಳನ್ನು ಸಹ ಸುಧಾರಣೆ ಮಾಡಿಕೊಂಡನು. ಪರಿಸರ ಬದಲಾದಂತೆ ಅಲ್ಲಿನ ಜನ ಸಮೂಹ ಬದಲಾಗುತ್ತದೆ. ಅದೇ ರೀತಿ ಬೇಟೆ ಮಾಡುವ ತಂತ್ರಗಳನ್ನು ಬದಲಿಸಿಕೊಳ್ಳುತ್ತಾ ಬೇಟೆಯ ಆಯುಧಗಳನ್ನು ಸುಧಾರಿಸಿಕೊಂಡನು. ಆದಿ ಮಾನವನಿಂದ ಸಾಗಿಕೊಂಡು ಬಂದಿರುವ ಬೇಟೆ ಆಧುನಿಕ ಮಾನವನವರೆಗೆ ಸಾಗುತ್ತಲೇ ಬಂದಿರುವದು ನಮ್ಮ ಕಣ್ಮುಂದಿರುವ ಸತ್ಯವಾಗಿದೆ.

ಜಗತ್ತಿನ ವಿವಿಧ ಭಾಗಗಳಲ್ಲಿದ್ದ ಬೇಟೆಯ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ. ಗೆಡ್ಡೆ ಗೆಣಸುಗಳಿಂದ ಆರಂಭಿಸಿ ಶಿಲಾಯುಧಗಳ ಮೂಲಕ ಬೇಟೆ ಮಾಡುವುದು. ಆಧುನಿಕ ಬಂದೂಕುಗಳು ಬಂದಾಗ ಬೇಟೆಯ ಹವ್ಯಾಸ ದ್ವಿಗುಣಗೊಂಡಿತು. ಆಡಮಾಸನ್ ಹೆಬೊಲ್ ಅವರು ಮಾನವ ನಿಸರ್ಗದ ಒಡೆಯ, ಆಹಾರ ಸಂಗ್ರಹಣೆಯಲ್ಲೆ ಗೆಡ್ಡೆ ಗೆಣಸಿಗಾಗಿ ಯಾವಾಗಲೂ ದೈವದ ಆರಾಧನೆಯನ್ನು ಬೇಟೆಗಾರರು ಮಾಡುತ್ತಿದ್ದರು; ಎಂದೂ ತಿಳಿಸಿದ್ದಾರೆ. ಬೇಟೆ ಬೆಳೆದು ಬಂದ ಬಗೆಯನ್ನು ಗಮನಿಸಿದಾಗ ಆಹಾರ ಪಡೆಯುವ ವಿಧಾನಗಳಲ್ಲಿ ಬೇಟೆ ತಂತ್ರಜ್ಞಾನದಲ್ಲಿ ಬಳಸುತ್ತಿದ್ದರು ಹೀಗೆ ಬೇಟೆಯ ತಂತ್ರಜ್ಞಾನ ಬಂದೂಕು ಆಗಿದೆ.[೧೩]

ಬೇಟೆಯು ಏಷಿಯ ದೇಶದಲ್ಲಿ ಬೇಟೆ ಕ್ರೀಡೆಯಾಗಿ ವಿದೇಶಿಯರಿಂದ ಪ್ರಚಲಿತಕ್ಕೆ ಬಂತು. ಉತ್ತರ ಅಮೇರಿಕ, ಆಫ್ರಿಕಾ ವಸಾಹತುಗಳಂತೆ ಏಷ್ಯವು ಸಹಾ ಹಲವು ಬಗೆಯಲ್ಲಿ ತೊಡಗಿಸಿಕೊಂಡಿತ್ತು, ಹೊಸದಾಗಿ ಗನ್ ಪೌಡರ್, ಕೋವಿ, ಮದ್ದು ಗುಂಡುಗಳು, ಬಂದಾಗ ಬೇಟೆಯ ತಂತ್ರವು ಬದಲಾಯಿತು, ಅವರು ಕೊಡಗಿನ ಜನರು ಹುಲಿ ಬೇಟೆಯಲ್ಲಿ ಪ್ರವೀಣರಾಗಿದ್ದಾರೆ. ಇದಕ್ಕೆ ಅವರು ನರಿಮಂಗಲ ಎಂದು ಕರೆದುಕೊಂಡಿದ್ದಾರೆ.[೧೪] ಆದಿಮಾನವನಿಂದ ಆಧುನಿಕ ಮಾನವನಾಗಿ ಹೇಗೆ ಬದಲಾವಣೆಯತ್ತ ದಾಪುಗಾಲು ಇಡುತ್ತಾಬಂದಿದ್ದಾನೋ ಅದೇ ರೀತಿಯಲ್ಲಿ ಬೇಟೆಗೆ ಬಳಸುತ್ತಿದ್ದ

ಆಯುಧಗಳು ಸಹ ಕಾಲ ಬದಲಾದಂತೆ ಬದಲಾಗುತ್ತ ಬಂದಿರುವುದು ಬೇಟೆಗಾರನ ಆಯುಧಗಳನ್ನು ನೋಡಿದಾಗಲೆ ತಿಳಿದುಕೊಳ್ಳಬಹುದಾಗಿದೆ. (ಪು. ೩೧ ಬೇಟೆ ಮತ್ತು ಬೇಡರು).

ಬೇಟೆಗಾಗಿ ಬಳುವ ಆಯುಧಗಳು:

ಕಲ್ಲು ಮೂಳೆಗಳ ಬಳಕೆಯ ನಂತರ ಧನುರ್ವಿದ್ಯೆಯ ಉದಯಕ್ಕೆ ಕಾರಣ ಆಗಿರಬೇಕು ಪ್ರಣಿಗಳ ಧರ್ಮ ಕಾಡು ಹುಲ್ಲು, ಬಿದಿರು, ಮರದ ಕೋಲಿನ ಬಿಲ್ಲು, ಬಲೆ, ಹಗ್ಗಗಳಾಗಿ, ಚೂಪಾದ ಭಲ್ಲೆಯನ್ನು ಮಾಡುತ್ತಿದ್ದರು. ಮುಂದೇ ಆರ್ಯರ ಕಾಲದಲ್ಲಿ ಕಬ್ಬಿಣದಿಂದ ಗುದ್ದಿಲಿ, ಈಟಿ, ಖಡ್ಗಗಳು ಬಳಕೆಗೆ ಬಂದವು. ಬಿಲ್ಲು, ಬಾಣ, ಈಟಿ, ಖಡ್ಗ, ಕವಣೆ, ಗಾಳ, ಒಲೆ, ಬಂದು ಹೊಸ–ಹೊಸ ತಂತ್ರಗಳಿಂದ ಬೇಟೆಯ ಗತಿ ಬದಲಾಯಿತು ಇದೇ ರೀತಿಯಾದ ಆಧುನಿಕ ಸಾಧನ ಕೋವಿ ೧ ನೇ ಸಹಸ್ರಮಾನದಲ್ಲದೇ ಇಂಗ್ಲಿಷರು ಭಾರತದ ಹವ್ಯಾಸಿಗಳು ಆನೆ, ಹುಲಿಯಂಥ ಬಲಶಾಲಿ ಪ್ರಾಣಿಗಳನ್ನು ಕೋವಿಯಿಂದ ಬೇಟೆ ಮಾಡಿದ್ದಾರೆ. ಚೌಮುಂಗೆ ಕೋವಿ(ಇದು ಯಂತ್ರಯುಗದ ಬಳಕೆ) ಬತ್ತಿಕೋವಿ, ಕೇಪಿನ ಕೋವಿ, ತೋಟಾಕೋವಿ, ಜೋಡು ನಳಿಗೆಯ ಕೋವಿಗಳು, ಬಳಕೆಗೆ ಬಂದವು. ಆದರೆ ಇಂದೂ ಎ.ಕೆ.೪೭, ರಿವಾಲ್ವರ್, ರೈಪಲ್, ಎಕೆ. ೫೬ ನಾಡ ಬಂದುಕುಗಳು ಬಳಸಲ್ಪಟ್ಟಿವೆ.

ಬೇಟೆ ಕನ್ನಡಿಗರ ವ್ಯಾಪಕ ಅನುಭವದ ಒಂದು ಭಾಗ ಇವರು ಬೇಟೆ ಬೇರೆ ಬೇಟೆ ಸಾಹಿತ್ಯ ಬೇರೆ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಡಾ.ಹಾ.ಮಾ.ನಾಯಕ ಅವರು ಹೇಳುವಂತೆ ಮುನುಷ್ಯನ ಸ್ವಾರ್ಥಗಳಿಂದಾಗಿ ಈಗ ಕಾಡೆಲ್ಲ ನಾಡಾಗುತ್ತಿದೆ. ಇದರಿಂದ ಪ್ರಾಣಿ, ಪಕ್ಷಿಗಳಿಗೆ ನಿಲ್ಲಲು ನೆಲೆಯಿಲ್ಲದಂತಾಗಿದೆ. ಈಗ ಕಾಡಿನ ಸಂಪತ್ತು ಕಡಿಮೆ ಆಗುತ್ತಿರುವುದರ ಜೊತೆಗೆ ಪ್ರಾಣಿ–ಪಕ್ಷಿಗಳ ಕುಲನೂ ನಶಿಸುತ್ತಿದೆ. ಪ್ರತಿಷ್ಟೆಗಾಗಿ. ವಿನೋದಕ್ಕಾಗಿ, ಆಹಾರಕ್ಕಾಗಿ ನಾನಾ ಬಗೆಯ ಸ್ವಾರ್ಥಗಳಿಗಾಗಿ ಕಾಡು ಪ್ರಾಣಿಗಳ ಅಮಾನವೀಯವಾದದ್ದು ಎಂದೂ ಹೇಳಿದ್ದಾರೆ. ಬೇಟೆ ನಾಯಿಯ ಬೊಗಳುವಿಕೆ, ಒದರಿಕೆಯವರ ಬೊಬ್ಬೆ, ಕಿರುಚಾಟ, ಬೇಟೆಗಾರರನ್ನು ಬೆನ್ನಟ್ಟಿ ಬರುತ್ತವೆ. ಶಿಕಾರಿಯ ತಂತ್ರ ಈ ಕೃತಿಯ ಕೇಂದ್ರ ಏಡಿ, ಮೀನು, ಪಕ್ಷಿ, ಪ್ರಾಣಿ, ಮತ್ತು ಜೇನುಗಳ ಶಿಕಾರಿಯ ವಿವಿಧ ಜೀವನ ವಿಧಾನ, ಸಂಪ್ರದಾಯ, ಬಾಷೆ, ಆಚಾರ ವಿಚಾರ, ಉಡುಗೆ ತೊಡುಗೆ ಮೊದಲಾದ ವಿಚಾರಗಳಲ್ಲಿ ವ್ಯತ್ಯಾಸವಿದೆ. ಚಿಕ್ಕಮಗಳೂರು ಹಾಸನ, ಕೊಡಗು, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಲೆನಾಡಿನ ಶಿಕಾರಿಗಳ ವಿವರಣೆ ಇದೆ. ಮೀನು ಶಿಕಾರಿ ಕತ್ತಿಯಿಂದ ಕಡಿಯುವುದು ತೀರ್ಥಹಳ್ಳಿ ನಗರ ಭಾಗದಲ್ಲಿ ಜಾರಿಯಲ್ಲಿದೆ.

ಲೇಖಕರು ತಮ್ಮ ಮನೆಯ ಪರಿಸರದಲ್ಲಿ ಬೇಟೆಯನ್ನಾಡುವುದನ್ನು ಕಲಿತು ನಾನಾ ಬಗೆಯ ಪ್ರಾಣಿ, ಪಕ್ಷಿ, ಮೊಲ, ಹುಲಿ, ಕಾಟಿ, ಮತ್ತು ಆನೆಯಂಥ ಬಲಿಷ್ಠ ಕಾಡುಮೃಗಗಳನ್ನುಳ್ಳದು, ಏಡಿ

ಶಿಕಾರಿ, ಮೀನು ಶಿಕಾರಿ, ಪಕ್ಷಿ ಶಿಕಾರಿ, ಪ್ರಾಣಿ ಶಿಕಾರಿ ಮತ್ತು ಜೇನು ಶಿಕಾರಿ ಗಳೆಂಬ ೫ ಅಧ್ಯಯಗಳಲ್ಲಿ ವಿವಿಧ ಬೇಟೆಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಚಿತ್ರಿಸಿತೋರಿಸಿದ್ದಾರೆ.

ತಂತ್ರಗಳು:

- **ಮೀನು ಶಿಕಾರಿ:** ಮೀನು ಶಿಕಾರಿಯಲ್ಲಿ ಗದ್ದೆಮೀನು ಶಿಕಾರಿ, ಗದ್ದೆನೀರೊಡೆಯುವುದು, ಕಡಹಾಕುವುದು, ಕಡ್ಲುಕಟ್ಟುವುದು, ಒಲೆ ಒಡ್ಡುವುದು, ಗುಂಡಿ ಉಗ್ಗುವುದು, ತೋಟ ಹಾಕುವುದು, ಡೈನ್‌ಮೇಟ್ ಹಾಕುವುದು, ಕತ್ತಿಯಿಂದ ಕಡಿಯುವುದು, ಗಾಳಹಾಕುವುದು, ಕಟ್ಟುಗಾಳ ಹಾಕುವುದು, ಫಿಷರ್‌ನಾಳ ಹಾಕುವುದು, ಏವು ಕಟ್ಟುವುದು ಅಥವಾ ಒಡ್ಡು ಕಟ್ಟುವದು.

- **ಪಕ್ಷಿ ಶಿಕಾರಿ:** ಪಕ್ಷಿ ಶಿಕಾರಿಯಲ್ಲಿ ಉಳ್ಳ ಒಡ್ಡುವುದು, ಹಾರುವುಳ್ಳ ಅಥವಾ ನೇಣುವುಳ್ಳ ಒಡ್ಡುವುದು, ಕಣಿ ಇಡುವುದು, ಮೇಣ ಹಾಕುವುದು ತಟ್ಟೆ ಬಿಲ್ಲಿನಿಂದ ಹೊಡೆಯುವುದು, ಕವಣೆಯಿಂದ ಹೊಡೆಯುವುದು, ಕತ್ತರಿ ಒಟ್ಟುವುದು ಗುಡುಗಳನ್ನು ಒಡೆಯುವುದು.

- **ಸುಡಕ್ಕಿ ಬೇಟೆ:** ಬಲೆಹಾಕುವುದು, ಕೋವಿಯಿಂದ ಹೊಡೆಯುವುದು, ಕಾಡುಕೋಳಿ ಶಿಕಾರಿ, ಸಾರಿಕೆ ಶಿಕಾರಿ, ಕುಳಿತ ಕೋಳಿ, ಹಾರಿಸಿ ಹೊಡೆಯುವುದು, ಮರಸುಕೋಳಿ ಹೊಡೆಯುವುದು, ಉಳ್ಳಿಒಡ್ಡುವುದು, ತಟ್ಟೆ ಇಡಿಚಲು ಒಡ್ಡುವುದು.

- **ಪಕ್ಷಿ ಬೇಟೆ** : ಜಿಂಕೆ, ಸಾರಂಗ, ಕಾಡುಕುರಿ, ಕಡುಮುಂಗಿಸಿ, ಕಬ್ಬೆಕ್ಕು, ಹಾರು ಬೆಕ್ಕು, ಪುಣಿಗನ ಬೆಕ್ಕು, ಬರ್ಕನ ಬೆಕ್ಕು, ಸೇಂದಿಬೆಕ್ಕು, ಕಣಿಹಂದಿ, ಮುಳ್ಳುಹಂದಿ, ಚಿಪ್ಪಗನಹಂದಿ, ಕೆಂದಳಿಲು, ಬೆಟ್ಟಿಳಿಲು, ಬೆಟ್ಟಣ್ಣಸ ಉಡ, ಕೋತಿ ಹೆಗ್ಗಣ, ಇಲಿ, ಹುಳ್ಳೆನರಿ, ಕಂಕನರಿ, ನರಿ, ಬೊಳ್ಳು, ಮುಳ್ಳಿಲಿ, ಬಾವಲಿ, ಪಿಳ್ಳೆನಾಯಿ, ಆಳುಗುಸು, ಮುಸಿಯಾ, ಕರಡಿ, ಕಾಡೆಮ್ಮೆ, ಕಾಡುಕೋಣ, ಕಾಟಿ, ದೊಡ್ಡು, ಕಾಡುಹಂದಿ, ಹುಚ್ಚುಗುಳ್ಳೆನರಿ, ಕಿರುಬ, ಮಂಡಲದ ಹಾವು, ಎರಡು ತಲೆ ಹಾವು ಬೆಳ್ಳಿನಾಗರ, ಹಳ್ದಿನಾಗರ, ತಾಳೆಹಾವು, ಹಸರು ನಾಗರ, ಕೊಳಚು ಮಂಡಲ, ಹೆಬ್ಬಾವು, ಬುಲಾರಿಬುಡ್ಡ, ಹಾವುರಾಣಿ, ಬೆಳ್ಳಿಕಟ್ಟುವಹಾವು, ಕಾಳಿಂಗ ಸರ್ಪ, ನಾಗರಹಾವು, ಓತಿಕ್ಯಾತ, ಗೊಸುಂಬೆ, ಕಪ್ಪಡುಸುಂಟಿ, ಬಾಲಚೇಳು, ಸಾವಿರಕಾಲು ಚೇಳು, ಮೊಸಳೆ ಇತ್ಯಾದಿ ಪ್ರಾಣಿ ಪಕ್ಷಿಗಳ ವಿವರಗಳಿವೆ. (ಪು. ೯೨ ಬೇಟೆ ಮತ್ತು ಬೇಡರು).

- **ಮರಸು ಬೇಟೆ**: ಮರಸು ಬೇಟೆ ಜನಪ್ರಿಯವಾದದ್ದು, ಮರೆಮಾಡಿಕೊಂಡು ಅಡಗಿಕುಳಿತು, ಕಾಡು ಪ್ರಾಣಿಗಳನ್ನು ಕೊಲ್ಲುವುದಕ್ಕೆ ಮರಸು ಬೇಟೆ ಎಂದು ಕರೆಯುತ್ತಾರೆ. ಗುದ್ದಿಗೆ ಹೊಗೆ ಹಾಕುವುದು, ಸಾರಿಕೆ, ಬಲೆ ಒಡ್ಡುವುದು, ಪೊಟರೆ ಒಡೆಯುವುದು, ಜಿಂಕೆ ಬೇಟೆಯ ಒಂದು

ಅಮಾನವೀಯ ವಿಧಾನ, ಇಲಿ ಶಿಕಾರಿ, ಒಡುಗು ಹೂಡುವುದು, ಬಾಲಕ್ಕೆ ನೀರನ್ನು ತುಂಬುವುದು, ಬಿಲವನ್ನು ಅಗೆಯುವುದು, ಇಲಿ ಕತ್ತರಿ ಒಡ್ಡುವುದು, ಇಲಿ ಬೋನು ಒಡ್ಡುವುದು.

- **ಹಂದಿಶಿಕಾರಿ:** ಕಂದಕ ಕಡಿಯುವುದು, ಸಿಡಿಮದ್ದು ಇಡುವುದು, ತಂತಿ ಉಳ್ಳ ಒಡ್ಡುವುದು, ನಾಯಿಗಳಿಂದ ಹಿಡಿಸುವುದು, ಇಡಿಚಲು ಹುಲಿ ಮತ್ತು ಹಂದಿ ಕಾಳಗದಲ್ಲಿ, ವಿದ್ಯುತ್ ಸ್ಪರ್ಶ ಮಾಡಿಸುವುದು.

- **ಹುಲಿಬೇಟೆ:** ಕೋವಿ ಕಟ್ಟುವುದು, ಅಟ್ಟಳಿಗೆ ಮೇಲೆ ಕುಳಿತು ಹೊಡೆಯುವುದು, ಒದರಿ ಹೊಡೆಯುವುದು, ವಿಷ ಹಾಕುವುದು, ಹುಲಿಬೋನು ಓಡ್ಡುವುದು, ಕದ್ದಿಂಗಳ ಜೇನು ಶಿಕಾರಿ ಇಂತಹ ವಿವರ ಚಿತ್ರಗಳನ್ನು ಒಡಗೊಂಡಿದೆ.

ಕೋವಿ ಎತ್ತಿ ಕಟ್ಟುವ ಕ್ರಮವು ಬಹಾಳ ಅಪಾಯಕಾರಿ ಮೃಗಗಳ ಬಾಧೆಯನ್ನು ತಡೆಯಲಾರದೆ ಅದಕ್ಕೂ ಜನರು ಹಿಂದೆಗೆಯುತ್ತಿರಲಿಲ್ಲ. ಈ ವಿಧಾನವನ್ನು ಅನುಸರಿಸುವುದು ಪ್ರಾಣಾಪಾಯವನ್ನು ಉಂಡು ಮಾಡುವಂಥದಾದ್ದರಿಂದ ಸರಕಾರವು ಇದನ್ನು ನಿಷೇಧಿಸಿತು, ಇದು ಪತ್ತೆಯಾದರೆ ಇದಕ್ಕಾಗಿ ಪರವಾನಿಗೆ ಇಲ್ಲದ ಕೋವಿಗಳನ್ನು ಉಪಯೋಗಿಸಿ ಯಾರಾದರೂ ತನಿಖಾಧಿಕಾರಿಗಳ ಕೈಯಲ್ಲಿ ಸಿಕ್ಕಬಿದ್ದಾಗ ಕೋವಿಯು ತನ್ನದಲ್ಲವೆಂದು ಸಾಧಿಸುತ್ತಿದ್ದರು. ಇದೊಂದು ತುಂಬಿಸುವ ಕೋವಿಯಿಂದ ಸ್ವಯಂ ಚಾಲಿತವಾಗಿ ಮೃಗಗಳನ್ನು ಈ ಕಸುಬುದಾರರು ಇದಕ್ಕೆ ಉಪಯೋಗಿಸುತ್ತಿದ್ದರು, ಈ ಕೋವಿಗೆ ಬೇಕಾದ ಮದ್ದು ಗುಂಡನ್ನು ತುಂಬಿಸಿ ಒಳ್ಳೆಯ ಕೇಪನ್ನು ನಿಪ್ಪಲಿಗೆ ಇಟ್ಟು ಕೋವಿಯ ಕುದುರೆಯನ್ನುಯೆತ್ತಿ ನಿಲ್ಲಿಸಿ ಕತ್ತು (ಟ್ರಿಗರ್)ಗೆ ಉದ್ದವಾದ ಹರಿನೂಲನ್ನು ಕಟ್ಟಿ ಮೃಗವು ಬರುವ ಉದ್ದಗಲವನ್ನು ಕಂಡು ನಿರ್ದರಿಸಿ ಆ ಅಳತೆಯಂತೆ ಹಿಂದಿನ ದಿನ ಬಂದ ಮೃಗದ ಹೆಜ್ಜೆಯಿಂದ ಎಂದು ಅರಿತು ಅಡಿಗೆ ಅಂಗುಲವೆಂಬ ನಿಯಮದಂತೆ ತುಂಬಿಸಿದ ಕೋವಿಯನ್ನು ಸಜ್ಜುಗೊಳಿಸಿ ಅದನ್ನು ನೀಳವಾಗಿ ಎರಡು ಕಂಬಗಳಿಗೆ ಬಿಗಿದು ಸಿದ್ದಗೊಳಿಸಿಟ್ಟು, ಬೇರೆ ಸ್ಥಳದಿಂದ ಮೃಗಗಳನ್ನು ಹೆದರಿಸುತ್ತಿದ್ದರು.[೧೫] ಒಟ್ಟಾರೆಯಾಗಿ ಬೇಟೆ ಯಾಡುವ ಕಸುಬೆ ಅಪಾಯಕಾರಿ ಕಸುಬಾಗಿತ್ತು. ಕಾಡಿನಲ್ಲಿ ನಿಂತು ಬೇಟೆ ಯಾಡುವದೆಂದರೆ ಸುಲಭವಲ್ಲ ಒಬ್ಬ ಬೇಟೆಗಾರನು ಕೋವಿ ಹಿಡಿದು ಕೊಂಡು ಬೇಟೆಗೆ ಸಿದ್ದನಾಗಿ ಎದುರಿಗೆ ಬರುವ ಪ್ರಾಣಿಯನ್ನು ಕಲ್ಲುವ ದೈರ್ಯಬೇಕು ಒಂದುವೇಳೆ ದೈರ್ಯ ಇಲ್ಲದಿದ್ದರೆ ಆ ಬೇಟೆಗಾರನ ಸಾವು ಖಂಡಿತ ದೈರ್ಯ ಇದ್ದು ಕೋವಿಯಿಂದ ಪ್ರಾಣಿಗಳಿಗೆ ಗುಂಡು ಹೊಡೆಯದ ಹೆದರು ಬುರಕರು ಇರುವುದುಂಟು ಆ ಭಯವನ್ನು ಹೊರಡುವ ಮುನ್ನವೇ ಮನೆಯಲ್ಲಿ ಬಿಟ್ಟು ಹೋಗಿರಬೇಕು. ಬೇಟೆಗೆ ಹೋದವನಿಗೆ "ನಾಡು ದೂರವಾಗಿ ಕಾಡು ಹತ್ತಿರವಾಗುತ್ತದೆ." ಆದರೆ ಆ ಬೇಟೆಗಾರ ಕಾಡಿಂದ ಬೇಟೆ ಮಾಡಿಕೊಂಡು ನಾಡಿಗೆ ಮರಳುವ ತಂತ್ರಗಾರಿಕೆಯನ್ನು

ಕಲಿತುಕೊಂಡಿರಬೇಕಾಗುತ್ತದೆ. ಬೇಟೆಗಾರನಾದ ಮೇಲೆ ಅಡವಿಯಲ್ಲಿ ಒಂದಿರುಳೇಕೆ ವಾರಗಟ್ಟಲೆ ಕಳೆಯ ಬೇಕಾಗುತ್ತದೆ. ತಾನು ಆಶಿಸಿದ ಬೇಟೆಯನ್ನು ಬಲಿ ತೆಗೆಯುವವರಿಗೆ ನಿಮಿಷ ನಿಮಿಷಕ್ಕು ತನ್ನ ಜೀವವನ್ನು ಪಣವಾಗಿಟ್ಟು ಕಾಲ ಕಳೆಯ ಬೇಕಾಗುತ್ತದೆ.[೧೬]

ಬೇಟೆಗಳು :-

೧. **ಒಕರಿಕೆ(ಸಾರಿಕೆ)ಬೇಟೆ:**

ಪ್ರಾಣಿಗಳು ಎಲ್ಲಿ ಅಡಗಿರಬಹುದೆಂದು ಗುರುತು ಮಾಡಿ ನಂತರ ಬೇಟೆಗೆ ಸುರುಮಾಡುತ್ತಾರೆ ಮಲೆನಾಡಿನ ಜನ ಹಂದಿಯ ಕಾಟ ತಾಳಲಾರದೆ ಅದರ ಹೆಜ್ಜೆಯ ಜಾಡಿನ ಮೇಲೆ ಅಲ್ಲದೆ ಅದರ ಕೆಸರು ಎಷ್ಟೆತ್ತರದ ಗಿಡಗಳಿಗೆತಾಗಿದೆ. ಅವು ದಾರಿಯಲ್ಲಿ ಸಾಗುವಾಗ ಮರಗಿಡಗಳಿಗೆ ಮೈ ಉಜ್ಜಿರುತ್ತವೋ ಅವರ ಪ್ರಕಾರ ಹಂದಿ ಎಷ್ಟುದೊಡ್ಡದು ಎಷ್ಟೇತ್ತರ ಇದೆ ಪತ್ತೆ ಹಚ್ಚಿ ಊರಿನವರಿಗೆ ಶಿಕಾರಿ ಆಸಕ್ತಿ ಇರುವವರಿಗೆ ಸುದ್ದಿ ತಿಳಿಸಿ ಅದೇ ರೀತಿ ಶಿಕಾರಿ ಮಾಡುವ ಆಸಕ್ತಿ ಇರುವ ಬೇರೆ ಊರಿನ ಜನರಿಗೆ ಸುದ್ದಿ ತಿಳಿಸಿ ಅಲ್ಲೆ ಒಂದೆಡೆ ಸೇರುತ್ತಾರೆ. ಅಲ್ಲಿಂದ ಮುಂದೆ ಎಷ್ಟು ಜನರಿದ್ದಾರೆ, ಎಷ್ಟು ಕೋವಿಗಳಿವೆ ಯಾರ್‍ಯಾರು ಯಾವ ಕಡೆಯಿಂದ ಬಂದು ಒದರಬೇಕು ಎಂದು ನಿಶ್ಚಯಿಸುತ್ತಾರೆ. ಉಳಿ ನಿಲ್ಲುವವರನ್ನು ಕಳಿಸಿದ ಮೇಲೆ ಒದರಲು ಪ್ರಾರಂಭಿಸುತ್ತಾರೆ. ಒದರುವುದು ಎಂದರೆ ರಾಜಬೇಟೆ ಎಂತಲು ಕರೆಯುತ್ತಾರೆ.[೧೭]

ಬೇಟೆಗೆ ಬಂದ ಎಲ್ಲಾ ಎರಡು ಮೂರು ತಂಡಗಳಾಗಿ ಒಂದೇ ಸಾಗಿಗೆ ಕಾಡಿನ ಒಳಗೆ ನುಗ್ಗಿ ಕಲ್ಲು ಬಿಸಾಡುತ್ತಾ ಒಣ ಮರ ಬಗನೆ ಮರಗಳನ್ನು ಬಡಿದು ಶಬ್ದಮಾಡುತ್ತಾ ಜೋತೆಗೆ ನಾಯಿಗಳು ಬೇರೆ ಬಗಳುವುದರ ಜೊತೆ ತಾವು ಬಾಯಿಂದ ಹಡಿ, ವೂ, ಕುರ್‍ರೋ, ಅಹಾ ಇಲ್ಬಂತು, ಇಲ್ಲ ಹೆಜ್ಜೈತಿ, ಈಗ ಹೋಗ್ಯಾವೆ, ಇಲ್ಲೆ ಹೂತಾವೆ, ಕುರ್‍ರೋ, ಕುರ್‍ರೋ ಎಂದು ನಾಯಿಯನ್ನು ಕರೆಯುತ್ತಾ ಜೋರಾಗಿ ಒದರಲು ಪಕ್ಕದವರಿಗೆ ಹೇಳುತ್ತಾರೆ ಹಡಿ, ಹಡೀಡಿ, ಹಡೀಡಿಡಿ, ಎಂದು ಅಬ್ಬರಿಸುತ್ತಾ ಇಡೀ ಕಾಡೆಲ್ಲ ನಡಗುವಂತೆ ಅಬ್ಬರಿಸುತ್ತಾರೆ. ಆ ಶಬ್ದಕ್ಕೆ ಪ್ರಾಣಿ ಹೆದರುತ್ತವೆ, ಪಟಾಕಿಯನ್ನು ಸಿಡಿಸುತ್ತಾರೆ. ವಾಸನೆ ಹಿಡಿದ ನಾಯಿಗಳು ಬೋಗಳುತ್ತವೆ. ಆ ಶಬ್ದಕ್ಕೆ ಪ್ರಾಣಿಗಳೆಲ್ಲ ಮೂಗಿನ ಹೊಳ್ಳೆ ಅರಳಿಸಿ ಕಿವಿ ನಿಮಿರಿಸಿ ಎದ್ದು ಓಡಲಾರಂಬಿಸುತ್ತವೆ, ಇದನ್ನು ಕಂಡ ಬೇಟೆಗಾರರು ತಮ್ಮಲ್ಲಿದ್ದವರಿಗೆ ವದರ್‍ಲೆ ಎಂದು ಅಬ್ಬರಿಸುತ್ತಾರೆ (ಹೇಳುತ್ತಾರೆ). ಪ್ರಾಣಿಯ ಸುಳಿವುಕಂಡ ತಕ್ಷಣ 'ಢಂ' ಎಂದು ಗುಂಡನ್ನು ಸಿಡಿಸುತ್ತಾರೆ. ಆ ಪೆಟ್ಟು ತಾಗಿರದಿದ್ದರೆ ಪ್ರಾಣಿ ಮುಂದೆ ಸಾಗುತ್ತದೆ. ಕೆಲವೊಮ್ಮೆ ಕಿಲೋಮೀಟರ್ ವರೆಗೂ ಸಾಗಿ ಸಾಯುತ್ತದೆ. ಕೆಲವೊಮ್ಮೆ ಪಕ್ಕದ ಕಾಡಿನಲ್ಲಿ ಹೋಗಿ ತಪ್ಪಿಸಿಕೊಳ್ಳುತ್ತದೆ. ಆದರೇ ಇದರ ಹಿಂದೆ ಸಾಗುವ ನಾಯಿಗಳು ಜೋತೆಗೆ ಬೇಟೆಗಾರ ದೂರ ದೂರ ಸಾಗಿ ಮತ್ತೆ ಆ ಪ್ರಾಣಿಗೆ ಗಾಯಮಾಡಿ ಸಾಯಿಸುತ್ತಾನೆ.

"ನಮ್ಮ ಕಾಡಲ್ಲಿ ಕೆಪ್ಪನ್ ಹಿಂಡು ಅಂತ ನಾಯಿತರ ಇರೋ ಪ್ರಾಣಿಗಳಿವೆ ಅವು ಕಾಡು ನಾಯಿಗಳೇ ನರಿಗಿಂತ ದೊಡ್ಡದಾಗಿ ಗುಂಪು ಗುಂಪಾಗಿರುತ್ತವೆ. ಒಂದೊಂದು ಗುಂಪಲ್ಲಿ ೩೦-೪೦ ಇರೋದನ್ನು ನೋಡಿದವರಿದ್ದಾರೆ. ಅವೇನೂ ಅಷ್ಟೆ ಇರಬೇಕಾಗಿಲ್ಲ. ಮೂರ್ನಾಲ್ಕು ಇದ್ರು ಸಾಕು ಕಡವೆ ಕುರಿ ಕಾಡಂದಿ ಹಿಡಿತಾವೆ. ಅವು ಎಷ್ಟು ಜೋರು ಅಂತಂದ್ರೆ ಹುಲಿಗಿಂತ ಜೋರು, ಹುಲಿ ಬೇಟೆಮಾಡಿ ಇಟ್ಟುಕೊಂಡ ಪ್ರಾಣಿಗಳ ದೇಹವನ್ನು ದಬಾಯಿಸಿ ಕಿತ್ತು ಕೊಳ್ಳುತ್ತವೆ. ಹುಲೀನ ಹೆದರಿಸಿ ಮರ ಹತ್ತುಸ್ತವೆ. ಹುಲಿಯಾದ್ರು ಒಂದು ವೇಳೆ ಪ್ರಾಣಿಯನ್ನು ಬೇಟೆ ಮಾಡಿದರೆ ಮೊದಲು ಕುತ್ತಿಗೆ ಕಚ್ಚಿ ಸಾಯಿಸಿ ನಂತರ ರಕ್ತ ಕುಡಿದು ಹಸಿವಾದಂತೆಲ್ಲಾ ತಿನ್ನುತ್ತವೆ ಇವು ಹಾಗಲ್ಲ ಇವಕ್ಕೆ ಹಸಿವಾದರೆ ಇಣ್ಣಿಗೆ ಬಿದ್ದ ಕಡವೆ ಜಿಂಕೆ, ಕುರಿ, ಇತ್ಯಾದಿ ಪ್ರಾಣಿಗಳನ್ನು ಓಡಿಸಿ ಓಡಿಸುತ್ತಲೇ ಕಿತ್ತು ತಿನ್ನುತ್ತವೆ.[೧೮]

ಗೋವಿಂದ ಮತ್ತು ಸಿದ್ಧ ಕಾಡಿಗೆ ಬೇಟೆಗಾಗಿ ಹೊರಟರು ಗೋವಿಂದ ಹೆಡಲೈಟ್ ಧರಿಸಿದ್ದರೆ, ಸಿದ್ದನ ಕೈಯಲ್ಲಿ ಕಾಲು ಬೆಳಕಿಗೆ ಲಾಟೀನು ಮಾತ್ರ ಇತ್ತು. ಆಳೆತ್ತರ ಬೆಳೆದ ಹುಲ್ಲಿನ ಮಧ್ಯ ನಡೆದುಕೊಂಡು ಹೊಗುತ್ತಿದ್ದರೆ ಸಿದ್ದನ ಕಾಲು ಬೆಳಕಿನ ಲಾಟೀನು ಸಣ್ಣಗೆ ಉರಿಯುತ್ತದೆ. ಸಮೀಪದ ನೀರಸಧ್ಲಿನಲ್ಲಿ ನೀರು ಹರಿಯುವ ಶಬ್ದಾಕೇಳುತ್ತಿದೆ. ಇಬ್ಬರೂ ಮಾತನಾಡದೆ. ನೀರಸರ್ಲಿಗೆ ಕಾಡು, ಕುರಿ, ಯಾವುದಾದರೂ ಪ್ರಾಣಿ ನೀರು ಕುಡಿಯಕ್ಕೆ ಅಂತ ಬಂದವು ಎಂದು ಹೆಜ್ಜೆ ಹಾಕುತ್ತ ನಡೆದರು.

ಗೋವಿಂದ ಪ್ರಾಣಿಗಳು ಇರುವ ಅಂದಾಜಿಗೆ ಲೈಟುಬಿಟ್ಟ ಅವನಿಗೆ ಅವನ ಲೈಟು ಬೆಳಕಿಗಿಂತ ಪ್ರಕಾಶಮಾನವಾದ ಎರಡು ಲೈಟು ಕಣ್ಣಿಗೆ ಬಿದ್ದಂಗಾತು. ನೋಡ್ತಾನೆ ಹುಲಿ ಅವನ ಟಾರ್ಚ ಬೆಳಕಲ್ಲಿ ಅದರ ಬಣ್ಣ ದ್ವಿಗುಣವಾಗಿ ಕಾಣ್ತು ಗೋವಿಂದ ಎಷ್ಟು ವರ್ಷದಿಂದ ಶಿಕಾರಿ ಮಾಡ್ತಿದ್ದರು ಅವನನ್ನು ಯಾವತ್ತೂ ಹುಲಿ ಎದುರು ಗೊಂಡಿರ್ಲಿಲ್ಲ, ಹುಲಿ ಕಣ್ಣುಗಳು ಹೊಳೆಯುವುದನ್ನು ನೋಡಕ್ಕಾಗದೆ ಗೋವಿಂದ ಟಾರ್ಚ ಕೆಡಿಸಿದ ಅವನಿಗೆ ಕಂಡಿದ್ದು ಹೆಬ್ಬುಲಿ, ಅದು ಇವರ ಮೇಲೆ ಹಾರಕ್ಕೆ ತಯಾರಾಗಿ ಬಾಲ ಸುರುಳಿಗಟ್ಟಿತ್ತಾ ಕೂತಿದೆ. ಇನ್ನೇನು ಇವರ ಮೇಲೆ ಹಾರಿದ್ರೆ ಸೈ ಗೋವಿಂದ ಸಿದ್ದನಿಗೆ ಲಾಟೀನು ಇಲ್ಲೇ ಕೈಬಿಡು ಎಂದು ಪಿಸುಗುಟ್ಟಿದ ಶಿಕಾರಿಗಾರರು ಏನು ಶೀಕಾರಿ ನಿಯಮ. (ಪು ೨೫೦) ಗೋವಿಂದ ಸಿದ್ದನನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ; ಆದರೇ ಅಂದು ಸಿದ್ದನನ್ನು ೧೦-೧೫ ಅಡಿ ದರದರನೆ ಎಳೆದು ದೂರ ಬಿಸಾಡಿದ ಅಲ್ಲಿ ಏನು ನಡೆಯುತ್ತಿದೆ ಅನ್ನೋದು ಸಿದ್ದಂಗೆ ಗೊತ್ತಾಗಲಿಲ್ಲ ಆದರೇ ಏನೋ ಎಡವಟ್ಟು ಆಗಿದೆ ಅನ್ನೊ ಅಂದಾಜಾಯ್ತು ಆಗ ಸಿದ್ದ 'ಢಂ' ಅಂತ ಈಡು ಹಾರಿಸಿದ ಶಬ್ದ ಭೂಮಿಯೇ ಬಾಯಿ ಬಿಟ್ಟಂತೆ ತಲೆಗೆ ಸಿಡಿಲು ಹೊಡೆದಂತಾಯಿತು. ಆ ಶಬ್ದಕ್ಕೆ ಗೋವಿಂದನ ಮೈಮೇಲೆ ಉಚ್ಚೆ ಹೊಯ್ದಿದ್ದನು. ಅದಕ್ಕೆ ಗೋವಿಂದ ಹಾಳಾದೋನೆ ಉಚ್ಚೆ ಹುಯುದ್ಯೇನೊ ಎಂದು ಗದರಿಸಿ ಸ್ವಲ್ಪ ಸಮಯದ ನಂತರ ಸಿದ್ಧ ಹೇಳಿದಕ್ಕೆ

ಗೋವಿಂದ ಹುಲಿ ಹೋಡೆದೆ ಹೆಬ್ಬುಲಿ ಎಂದು ಹೇಳಿದನು. ಇಲ್ಲಿ ಬೇಟೆ ಯಾಡುವಾಗ ಸಂಭವಿಸುವ ಅನಾಹುತಗಳನ್ನು ಅರಿಯಬಹುದಾಗಿದೆ ಗೋವಿಂದನೇನೋ ಧೈರ್ಯವಂತ. ಆದ್ದಂದ ಭಯಪಡದೆ ಜೊತೆಗಾರನಿಗು ತಿಳಿಸದೇ ಈಡುಹೊಡೆದಿದ್ದನ್ನು ಕಂಡರೆ ಗೋವಿಂದ ಬೇಟೆಯಲ್ಲಿ ನಿಪುಣ ಆದರೇ ಪಾಠದ ಕೊನೆಯಲ್ಲಿ ಮಂಗಗಳ ಬೋನಿನೊಳಗೆ ಸಿಕ್ಕು ಒದ್ದಾಡುವುದನ್ನು ಕಂಡರೆ ಅನಾಹುತಗಳು ಸಂಭವಿಸುವ ಗಳಿಗೆ ಬೇಟೆಗಾರನಿಗೆ ತಿಳಿಯದಾಗಿರುತ್ತದೆ.

"ಮಣ್ಣುಳಿಯಲ್ಲಿ ಚಂದ್ರೇಗೌಡ ಅಂತ ಒಬ್ಬರಿದ್ರು ಅವರು ಮಲೆನಾಡಿನ ಹಸಿರು ಕ್ರಾಂತಿಯ ಹರಿಕಾರ ಕಾಲೇಜ್ ಬಿಟ್ಟು ಬರುತ್ತಿದಂತೆ ರಸಗೊಬ್ಬರ ಹೈಬ್ರಿಡ್ ಬೀಜ ಬಂದಿತ್ತು ಹೊಳೆಗೆ ಪಂಪುಹಾಕಿ ತರಕಾರಿ ಬೆಳೆಯಲು ಕೃಷಿ ವಿಜ್ಞಾನಿಗಳು ಅವರಿಗೆ ಸಲಹೆ ಕೊಟ್ಟರು ಇಷ್ಟು ಮಾಡಿದರೆ ಇಷ್ಟುಲಾಭಸಿಗುತ್ತೆ ಎಂದು ಹೇಳಿದ್ದನ್ನು ಕೇಳಿ ಚಂದ್ರೆಗೌಡ್ರು ಮಾಡಿದ್ದು ಅವನ ಗ್ರಹಚಾರ ಚೆನ್ನಾಗಿತ್ತು ಯಥೇಚ್ಚ ತರಕಾರಿ ಬೇಳೆಯಿತು. ಆದರೇ ಯಾವ ಊರಿನ ಸಂತೆಗೆ ತಗೊಂಡೊಂದ್ರು ಅಸಲಿಗೆ ಕೇಳ್ತಿರಲಿಲ್ಲ ರಾಶಿ ರಾಶಿ ಕೊಳೆಯುತ್ತಿತ್ತು. ಈ ರೀತಿ ತರಕಾರಿ ಹಂದಿ ಬೆಳೆದರೆ ಲಾಭ ಅಂತ ಸಲಹೆ ಕೊಟ್ರು ಇಲ್ಲಿ ರೈತರಿಗೆ ಭೂಮಿಯ ಫಲವತ್ತತೆ ಬಳಸುವ ರಸಗೊಬ್ಬರಗಳು ನೇಡುವ ಬೇಳೆಗಳನ್ನು ಕುರಿತ ಮಾಹಿತಿ ರೈತರಿಗೆ ಕೊಡುವುದರ ಮೂಖೇನ ರೈತರಲ್ಲಿ ಒಳ್ಳೆಯ ಫಲವತ್ತಾದ ಬೇಳೆತೆಗೆಯಲು ಸಲಹೆಕೊಡುವದಾಗಿದೆ.

ಬೇಟೆಗೆ ಹೋಗುವ ಮೊದಲು ಎಲ್ಲಾ ಬೇಟೆಗಾರರು ಒಂದಾಗಿ ಇಂತಹ ಮೃಗಾಯ ಚಿತ್ರಗಳನ್ನು ಪೂಜಿಸುತ್ತಿದ್ದರು. ಅನಂತರ ಅವರೆಲ್ಲರೂ ಅನುಕ್ರಮವಾಗಿ ಆ ಚಿತ್ರದ ಮೇಲೆ ಬಾಣದಿಂದ ಚುಚ್ಚಿ ಆ ಪ್ರಾಣಿಯೆ ತನ್ನ ಕೈಯಲ್ಲಿದೆ ಎಂದು ಭ್ರಮಿಸಿ ಬೇಟೆಗೆ ಹೋಗುವ ಸಂಪ್ರದಾಯವಿದೆ.[೧೯] ಸಹಜವಾಗಿ ಬೇಟೆಗೆ ಹೋಗುವಾಗ ಮನೆಯಲ್ಲಿನ ಹಿರಿ ತಲೆಯ ಒಪ್ಪಿಗೆ ಪಡೆದು ಹೋಗಬೇಕಾಗುತ್ತದೆ. ಆ ಬೇಟೆಗಾರನಿಗೆ ಬೇಟೆ ಸಿಗುತ್ತೊ ಬಿಡುತ್ತೊ ಗೊತ್ತಿಲ್ಲ ಆದರೆ ಬೇಟೆ ಸಿಗುವ ಭರವಸೆಯನ್ನು ಇಟ್ಟುಕೊಂಡು ಬೇಟೆಗೆ ಹೋಗುತ್ತಾನೆ.

ಜಿಂಕೆಯ ಧರ್ಮವನ್ನು ತೊಟ್ಟು ಅದರದ್ದೆ ಮೊಗವಾಡ ಧರಿಸಿ ಅದರದ್ದೆ ಕೊಂಬನ್ನು ಹೊತ್ತು ಕುಣಿದಂತೆ ಚಿತ್ರಗಳಿವೆ. ಕೈಯಲ್ಲಿ ಚಿತ್ರ ಕೆತ್ತಿದ ಒಂದು ಮಂತ್ರದ ಕಡ್ಡಿ ಮತ್ತು ಕೊಲಿದೆ. ಇದರಂತೆ ಮಾಡುವವರು ಇದ್ದಾರೆ. ಹೀಗೆ ಅವರು ತಮ್ಮ ಬೇಟೆಯ ಪ್ರಾಣಿಯೊಂದರ ಸತ್ವವನ್ನು ತಮ್ಮಲ್ಲೆ ತುಂಬಿಕೊಂಡು ಪೂಜೆಯ ಕುಣಿತ ತಮಗೆ ವಶವಾಗುತ್ತವೆ ಎಂಬ ನಂಬಿಕೆಯಿದೆ.[೨೦] ಈ ರೀತಿಯಲ್ಲಿ ಬೇಟೆಗಾರನು ಪ್ರಾಣಿಯನ್ನು ಪಡೆಯಲು ಹಗಲು ಇರುಳೆನ್ನದೆ ಕಾಯುತ್ತಲೆ ಇರುತ್ತಾನೆ.

ಮಧ್ಯ ಸೆಲಿಬಿಸ್ ದ್ವೀಪದ ಬೇಟೆಗಾರರು ಜಿಂಕೆಗಳ ಮತ್ತು ಹಂದಿಗಳ ದವಡೆ ಮೂಳೆಗಳನ್ನು ತಮ್ಮ ಮನೆಯಲ್ಲಿ ನೇತು ಹಾಕುವುದರಿಂದ ತಾವು ಬೇಟೆಗೆ ಹೊದಾಗ ಅವು ಸುಲಭವಾಗಿ ಸಿಗುತ್ತವೆ

ಎಂಬ ನಂಬಿಕೆ ಇದೆ. ಮನುಷ್ಯ ತನಗೆ ಅವಶ್ಯಕವಾಗಿ ಬೇಕಾದದ್ದನ್ನು ಇಂತಹ ಕೆಟ್ಟ ನಾಂಬಿಕೆ ಕಡೆಗೆ ವಾಲುತ್ತಿರುವದನ್ನು ಕಾಣಬಹುದಾಗಿದೆ.

ಮತ್ತೊಂದೆಡೆ "ಗಂಡ ಬೇಟೆಗೆ ಹೋದಾಗ ಹೆಂಡತಿ ನೂಲುವುದರಿಂದ ಪ್ರಾಣಿಯು ಬೇಟೆಗಾರನನ್ನು ಸುತ್ತಿಸಿ ಸುತ್ತಿಸಿ ಪರಾರಿಯಾಗುತ್ತದೆಂಬ" ನಂಬಿಕೆ ಕಾರ್ವೆಥಿಯನ್ ಗುಡ್ಡಾ ಗಾಡುಗಳ ಜನರಲ್ಲಿನ ಮೂಡನಂಬಿಕೆ ಯಾಗಿದೆ. ಗಂಡ ಬೇಟೆಗೆ ಹೋಗುವುದಕ್ಕು ಹೆಂಡತಿ ಮನೆಯಲ್ಲಿ ಕೂತು ನೂಲುವುದಕ್ಕು ಏನು ಸಂಬಂಧವಿದೆ ಈ ವಾಕ್ಯವು ನಮ್ಮ ಕನ್ನಡ ಸಾಹಿತ್ಯದ ವಚನಕಾರರ ವಚನ ನೆನಪಿಗೆ ಬರುತ್ತದೆ. "ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿದೆತ್ತ ಸಂಬಂಧವಯ್ಯ" ಎಂಬ ವಚನವು ದೇವರ ದಾಸಿಮಯ್ಯನ ನುಡಿದಂಡುಗವನ್ನು ಎತ್ತಿತೋರಿಸಿದೆ. ಈ ನಂಬಿಕೆಯು ನಮ್ಮ ಜನಪದರ ಗಾದೆಯಂತೆ "ಅಜ್ಜಿಗೆ ಮೊಮ್ಮಗಳ ಚಿಂತೆ ಆದ್ರೆ ಮೊಮ್ಮಳಿಗೆ ಮಿಂಡ್ರ ಚಿಂತೆ" ಎಂಬತಾತು ಈ ಮೂಡ ನಂಬಿಕೆಗಳು.

ಆನೆ ಬೇಟೆಗೆ ಹೋದ ಸಮಯದಲ್ಲಿ ಕೂದಲು ಕತ್ತರಿಸಿಕೊಳ್ಳಬಾರದೆಂದು ಮೈಗೆ ಎಣ್ಣೆಹಚ್ಚಿಕೊಳ್ಳಬಾರದೆಂದು, ಲಾವೋಸ್‌ನ ಬೇಟೆಗಾರ ಮೊದಲೆ ಎಚ್ಚರಿಕೆಯನ್ನು ನೀಡುತ್ತಾನೆ.[೨೧] ಮುಳ್ಳುಹಂದಿಯ ಚಪ್ಪಟೆ ಮೂಳೆಯೊಂದನ್ನು ಬೆಂಕಿಯ ಮೇಲೆ ಹಾಕಿ ಅದರಿಂದ ಹೋರಬರುವ ಬಣದಿಂದ ಹಂದಿಬೇಟೆ ಜಯಪ್ರದವಾಗುತ್ತದೆಯೇ ಇಲ್ಲವೋ ಎಂದು ಉತ್ತರ ಅಮೇರಿಕಾದ ಜನ ತೀರ್ಮಾನಿಸುತ್ತಾರೆ.

ಮಂಗನ ಬ್ಯಾಟೆ ಮಲೆನಾಡ ಪರಿಸರ ಕಥನವನ್ನು ಓದುತ್ತ ಹೋದಂತೆಲ್ಲ ಕುಂ.ವಿರಭದ್ರಪ್ಪರ ಬೇಟೆ ಕಥೆಯಲ್ಲಿನ ಸಂದರ್ಭಗಳು ನೆನಪಾಗುತ್ತವೆ. ವಿಠಲ ಹೆಗ್ಗಡೆರ ಮಂಗನ ಬ್ಯಾಟೆ ಕಥನದಲ್ಲಿ ಮಂಗನ ಬ್ಯಾಟೆಯನ್ನೆ ವಿಶಿಷ್ಟವಾಗಿ ಎತ್ತಿ ತೋರಿಸಿಕೊಟ್ಟಿದ್ದಾರೆ. ಆದರೇ ಕು.ವೀರಭದ್ರಪ್ಪ ಅವರ ಬೇಟೆ ಕಥನದಲ್ಲಿ ಚಿರತೆಯ ಬ್ಯಾಟೆಯ ಜೊತೆಗೆ ಮನುಷ್ಯ-ಮನುಷ್ಯರ ಬ್ಯಾಟೆಯನ್ನು ಎತ್ತಿತೋರಿಸಿದ್ದಾರೆ. ಇಲ್ಲದೇ ಮಂಗನ ಬ್ಯಾಟೆಯ ಕಥನದಲ್ಲಿ ಸಿದ್ದನ ಸಾಹಾಸಲೀಲೆಗಳನ್ನು ಚಿತ್ರಿಸಿದ್ದಾರೆ. ಅದರಂತೆಯೆ ಕು.ವೀರಭ್ರದಪ್ಪರು ಕೂಡ ಚಂದ್ರನ ಸಾಹಾಸಲೀಲೆಗಳನ್ನು ಓದುಗರ ಮನಮುಟ್ಟುವಂತೆ ಚಿತ್ರಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮಂಗನ ಬ್ಯಾಟೆಯಲ್ಲಿ ಸಿದ್ದನು ಗೌಡರ ಮನೆ ಆಳಾಗಿ ದುಡಿದು ಅವರ ಮೆಚ್ಚಿಗೆಗೆ ಪಾತ್ರವಾದಂತೆ ಕುಂ.ವೀರಭದ್ರಪ್ಪರ ಬೇಟೆ ಕಥೆಯಲ್ಲಿ ಚಂದ್ರನು ಗೌಡರ ಮೆಚ್ಚುಗೆಗೆ ಪಾತ್ರ ನಾಗಿರುತ್ತಾನೆ. ಎರಡು ದಿನ ಮಾಡುವ ಕಟ್ಟಿಗೆ ಹೊಡೆಯುವ ಕೆಲಸವನ್ನು ಒಂದೇ ದಿನದಲ್ಲಿ ಕಟ್ಟಿಗೆ ಹೊಡೆದು ಮೆಚ್ಚುಗೆಗೆ ಪಾತ್ರನಾಗಿದ್ದನು. ಗೌಡರ ಮಗಳು ಗೌರಿಯನ್ನು ಪ್ರೀತಿಸಿದ್ದರಿಂದ ಗೌಡರ ಪ್ರೀತಿಗೆ ಚಂದ್ರ ದೂರವಾಗುತ್ತಾನೆ. ಆದರೆ ಗೌಡರ ಮಗಳನ್ನು ಕದ್ದು ಮುಚ್ಚಿ ಒಳಗೊಳಗೆ

ಪ್ರೀತಿಸುತ್ತಿರುತ್ತಾನೆ. ಗೌರಿಯು ಕೂಡಾ ಚಂದ್ರನನ್ನು ತುಂಬಾ ಪ್ರೀತಿಸುತ್ತಿರುತ್ತಾಳೆ ಮನೆಯಲ್ಲಿ ಎಲ್ಲರ ಕಣ್ತಪ್ಪಿಸಿ ಚಂದ್ರನನ್ನು ಬೇಟಿಯಾಗಿ ಕದ್ದುಮುಚ್ಚಿ ತಮ್ಮ ಪ್ರೀತಿಯ ಹಂಬಲವನ್ನು ಹಂಚಿಕೊಂಡು ದಿನಗಳನ್ನು ಕಳೆಯುತ್ತಿರುತ್ತಾರೆ.

ಶ್ರಾವಣ ಮಾಸದಲ್ಲಿ ಗೌಡರ ಊರಿನಲ್ಲಿ ಜೂಜಾಟಗಳು ನಡೆಯುತ್ತವೆ. ಅವುಗಳಲ್ಲಿ ಬೀಜದ ತೆಂಗಿನ ಕಾಯಿಯನ್ನು ಗುದ್ದಿ ಪುಡಿಮಾಡುವುದು, ಕಲ್ಲು ಗುಂಡುಗಳನ್ನು ಎತ್ತೊಗೆಯುವುದು, ಬುಜ ಕುಣಿಸದೆ ಇರೋದು, ೫೦ ತಂಬಿಟ್ಟು ಉಂಡೆಗಳನ್ನು ತಿಂದು ಅಚ್ಚರಿಗೋಲಿಸುತ್ತಿದ್ದರು, ಹೆಣ್ಣು ಮಕ್ಕಳು ಜೋಕಾಲಿ ಜಿಕುವುದು. ಆ ದಿನ ಗೌಡರ ಮಗ ಶಿವಣ್ಣನು ೧೪ ಮಣದ ಗುಂಡು ಎತ್ತುವ ಸಿಹಿಸುದ್ದಿ ಕೇಳಿ ಊರಿನ ಜನರೆಲ್ಲ ಊರಮ್ಮನ ಬೇವಿನ ಮರದ ನೆರಳಲ್ಲಿ ನೆರೆದಿದ್ದರು. ಶಿವಣ್ಣ ಗುಂಡು ಮೊಣಕಾಲಿನ ವರೆಗೆ ಎತ್ತಿ ಕೆಳಗೆ ಬಿಸಾಕುತ್ತಾನೆ. ಅದನ್ನು ಕಂಡು ಚಂದ್ರ ನಗುತ್ತಾನೆ. ಅದಕ್ಕೆ ಗೌಡ ಗಂಡಸಾದರೆ ನೀನು ಎತ್ತು ಎಂದು ಚಂದ್ರನೊಂದಿಗೆ ಸವಾಲನ್ನು ಹಾಕುತ್ತಾನೆ. ಅದಕ್ಕೆ ಚಂದ್ರ ಎತ್ತಿದ್ರೆ ಏನುಕ್ವಡ್ತಿ? ನಾನ್ ಈ ಗುಂಡನ್ ಎತ್ತಿದ್ದೇ ಆದ್ರೆ ನಂಗೆ ನಿನ್ನ ಮಗಳು ಗೌರಿನ ಕೊಟ್ ಮದ್ವಿ ಮಾಡಬೇಕು ಅಂತ ಚಂದ್ರ ಗೌಡನೊಂದಿಗೆ ಸಾವಾಲ್‌ಹಾಕಿ ಗುಂಡನ್ನು ಎತ್ತಿ ತನ್ನ ಸಾಹಾಸಲೀಲೆಯನ್ನು ತೋರಿಸಿಕೊಳ್ಳುತ್ತಾನೆ. ಇದರಿಂದ ನೊಂದ ಗೌಡ ತನ್ನ ಶ್ರೀಮಂತಿಕೆಯ ಹಠವನ್ನೆ ಸಾಧಿಸಿ ತನ್ನ ಮಗಳನ್ನು ಚಂದ್ರನಿಗೆ ಕೊಡಲು ನೀರಾಕರಿಸುತ್ತಾನೆ. ಚಂದ್ರ ಕಂಗಾಲಾಚಿ ಬೇಡಿಕೊಂಡಾಗ ಆ ಊರಿಗೆ ಕಾಟ ಕೊಡುತ್ತಿರುವ ಚಿರತೆಯನ್ನು ಬೇಟೆಮಾಡಿ ತಂದು ಕೊಟ್ಟರೆ ನನ್ನ ಮಗಳು ಕೊಡುವೆನೆಂದು ಹೇಳುತ್ತಾನೆ ಈ ಸವಾಲಿಗೂ ಜಗ್ಗದೆ ಚಂದ್ರ ಒಬ್ಬನೆ ತನ್ನ ಪ್ರೆಯಸಿಯನ್ನು ಪಡೆಯಲಿಕ್ಕಾಗಿ ಕಾಡಿಗೆಹೋಗಿ ಚಿರತೆಯನ್ನು ಬೇಟೆಯಾಡಿ ಹೊತ್ತಿಕೊಂಡು ಊರಿಗೆ ಬಂದು ಗೌಡ್ರ ಮತ್ತು ಜನರಿಂದ ಹೋಗಳಿಕೆಗೆ ಒಳಗಾಗಿ ಕೊನೆಗೆ ಸವಾಲಿನಲ್ಲಿ ಗೆದ್ದು ಗೌಡನ ಮಗಳು ಗೌರಿಯನ್ನು ಮದುವೆ ಆಗುತ್ತಾನೆ.

ಕಾನೂರು ಸುಬ್ಬಮ್ಮ ಹೆಗ್ಗಡತಿಯಲ್ಲಿ ತಿಮ್ಮನು ಸಹ ಬಗನಿಕಟ್ಟಿ ಕಳ್ಳನ್ನು ಇಳಿಸುವದನ್ನು ಮೆಚ್ಚಿಕೊಂಡ ಚಂದ್ರಗೌಡರು ಆತನಿಗೆಬೇಕಾದದ್ದನ್ನು ತಮ್ಮ ಮನೆಯಿಂದ ಕೋಡುತ್ತಿದ್ದರೂ ಕಳ್ಳ ಬಗನಿಯನ್ನು ಬೈರನು ಕಟ್ಟುತಿದ್ದನು. ಬಗನಿ ಕಟ್ಟುವುದು ಕೆಲವು ಜಾತಿ ಜನಾಂಗದವರೇ ಹೊರತು ಬೇರೆಯವರಿಗೆ ಬರುತ್ತಿರಲಿಲ್ಲ ಅದರಲ್ಲು ಬೈರನಿಗೆ ಬರುತಿತ್ತು.

ಹಲ್ಲಿ ಗೋಡೆಯ ಮೇಲೆ ಸಣ್ಣ ಪುಟ್ಟ ಹುಳುಗಳನ್ನು ಶಿಕಾರಿ ಮಾಡಲು ಹೊಂಚಾಕುವ ಪ್ರಸಂಗ, ಗರುಡವು ಕೋಳಿಯ ಹೂಮರಿಗಳಿಗಾಗಿ ಹೊಂಚು ಹಾಕುವ ಪ್ರಸಂಗ, ಕಾನೂರು ಹೆಗ್ಗಡತಿಯಲ್ಲಿ ಹಾಗೇನೆ ಪುಟ್ಟಣ್ಣನು ಕತ್ತಲೆಗಿರಿಯ ಸರುವಿನಲ್ಲಿ ಕಾಡುಹಂದಿ ಬೇಟೆಯನ್ನು ತನ್ನಲ್ಲಿದ್ದ ಕೋವಿಯಿಂದ ಹೊಡೆಯುತ್ತಾನೆ. ಆ ಹಂದಿಯನ್ನು ಎಷ್ಟೆ ಪ್ರಯತ್ನ ಪಟ್ಟು ತಿಮ್ಮ ಪುಟ್ಟಣ್ಣ ಕಾಳು

ಹುಡುಕಿದರೂ ಎಲ್ಲೂ ಸಿಗಲಿಲ್ಲ ಆದ್ದರಿಂದ ಬೇಟೆಯ ಹುಸಿಗೆ ಮನಸೋತು ಮಮ್ಮಲ ಮರಗುತ್ತಾರೆ. ಆದರೂ ತಮ್ಮ ಹುಡುಕುವ ಪ್ರಯತ್ನಾ ಬಿಡುವುದಿಲ್ಲ ಸ್ವಲ್ಪ ದೂರ ಹೋಗಿ ಹುಡುಕುತ್ತಾರೆ ಜಾಕಿಯಜೋತೆ ಹಂದಿ ರಕ್ತ ಕಾರಿತು ಜೀವ ಇನ್ನು ಇದ್ದರಿಂದ ಪುಟ್ಟಣ್ಣ ತನ್ನ ಚೂರಿನಿಂದ ಹಂದಿಯ ಹೊಟ್ಟೆಗೆ ಗಾಯಮಾಡಿದ ಸ್ವಲ್ಪ ಸಮಯದಲ್ಲೆ ಹಂದಿಸತ್ತಿತ್ತು ಇನ್ನೊದೆಡೆ ತಾನಗೂ ಗಾಯವಾಯಿತು ಟೈಗರ್ ಕೂಡಾ ಬೇಟೆಮಾಡಿ ತನ್ನ ಪ್ರಾಣ ಕಳೆದುಕೊಂಡಿತು.

ಏಡಿ ಹಿಡಿಯುವಾಗ ಗಂಗ ಉಪಯೋಗಿಸಿದ ತಂತ್ರ ಕೋಲಿಗೆ ಕಪ್ಪೆಯನ್ನು ಕಟ್ಟಿ ಡೊಗರಿ(ತೂತಿ)ನೊಳಗೆ ಹಾಕಿ ತೆಗೆಯುತ್ತ ಏಡಿ ಹಿಡಿಯುತ್ತಿದ್ದನು. ಚೌಡಿಗೆ ಮೇಕೆಯ ಹರಕೆ ಮಾಡುತ್ತಿದ್ದರು. ಆದರೆ ಕತ್ತಿಯಿಂದ ಕತ್ತರಿಸಿ ಕೊಲ್ಲುತ್ತಿರಲಿಲ್ಲ ಪ್ರಾಣಿಯ ಕಾಲುಗಳನ್ನು ಕಟ್ಟಿ ಅದನ್ನು ಹೊಟ್ಟೆಮೇಲಾಗಿ ಅದುಮಿ ಹಿಡಿದು ಕೊಂಡಮೇಲೆ ಒಬ್ಬನು ಒನಕೆಯಿಂದ ಪ್ರಾಣಿಯ ವಕ್ಷಸ್ಥಳದಕಡೆ ಬೀಸಿ–ಬೀಸಿ ಹೊಡೆದುಹೊಡೆದು ಕೊಲ್ಲುತ್ತಿದ್ದನು ಹಾಗೆ? ಕೊಂದರೆನೆ ಆ ಚೌಡಿಗೆ ಸಂತೃಪ್ತಿಯಾಗುತ್ತಿತ್ತು.

ಹುಲಿ ಬೇಟೆಗಾಗಿ ಪಶುವನ್ನು ಬಲಿಕೊಟ್ಟು ಹುಲಿಯ ಬೇಟೆ ಮಾಡುವ ತಂತ್ರ ಕೃಷ್ಣಪ್ಪ ಮತ್ತು ಜಾಕಿ ಕಾಡಿನಲ್ಲಿ ರಾತ್ರಿ ಹೊಡೆದಿದ್ದ ಈಡನ್ನು ನೋಡಲು ಮುಂಜಾನೆ ಎದ್ದುಕಾಡಿಗೆ ಹೋಗಿ ನೋಡಿದರೇ ಕಾಡಲ್ಲಿ ಪಶುವಿನ ಶವ ಇತ್ತು ಆದರೇ ಕಾಲಿಗೆ ಪೆಟ್ಟಾಗಿ ತಪ್ಪಿಸಿಕೊಂಡಿತ್ತು ಅದರ ಹುಡುಕಾಟಕ್ಕಾಗಿ ಕೃಷ್ಣಪ್ಪ ಮತ್ತು ಜಾಕಿ ದಾವಿಸಿ ಆ ಹಂದಿಗೆ ಇಬ್ಬರು ಕೋಪಿಯಿಂದ ಮತ್ತೆ ಪೆಟ್ಟು ಮಾಡಿದರು. ಆದರೂ ಹುಲಿ ಕೃಷ್ಣಪ್ಪನನ್ನು ಸಾಯಿಸೆಬಿಟ್ಟಿತು ಮತ್ತು ಜಾಕಿಯ ಮೇಲೂ ಹಲ್ಲೆಮಾಡಿತ್ತು ಅಷ್ಟರಲ್ಲೆ ಹುಲಿ ಸಾವಿಗೀಡಾಗಿ ದೇವರ ದಯಾದಿಂದ ಜಾಕಿಯ ಪ್ರಾಣ ಉಳಿಯಿತು. ಚಂದ್ರಯ್ಯ ಗೌಡ್ರು ತಮ್ಮ ಸಾಕುನಾಯಿ ಡೂಲಿಯನ್ನು ಕರೆದರು ಬರದಿದ್ದಕ್ಕೆ ಕೋಪಿಯಿಂದ ಕೊಂದ ಪ್ರಸಂಗ ಬೇಟೆಗೆ ಹೂವಯ್ಯ ರಾಮಯ್ಯರ ಜೋತೆ ಪುಟ್ಟಣ್ಣನು ಹೋಗಿದ್ದನು ಅದು ಭೂಮಿ ಹುಣ್ಣಿಮೆಯ ಹಿಂದಿನ ದಿನ ಅವತ್ತು ಕಣೆಹಂದಿ ಗುದ್ದಿನೊಳಗೆ ಸೇರಿಕೊಂಡಿದ್ದನ್ನು ಬಲಗೈಯಿಂದ ತನ್ನ ಚಾಕುವಿನಿಂದ ತಿವಿದು–ತಿವಿದು ಆ ಹಂದಿಯನ್ನು ಸಾಯಿಸಿದನು.

ಮಂಗನ ಬ್ಯಾಟೆ ಕಥನವನ್ನು ಯಶವಂತ ಚಿತ್ತಾಲರ ಶಿಕಾರಿ ಕಾದಂಬರಿಯೊಂದಿಗೆ ಹೋಲಿಕೆಮಾಡಿ ನೋಡಿದಾಗ ಕಾದಂಬರಿಯ ನಾಯಕ ನಾಗಪ್ಪ ಧೈರ್ಯದಿಂದ ಎದುರಿಸಿದ ಇತಿಹಾಸ ತನ್ನ ಏಕಾಂಗಿತನ ತನ್ನನ್ನು ಶಿಕಾರಿ ಮಾಡುವ ಫೀರೋಜನ ತಂಡದಲ್ಲಿ ಲೀನವಾಗಿರೂವ ದೃಶ್ಯವನ್ನು ಕಾಣುತ್ತಾನೆ. ಮತ್ತೊಂದೆಡೆ ನಾಗಪ್ಪನು ಮೇರಿ ಡಯಾನ, ಥ್ರೀಟೀ, ಜಾನಕಿ ಎಂಬ ತರುಣಿಯರಿಗೆ ಮನಸೋತು ಅವರ ಹಿನ್ನೆಲೆಯಾಗಿ ಪೂರ್ವ (ಹಿಂದಿನ) ಘಟನೆಗಳನ್ನು ಮರು ಹಾಕುತ್ತ ಸಾಗುವುದು.

ನಾಗಪ್ಪ ದಸ್ತೂರ್ ಪೀರೋಜರು ತಾಜಮಹಲ್ ಹೋಟೆಲಿನಲ್ಲಿ ಬಿಯರ್ ಕುಡಿಯುತ್ತಿದ್ದಾಗ ನಾಗಪ್ಪನ ಮನಸಲ್ಲಿ ಹೊಳೆದದ್ದು ದಸ್ತೂರ್ ಪಿರೋಜನಷ್ಟೇ ದೂರ್ತ ನೆಂಬುದನ್ನು ಅರಿತಿದ್ದನು. ತನ್ನ ಬೇಟೆಯನ್ನು ಸರಿಯಾದ ಸನ್ನಿವೇಶದಲ್ಲಿ ಸರಿಯಾದ ಮೂಹೂರ್ತದಲ್ಲಿ ಹಿಡಿಯಲು ಎಷ್ಟುಹೊತ್ತು ಬೇಕಾದರೂ ಕಾಯುವ ತಾಳ್ಮೆಯಿದ್ದ ಪ್ರಾಣಿಯಿದು ಎಂದುಕೊಂಡನು. ನಾಗಪ್ಪ ಶ್ರೀನಿವಾಸನ ಮನೆಗೆ ಹೋದಾಗ ಶ್ರೀನಿವಾಸ ಮತ್ತು ಅವನ ತಾಯಿ ತನ್ನನ್ನು ಗರ್ವದಿಂದ ಮಾತನಾಡಿಸಿ ಕೋನೆಗೆ ಶ್ರೀನಿವಾಸ ನಾಗಪ್ಪನ ಕಾಲು ಹಿಡಿದುಕೊಂಡು ತನ್ನ ಬಗ್ಗೆ ಕಾದಂಬರಿ ಬರೆಯಬೇಡ ನನ್ನ ಗುಟ್ಟು ವಿಷಯಗಳೆಲ್ಲ ನನಗೆಗೋತ್ತಿದೆ. ಅವನ್ನು ಹೊರಗೆಡಹ ಬೇಡ ಎಂದೂ ಬೇಡಿಕೊಂಡನು. ಇತ್ತ ನಾಗಪ್ಪ ತನ್ನ ಗೆಳೆಯ ಸೀತಾರಾಮನ ಹತ್ತಿರ ಫ್ಯಾಕ್ಟರಿಯ ವ್ಯವಹಾರದಲ್ಲಿ ನಡೆದ ಮೊಸದ ನೋಟಿಸನ್ನು ಓದಲುಕೊಟ್ಟ ಆದರೆ ಶಿತಾರಾಮ ಶ್ರೀನಿವಾಸನ ಮಾತಿನಿಂದ ಚೆಲಿತಗೊಂಡು ತನ್ನ ಗೆಳೆಯ ನಾಗಪ್ಪನನ್ನೆ ದೂರುತ್ತಾನೆ. ನಾಗಪ್ಪ ತಾನು ಪ್ರೀತಿಸಿದ್ದ ಮೇರಿ ತನ್ನ ಮನೆಗೆ ಬಂದು ಪಾರ್ಟಿಗೆ ಕರೆದರೂ ಹೋಗಲು ನೀರಾಕರಿಸುತ್ತಾನೆ ನಿನಗೆ ಪ್ರಮೋಷನ ಕೊಟ್ಟಿದ್ದಾರೆ ಎಂಡಿ ಯವರು ಅಂದದಕ್ಕೆ ನಾಗಪ್ಪ ಮೇರಿಗೆ ಗುಟ್ಟು ವಿಷಯಗಳನ್ನು ಅವಳ ಹತ್ತಿರ ತೋಡಿಕೊಳ್ಳುತ್ತಾನೆ. ಅವಳು ಎಷ್ಟೆ ಬೇಡಿಕೊಂಡರು ಒಪ್ಪಿಕೊಳ್ಳದೆ ನಿರಾಕರಿಸಿ ತನ್ನ ಪೂರ್ವ ಇತಿಹಾಸ ತಿರುವಿಹಾಕಿ ತನ್ನ ಮಟ್ಟಿಗೆ ಇನ್ನು ಕಂಡಿರದ ಅಣ್ಣನನ್ನು ಕಾಣೆಯಾದ ತಂಗಿಯನ್ನು ಹುಡುಕುವದೇ ಮುಂದಿನ ಆಯುಷ್ಯದ ಗುರಿ ಎಂದು ನೆಲಕ್ಕೆ ಹತ್ತಿರವಾಗುತ್ತನೆ.

ಅಡಿ ಟಿಪ್ಪಣಿಗಳು

೧. ವಿರೂಪಾಕ್ಷಿ ಪೂಜಾರಹಳ್ಳಿ.ಬೇಟೆ ಮತ್ತು ಬೇಡರು –೨೦೦೭. ಪು. ೩೧

೨. ಅದೇ, ಪುಟ. ೨೭

೩. ಕಲ್ಕುಳಿ ವಿಠಳ ಹೆಗ್ಗಡೆ. ಮಂಗನ ಬ್ಯಾಟೆ–೨೦೧೨. ಪು. ೧೨–೧೬

೪. ಅದೇ, ಪುಟ. ೮೧–೮೪

೫. ಅದೇ, ಪುಟ. ೧೯೯–೧೨೩

೬. ಅದೇ, ಪುಟ. ೨೧೧

೭. ಅದೇ, ಪುಟ. ೨೪೪

೮. ಅದೇ, ಪುಟ. ೨೫೦

೯. ಅದೇ, ಪುಟ. ೨೭೦–೨೭೨

೧೦. ಬೇಟೆಯ ಸಾಂಸ್ಕೃತಿಕ ಪದಕೋಶ. ಸ.ಚಿ.ರಮೇಶ–೧೯೯೪. ಪು. ೧

೧೧. ಅದೇ, ಪುಟ. ೩

೧೨. ಅದೇ, ಪುಟ. ೪

೧೩. ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು,೨೦೦೭. ಪು. ೯೧

೧೪. ಅದೇ, ಪುಟ. ೯೨

೧೫. ಕೆದಂಬಾಡಿ ಜತ್ತಪ್ಪ ರೈ ಬೇಟೆಯ ನೆನಪುಗಳು–೧೯೮೩. ಪು. ೬,೭,

೧೬. ಕಾಕೆಮಾನಿ ಬೇಟೆ ನೆನಪು–೨೦೦೬. ಪು. ೬–೧೪

೧೭. ಉಮೇಶ ಹೊಸಹಳ್ಳಿ ಮಲೆನಾಡಿನ ಶಿಕಾರಿ ಲೋಕ–೨೦೦೬. ಪು. ೨

೧೮. ಕಲ್ಕುಳಿ ವಿಠಲ ಹೆಗ್ಗಡೆ. ಮಂಗನ ಬ್ಯಾಟೆ–೨೦೧೨. ಪು. ೨೫೬

೧೯. ಕನಾಟಕ ಜನಪದ ಭೂಮಿಕೆ–೧೯೮೧. ಪು. ೩೮

೨೦. ನಾಗರಿಕತೆಯ ಹೊಸ್ತಿಲಲ್ಲಿ–೧೯೬೯ .ಪು ೪೪

೨೧. ಜಾನಪದ ಅಧ್ಯಯನ–೧೯೭೬

೨೨. ಕೆದಂಬಾಡಿ ಜತ್ತಪ್ಪ ರೈ. ಬೇಟೆಯ ಸೂಕ್ಷ್ಮತೆಗಳು–೧೯೮೩. ಪು. ೧೪೨

ಅಧ್ಯಾಯ-೬

ಸಮಾರೋಪ

ಪ್ರಕೃತಿಯ ಸೊಬಗು ಪ್ರವಾಸಿಗರ ಮೆರಗು, ನೋಡು ನೋಡುತ್ತಲೆ ಮೈಮರೆಸುವ ಹಚ್ಚಹಸಿರಿನ ಮಧ್ಯ ಮಲೆನಾಡಿನ ಗದ್ದೆಗಳು ಹಸಿರುಹೊದ್ದ ಸೀರೆಯಂತೆ ಮಲೆನಾಡಿನ ಬೆಟ್ಟ ಗುಡ್ಡಗಳನ್ನು ಆವರಿಸಿಕೊಂಡು ನೊಡುಗರ ಮನ ತಣಿಸುವಂತಿರುವುದನ್ನು ನಾನಾಬಗೆಯ ಹಕ್ಕಿಗಳ ಇಂಚರವು ಕೇಳುಗರ ಕಿವಿಯ ತಮಟೆಯ ಮೇಲೆ ಜೇಂಕರಿಸುತ್ತವೆ. ಮಲೆನಾಡಿನ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತ ನಿಂತ ಕಲ್ಕುಳಿ ವಿಠಲ್ ಹೆಗ್ಗಡೆಯವರಿಗೆ ಕಂಡದ್ದು ಮಧ್ಯಮ ವರ್ಗದ ಜನರ ಸಮಸ್ಯೆಗಳ ಮಧ್ಯೆ ಎದ್ದ ಬೇಟೆಯ ಪ್ರಸಂಗಗಳನ್ನು ಚಿತ್ರಿಸಿರುವ ಸಂಗತಿಗಳನ್ನು ಕಾಣಬಹುದಾಗಿದೆ.

ಮೊದಲನೇ ಅಧ್ಯಾಯ ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಮಲೆನಾಡಿನ ಪ್ರಕೃತಿಯ ವರ್ಣನೆಯ ಜೊತೆಗೆ ಅಧ್ಯಯನದ ಪೀಠಿಕೆ, ವ್ಯಾಪ್ತಿ, ಉದ್ದೇಶ, ಮಹತ್ವ, ವಿಧಿವಿಧಾನಗಳನ್ನು ರಚಿಸಲಾಗಿದೆ. ಈ ಅಧ್ಯಾಯನದಲ್ಲಿ ಒಟ್ಟಾರೆಯಾಗಿ ನಡೆಯುವ ಮಂಗನ ಬ್ಯಾಟೆಯ ಸಾರ ಒಳಗಿನ ಸಾರಾಂಶವನ್ನು ವಿವರಣೆ ರೂಪದಲ್ಲಿ ಬಿಚ್ಚಿಡುತ್ತಾ ಹೋಗಿರುವುದನ್ನು ಕಾಣಬಹುದಾಗಿದೆ.

ಅಧ್ಯಾಯ ಎರಡು ಬ್ಯಾಟೆಯನ್ನು ಕುರಿತ ಪ್ರಾದೇಶಿಕ ಭಿನ್ನತೆಗಳಲ್ಲಿ ಮಲೆನಾಡಿನ ಪರಿಸರದಲ್ಲಿ ಸಂಭವಿಸುತ್ತಿರುವ ಅಪಾಯಕಾರಿ ಬ್ಯಾಟೆಗಳನ್ನು ಹಾಗೂ ಬಯಲು ಸೀಮೆ ಪರಿಸರದ ಬ್ಯಾಟೆಗಳನ್ನು ಚಿತ್ರಿಸಲಾಗಿದೆ. ಮಲೆನಾಡು ಮತ್ತು ಬಯಲು ಸೀಮೆಯ ಜನರು ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ನೈತಿಕ, ನಿಲುವುಗಳನ್ನು ಎತ್ತಿ ತೋರಿಸಿರುವುದನ್ನು ಕಾಣಬಹುದುದಾಗಿದೆ. ಪ್ರಾದೇಶಿಕ ಭಿನ್ನತೆಗಳಲ್ಲಿ ಮಲೆನಾಡಿನ ಮತ್ತು ಬಯಲು ಸೀಮೆಯ ಜನರ ಮಧ್ಯೆ ಇರುವ ವರ್ಗ ಸಂಘರ್ಷಗಳು, ಜಾತಿಯತೆಯ ಭಾವನೆಗಳನ್ನು ನೀರೂಪಿಸಲಾಗಿದೆ. ಪ್ರಾದೇಶಿಕ ಭಿನ್ನತೆಗಳು ಭಿನ್ನ, ಭಿನ್ನವಾಗಿದ್ದು ಅವರದೇ ಆದ ಸಂಪ್ರದಾಯ, ಆಚರಣೆ, ಅನುಕರಣೆ, ನಂಬಿಕೆಗಳನ್ನು ಒಳಗೊಂಡಿರುವದನ್ನು ಕಾಣಬಹುದಾಗಿದೆ.

ಮೂರನೇಯ ಅಧ್ಯಾಯ ಸಿದ್ಧನ ಸಾಹಸ ಲೀಲೆಗಳು ಇಲ್ಲಿ. ಸಿದ್ದನು ಕೈಗೊಳ್ಳುವಂತ ಬ್ಯಾಟೆಯ ಪುರಾಣವನ್ನು ಚಿತ್ರಿಸಲ್ಪಡುತ್ತವೆ. ಮಲೆನಾಡಿನರಿಗೆ ಸಿದ್ದನು ಮನೆ ಮಗನಾಗಿದ್ದ ಪ್ರಸಂಗಗಳನ್ನು ಸಹ ವರ್ಣಿಸಲ್ಪಟ್ಟಿವೆ. ಸರಕಾರಿ ಷರತ್ತುಗಳಂತೆ ಸಿದ್ದನು ಮೊದಮೊದಲು ಶಿಕ್ಷೆಗೆ ಗುರಿಯಾಗಿ ಅಧ್ಯಾಯದ ಕೊನೆಯಲ್ಲಿ ಸರಕಾರವೇ ಸಿದ್ದನಲ್ಲಿ ಬಂದು ಬ್ಯಾಟೆ ಮಾಡಲು ಬೇಡಿಕೊಳ್ಳವ ಸಂದರ್ಭಗಳು ಕಂಡು ಬರುತ್ತವೆ. ಕೆಳವರ್ಗದ ಜೀತದಾಳಾದ ಸಿದ್ದನು ತನಗೆ ಗೊತ್ತಿರುವ ತಂತ್ರ ಗಾರಿಕೆಯನ್ನು ಉಪಯೋಗಿಸುತ್ತಾ ಊರ ಜನರಿಗೆ ಬೇಕಾಗಿದ್ದವನಾಗಿದ್ದನು. ಗೋವಿಂದನನ್ನು ತನ್ನ ಬ್ಯಾಟೆ ಗುರುವನ್ನಾಗಿ ಸ್ವೀಕರಿಸಿದನು, ಸಿದ್ದನು ಕೇವಲ ತನ್ನ ಹೊಟ್ಟೆಪಾಡಿಗಾಗಿ ಅಲ್ಲದೇ ಪರರ ಅವಲಂಬಿ

ಯಾಗಿರುವುದನ್ನು ಮಂಗನ ಬ್ಯಾಟೆ ಕಥನದಲ್ಲಿ ಕಾಣಬಹುದಾಗಿದೆ. ಮಲೆನಾಡಿನ ಹೆಂಗಸರಂತು ಸಿದ್ಧನೆಂದರೆ ಬಲುಯಿಷ್ಟ ಸಿದ್ಧ ಕಣ್ಣಿಗೆ ಬಿದ್ದರೆ ಸಾಕು ಅದು ಇದು ತಾ ಅಂತ ಒಂದೇ ಸಮನೆ ಅವರ ಗೋಳು ತೋಡಿಕೊಳ್ಳುತ್ತಿದ್ದರು. ಸಿದ್ದನು ಬ್ಯಾಟೆ ಮಾಡೊದ್ರಲ್ಲಿ ಅಷ್ಟೇ ನಿಪುಣನಲ್ಲದೆ ತನ್ನ ತಂದೆಯಿಂದ ಬಳುವಳಿಯಾಗಿ ಬಂದ ಮಾದಾರಿಕೆಯ ಕೆಲಸವನ್ನು ಸಹ ನೋಡಿಕೊಳ್ಳುತ್ತಿದ್ದನು.

ಸಿದ್ದನು ಮೇಲು ಕೀಳು, ಜಾತಿ ಜನಾಂಗ ಎಂಬ ಬೇಧ ಭಾವವಿಲ್ಲದೆ ಬಡ ಬಲ್ಲಿಗರ ಚಾಕರಿ ಮಾಡುತ್ತಾ ಜೀವನ ಸಾಗಿಸುತ್ತಿದ್ದವನು. ಮಲೆನಾಡಿನಲ್ಲ ತನ್ನನ್ನು ಗೊತ್ತಿರುವ ತಂತ್ರಗಳನ್ನು ಉಪಯೋಗಿಸಿಕೊಂಡು ತನ್ನಲ್ಲಿರುವ ಸಾಹಸಲೀಲೆಗಳನ್ನು ಪ್ರದರ್ಶಿಸುತ್ತಿದ್ದನು. ಅದರಲ್ಲೂ ಮಲೆನಾಡಿನ ರೈತರಿಗೆ ಹಾಗೂ ಸರಕಾರದವರಿಗೆ ಪ್ರಧಾನ ಮಂತ್ರಿ ಹೇಗೆ ರಾಯಭಾರಿಯಾಗಿ ಕಾರ್ಯ ನಿರ್ವಹಿಸುತ್ತಾನೋ ಅದೇ ರೀತಿಯಲ್ಲಿ ಮಂಗನ ಬ್ಯಾಟೆ ಸಿದ್ದನು ಸಹ ಮಲೆನಾಡಿಗರ ಮತ್ತು ಸರಕಾರದವರ ಮಧ್ಯ ಕಾರ್ಯ ನಿರ್ವಹಿಸುತ್ತಾನೆ.

ಅಧ್ಯಾಯ ನಾಲ್ಕರಲ್ಲಿ ಪ್ರಾಣಿ ಜಗತ್ತಿನೊಂದಿಗಿನ ಮಾನವನ ಸಂಬಂಧ ಈ ಅಧ್ಯಾಯನದಲ್ಲಿ ಪ್ರಾಣಿ ಮತ್ತು ಮನುಷ್ಯನ ಮಧ್ಯೆ ಕಂಡು ಬರುವ ಸಂಬಂಧಗಳು ಅನಾದಿಕಾಲದಿಂದಲು ಹರಿದುಬಂದಿರುವುದನ್ನು ಕಾಣಬಹುದಾಗಿದೆ. ಮನುಷ್ಯ ಬೇಟೆ ಮಾಡುವುದನ್ನು ಪ್ರಾಣಿಗಳಿಂದಲೆ ಕಲೆತುಕೊಂಡುನು. ಪ್ರಾಣಿಗಳು ಮನುಷ್ಯನನ್ನು ಅನುಕರಿಸುತ್ತ ಬದುಕುವಂತೆ ಮನುಷ್ಯನು ಸಹ ಪ್ರಾಣಿಗಳನ್ನು ಅನುಕರಿಸುತ್ತಾ ಬದುಕುತ್ತಿರುವುದನ್ನು ಕಾಣಬಹುದಾಗಿದೆ. ಮಲೆನಾಡಿನ ಚಿತ್ರಣ ಸೃಷ್ಟಿಯಾಗಿರುವದನ್ನು ತೆಗೆದುಕೊಂಡರೇ ಮಲೆನಾಡಿನ ಪ್ರಥಮ ಶತ್ರುವಾದ ಮಂಗವು ಮಲೆನಾಡಿಗರನ್ನು ಸಮಸ್ಯೆಗೀಡುಮಾಡುವುದಲ್ಲದೆ ಮಲೆನಾಡಿನ ರೈತರ ಬದುಕನ್ನೇ ಚಿಂದಿಮಾಡಿರುವ ಸಂದರ್ಭಗಳನ್ನು ಕಾಣಬಹುದಾಗಿದೆ. ಮನುಷ್ಯ ಮತ್ತು ಪ್ರಾಣಿಗಳ ಮಧ್ಯೆ ಬ್ಯಾಟೆಯ ಪ್ರಸಂಗಗಳು ಸದಾ ನಡೆಯುತ್ತಲೆ ಇರುತ್ತವೆ.

ಅಧ್ಯಾಯ ಐದು, ಬ್ಯಾಟೆ ಕುರಿತ ತಂತ್ರಗಾರಿಕೆಯಲ್ಲಿ ಮನುಷ್ಯನು ಶಕ್ತಿಗಿಂತ ಯುಕ್ತಿಗೆ ಪ್ರಾಮುಖ್ಯತೆಯನ್ನು ಕೊಟ್ಟಿರುವುದನ್ನು ತಿಳಿಯಬಹುದು. ಸಹಜವಾಗಿಯೇ ಯಾವುದೇ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕಾದರೆ ಪೂರ್ವ ತಯಾರಿಯು ಪ್ರಮುಖ ಪಾತ್ರವಹಿಸುತ್ತದೆ. ಯಾವುದೇ ಪ್ರಾಣಿಗಳಲ್ಲಿ ತನ್ನಲ್ಲಿರುವ ತಂತ್ರಗಾರಿಕೆಯಿಂದಾಗಿ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅದೇ ತಂತ್ರಗಾರಿಕೆಯಿದಂಲೆ ಬೇರೊಂದು ಪ್ರಾಣಿಯನ್ನು ಬ್ಯಾಟೆ ಯಾಡುವದನ್ನು ಗಮನಿಸಬಹುದಾಗಿದೆ. "ಒಂದನ್ನು ಪಡೆಯಲು ಮತ್ತೊಂದನ್ನು ಕಳೆದುಕೊಳ್ಳಬೇಕು" ಎಂಬ ನಾಣ್ಣುಡಿಯಂತೆ ಪ್ರಾಣಿ ಪ್ರಪಂಚದಲ್ಲೂ ಅಷ್ಟೇ ಹುಲಿಯನ್ನು ಬ್ಯಾಟೆ ಮಾಡಬೇಕೆಂದರೆ ನಾಯಿಯನ್ನು ಬಲಿಕೊಡುತ್ತಾ ಬಂದಿರುವದನ್ನು ಕಾಣಬಹುದಾಗಿದೆ.

ಕಲ್ಕುಳಿ ವಿಠಲ್ ಹೆಗ್ಗಡೆರ ಮಂಗನ ಬ್ಯಾಟೆ ಮಲೆನಾಡ ಪರಿಸರ ತರೀಕೆರೆಯವರು ಮಂಗನ ಬ್ಯಾಟೆಯಲ್ಲಿನ ಸಾರವನ್ನು ವರ್ಣಿಸಿರುವುದು "ರೈತಾಪಿ ವ್ಯಕ್ತಿಯೊಬ್ಬರು ತಾವು ಬದುಕುತ್ತಿರುವ ಮಲೆನಾಡಿನ ಪರಿಸರ ಹಾಗೂ ಪ್ರಜ್ಞೆಗಳಲ್ಲಾಗುವ ಪಲ್ಲಟಗಲನ್ನು ನೀರೂಪಿಸುವ ಕಥನವೆಂದಿದ್ದಾರೆ. ಇಲ್ಲಿ ರೈತರು ತಮ್ಮ ಬೆಳೆಗಳನ್ನು ತಿಂದು ಹಾಳು (ನಾಶ) ಮಾಡುತ್ತಿರುವ ಮಂಗಗಳನ್ನು ಬೇಟೆಯಾಡಲು ಯತ್ನಿಸಿ ಸೋತು ಹೋಗಿರುವುದನ್ನು ಕಾಣಬಹುದಾಗಿದೆ. ಕಾಡಿನಿಂದ ನಾಡಿಗೆ ತಂದ ಮಂಗಗಳ ಕಾಟ ತಾಳಲಾರದೇ ಮರಳಿ ಕಾಡಿಗೆ ಹೋಗಿ ಬಿಡುವುದರ ಮೂಲಕ ಕಥನ ಪೂರ್ಣಗೊಳ್ಳುತ್ತದೆ. ಕೊನೆಗೂ ಗೆಲವು ಪಡೆಯುವುದು ಮಂಗಗಳೆ ಹೋರತು ರೈತಾಪಿ ಜನರ ಸಮಸ್ಯೆಗಳಲ್ಲ.

ಮಲೆನಾಡನ್ನು ಕುರಿತು ಸೃಷ್ಟಿಯಾಗಲಿರುವ ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಮಲೆನಾಡಿನ ಸೊಬಗನ್ನು ವರ್ಣಿಸುವುದರ ಜೊತೆಗೆ ಮಧ್ಯಮ ವರ್ಗದ ಸಮಸ್ಯೆಗಳನ್ನು ಉನ್ನತೀಕರಿಸಿ ಅವುಗಳ ನಿರ್ಮೂಲನೆಗಾಗಿ ಹಾಗೂ ದೈನಂದಿನ ಬದುಕನ್ನು ಸುಧಾರಿಸಿಕೊಳ್ಳಲಿಕ್ಕಾಗಿ. ಕಲ್ಕುಳಿ ವಿಠಲ್ ಹೆಗ್ಗಡೆ ಅವರು ಮಲೆನಾಡಿನ ಮಡಿಲಲ್ಲಿ ಬೆಳೆದವರು ಮಲೆನಾಡಿನಲ್ಲಿ ಸಂಭವಿಸುವ ಸಮಸ್ಯೆಯ ವಿರುದ್ಧ ತಮ್ಮ ನಿಲುವನ್ನು ಇಂದಿಗೂ ತೋರುತ್ತ ಬರುತ್ತಿದ್ದಾರೆ. "ಸಂವಾದ ವಿಶೇಷಾಂಕ-೨೦೧೩ ರಲ್ಲಿ ರಚಿಸಿರುವ ಮಲೆನಾಡ ಕುರಿತ ಲೇಖನ "ಮಲೆನಾಡ ನೂರಾರು ಸಮಸ್ಯೆಗಳ ಬೀಡು" ಸಂವದ ಕಾರ್ಯಕ್ರಮದಲ್ಲಿ ಮಲೆನಾಡ ಕುರಿತು ಮಳೆಯಿಂದ ಆವೃತ್ತವಾದ ನಾಡು ಮಲೆನಾಡು ಇಲ್ಲಿನ ಎರಿನಿಂತಿರುವ ಬೆಟ್ಟಗುಡ್ಡಗಳು, ಹಸಿರು, ಕಡಲಿನಂತಹ ಕಾಡುಗಳು, ಸುಂದರ ಪರಿಸರ, ಶುದ್ಧನೀರು, ಸ್ವಚ್ಚಗಾಳಿ ಹೊದ್ದು ಜೆಂಕರಿಸುವ ಮಲೆನಾಡಿನಲ್ಲಿ ಪ್ರತಿಯೊಂದು ಪ್ರಾಣಿಯ ಒಂದು ಕಣ್ಣು ಶತ್ರುವಿನ ಮೇಲೆ ಯಾವ ಕ್ಷಣದಲ್ಲಾದರೂ ಎಗರಬಹುದು. ಅಂತಹ ಪರಿಸ್ಥಿತಿ ಮಲೆನಾಡಿಗರಲ್ಲಿ ಸೃಷ್ಟಿಯಾಗಿದೆ. ಇಲ್ಲಿ ಕಲ್ಕುಳಿಯವರು ೧೨೦-೧೫೦ ಕ್ಕು ಹೆಚ್ಚು ಸರಾಸರಿ ಮಳೆ ಬೀಳುವ ಪ್ರದೇಶವನ್ನು ಮಲೆನಾಡು ಎಂದು ವರ್ಣಿಸಿದ್ದಾರೆ.

ಕಲ್ಕುಳಿ ವಿಠಲ್ ಹೆಗ್ಗಡೆರ ಮಂಗನ ಬ್ಯಾಟೆ ಮಲೆನಾಡ ಪರಿಸರ ಕಥನವನ್ನು ಓದುಗರ ದೃಷ್ಟಿಕೋನವನ್ನು ಇಟ್ಟುಕೊಂಡು ಮಂಗನ ಬ್ಯಾಟೆ: ವಸ್ತು ಮತ್ತು ಅಭಿವ್ಯಕ್ತಿ ಎಂಬ ಸಂಶೋಧನ ಗ್ರಂಥವನ್ನು ಅಧ್ಯಾಯನಗಳಾಗಿ ವಿಭಜಿಸಿ ರಚಿಸಿರುತ್ತೇನೆ. ಶಿವಕೋಟಾಚಾರ್ಯರ ವಡ್ಡಾರಾಧನೆ ಕಥೆಯಂತೆ ಬಿಡಿ-ಬಿಡಿಯಾಗಿ ಹಂಚಿಕೆಯಾಗಿದ್ದ ಮಂಗನ ಬ್ಯಾಟೆ ಕಥನವನ್ನು ಬಿಡಿ-ಬಿಡಿಯಿಂದ ಇಡಿಯನ್ನಾಗಿ ರಚಿಸಿ ಓದುಗಬಳಗದವರಿಗೆ ಅನುಕೂಲವಾಗಲೆಂದು ರಚಿಸಿರುತ್ತೇನೆ. ಕಲ್ಕುಳಿಯವರು ಮಲೆನಾಡಿನ ಪರಿಸರದಂತೆಯೆ ರಚನೆಯಾಗಿದ್ದರೂ ನಿಲುವುಗಳು ಮಾತ್ರ ಭಿನ್ನ-ಭಿನ್ನ ರೂಪದಲ್ಲಿ ಹೆಣೆಯಲ್ಪಟ್ಟಿರುವುದನ್ನು ಗಮನಿಸಬಹುದಾಗಿದೆ.

ಮಲೆನಾಡ ಸಾಸ್ಕೃತಿಕ ಪದಕೋಶ

ಮುರುಡುಗುಂಡು–ಒಂದು ಜಾತೀಯ ಮೀನು.

ಡೊಗರಿ–ಏಡಿಯ ಮನೆ(ತೂತು).

ಹಮಾದೂರಿಲ್ಲ–ಬಾಹಾಳದೂರವಿಲ್ಲ.

ಕಳ್ಳಿನ ಮೊಗೆ–ಸಾರಾಯಿ ತುಂಬುವ ಬೊಗಣಿ(ತಂಬಿಗೆ).

ಜೈನೆಡೆ–ಜೈನರಎಡೆ(ನಿರಾಮಿಷನೈವೇದ್ಯ).

ಬಡು–ದನದ ಹೆಣ.

ಬಳ್ಳೆ–ಎಲೆ.

ಸಿದ್ದೆಗುಮ್ಮ–ಮೆಣಸಿನಕಾಯಿಯ ಹೊಗೆಯನ್ನುಮೂಗಿಗೆ ಹೊಗುವಂತೆ ಮಾಡುವುದು.

ಹುಯಿಲುಕೊಡುವುದು–ಮಾಟಮಾಡಿಕಾವ್ಯದ ಸಹಾಯದಿಂದವೈರಿಯನ್ನು ಕೊಲ್ಲಿಸುವದು.

ಕುರ್ಕ–ನಾಯಿ ಚಿರಂಚಿತಜ.

ಜುಗಾರಿ ಆಟ–ಇಸ್ಪೀಟಿನ ಆಟ.

ಹಸಿಗೆ–ಬೇಟೆಯಪ್ರಾಣಿಯನ್ನು ಸುಟ್ಟು ಮಾಂಸ ಮಾಡುವಿಕೆ.

ದೊಂದಿ–ಬೇಟೆಯಲ್ಲಿಬೆಳಕಿಗಾಗಿ ಬಳಸುವ ಸಾಧನ.

ತೋಟಾಕೋವಿ–ಸುಧಾರಿಸಿದ ತಂತ್ರದಿಂದಮಾಡಿದ ಕೋವಿ(ಬಂದುಕು).

ತೋಟ–ತೋಟಾಕೋವಿಗೆಹಾಕಲು ಸಿದ್ಧವಿರುವ ವಸ್ತು.

ಚರೆ–ಕೋವಿಯಲ್ಲಿ ತುಂಬುವ ಸಣ್ಣ ಗುಂಡುಗಳು.

ಗರ್ನಾಲಾ–ಸಿಡಿಯುವಮದ್ದು.

ಕಡಹಾಕು– ಮೀನನ್ನುಹಿಡಿಯುವವಿಧಾನ.

ಮುರುಗುಣಿ–ಬಿದಿರಿನಸ್ವರ ಬರಸುವ ವಸ್ತು.

ತುಡುಗುದನ–ಪೋಲಿ ದನಗಳು.

ಶಿಕಾರಿ–ಬೇಟೆ.

ಪಟ್ಟೆಹುಲಿ–ಹೆಬ್ಬುಲಿ.

ಚಿಟ್ಟೆಹುಲಿ–ಚಿರತೆ.

ಮುರುಮಾಡುವದು–ದನಗಳಿಗೆಂದೆ ಕೊಟ್ಟಿಗೆಯಲ್ಲಿ ಆಹಾರ ಬೇಯಿಸಿ ಹಾಕುವದು.

ಕಡಮುರ್ಗಿ–ಕನ್ನಡಿಹಾವು.

ಮುಗ್ಗದಂತೆ–ಕೊಳೆಯದಂತೆ.

ಆಗಮಾಡೊದು–ಹದಮಾಡೊದು.

ಆರುಕಟ್ಟುವುದು–ನೇಗಿಲು ಕಟ್ಟುವುದು.

ಬಿಲ–ಏಡಿಯಗುದ್ದು.

ಮಂಡಾಳೆ– ಟೊಪ್ಪಿಗೆ.

ಒಂದು ನೇಣು–ಎಂಬತ್ತು ಅಡಿ.

ಸೋನೆಗೆ–ರಸಕ್ಕೆ.

ಉಳಿ–ರಜಾ.

ಆಳುಗುಸುಗಳು–ಕಾಡುಪಾಪ.

ಕವಣ–ಮಂಜು.

ಹೆರಜಲಿರಮೀನು–ಮೈಮೇಲೆ ಸಿಪ್ಪೆ ಇರುವ ಮೀನು.

ಕಾಲಿನ ಗೊರಸು–ಕಾಲಿನ ಹೆಜ್ಜೆ.

ಈಡು–ಬೇಟೆ ಅಥವಾ ಪ್ರಾಣಿಗೆ ಗುಂಡು ಹಾರಿಸುವುದು.

ಪಚ್ಚಿ–ಕರಳು.

ಕಡೆಹಂದಿ–ಮುಳ್ಳಂದಿ.

ದರಗು–ಒಣಗಿದ ಎಲೆ.

ಬೈನೆಮರ–ಈಚಲುಮರ.

ಹರಿವೆ– ಹಂಡೆಯಂತ ಮಡಿಕೆ.

ಮುಳ್ಳಿಲಿ–ಬಾಲವಿಲ್ಲದಿರುವ ಇಲಿ.

ಕಳ್ಳು–ಸಾರಾಯಿ,ಬಗನೆಮರದಿಂದ ತೆಗೆಯುವ ಅಮಲಿನ ರಸ.

ಕಕ್ಕುತ್ತವೆ–ವಾಂತಿಮಾಡುತ್ತವೆ.

ಅಮೃತ ಬಳ್ಳಿ–ಮಂಗನ ಬಳ್ಳಿ.

ಸೀರುಡಿಕೆ–ಎರಡನೆ ಸಂಬಂಧ.

ಕತ್ತೆಮೊಲ– ದೊಡ್ಡ ಕಿವಿಯಮೊಲ.

ಕಡ–ಸಾಲ.

ಚೊಟ್ಟು–ಬೀಜ.

ಕಷಾಯವಸ್ತ್ರದದಂಡ–ಬಿದಿರಿನಕೋಲು.

ವುಡಿ–ಪೊದೆ.

ಆಡು–ಬೇಯಿಸು.

ಅರಗು–ಮೇಣ.

ಅಲ್ರ್ಜ–ಕೆಸರು.

ಆಕ್ರಾಯ–ಈಟಿ, ಕೊಡಲಿ, ಕತ್ತಿ.

ಆಟಬಿಲ್ಲು–ಕೋವಿಯ ಒತ್ತುಗುಂಡಿ.

ಆಲು–ಕಿರುಚು.

ಆವಾರ–ಬಲಿ.

ಇಕ್ಕಳಿಸು–ಹೊಡೆ, ಬಡಿ, ಗುದ್ದು.

ಇಮನ–ಕಾಡು.

ಇರಿಗೂಣಿ–ಮೀನುಹಿಡಿಯುವಸಾಧನ.

ಇಲುಗು–ಪ್ರಾಣಿಗಳಮೂಳೆ, ಎಲಬು.

ಈಟಿ–ಪ್ರಾಣಿಯನ್ನು ಇರಿದು ಕೊಲ್ಲುವ ಸಾಧನ.

ಈಡು–ಗುಂಡು.

ಉಗ್ಗರು–ಹುಲಿ.

ಎತ್ತಿಕಟ್ಟು–ಪ್ರಾಣಿಗಳನ್ನು ಬೆದರಿಸಲು ಕಟ್ಟಿದ ಬೆದರಕೊಂಬೆ.

ಒಡ್ಯಾಣ–ಬೇಟೆಗಾರರು ಬೇಟೆಕತ್ತಿ ಇಡುವ ಸಾಧನ.

ಕಂದಕ–ಗುಂಡಿ, ಹಳ್ಳ, ತಗ್ಗು.

ಕಣೆಹಂದಿ–ಮುಳ್ಳುಹಂದಿ.

ಕದ್ದಿಂಗಳು–ಅಮಾಸೆಯರಾತ್ರಿ.

ಕಪ್ಪೆಗೋಲು–ಏಡಿಹಿಡಿಯುವ ಸಾಧನ.

ಕಾವಲಿ–ಬೇಯಿಸುವ ಹೆಂಚು.

ಕಿರಾತ–ಬೇಡ ಜನರ ಬೇಟೆಗಾರ.

ಕಿರಿ–ಹಂದಿ.

ಕಿರ್ಬ–ಕತ್ತೆಯಾಜಾತಿಗೆ ಸೇರಿದ ಮೃಗ.

ಕುಂಚ–ಪ್ರಾಣಿಗಳ ಬಾಲ.

ಕುತ್ತುರು–ಪೊದೆ.

ಕುರವಿ–ಗುಬ್ಬಚ್ಚಿ

ಕುರ್ಕ–ಚಿರತೆ

ಕುಪ್ಪೆ–ಮಾಂಸದ ರಾಶಿ, ದಿಣ್ಣೆ.

ಕೂಳೆ–ಮೀನು ಹಿಡಿಯುವ ಸಾಧನ.

ಕೆಂಬೂತ–ಕಾಗೆಯಾಕಾರದ ಕೆಂಪುಮಿಶ್ರಿತ ಕಪ್ಪು ಬಣ್ಣದ ಪಕ್ಷಿ.

ಕೆವಿ–ಭತ್ತದ ಗದ್ದೆ.

ಕೇಪು–ಕೋವಿಯನ್ನು ಸಿಡಿಸಲು ಬಳಸುವ ಸಿಡಿಮದ್ದಿನ ಟೋಪಿ.

ಕೋವಿ–ಬಂದೂಕು.

ಗಾಳ–ಮೀನನ್ನು ಹಿಡಿಯುವ ಸಾಧನ.

ಗುಡ್ಡೆ–ರಾಶಿ, ಹಿಂಡು.

ಗೊಂತಿ–ಗೂಟ.

ಘಟ್ಟ–ಕಾಡು.

ಚರೆ–ಕೋವಿಯಲ್ಲಿನ ಸಣ್ಣಗುಂಡುಗಳು

ಚಾಡಿ–ಬೇಟೆಯ ಹೆಣ್ಣು ದೇವತೆ.

ತಂಉಳ್ಳ–ಪ್ರಾಣಿಹಿಡಿಯುವ ಸಾಧನ.

ತಟ್ಟೆಬಿಲ್ಲು–ಬಿದುರು ತಟ್ಟಿನಿಂದ ನಿರ್ಮಿಸಿದ ಬಿಲ್ಲು.

ತೋಟ–ಕೋವಿಗೆಹಾಕುವ ಸಿದ್ದವಾದ ಮದ್ದು

ದೆಯ್ಯ–ಪಿಶಾಚಿ, ದೆವ್ವ, ಭೂತ.

ದೊಂದಿ–ಬೇಟೆಯಲ್ಲಿ ಬೆಳಕಿಗಾಗಿ ಬಳಸುವ ಸಾಧನ.

ಪಾರದಿ–ಬೇಟೆ.

ಪುನುಗು–ಕಾಡಿನ ಬೆಕ್ಕು.

ಬಗನಿಕತ್ತಿ–ಕಳ್ಳುಇಳಿಸುವವ ಉಪಯೊಗಿಸುವ ಸಣ್ಣ ಕತ್ತಿ.

ಭಲ್ಲೆ–ಕೈಯಿಂದ ಬೀಸಿ ಬಗೆಯುವ ಆಯುಧ.

ಮರಸುಬೇಟೆ–ಮರಗಳ ರೆಂಬೆಮೇಲೆ ಮರೆಯಾಗಿ ಕೂತು ಬೇಟೆಯಾಡುವುದು.

ಮುಸಿಯ–ಕಪ್ಪು ಮುಖದ ಕೋತಿ.

ಮೇವುಹೆರಕು–ಪ್ರಾಣಿಗಳ ಆಹಾರವನ್ನು ಹೆಕ್ಕಿ ತನ್ನುವದು.

ಮೊಗೆ–ಗಡಿಗೆ,ಕಳ್ಳುಕಟ್ಟಲುಬಳಸುವ ಸಾಧನ.

ವಸೆ–ಕೊಬ್ಬು.

ವಾಟೆ–ಬಿದಿರಿನ ಜಾತಿಗೆ ಸೇರಿದ ಮುಳ್ಳುಗಳಲ್ಲಿದ್ದ ಒಂದು ಜಾತಿಯ ಸಸ್ಯ.

ಶಬರಿ–ಬೇಡತಿ.

ಶುಬರ–ಬೇಟೆಗಾರ, ಬೇಡ.

ಶಿಸ್ತು–ಕೋವಿಗಳನ್ನು ಕಟ್ಟಿ ಕಾಡು ಪ್ರಾಣಿಗಳನ್ನು ಕೊಲ್ಲುವ ಒಂದು ಬಗೆ.

ಸಭೆಒಡ್ಡು–ಉರಳುಹಾಕು, ಪಕ್ಷಿಹಿಡಿಯುವ ಸಾಧನ.

ಸಾರಾಕಿ ಬೇಟೆ–ಏಕಾಂಗಿ ಕಾಡಿನಲ್ಲಿ ಅಲೆದು ಮಾಡುವ ಬೇಟೆ.

ಹಕ್ಕೆ–ಪ್ರಾಣಿಗಳನ್ನು ಬೇಟೆಯಾಡಲು ಮಾಡಿಕೊಂಡ ಗುಡಿಸಲು.

ಹತ್ತುಮೀನುಬೇಟೆ–ನೀರಿನಿಂದ ಮೇಲೆಹತ್ತುವ ಮೀನಿನ ಬೇಟೆ.

ಹಸಿಗೆ–ಬೇಟೆಯಪ್ರಾಣಿಯನ್ನು ಸುಟ್ಟು ಮಾಂಸಮಾಡುವುದು.

ಹಳುವಿನವರು–ಪ್ರಾಣಿಗಳನ್ನು ಕಾಡಿನಿಂದ ಬೇಟೆಗಾರರ ಬಿಲ್ಲಿನ ಕಂಡಿಕೆಗೆಓಡಿಸುವ ಕೆಲಸಮಾಡುವುದು.

ಹಿಡಿ–ಆಯುಧಗಳನ್ನುಕೈಯಿಂದ ಹಿಡಿಯುವ ಭಾಗ.

ಹೆಗ್ಗೂಣಿ–ದೊಡ್ಡಕೂಣಿ,ಹಳ್ಳದ ಕಟ್ಟಿಗೆ ಹಾಕುವ ಕೂಣಿ.

ಹೆಂಟೆ–ಹೆಣ್ಣುಕೋಳಿ.

ಹೊಂಚುಬೇಟೆ–ಮರೆಯಲ್ಲಿ ಕುರಿತುಮಾಡುವ ಬೇಟೆ.

ಹೊಂತಕಾರಿ–ಬೇಟೆಯಲ್ಲಿ ಬೇಟೆಯಾದಪ್ರಾಣಿಯನ್ನು ಹೊರುವವನು.

ಹೊಲನಿನಅಡುಗೆ–ಮಾಂಸದ ಅಡುಗೆ, ಮಾಂಸದಸಾರು.

ಹೊಳ್ಳೆ–ಪ್ರಾಣಿಗಳ ಮೂಗಿನ ರಂಧ್ರ.

ಬೆಡಿ–ಕೋವಿ.

ಮೂರ್ತೆ–ಕಳ್ಳು ತಗೆಯುವುದು.

ರೋಟು–ಕಾಲುದಾರಿ.

ಸಿರ್ಕ–ಹಲವಾರು ದಿನ ಬಿಸಿಲಿನಲ್ಲಿ ಹುಳಿಯಲ್ಲಿಟ್ಟ ಕಳ್ಳು.

ಹಡಿಲು–ಉತ್ತು, ಬಿತ್ತದ ಜಾಗ.

ಬಿರು, ಪಗರಿ–ಬಿಲ್ಲು, ಬಾಣ.

ದಾಯ–ಪಾಲು.

ಜಾಮುಂಗೆಕೋವಿ–ಕೇಪಿನ ಬಳಕೆ ಇಲ್ಲದ ಬತ್ತಿಯಕೋವಿ.

ಉತ್ತಿಕಟ್ಟು–ಬೆರ್ತ್‌ಕಟ್ಟುವ.

ಈಡು–ಗುರಿ, ಮುಡಿಪು

ಅಡ್ಡಬಲಿಪ್ಪ, ಬಲಿಪ–ಹೆಬ್ಬುಲಿ.

ಅಜಕ್ಕಲ–ಮಾಂಸ ಕತ್ತರಿಸಿ ಪಾಲುಮಾಡೋದು.

ಅಂಡೆ–ಬಿದಿರಿನ ಬತ್ತಳಿದೆ.

ಉಳ್ಳು–ಕುನಿಕೆ.

ಉತ್ತರಿಸು–ಮಾಂಸವನ್ನು ಚಿಕ್ಕ, ಚಿಕ್ಕ ತುಂಡುಗಳನ್ನಾಗಿ ಕತ್ತರಿಸುವುದು.

ಒಡ್ಯಾಣ–ಸೊಂಟಕ್ಕೆ ಕಟ್ಟಿಕೊಂಡ ಕತ್ತಿ ಇಡುವ ಕಬ್ಬಿಣದ ಸಣ್ಣ ಕೊಕ್ಕೆ.

ಜೋಲಿ–ಕಂಬಳಿಯಿಂದ ಮಾಡಿದ ಡೋಲಿ, ಜೋಲಿ.

ತಡೆ ಪಡೆಸು–ಬೇಟೆಯಾಗಲೆಂದು ಮಂತ್ರವಾದಿಗಳಿಂದ ಮಾಡಿಸುವ ಪೂಜೆ.

ತುಪ್ಪಳ–ಹಕ್ಕಿಗಳ ಪುಕ್ಕ.

ಬಾಡು–ಮಾಂಸ.

ಮಂಚಿಗೆ–ಅಟ್ಟಣಿಗೆ.

ಮುಟ್ಟುಚಿಟ್ಟು–ಸೂತಕ, ಅಪವಿತ್ರ, ಮೈಲಿಗೆ.

ಹುಲ್ಲುಗಿಟ್ಟ–ಬಟ್ಟೆಸಾರಯಿ.

ಆಕರ ಗ್ರಂಥಗಳು

೧. ಉಮೇಶ್ ಹೊಸಹಳ್ಳಿ — ಮಲೆನಾಡಿನ ಶಿಕಾರಿಲೋಕ
ಪುಣ್ಯಗಂಗಾ ಪ್ರಕಾಶನ,
ಕೊಡಗು,

೨. ಕಲ್ಕುಳಿ ವಿಠಲ್ ಹೆಗ್ಗಡೆ — ಮಂಗನ ಬ್ಯಾಟೆ.
ಲಂಕೇಶ ಪ್ರಕಾಶನ
ಬೆಂಗಳೂರು, ೨೦೧೨

೩. ಕುವೆಂಪು — ಕಾನೂರು ಹೆಗ್ಗಡಿತಿ
ಉದಯರವಿ ಪ್ರಕಾಶನ
ಮೈಸೂರು, ೧೯೬೦

೪. ಕುವೆಂಪು — ಕಾನೂರು ಹೆಗ್ಗಡಿತಿ
ಉದಯರವಿ ಪ್ರಕಾಶನ,
ಮೈಸೂರು, ೧೯೬೦,

೫. ಕುವೆಂಪು — ಕಾದಂಬರಿಗಳಲ್ಲಿ ಅಂದಿನ
ಮಲೆನಾಡ ಪರಿಸರ ಮತ್ತು
ಆಧುನಿಕ ಮಲೆನಾಡ ಪರಿಸರ

೬. ಕಿಟ್ಟೆಲ್ ಅರ್ಥಕೋಶ.

೭. ಕಾಕೆಮಾನಿ — ಬೇಟೆ ನೆನಪು ೨೦೦೬
ಕನ್ನಡ ಮತ್ತು ಸಂಸ್ಕೃತಿ
ಇಲಾಖೆ. ೨೦೦೬

೮. ಕೆದಂಬಾಡಿ ಜತ್ತಪ್ಪರೈ — ಬೇಟೆಯ ನೆನಪುಗಳು
ಕನ್ನಡ ಪುಸ್ತಕ ಪ್ರಾದಿಕಾರ,
ಬೆಂಗಳೂರು, ೧೯೮೩

೯. ಕರ್ನಾಟಕ ಜನಪದ ಭೂಮಿಕೆ, ೧೯೮೧

೧೦. ಕೆದಂಬಾಡಿ ಜತ್ತಪ್ಪರೈ — ಬೇಟೆಯ ಸೂಕ್ಷ್ಮತೆಗಳು
೧೯೮೩

೧೧. ಕಡಿದಾಳು. ಎಸ್. ರಾಮಪ್ಪಗೌಡ — ಮಲೆನಾಡಿನ ಅಂದಿನ ಶಿಕಾರಿ
ನೆನಪುಗಳು, ೧೯೮೯.

೧೨. ಕಾಡು ಕಾಂಕ್ರೀಟ್ ಮತ್ತು ಜಾನಪದ, ೧೯೯೫

೧೩.	ಗಿರೀಶ್ ಕಾರ್ನಾಡ್	ಅಗ್ನಿ ಮತ್ತು ಮಳೆ ನಾಟಕ
೧೪.	ತ್ಯಾವಂದೂರು	ನಾಕಂಡ ಮಲೆನಾಡು, ೧೯೯೭
೧೫.	ಡಾ.ದೇವೇಂದ್ರ ಕುಮಾರ ಹರಾರಿ ಮತ್ತು ಡಾ.ಕೆ.ಆರ್. ಸಂಧ್ಯಾರೆಡ್ಡಿ.	ಗ್ರಾಮೀಣ ಬೇಟೆಗಳು ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೦
..	ನರೇಂದ್ರ ರೈ ದೇರ್ಲ	ಬೇಟೆ (ಪ್ರಭುತ್ವದಿಂದ ಪ್ರಜಾಪ್ರಭುತ್ವ ದೆಡೆಗೆ) ಕನಸು ಪ್ರಕಾಶನ ದಕ್ಷಿಣ ಕನ್ನಡ, ೨೦೦೭
೧೭.	ಪೂರ್ಣಚಂದ್ರ ತೇಜಸ್ವಿ	ಕಾಡಿನ ಕತೆಗಳು ಪುಸ್ತಕ ಪ್ರಕಾಶನ ಮೈಸೂರು, ೧೯೯೩
೧೮.	ಪೂರ್ಣಚಂದ್ರ ತೇಜಸ್ವಿ	ಕರ್ವಾಲೊ ಪುಸ್ತಕ ಪ್ರಕಾಶನ ಮೈಸೂರು. ೧೯೮೦
೧೯.	ವಿ.ಎಲ್. ಪಾಟೀಲ್	ವಡ್ಡರಾಧನೆ: ಜಾನಪದೀಯ ಅಧ್ಯಯನ ಕೀರ್ತಿ ಪ್ರಕಶನ ಧಾರವಾಡ, ೨೦೦೯
೨೦.	ಎಸ್.ಎಲ್.ಬೈರಪ್ಪ	ದಾಟು ಸಾಹಿತ್ಯ ಭಂಡಾರ ಪ್ರಕಾಶನ ಬೆಂಗಳೂರು. ೧೯೭೩
೨೧.	ಬೆನಕನಳ್ಳಿ ಜಿ.ನಾಯಕ	ವಲಸೆ
೨೨.	ಮಂಜಪ್ಪಶೆಟ್ಟಿ. ಎಂ. ಪಿ.	ಮಲೆನಾಡಿನ ಶಿಕಾರಿ ಮಸಗಲಿ ಪ್ರಕಾಶನ ಮೈಸೂರು, ೧೯೯೧
೨೩.	ಯಶವಂತ ಚಿತ್ತಾಲರ	ಶಿಕಾರಿ ಸಾಹಿತ್ಯ ಭಂಡಾರ ಪ್ರಕಾಶನ ಬೆಂಗಳೂರು. ೧೯೭೯

೨೪. ಕೆ.ಎಸ್.ರಾಮಪ್ಪಗೌಡ — ಮಲೆನಾಡಿನ ಶಿಕಾರಿ ನೆನಪುಗಳು ೧೯೮೯

೨೫. ಎಸ್.ಸಿ.ರಾಯ್ ಚೌಧರಿ — ಸೋಷಿಯಲ್ ಕಲ್ಚರಲ್ ಅಂಡ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ-೧೯೯೫

೨೬. ಸ.ಚಿ.ರಮೇಶ್ — ಬೇಟೆಯ ಸಾಂಸ್ಕೃತಿಕ ಪದಕೋಶ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೨೭. ಡಾ.ಟಿ.ಎಸ್.ರಮಾನಂದ — ವೈದ್ಯರ ಶಿಕಾರಿ, ೨೦೦೫ ಅಭಿನವ ಪ್ರಕಾಶನ

೨೮. ಡಾ.ಲಕ್ಷ್ಮೀದೇವಿ.ಎಲ್ — ಬೇಟೆ ಪರಂಪರೆ:ಬೇಡರ ಸಂಸ್ಕೃತಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦

೨೯. ಡಾ.ವಿರೂಪಾಕ್ಷಿ ಪೂಜಾರಹಳ್ಳಿ — ಬೇಟೆ ಮತ್ತು ಬೇಡರು ಚಿನ್ನಹಗರಿ ಪ್ರಕಾಶನ ಪೂಜಾರಹಳ್ಳಿ, ೨೦೦೭

೩೦. ಕುಂ. ವೀರಭದ್ರಪ್ಪರ — ಬೇಟೆ ಕಥೆ ಸ್ವಪ್ನ ಪುಸ್ತಕಾಲಯ ಬೆಂಗಳೂರು, ೨೦೧೦

೩೧. ಟಿ.ಎಸ್.ವಿವೇಕಾನಂದ — ಜಿಮ್ ಕಾರ್ಬೆಟ್‌ನ ಶಿಕಾರಿಕತೆಗಳು ಲಂಕೇಶ ಪ್ರಕಾಶನ ಬೆಂಗಳೂರು, ೨೦೧೦

೩೨. ಕೆ.ಎಸ್. ರಾಮಪ್ಪಗೌಡ — ಮಲೆನಾಡಿನ ಶಿಕಾರಿ ನೆನಪುಗಳು

೧೯೮೯

೩೩. ಶಿವರಾಮ ಕಾರಂತ — ಚೋಮನ ದುಡಿ, ಸಪ್ನ ಪುಸ್ತಕಾಲಯ, ಬೆಂಗಳೂರು. ೨೦೦೩

೩೪. ಶಿವರಾಮ ಕಾರಂತ — ಬೆಟ್ಟದ ಜೀವ

೩೫. ನಾಗರೀಕತೆಯ ಹೊಸ್ತಿಲಲ್ಲಿ, ೧೯೯೧

ಲೇಖನಗಳು:-

- ದಿನ ಪತ್ರಿಕೆಗಳು
- ಓ.ಎಸ್.ವಿವೇಕಾನಂದ ಅವರ ಕೇವಲ ಹುಲಿಗಳು-೨೦೧೦
- ಕಲ್ಕುಳಿ ವಿಠಲ್ ಹೆಗ್ಗಡೆ ಅವರ ಮಲೆನಾಡು ನೂರಾರು ಸಮಸ್ಯೆಗಳ ಬೀಡು ಸಂವಾದ ವಿಶೇಷಾಂಕ-೨೦೧೩
- ಡಾ.ಬಿ.ಎಂ.ಪುಟ್ಟಯ್ಯ ಅವರ ಮಲೆನಾಡ ಕೂಲಿ ಕಾರ್ಮಿಕರ ಸ್ಥಿತಿಗತಿಗಳು ಸಂವಾದ ವಿಶೇಷಾಂಕ-೨೦೧೩